ಭಾನುವಾರ, ಮೇ 17, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 136 | ಪುಟ 18
www.prajavani.net · prajavani.net · prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಕೀಗನ್‌ಗೆ ಕಿರೀಟ
ಅಮೆರಿಕದ ಟೆನಿಸ್ ತಾರೆ ಕೀಗನ್ ಸ್ಮಿತ್ ಅವರು ಶನಿವಾರ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಫಿಲಿಪ್ ಸೆಕುಲಿಕ್ ಅವರನ್ನು ಮಣಿಸಿ ಕರ್ನಾಟಕ ಓಪನ್ ಎಟಿಪಿ 50 ಚಾಲೆಂಜರ್ ಟೂರ್ನಿಯ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು

ಮುನಿಸು ಮರೆತ ಚೆನ್ನಿತ್ತಲಗೆ ಗೃಹ ಖಾತೆ 9
‘ಸಿದ್ದರಾಮಯ್ಯನವರೇ ಬಿಡದಿಗೆ ಬನ್ನಿ’ 8

ಆಮೆಗತಿಯಲ್ಲಿ ಸಾಗುವ ‘ಸರ್ವೆ’

ಸೇವೆ ಕಾಯಂ ಮಾಡಲು ಹೋರಾಟ
5.72 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಬಾಕಿ

• ಸಂತೋಷ ಈ. ಚಿನಗುಡಿ

ಒಳನೋಟ

ಬೆಳಗಾವಿ: ‘ನನ್ನ 4 ಎಕರೆ 36 ಗುಂಟೆ ಜಮೀನಿನಲ್ಲಿ 2 ಎಕರೆ ಮಾರಾಟ ಮಾಡಿದ್ದೇನೆ. ಈ ಬಾಬತ್ತಿನಲ್ಲಿ ಅರ್ಧ ಹಣ ಕೊಟ್ಟಿದ್ದಾರೆ. ಜಮೀನು ಅಳತೆ ಮಾಡಿಸಿ ನೋಂದಣಿ ಮಾಡಿಸಿದರೆ ಪೂರ್ತಿ ಹಣ ಕೊಡುವುದಾಗಿ ಖರೀದಿದಾರ ಹೇಳಿದ್ದಾರೆ. ಅಳತೆಗೆ ಅರ್ಜಿ ಸಲ್ಲಿಸಿ ಎರಡೂವರೆ ತಿಂಗಳಾಯಿತು. ಈವರೆಗೆ ಅಳತೆಯಾಗಿಲ್ಲ...’

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಭಂಕಲಗಾ ಗ್ರಾಮದ ನಿವಾಸಿ ಸೈದಯ್ಯ ಬಸಯ್ಯ ಕಲಾಲ್ ಅವರ ಅಳಲು ಇದು. ಭೂ ಮಾಪಕರು ಮುಷ್ಕರ ನಡೆಸಿದ ಕಾರಣ ಈ ರೈತ ಇಕ್ಕಟ್ಟಿಗೆ ಸಿಲುಕಿದ್ದಾರೆ.

‘ಜಮೀನು ನಮ್ಮ ಕಬ್ಜೆಗೆ ಕೊಡಬೇಕು ಎಂದು ಖರೀದಿದಾರರು ಒತ್ತಾಯಿಸುತ್ತಿದ್ದಾರೆ. ಭೂಮಾಪನ ಕೆಲಸ ನನೆಗುದಿಗೆ ಬಿದ್ದಿದ್ದು, ಅದರಿಂದ ಒಂದೆಡೆ ನೋಂದಣಿಯೂ ಮಾಡಿಸಲಾಗುತ್ತಿಲ್ಲ. ಮತ್ತೊಂದೆಡೆ ನನ್ನ ತಮ್ಮನ ಹೆಸರಿಗೆ ಒಂದೂವರೆ ಎಕರೆ ಪಹಣಿ ಮಾಡಿಸಲೂ ಆಗುತ್ತಿಲ್ಲ’ ಎಂಬುದು ಅವರ ಅಸಹಾಯಕತೆ.

ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಗೋನವಾರದ ರೈತ ಲವ ನಾಯಕ ಸಂಕಷ್ಟ ಇನ್ನೊಂದು ರೀತಿಯದ್ದು; ‘ಫಾರ್ಮ್ ಸಂಖ್ಯೆ 10 ಹಾಗೂ ಫಾರ್ಮ್ ಸಂಖ್ಯೆ 11ಕ್ಕೆ ಅರ್ಜಿ ಸಲ್ಲಿಸಿದರೆ ಎರಡು ತಿಂಗಳ ಅವಕಾಶ ತೆಗೆದುಕೊಳ್ಳುತ್ತಿದ್ದಾರೆ. ಸರ್ವೆ ಮಾಡಿದ ನಂತರ ಫಾರ್ಮ್ ಸಂಖ್ಯೆ 10 ಆಗಲಿಕ್ಕೆ ಮತ್ತೊಂದು ತಿಂಗಳ ಅವಕಾಶ ಕೇಳುತ್ತಾರೆ. ನನ್ನ ಹೊಲದ ವ್ಯವಹಾರ ಅಡಕತ್ತರಿಯಲ್ಲಿ ಸಿಕ್ಕಿಕೊಂಡಿದೆ. ತಕ್ಷಣ ಸರ್ವೆ ಶುರು ಮಾಡದಿದ್ದರೆ ಸಂಕಷ್ಟ ತಪ್ಪಿದ್ದಲ್ಲ’ ಎಂದು ಆತಂಕ ಹೊರಹಾಕುತ್ತಾರೆ ಅವರು.

‘ತಂದೆ ಆರೋಗ್ಯ ಕ್ಷೀಣಿಸಿದೆ. ಮೂವರು ಸಹೋದರರ ಹೆಸರಿಗೆ ಜಮೀನು ಹಂಚಿಕೆಯಾಗಬೇಕು. ಅಳತೆ ಮಾಡಿಸಿ ನಮ್ಮ ಹೆಸರಿಗೆ ನೋಂದಣಿ ಮಾಡಿಸಬೇಕಿದೆ. ಫೆಬ್ರುವರಿಯಲ್ಲಿ ಅರ್ಜಿ ಸಲ್ಲಿಸಿದರೂ ಇದೂವರೆಗೆ ಕೆಲಸ ಆಗಿಲ್ಲ. ಭೂ ಮಾಪಕರಿಗೆ ಗೋಗರೆದು ಸಾಕಾಗಿದೆ’ ಎನ್ನುವುದು ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಿವಾಸಿ ಸಂಗಮೇಶ ಮಠದ ಅವರ ತಕರಾರು.

‘ಮುಷ್ಕರದಿಂದ ಪೋಡಿ ಕೆಲಸಗಳು ಬಾಕಿ ಬೀಳುತ್ತಿವೆ. ಇದಕ್ಕೆ ಮುಷ್ಕರ ಮಾತ್ರವೇ ಕಾರಣವಲ್ಲ. ಸೋಮಾರಿತನ ಬೆಳೆಸಿಕೊಂಡ ಸರ್ಕಾರಕ್ಕೆ ಈಗ ನೆಪ ಸಿಕ್ಕಂತಾಗಿದೆ. ರೈತರು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೋರಾಟಕ್ಕೆ ಬೆಲೆ ಕೊಡುವಷ್ಟು ಸೌಜನ್ಯ ಸರ್ಕಾರಕ್ಕೆ ಇಲ್ಲ. ಸಂಘಟನೆ ಮುಂದೆ ಗೋಳು ಹೇಳಿಕೊಳ್ಳುವ ರೈತರಿಗೆ ಧೈರ್ಯ ಹೇಳುವುದೇ ಕಷ್ಟವಾಗಿದೆ’ ಎನ್ನುತ್ತಾರೆ ಭಾರತೀಯ ಕೃಷಿಕ ಸಮಾಜ (ಕರ್ನಾಟಕ) ಅಧ್ಯಕ್ಷ ಸಿದಗೌಡ ಮೋದಗಿ.

4

ಸೇವೆ ಕಾಯಂಗೊಳಿಸಲು ಆಗ್ರಹಿಸಿ ಬೆಳಗಾವಿಯಲ್ಲಿ ಈಚೆಗೆ ಭೂಮಾಪಕರು ಹೋರಾಟ ನಡೆಸಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಹೈಕೋರ್ಟ್ ಆದೇಶವಿದ್ದರೂ ಸರ್ಕಾರ ಸೇವೆ ಕಾಯಂ ಮಾಡುತ್ತಿಲ್ಲ. ಸಿದ್ದರಾಮಯ್ಯ ಅವರು ವಿಪಕ್ಷ ನಾಯಕರಿದ್ದಾಗ ಸರ್ಕಾರದ ಮೇಲೆ ಒತ್ತಡ ತಂದಿದ್ದರು. ಈಗ ಅವರೇ ಮನಸ್ಸು ಮಾಡುತ್ತಿಲ್ಲ. ಬೇಡಿಕೆ ಈಡೇರುವವರೆಗೆ ಧರಣಿ ನಿಲ್ಲಿಸಲ್ಲ.
ತಿರುಮಲೆಗೌಡ, ಅಧ್ಯಕ್ಷ, ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘ

ಲೈಸನ್ಸ್ ಕೊಡುವಾಗ ಯಾವ ನಿಯಮಗಳನ್ನು ಮಾಡಲಾಗಿದೆಯೋ ಅದನ್ನು ಪಾಲಿಸಲಾಗುತ್ತಿದೆ. ಷರತ್ತುಗಳಿಗೆ ಒಪ್ಪಿಕೊಂಡೇ ಭೂಮಾಪಕರು ಬಂದಿದ್ದಾರೆ. ನಿರ್ದಿಷ್ಟ ವೇತನ ಅಥವಾ ಕಾಯಮಾತಿಯ ಭರವಸೆಯನ್ನು ನೀಡಿಲ್ಲ
ವೆಂಕಟ ರಾಜ, ಆಯುಕ್ತ, ಭೂಮಾಪನಾ ಇಲಾಖೆ

300ಕ್ಕೂ ಹೆಚ್ಚು ಪರವಾನಗಿ ರದ್ದು

ಮುಷ್ಕರ ನಡೆಸುತ್ತಿರುವ ಭೂ ಮಾಪಕರಲ್ಲಿ 300ಕ್ಕೂ ಹೆಚ್ಚು ಜನರ ಪರವಾನಗಿ ರದ್ದು ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಮೇ 15ರಂದು ರಾತ್ರಿ ಆದೇಶ ಹೊರಡಿಸಿರುವುದಕ್ಕೆ ಭೂಮಾಪಕರು ಆಕ್ರೋಶ ಹೊರಹಾಕಿದ್ದಾರೆ.

‘ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಮೇ 11ರಂದು ಆಯುಕ್ತರು ನೋಟಿಸ್ ನೀಡಿ ಕರ್ತವ್ಯಕ್ಕೆ ಹಾಜರಾಗುವಂತೆ ಆದೇಶಿಸಿದ್ದರೂ ನೀವು ಬೇಜವಾಬ್ದಾರಿ ತೋರಿದ್ದೀರಿ. ಕಾರಣ, ತಕ್ಷಣದಿಂದ ಪರವಾನಗಿ ರದ್ದು ಮಾಡಲಾಗುತ್ತಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನೀಟ್: ಉಪನ್ಯಾಸಕಿ ಬಂಧನ

ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವ ತಂಡದ ಸದಸ್ಯೆ • ಕೃತ್ಯದಲ್ಲಿ ಭಾಗಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ‘ನೀಟ್-ಯುಜಿ’ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಸಿಬಿಐ, ‘ನೀಟ್’ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವ ತಂಡದ ಭಾಗವಾಗಿದ್ದ ಸಸ್ಯವಿಜ್ಞಾನ ಉಪನ್ಯಾಸಕಿಯನ್ನು ಶನಿವಾರ ಬಂಧಿಸಿದೆ.

ಪುಣೆಯ ಮನಿಶಾ ಮಂಧಾರೆ ಬಂಧಿತ ಉಪನ್ಯಾಸಕಿ. ದೆಹಲಿಯಲ್ಲಿ ಅವರನ್ನು ಬಂಧಿಸಿದ ಸಿಬಿಐ ತನ್ನ ಪ್ರಧಾನ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಿತು. ಉಪನ್ಯಾಸಕಿಯು ಈ ಪ್ರಕರಣದ ಮತ್ತೊಬ್ಬ ಪ್ರಮುಖ ಸಂಚುಕೋರರಾಗಿದ್ದಾರೆ ಎಂದು ಸಿಬಿಐ ಹೇಳಿದೆ.

ಬಂಧಿತ ಪ್ರಮುಖ ಸಂಚುಕೋರ, ಲಾತೂರ್ ನಿವಾಸಿ, ರಸಾಯನವಿಜ್ಞಾನದ ಪ್ರಾಧ್ಯಾಪಕ ಪಿ.ವಿ. ಕುಲಕರ್ಣಿ, ಪುಣೆಯ ಮನಿಶಾ ವಾಘ್ಮರೆ (ಬ್ಯೂಟಿಷಿಯನ್) ಮತ್ತು ಇತರರ ವಿಚಾರಣೆ ಬಳಿಕ ಸಿಬಿಐ ಮಂಧಾರೆ ಅವರನ್ನು ಬಂಧಿಸಿದೆ. ಮಂಧಾರೆ ಮತ್ತು ಕುಲಕರ್ಣಿ ಅವರನ್ನು ನ್ಯಾಯಾಲಯವು 10 ದಿನ ಸಿಬಿಐ ವಶಕ್ಕೆ ನೀಡಿದೆ.

ಸೋರಿಕೆಯ ಮೂಲ ಪತ್ತೆ: ಇಲ್ಲಿಯವರೆಗಿನ ತನಿಖೆಯಲ್ಲಿ ರಸಾಯನವಿಜ್ಞಾನ ಮತ್ತು ಜೀವವಿಜ್ಞಾನ ಪ್ರಶ್ನೆಪತ್ರಿಕೆಗಳ ಸೋರಿಕೆಯ ಮೂಲವನ್ನು ಪತ್ತೆ ಹಚ್ಚಲಾಗಿದೆ. ಈ ಕೃತ್ಯದಲ್ಲಿ ತೊಡಗಿದ್ದ ಪ್ರಮುಖ ವ್ಯಕ್ತಿಗಳು, ಮಧ್ಯವರ್ತಿಗಳನ್ನು ಗುರುತಿಸಲಾಗಿದೆ ಎಂದು ಸಿಬಿಐ ಅಧಿಕಾರಿಯೊಬ್ಬರು ಹೇಳಿದ್ದಾರೆ.

9

ರಾಜ್ಯಕ್ಕೆ 1,122 ಹೆಚ್ಚುವರಿ ಸೀಟು ಲಭ್ಯ

ಬೆಂಗಳೂರು: ‘ಇದೇ ಶೈಕ್ಷಣಿಕ ವರ್ಷದಿಂದ ರಾಜ್ಯಕ್ಕೆ 1,122 ವೈದ್ಯಕೀಯ ಸೀಟುಗಳು ಹೆಚ್ಚುವರಿಯಾಗಿ ಲಭ್ಯವಾಗಿವೆ. ಇದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಸೀಟುಗಳ ಲಭ್ಯತೆ ಹೆಚ್ಚಾಗಲಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಾಜ್ಯದ ವಿವಿಧ 11 ವೈದ್ಯಕೀಯ ಕಾಲೇಜುಗಳಲ್ಲಿನ ಎಂಬಿಬಿಎಸ್ ಸೀಟುಗಳ ಸಂಖ್ಯೆ 550ರಷ್ಟು ಮತ್ತು 23 ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿನ ಪಿಜಿ ವೈದ್ಯಕೀಯ ಸೀಟುಗಳ ಸಂಖ್ಯೆಯಲ್ಲಿ 572ರಷ್ಟು ಹೆಚ್ಚಾಗಿದೆ’ ಎಂದು ಹೇಳಿದರು.

‘ಕೇಂದ್ರ ಆರೋಗ್ಯ ಸಚಿವಾಲಯವು ದೇಶದಾದ್ಯಂತ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಲು ಯೋಜನೆ ರೂಪಿಸಿದೆ. ಅದರಲ್ಲಿ ಕರ್ನಾಟಕಕ್ಕೆ 1,122 ಸೀಟುಗಳನ್ನು ಹಂಚಿಕೆ ಮಾಡಿತ್ತು. ಈ ಸೀಟುಗಳಿಗೆ ತಗಲುವ ವೆಚ್ಚದಲ್ಲಿ ಕೇಂದ್ರವು ಶೇ 60ರಷ್ಟು ಮತ್ತು ರಾಜ್ಯವು ಶೇ 40ರಷ್ಟನ್ನು ಭರಿಸಬೇಕಿತ್ತು. ಈ ಕುರಿತಾದ ಒಪ್ಪಂದ ಪತ್ರಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಕೇಂದ್ರ ಆರೋಗ್ಯ ಸಚಿವಾಲಯಗಳು ಸಹಿ ಮಾಡಿವೆ’ ಎಂದು ವಿವರಿಸಿದರು.

9

ಕಾರ್ಯದರ್ಶಿ, ನಿರ್ದೇಶಕರ ನೇಮಕ

ಎನ್‌ಟಿಎ ವಿರುದ್ಧ ಆಕ್ರೋಶ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಕೇಂದ್ರ ಸರ್ಕಾರ ಎನ್‌ಟಿಎಗೆ ತಲಾ ಇಬ್ಬರು ಜಂಟಿ ಕಾರ್ಯದರ್ಶಿ ಮತ್ತು ಜಂಟಿ ನಿರ್ದೇಶಕರನ್ನು ನೇಮಕ ಮಾಡಿದೆ.

ಭಾರತೀಯ ಸಂಖ್ಯಾಶಾಸ್ತ್ರೀಯ ಸೇವೆಯ (ಐಎಸ್‌ಎಸ್) 1998ರ ಬ್ಯಾಚ್‌ನ ಅನುಜಾ ಬಾಪಟ್, ಭಾರತೀಯ ಕಂದಾಯ ಸೇವೆಯ (ಕಸ್ಟಮ್ಸ್ ಮತ್ತು ಪರೋಕ್ಷ ತೆರಿಗೆ) ಅಧಿಕಾರಿ ರುಚಿತಾ ವಿಜ್ ಅವರನ್ನು ಐದು ವರ್ಷಗಳ ಅವಧಿಗೆ ಹೊಸ ಜಂಟಿ ಕಾರ್ಯದರ್ಶಿಗಳಾಗಿ ನೇಮಿಸಿ ಸಿಬ್ಬಂದಿ ಸಚಿವಾಲಯ ಆದೇಶ ಹೊರಡಿಸಿದೆ.

ಭಾರತೀಯ ಕಂದಾಯ ಸೇವೆ (ಆದಾಯ ತೆರಿಗೆ) ಅಧಿಕಾರಿ ಆಕಾಶ್ ಜೈನ್ ಮತ್ತು ಭಾರತೀಯ ಆಡಿಟ್ ಮತ್ತು ಅಕೌಂಟ್ಸ್ ಸೇವೆ ಅಧಿಕಾರಿ ಆದಿತ್ಯ ರಾಜೇಂದ್ರ ಬೋಜ್‌ಗಾಧಿಯಾ ಅವರನ್ನು ಎನ್‌ಟಿಎಯ ಜಂಟಿ ನಿರ್ದೇಶಕರಾಗಿ ಸಚಿವಾಲಯ ನೇಮಕ ಮಾಡಿದೆ.

ಬಡ್ಡಿ ಆಮಿಷ: 35 ಸಾವಿರ ಜನರಿಂದ ಹೂಡಿಕೆ • ₹50 ಕೋಟಿ ಅವ್ಯವಹಾರ ಪತ್ತೆ

ಅನಧಿಕೃತ ಬಡ್ಡಿ ವ್ಯವಹಾರ: ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅನಧಿಕೃತ ಬಡ್ಡಿ ವ್ಯವಹಾರ ನಡೆಸುತ್ತಿರುವ ಆರೋಪದ ಮೇಲೆ ಇಲ್ಲಿನ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರ ಅವರನ್ನು ಶುಕ್ರವಾರ ರಾತ್ರಿ ಬಂಧಿಸಲಾಗಿದೆ.

'₹50 ಕೋಟಿಗೂ ಹೆಚ್ಚಿನ ಅವ್ಯವಹಾರ ನಡೆದಿರುವುದು ಖಾತ್ರಿಯಾಗಿದೆ. ಇದು ಅತ್ಯಂತ ಗಂಭೀರ ಪ್ರಕರಣ’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

‘ನೀಲಣ್ಣವರ ಬಳಿ 35 ಸಾವಿರಕ್ಕೂ ಹೆಚ್ಚು ಜನರು ಠೇವಣಿ ಇಟ್ಟಿದ್ದಾರೆ. ಕೈಸಾಲದ ಹೆಸರಿನಲ್ಲಿ ಹಣ ಸಂಗ್ರಹಿಸಲಾಗಿದೆ. ರಾಜ್ಯವಲ್ಲದೇ ಮಹಾರಾಷ್ಟ್ರ, ಆಂಧ್ರ, ತೆಲಂಗಾಣದಲ್ಲೂ ಅವ್ಯವಹಾರ ನಡೆದಿದೆ’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

‘₹1 ಲಕ್ಷ ಠೇವಣಿ ಇಟ್ಟರೆ ಶೇ 36ರಷ್ಟು ಬಡ್ಡಿ ನೀಡಲಾಗುವುದು ಎಂದು ಶಿವಾನಂದ ಪತ್ರಿಕಾ ಜಾಹೀರಾತು ನೀಡಿದ್ದರು. ಹೆಚ್ಚಿನ ಬಡ್ಡಿ ಆಸೆಗೆ 35 ಸಾವಿರಕ್ಕೂ ಹೆಚ್ಚು ಜನ ಹೂಡಿಕೆ ಮಾಡಿದ್ದಾರೆ. ಎಷ್ಟು ಸಾವಿರ ಕೋಟಿ ಠೇವಣಿ ಇದೆ ಎಂಬುದು ತನಿಖೆ ನಂತರ ಹೊರಬೀಳಲಿದೆ’ ಎಂದರು.

‘ಜಿಲ್ಲಾಧಿಕಾರಿ ಕಚೇರಿಯಲ್ಲಿ ‘ಕೆಪಿಐಡಿ– ಬಡ್ಸ್ ಆ್ಯಕ್ಟ್’ ಅಡಿ ತನಿಖಾ ಶಾಖೆ ತೆರೆದಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊಗಳನ್ನು ಆಧರಿಸಿ ಅವರ ಕಚೇರಿ, ಮನೆ ಮೇಲೆ ದಾಳಿ ಮಾಡಲಾಗಿದೆ. ದೊಡ್ಡ ಮೊತ್ತದ ವ್ಯವಹಾರದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರತಿ ತಿಂಗಳು ಒಂದೇ ಖಾತೆಯಿಂದ ₹300 ಕೋಟಿಯಿಂದ ₹400 ಕೋಟಿವರೆಗೂ ವ್ಯವಹಾರ ಮಾಡಿದ್ದು ಗೊತ್ತಾಗಿದೆ. ಆದರೆ, ಆರ್‌ಬಿಐ ಅಥವಾ ಸಹಕಾರ ಸಂಸ್ಥೆಯ ನಿಯಮಗಳನ್ನು ಪಾಲಿಸಿಲ್ಲ’ ಎಂದು ವಿವರಿಸಿದರು.

5

ಹೆಚ್ಚಿನ ಬಡ್ಡಿ ಆಮಿಷ ಒಡ್ಡಿದರೆ ಜನ ನಂಬಬಾರದು. ಇದು ದೊಡ್ಡ ಹಗರಣ. ಶಿವಂ ಅಸೋಸಿಯೇಟ್ಸ್‌ನಲ್ಲಿ ಹೂಡಿದ ಹಣ ಸದ್ಯ ಸುರಕ್ಷಿತವಾಗಿದೆ
ಭೂಷಣ ಬೊರಸೆ, ಬೆಳಗಾವಿ ನಗರ ಪೊಲೀಸ್ ಕಮಿಷನರ್

ಯಾರು ಈ ಶಿವಾನಂದ?

ಶಿವಾನಂದ ನೀಲಣ್ಣವರ ಹುಬ್ಬಳ್ಳಿಯ ಉಣಕಲ್‌ನವರು. ತಂದೆ ಸೇನೆಯಲ್ಲಿದ್ದರು. ನಿವೃತ್ತಿ ಬಳಿಕ ಕೆಇಬಿನಲ್ಲಿ ಕೆಲಸ ಮಾಡುತ್ತಿದ್ದಾಗ ನಿಧನರಾದರು. ಆ ನೌಕರಿ ಶಿವಾನಂದ ಅವರ ಒಬ್ಬ ಸೋದರನಿಗೆ ಸಿಕ್ಕಿದೆ. ಅವರಿಗೆ ಬೆಳಗಾವಿಗೆ ವರ್ಗವಾದಾಗ ಇಡೀ ಕುಟುಂಬ ಇಲ್ಲಿಗೆ ಬಂತು.

ದ್ವಿತೀಯ ಪಿಯು ಓದಿರುವ ಶಿವಾನಂದ ಆರಂಭದಲ್ಲಿ ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಸಿಪಾಯಿ ಆಗಿ ಕೆಲಸ ಮಾಡಿದ್ದರು. 2004ರಿಂದ 2006ರವರೆಗೆ ಐಸ್‌ಕ್ರೀಮ್ ಮಾರಿದ್ದರು. ಮುಂದೆ ಐಸ್‌ಕ್ರೀಮ್ ಕಾರ್ಖಾನೆ ಹಾಕಿದ್ದರು. 2012ರ ನಂತರ ಶಿವಂ ಅಸೋಸಿಯೇಟ್ಸ್ ಎಂಬ ಹೂಡಿಕೆ ಸಂಸ್ಥೆ ಆರಂಭಿಸಿದರು.

‘ಅಕ್ಯೂಮೆನ್’ ಆ್ಯಪ್ ಅಭಿವೃದ್ಧಿಪಡಿಸಿ, ಆ ಮೂಲಕ ಹಣ ಹೂಡಿಕೆ ಮಾಡಿಕೊಳ್ಳುತ್ತಿದ್ದರು. ಈ ಆ್ಯಪ್ ಮೂಲಕ ಸಾವಿರಾರು ಕೋಟಿ ಹೂಡಿಕೆಯಾಗಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾಜಿ ಸೈನಿಕರೇ ಇದ್ದಾರೆ’ ಎಂಬ ಮಾಹಿತಿಯನ್ನು ದಾಳಿ ನಡೆಸಿದ ತಂಡ ನೀಡಿದೆ.

ಭಾರತದ ಮಹತ್ವಾಕಾಂಕ್ಷೆ ಸೀಮಾತೀತ: ಮೋದಿ

ನರೇಂದ್ರ ಮೋದಿ

ದಿ ಹೇಗ್ (ನೆದರ್ಲೆಂಡ್ಸ್) (ಪಿಟಿಐ): ಭಾರತವನ್ನು ‘ಅವಕಾಶಗಳ ನಾಡು’ ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ, ‘ದೇಶದ ಮಹತ್ವಾಕಾಂಕ್ಷೆಯು ಇನ್ನು ಮುಂದೆ ಅದರ ಗಡಿಗಳಿಗಷ್ಟೇ ಸೀಮಿತವಾಗಿರುವುದಿಲ್ಲ’ ಎಂದು ಹೇಳಿದರು.

ನೆದರ್ಲೆಂಡ್ಸ್ ಪ್ರವಾಸದಲ್ಲಿರುವ ಪ್ರಧಾನಿ ಅವರು ಹೇಗ್‌ನಲ್ಲಿ ಶನಿವಾರ ಭಾರತೀಯ ಸಮುದಾಯದವರನ್ನುದ್ದೇಶಿಸಿ ಮಾತನಾಡಿದರು. ಭಾರತದ ಜತೆಗಿನ ಸಂಬಂಧವನ್ನು ಇನ್ನಷ್ಟು ಗಾಢವಾಗಿಸುವಂತೆ ನೆದರ್ಲೆಂಡ್ಸ್‌ನಲ್ಲಿರುವ ‘ಭಾರತದ ಸ್ನೇಹಿತರಿ’ಗೆ ಕರೆ ನೀಡಿದರು.

‘21ನೇ ಶತಮಾನದ ಭಾರತವು ಅವಕಾಶಗಳ ನಾಡು ಎನಿಸಿಕೊಂಡಿದೆ. ಭಾರತ ಸಾಧಿಸುತ್ತಿರುವ ಬೆಳವಣಿಗೆಯು ತಂತ್ರಜ್ಞಾನ-ಚಾಲಿತ ಮಾತ್ರ ಆಗಿರದೆ, ಮಾನವತ್ವ-ಚಾಲಿತವೂ ಆಗಿದೆ. ಭಾರತದಲ್ಲಿನ ನಿಮ್ಮ ಪೂರ್ವಜರ ಹಳ್ಳಿಗಳೊಂದಿಗೆ ಮತ್ತೆ ಸಂಪರ್ಕ ಸಾಧಿಸಲು ಹಾಗೂ ಅಭಿವೃದ್ಧಿ ಹೊಂದಿದ ಭಾರತದ ಜತೆಗೆ ಪ್ರಯಾಣಿಸಲು ಇದು ಸಕಾಲ’ ಎಂದು ಸುಮಾರು 40 ನಿಮಿಷಗಳ ಭಾಷಣದಲ್ಲಿ ಹೇಳಿದರು.

‘ಭಾರತ ಕೂಡಾ ದೊಡ್ಡ ಪ್ರಮಾಣದಲ್ಲಿ ಕನಸು ಕಾಣುತ್ತಿದೆ. ನಾನು ಕೇವಲ ಪರಿವರ್ತನೆಯನ್ನು ಬಯಸುವುದಿಲ್ಲ, ಅತ್ಯುತ್ತಮವಾದ ಮತ್ತು ವೇಗದ ಪರಿವರ್ತನೆಯನ್ನು ಬಯಸುತ್ತಿದ್ದೇನೆ ಎಂದು ರಾಷ್ಟ್ರವು ಹೇಳುತ್ತಿದೆ. ಆದ್ದರಿಂದ, ಭಾರತದಲ್ಲಿ ಮಹತ್ವಾಕಾಂಕ್ಷೆಗಳು ಅಪರಿಮಿತವಾಗಿರುವಾಗ, ನಮ್ಮ ಪ್ರಯತ್ನಗಳು ಸಹ ಅಪರಿಮಿತವಾಗುತ್ತಿವೆ’ ಎಂದರು.

6

ಭಾರತ ಮತ್ತು ನೆದರ್ಲೆಂಡ್ಸ್ ಪರಸ್ಪರ ವಿಶ್ವಾಸಾರ್ಹ, ಪಾರದರ್ಶಕ ಮತ್ತು ಭವಿಷ್ಯಕ್ಕೆ ನೆರವಾಗುವಂತಹ ಪೂರೈಕೆ ಸರಪಳಿಯನ್ನು ನಿರ್ಮಿಸಲು ಒಟ್ಟಾಗಿ ಕೆಲಸ ಮಾಡುತ್ತಿವೆ
ನರೇಂದ್ರ ಮೋದಿ, ಪ್ರಧಾನಿ

ಪಾಕ್ ಇತಿಹಾಸ ಸೇರಬೇಕೇ: ದ್ವಿವೇದಿ ಪ್ರಶ್ನೆ

ಉಪೇಂದ್ರ ದ್ವಿವೇದಿ

ನವದೆಹಲಿ (ಪಿಟಿಐ): ‘ಪಾಕಿಸ್ತಾನವು ಭಯೋತ್ಪಾದಕರಿಗೆ ಆಶ್ರಯ ನೀಡಿ, ಭಾರತದ ವಿರುದ್ಧ ಕಾರ್ಯಾಚರಣೆ ನಡೆಸುವುದನ್ನು ಮುಂದುವರಿಸಿದರೆ, ಅದು ಭೂಗೋಳದ ಭಾಗವಾಗಿರಬೇಕೇ ಅಥವಾ ಇತಿಹಾಸದಲ್ಲಿ ಉಳಿಯಬೇಕೇ? ಬೇಡವೇ ಎಂಬುದನ್ನು ನಿರ್ಧರಿಸಲಿದ್ದೇವೆ’ ಎಂದು ಭಾರತೀಯ ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಎಚ್ಚರಿಕೆ ನೀಡಿದ್ದಾರೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಮೊದಲನೇ ವರ್ಷಾಚರಣೆ ಕಾರ್ಯಕ್ರಮದ ಅಂಗವಾಗಿ ಶನಿವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಈ ಸಂದೇಶ ನೀಡಿದ್ದಾರೆ.

‘ಆಪರೇಷನ್ ಸಿಂಧೂರ’ದಂತಹ ಸಂದರ್ಭಗಳು ಮತ್ತೆ ಎದುರಾದರೆ ಪಾಕಿಸ್ತಾನವನ್ನು ನಿರ್ನಾಮ ಮಾಡಲಾಗುವುದು ಎಂಬರ್ಥದಲ್ಲಿ ಹೇಳಿಕೆ ನೀಡಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

DB®
Siggnature
Finest Cardamom Seeds
New Pack
DB®
Siggnature
GOLD & SILVER
Finest Cardamom Seeds
A Premium Product from Dilbagh®
www.dbsiggnature.com
A Premium Product from Dilbagh®

ರೈಲ್ವೆ ಕೆಳಸೇತುವೆ: ಜೂ.30ಕ್ಕೆ ಮುಕ್ತ

ರಾಮೋಹಳ್ಳಿ ಬಳಿ ನಿರ್ಮಾಣ • ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮೋಹಳ್ಳಿ ರೈಲ್ವೆ ಗೇಟ್ ಲೆವೆಲ್ ಕ್ರಾಸಿಂಗ್ ತೆರವುಗೊಳಿಸಲು ನಿರ್ಮಿಸುತ್ತಿರುವ ರೈಲ್ವೆ ಕೆಳಸೇತುವೆ (ಆರ್‌ಯುಬಿ) ಕಾಮಗಾರಿ ಶೀಘ್ರ ಮುಕ್ತಾಯವಾಗಲಿದ್ದು, ಜೂನ್ 30ಕ್ಕೆ ಉದ್ಘಾಟಿಸಲಾಗುವುದು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ರೈಲ್ವೆ, ಜಿಬಿಎ ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಲಕ್ಷಾಂತರ ಜನರು ಸಂಚರಿಸುವ ಈ ಮಾರ್ಗದಲ್ಲಿ ಲೆವೆಲ್ ಕ್ರಾಸಿಂಗ್ ಅನ್ನು ತೆರವುಗೊಳಿಸಲು ಕೆಳಸೇತುವೆ (ಆರ್‌ಯುಬಿ) ನಿರ್ಮಿಸಲಾಗುತ್ತಿದೆ. ಇದರಿಂದಾಗಿ ಆರೇಳು ತಿಂಗಳಿನಿಂದ ಸಂಚಾರಕ್ಕೆ ತೊಡಕಾಗಿತ್ತು. ಈಗ ಅಂತಿಮ ಹಂತಕ್ಕೆ ಬಂದಿದೆ. ಮುಂದಿನ ತಿಂಗಳು ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಹೇಳಿದರು.

ಗುಬ್ಬಿ ಬಳಿಕ ಬಿಳಿಪಾಳ್ಯ ಗೇಟ್, ಭೀಮಸಂದ್ರ ರೈಲ್ವೆ ಕೆಳಸೇತುವೆ, ಬಂಡಿಹಳ್ಳಿ ಸಂಪರ್ಕ ರಸ್ತೆ ಕಾಮಗಾರಿಗಳು ಕೂಡ 2–3 ತಿಂಗಳ ಒಳಗೆ ಪೂರ್ಣಗೊಳ್ಳಲಿವೆ. ಸಹಕಾರನಗರದ ಸಬ್‌ವೇ ಈ ವರ್ಷ ಸಂಚಾರಕ್ಕೆ ತೆರೆದುಕೊಳ್ಳಲಿದೆ ಎಂದು ವಿವರ ನೀಡಿದರು.

‘ಬೆಂಗಳೂರಿನಿಂದ ನೂರು ಕಿ.ಮೀ. ವ್ಯಾಪ್ತಿಯಲ್ಲಿರುವ 100 ಲೆವೆಲ್ ಕ್ರಾಸಿಂಗ್ (ಎಲ್‌ಸಿ) ತೆರವುಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆ. 46 ಕಡೆಗಳಿಗೆ ರೈಲ್ವೆ ಮೇಲ್ಸೇತುವೆ/ಕೆಳಸೇತುವೆ (ಆರ್‌ಒಬಿ/ಆರ್‌ಯುಬಿ) ಮಂಜೂರಾಗಿದೆ. ಎಂಟು ಅಂತಿಮ ಪಟ್ಟಿಯಲ್ಲಿದ್ದು, 24 ಎಲ್‌ಸಿಗಳಿಗೆ ವಿಸ್ತೃತ ಯೋಜನಾ ವರದಿ ತಯಾರಿಸಲಾಗುತ್ತಿದೆ. ಜಮೀನು ಸಮಸ್ಯೆಯಿಂದಾಗಿ ಎರಡು ಎಲ್‌ಸಿಗಳನ್ನು ತೆರವುಗೊಳಿಸುವುದು ಕಷ್ಟ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಲಹಂಕದಲ್ಲಿ ಮೆಗಾ ಕೋಚಿಂಗ್ ಟರ್ಮಿನಲ್

ವಿ. ಸೋಮಣ್ಣ

ಯಲಹಂಕದಲ್ಲಿ ಮೆಗಾ ಕೋಚಿಂಗ್ ಟರ್ಮಿನಲ್ ನಿರ್ಮಿಸಲು ಅಂತಿಮ ಸ್ಥಳ ಸಮೀಕ್ಷೆ ನಡೆಸಲಾಗಿದೆ. ಇಲ್ಲಿ 16 ಪ್ಲಾಟ್‌ಫಾರ್ಮ್, 18 ಸ್ಥಿರ ಮಾರ್ಗ (ಸ್ಟೆಬ್ಲಿಂಗ್ ಲೈನ್ಸ್), 14 ಪಿಟ್ ಲೈನ್ಸ್, 5 ದುರಸ್ತಿ ಮಾರ್ಗ (ಸಿಕ್ ಲೈನ್ಸ್) ನಿರ್ಮಿಸಲಾಗುವುದು ಎಂದು ವಿ. ಸೋಮಣ್ಣ ತಿಳಿಸಿದರು.

ಈ ಟರ್ಮಿನಲ್‌ಗೆ ಸುಗಮ ಸಂಪರ್ಕ ರಸ್ತೆ ಮತ್ತು ನೀರಿನ ಸಂಪರ್ಕವನ್ನು ರಾಜ್ಯ ಸರ್ಕಾರ ಒದಗಿಸಬೇಕಾಗುತ್ತದೆ ಎಂದು ಹೇಳಿದರು.

‘ಕನ್ನಡಕ್ಕೆ ಅವಕಾಶ ನೀಡಲು ಹೋರಾಟ’

‘ರೈಲ್ವೆ ನೇಮಕಾತಿಗೆ ಸಂಬಂಧಿಸಿದ ಪರೀಕ್ಷೆಗಳನ್ನು ಕನ್ನಡದಲ್ಲೂ ಬರೆಯಲು ಅವಕಾಶ ನೀಡಲಾಗಿದೆ. ಆದರೆ, ಬಡ್ತಿ ಪರೀಕ್ಷೆಗಳಿಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಅವಕಾಶವಿದೆ. ಕನ್ನಡ ಮಾತ್ರವಲ್ಲ ಯಾವುದೇ ಪ್ರಾದೇಶಿಕ ಭಾಷೆಯಲ್ಲಿ ಅವಕಾಶ ನೀಡಿಲ್ಲ. ಪ್ರಾದೇಶಿಕ ಭಾಷೆಗಳಿಗೆ ಅವಕಾಶ ನೀಡಬೇಕು ಎಂದು ಹೋರಾಟ ಮಾಡುತ್ತಿದ್ದೇನೆ’ ಎಂದು ವಿ. ಸೋಮಣ್ಣ ಮಾಹಿತಿ ನೀಡಿದರು.

ಖಾಸಗಿ, ಸರ್ಕಾರಿ ಜಮೀನುಗಳನ್ನು ಪಡೆದು ಎಲ್‌ಸಿ ತೆರವುಗೊಳಿಸಬೇಕು ಎಂದು ಸೂಚನೆ ನೀಡಿದ್ದೇನೆ. ರಾಜ್ಯದಲ್ಲಿ ಈಗಾಗಲೇ 707 ಎಲ್‌ಸಿ ತೆರವು ಮಾಡಲಾಗಿದೆ’ ಎಂದು ತಿಳಿಸಿದರು.

‘ನಗರದ ಕೆಲವು ಕಡೆಗಳಲ್ಲಿ ಜಿಬಿಎ ಸಹಕಾರ ಬೇಕಾಗುತ್ತದೆ. ಇದೇ ರೀತಿ ಯಾವ ಯಾವ ಇಲಾಖೆಯ ಸಹಕಾರ ಬೇಕು ಎಂದು ನೋಡಿ ಪ್ರತಿ ಮೂರು ತಿಂಗಳಿಗೊಮ್ಮೆ ಆ ಇಲಾಖೆಗಳ ಅಧಿಕಾರಿಗಳು ಮತ್ತು ರೈಲ್ವೆ ಅಧಿಕಾರಿಗಳ ಸಭೆ ನಡೆಸಿ ಸಮನ್ವಯದೊಂದಿಗೆ ಕೆಲಸ ಮಾಡಲಾಗುವುದು’ ಎಂದರು.

‘ವಿವಿಧ ಅಡೆತಡೆಗಳಿಂದಾಗಿ ರೈಲುಗಳ ವೇಗ ಗಂಟೆಗೆ ಸರಾಸರಿ 110 ಕಿ.ಮೀ. ಇತ್ತು. ಅದನ್ನು 130ಕ್ಕೆ ಏರಿಸಲಾಗಿದೆ. ತುಮಕೂರು–ಬೆಂಗಳೂರು ನಡುವೆ ನಾಲ್ಕು ಪಥ ನಿರ್ಮಿಸಲಾಗುವುದು. ತುಮಕೂರು–ಕೋಲಾರಕ್ಕೆ ನೇರ ಮಾರ್ಗವಿಲ್ಲ. ಸುತ್ತು ಹಾಕಿಕೊಂಡು ಹೋಗಲಾಗುತ್ತಿದೆ. ನೇರ ಮಾರ್ಗ ಮಾಡಲು ಚಿಂತನೆ ನಡೆಸಲಾಗಿದೆ’ ಎಂದು ತಿಳಿಸಿದರು.

ಬೆಂಗಳೂರು ಉಪನಗರ ರೈಲು ಯೋಜನೆ ಸಂಬಂಧ ಶೀಘ್ರದಲ್ಲೇ ಸಭೆ ನಡೆಸಲಾಗುವುದು ಎಂದು ಹೇಳಿದರು.

ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್, ಮುಖ್ಯ ಆಡಳಿತಾಧಿಕಾರಿ ಅಜಯ್ ಶರ್ಮ ಉಪಸ್ಥಿತರಿದ್ದರು.

ಥಾಮಸ್ ಕುಕ್: ಹಾಲಿಡೇ ಕಾರ್ನಿವಲ್ ಇಂದು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಥಾಮಸ್ ಕುಕ್ ಪ್ರವಾಸಿ ಸಂಸ್ಥೆಯು ‘ಗ್ರ್ಯಾಂಡ್ ಹಾಲಿಡೇ ಕಾರ್ನಿವಲ್’ ಕಾರ್ಯಕ್ರಮವನ್ನು ಮೇ 17ರಂದು ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ಬೆಂಗಳೂರಿನ ಹೋಟೆಲ್ ಶೆರಾಟನ್ ಗ್ರ್ಯಾಂಡ್‌ನಲ್ಲಿ ಆಯೋಜಿಸಿದೆ. ಈ ಕಾರ್ಯಕ್ರಮವು ಪ್ರವಾಸ ಯೋಜನೆಗಳನ್ನು ರೂಪಿಸಲು ಬಯಸುವವರಿಗೆ ಅತ್ಯುತ್ತಮ ವೇದಿಕೆಯಾಗಲಿದೆ.

ಪ್ರವಾಸದ ವಿವಿಧ ಆಯ್ಕೆ, ವಿಶೇಷ ಪ್ಯಾಕೇಜ್ ಮತ್ತು ಆಕರ್ಷಕ ರಿಯಾಯಿತಿ ಇಲ್ಲಿ ಲಭ್ಯ ಇರುತ್ತವೆ. ಇದರ ಪ್ರಮುಖ ಆಕರ್ಷಣೆ ಎಂದರೆ ಈಗಾಗಲೇ ಬುಕ್ಕಿಂಗ್ ಮಾಡಿದ್ದರೆ ಶೇ 15ರವರೆಗೆ ಮೌಲ್ಯ ಹಿಂದಿರುಗುವ (ವ್ಯಾಲ್ಯೂ ಬ್ಯಾಕ್) ಆಫರ್ ಇದೆ. ಇದಲ್ಲದೇ, ಗ್ರಾಹಕರು 50 ಸಾವಿರ ಪಾಯಿಂಟ್ಸ್‌ವರೆಗೆ ಪ್ರಯೋಜನ ಪಡೆಯಬಹುದು.

ವಿವಿಧ ವಿಶೇಷ ಆಫರ್‌ಗಳನ್ನೂ ಘೋಷಿಸಲಾಗಿದೆ. ‘ಹಾಲಿಡೇ ಪೆ ಹಾಲಿಡೇ ಫ್ರೀ’ ಆಫರ್ ಮತ್ತು ಉಚಿತ ಅಮೆರಿಕನ್ ಟೂರಿಸ್ಟರ್ ಬ್ಯಾಗ್ ಜೊತೆಗೆ ಫಾರೆಕ್ಸ್ ಕಾರ್ಡ್ ನೀಡಲಾಗುತ್ತದೆ. ಪ್ರವಾಸದ ಬಗ್ಗೆ ಸಂಪೂರ್ಣ ಮಾಹಿತಿ, ಮಾರ್ಗದರ್ಶನ ಮತ್ತು ಆಕರ್ಷಕ ಪ್ರಯೋಜನಗಳನ್ನು ಪಡೆಯಲು ಈ ಕಾರ್ನಿವಲ್ ಉತ್ತಮ ಅವಕಾಶ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಮೊ.ಸಂ. 9964027269, 9620999066 ಸಂಪರ್ಕಿಸಬಹುದು.



ಬಲ್ಗೇರಿಯಾ ವ್ಯಂಗ್ಯಚಿತ್ರಕಾರ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಾಯಾ ಕಾಮತ್ ಸ್ಮಾರಕ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ಬಲ್ಗೇರಿಯಾದ ವ್ಯಾಲೆಂಟೀನ್ ಜಾರ್ಗೀವ್ ಅವರಿಗೆ ₹1 ಲಕ್ಷ ನಗದು (ಪ್ರಥಮ ಬಹುಮಾನ) ಲಭಿಸಿದೆ.

ದ್ವಿತೀಯ ಬಹುಮಾನವನ್ನು (₹50,000) ಇಂಡೊನೇಷ್ಯಾದ ದೆಂಡಿ ಹೆರು ಹಾರ್ಡೊನೋ ಅವರು ಪಡೆದುಕೊಂಡಿದ್ದಾರೆ. ಇಬ್ಬರು ವ್ಯಂಗ್ಯ ಚಿತ್ರಕಾರರಿಗೆ ಮೂರನೇ ಬಹುಮಾನ (₹25,000) ಲಭಿಸಿದೆ.

ನಿಕೊಲಾಯ್ ಸ್ವಿರಿಡೆಂಕೊ (ರಷ್ಯಾ), ಜುವಾನ್ ಗೇಬ್ರಿಯಲ್ ಬೆನವಿದೆಸ್ (ಸ್ಪೇನ್), ಕಾಮಿಲಾ ಡೆ ಲ ಫುಎಂತೆ (ಮೆಕ್ಸಿಕೊ), ಸುಭಾಷ್ ಚಂದ್ರಗೌಡ (ಭಾರತ– ಕರ್ನಾಟಕ), ಜ್ಯೂಲಿಯೋ ಕ್ಯಾರಿಯೋನ್ (ಪೆರು), ಜಿಯಕಿಯಾನ್ಗ್ ಹೊ (ಚೀನಾ), ಸುರ್ ಅಲಿ (ಟರ್ಕಿ), ಅಲೆಕ್ಸಾಂಡರ್ ಜುಡಿನ್ (ರಷ್ಯಾ) , ಫಾತಿ ಅಕ್ಸುಲರ್ (ಟರ್ಕಿ), ಕನ್ಸ್ಟಾಂಟಿನ್ ಕಜನಚೇವ್ (ಉಕ್ರೇನ್) ಅವರಿಗೆ ಮೆರಿಟ್ ಸರ್ಟಿಫಿಕೇಟ್ (ತಲಾ ₹5,000) ಗಳಿಸಿದ್ದಾರೆ.

ಸ್ಪರ್ಧೆಯಲ್ಲಿ 75 ದೇಶಗಳ 544 ವ್ಯಂಗ್ಯಚಿತ್ರಗಾರರು ಭಾಗವಹಿಸಿದ್ದು, 1,080 ಪ್ರವೇಶಗಳು ಸ್ವೀಕೃತವಾಗಿದ್ದವು. ವ್ಯಂಗ್ಯಚಿತ್ರಕಾರ್ತಿ ಮಾಯಾ ಕಾಮತ್ ಅವರ 75ನೇ ಜನ್ಮದಿನದ ಪ್ರಯುಕ್ತ ಸ್ಪರ್ಧೆ ಆಯೋಜಿಸಲಾಗಿತ್ತು.

ಬಲ್ಗೇರಿಯಾದ ವ್ಯಾಲೆಂಟೀನ್ ಜಾರ್ಗೀವ್ ಅವರ ವ್ಯಂಗ್ಯಚಿತ್ರ

₹7 ಕೋಟಿ ಮೌಲ್ಯದ ಹೈಡ್ರೊ ಗಾಂಜಾ ವಶ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಗುರುವಾರ ತಡರಾತ್ರಿ ಎರಡು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ₹7 ಕೋಟಿಗೂ ಅಧಿಕ ಮೌಲ್ಯದ ಹೈಡ್ರೊ ಗಾಂಜಾ ವಶಪಡಿಸಿಕೊಂಡಿದ್ದು, ಇಬ್ಬರನ್ನು ಬಂಧಿಸಿದ್ದಾರೆ.

ಬಂದ್: ಕಪ್ಪುಪಟ್ಟಿ ಧರಿಸಿ ಔಷಧ ವ್ಯಾಪಾರಿಗಳ ಬೆಂಬಲ

ಬೆಂಗಳೂರು: ಆನ್‌ಲೈನ್ ಔಷಧ ಮಾರಾಟ, ಅಸಹಜ ರಿಯಾಯಿತಿಗಳ ವಿರುದ್ಧ ಮೇ 20ರಂದು ನಡೆಯುವ ರಾಷ್ಟ್ರವ್ಯಾಪಿ ಬಂದ್‌ಗೆ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಕಪ್ಪುಪಟ್ಟಿ ಧರಿಸಿ ನೈತಿಕ ಬೆಂಬಲ ನೀಡಲಾಗುತ್ತದೆ ಎಂದು ಕರ್ನಾಟಕ ಫಾರ್ಮಾ ರಿಟೈಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್ಗನೈಸೇಷನ್ ಅಧ್ಯಕ್ಷ ಸಿ. ಜಯರಾಮ್, ‘ಅನಧಿಕೃತ ಆನ್‌ಲೈನ್ ಔಷಧ ವ್ಯಾಪಾರ, ಜೀವರಕ್ಷಕ ಔಷಧಿಗಳ ಮೇಲೆ ಅಸಹಜ ಹಾಗೂ ಅತಿಯಾದ ರಿಯಾಯಿತಿ ನೀಡುತ್ತಿರುವುದನ್ನು ನಮ್ಮ ಸಂಘಟನೆಯು ಖಂಡಿಸುತ್ತದೆ. ಕ್ವಿಕ್ ಕಾಮರ್ಸ್ ಔಷಧ ಡೆಲಿವರಿ ಆ್ಯಪ್‌ಗಳು ಮಾಡುತ್ತಿರುವ ಕಾನೂನು ಉಲ್ಲಂಘನೆಯ ವಿರುದ್ಧ ನಾವು ನಿರಂತರವಾಗಿ ಹೋರಾಟ ಮಾಡುತ್ತಿದ್ದೇವೆ. ಈ ಬೆಳವಣಿಗೆಯು ಸಾಂಪ್ರದಾಯಿಕ ಫಾರ್ಮಸಿ ಕ್ಷೇತ್ರಕ್ಕೆ ಮಾತ್ರವಲ್ಲದೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ’ ಎಂದು ದೂರಿದರು.

‘ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಔಷಧ ಅಂಗಡಿಗಳನ್ನು ಮುಚ್ಚದೇ, ಎಂದಿನಂತೆ ಕಾರ್ಯನಿರ್ವಹಿಸಿ, ರೋಗಿಗಳಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಸೇವೆ ನೀಡಲಾಗುವುದು’ ಎಂದು ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

‘ಸಿಸಿ/ಒಸಿ: ಪಾಲಿಕೆಗಳಿಗೆ ₹40 ಸಾವಿರ ಕೋಟಿ ನಷ್ಟ’

2010ರಿಂದ ಈವರೆಗೆ ನಗರ ಯೋಜನೆ ವಿಭಾಗದಿಂದ ಅಕ್ರಮ

• ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಕಟ್ಟಡ ಪ್ರಾರಂಭಿಕ ಪ್ರಮಾಣಪತ್ರ (ಸಿಸಿ)/ ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು (ಒಸಿ) ಪಡೆಯಬೇಕಾಗಿರುವ ಎರಡು ಲಕ್ಷಕ್ಕೂ ಅಧಿಕ ಕಟ್ಟಡಗಳಿದ್ದರೂ, 8,968 ಸಿಸಿ/ಒಸಿಗಳನ್ನಷ್ಟೇ ನೀಡಲಾಗಿದೆ. ಪಾಲಿಕೆಗಳಿಗೆ ಇದರಿಂದ ₹40 ಸಾವಿರ ಕೋಟಿ ನಷ್ಟವಾಗಿದೆ’ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆರೋಪಿಸಿದರು.

‘ಬಿಬಿಎಂಪಿ ಹಾಗೂ ನಗರ ಪಾಲಿಕೆಗಳಲ್ಲಿ 2010–11ರಿಂದ 2025–26ರ ಅವಧಿಯಲ್ಲಿ 10 ಸಾವಿರದಷ್ಟು ಸಿಸಿ/ ಒಸಿಗಳನ್ನು ನೀಡಿದ್ದು, ಸಾವಿರಾರು ನಕಲಿ ಸಿಸಿ/ ಒಸಿಗಳನ್ನು ನೀಡಲಾಗಿದೆ. ಸುಮಾರು 22 ಲಕ್ಷ ಗ್ರಾಹಕರಿಗೆ ವಂಚನೆಯಾಗಿದೆ’ ಎಂದು ನಕಲಿ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಕಟ್ಟಡ ಪ್ರಾರಂಭಿಕ ಪ್ರಮಾಣಪತ್ರಗಳನ್ನು (ಸಿಸಿ) ನೀಡಿ, 22 ಲಕ್ಷ ಗ್ರಾಹಕರನ್ನು ವಂಚಿಸಲಾಗಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ದೂರಿದರು.

‘ಬೆಂಗಳೂರಿನಲ್ಲಿರುವ ವಸತಿ–ವಾಣಿಜ್ಯ ಸಂಕೀರ್ಣಗಳು, ಟೆಕ್ ಪಾರ್ಕ್, ಮಾಲ್– ಮಲ್ಟಿಪ್ಲೆಕ್ಸ್, ಐಟಿ–ಬಿಟಿ ಕಂಪನಿ, ಕೈಗಾರಿಕೆ ಕಟ್ಟಡಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು/ ನರ್ಸಿಂಗ್ ಹೋಂಗಳು, ಸ್ಟಾರ್ ಹೋಟೆಲ್ ಮತ್ತು ಕಲ್ಯಾಣ ಮಂಟಪಗಳಲ್ಲಿ ಶೇ 95ಕ್ಕೂ ಹೆಚ್ಚು ಕಟ್ಟಡಗಳಿಗೆ ನಕಲಿ ಒಸಿ/ ಸಿಸಿಗಳನ್ನು ನೀಡಲಾಗಿದೆ’ ಎಂದು ಆರೋಪಿಸಿದರು.

‘ಹಿಂದಿನ ಬಿಬಿಎಂಪಿಯ ಎಂಟು ವಲಯಗಳು ಅಥವಾ ಈಗಿನ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ಅವಧಿಯೂ ಸೇರಿದಂತೆ 16 ವರ್ಷಗಳಲ್ಲಿ ಬೃಹತ್ ಕಟ್ಟಡಗಳಿಗೆ ನಗರ ಯೋಜನೆ ವಿಭಾಗವು ಒಟ್ಟು 4,381 ಒಸಿ ಮತ್ತು ಒಟ್ಟು 4,587 ಸಿಸಿಗಳನ್ನು ವಿತರಿಸಿದೆ. ನಕ್ಷೆ ಮಂಜೂರಾತಿ ಪಡೆದಿರುವ ಕಟ್ಟಡಗಳ ಸಂಖ್ಯೆ ಒಟ್ಟು 71,169. ಈ ಮಾಹಿತಿಯನ್ನು ನಗರ ಯೋಜನೆ ವಿಭಾಗದ ಅಧಿಕಾರಿಗಳೇ ನೀಡಿದ್ದಾರೆ. ಆದರೆ, ಬೆಂಗಳೂರಿನಲ್ಲಿ 50ಕ್ಕೂ ಹೆಚ್ಚಿನ ಯೂನಿಟ್‌ಗಳನ್ನು ಹೊಂದಿರುವ ವಸತಿ ಸಂಕೀರ್ಣಗಳ ಸಂಖ್ಯೆಯೇ 50,000ಕ್ಕೂ ಹೆಚ್ಚಿದೆ. 98 ಟೆಕ್ ಪಾರ್ಕ್, 3,876 ಐಟಿ ಕಂಪನಿಗಳು, 103 ಬಿಟಿ ಕಂಪನಿಗಳು, 4,500ಕ್ಕೂ ಹೆಚ್ಚು ಬೃಹತ್ ವಾಣಿಜ್ಯ ಸಂಕೀರ್ಣಗಳು, 217 ಮಾಲ್–ಮಲ್ಟಿಪ್ಲೆಕ್ಸ್, 1,10,000 ಕೈಗಾರಿಕಾ ಕಟ್ಟಡಗಳು, 540 ತಾರಾ ಹೋಟೆಲ್, 2,850 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ/ ನರ್ಸಿಂಗ್ ಹೋಂ, 1,350 ಕಲ್ಯಾಣ ಮಂಟಪಗಳು ‘ಇವೆ’ ಎಂದು ಅಂಕಿ–ಅಂಶ ನೀಡಿದರು.

‘ನಗರದಲ್ಲಿರುವ ಎಲ್ಲ ಬೃಹತ್ ವಸತಿ ಮತ್ತು ವಾಣಿಜ್ಯ ಕಟ್ಟಡಗಳ ನಿರ್ಮಾಣಗಾರರಿಂದ ಕಾನೂನು ರೀತಿಯಲ್ಲಿ ನಿಗದಿತ ಪ್ರಮಾಣದ ಶುಲ್ಕಗಳನ್ನು ಪಾವತಿಸಿಕೊಂಡು ಸಿಸಿ/ ಒಸಿಗಳನ್ನು ನೀಡಿದ್ದರೆ ಕನಿಷ್ಠ ₹40 ಸಾವಿರ ಕೋಟಿ ಸಂಗ್ರಹವಾಗುತ್ತಿತ್ತು. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ದಾಖಲೆಗಳನ್ನು ಸಲ್ಲಿಸಲಾಗಿದೆ. ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯಕ್ಕೂ ಮನವಿ ಸಲ್ಲಿಸಲಾಗಿದೆ. ಸುಮಾರು 9,700 ಪುಟಗಳ ದಾಖಲೆ ಸಲ್ಲಿಸಲಾಗಿದೆ’ ಎಂದು ಎನ್.ಆರ್. ರಮೇಶ್ ಹೇಳಿದರು.



ಜಿಬಿಎ ವ್ಯಾಪ್ತಿಯಲ್ಲಿ 50ಕ್ಕೂ ಹೆಚ್ಚಿನ ಯೂನಿಟ್‌ಗಳನ್ನು ಒಳಗೊಂಡಿರುವ ಸುಮಾರು 25,000ಕ್ಕೂ ಹೆಚ್ಚು ವಸತಿ ಸಂಕೀರ್ಣಗಳಲ್ಲಿರುವ 22 ಲಕ್ಷ ಫ್ಲ್ಯಾಟ್‌ಗಳನ್ನು ಖರೀದಿಸಿರುವ ಶೇ 95ರಷ್ಟು ಗ್ರಾಹಕರನ್ನು ವಂಚಿಸಲಾಗಿದೆ. ಇದಕ್ಕೆ ಬಿಲ್ಡರ್‌ಗಳು, ಬಿಬಿಎಂಪಿ, ಜಿಬಿಎ, ಬಿಡಿಎ, ನಗರ ಪಾಲಿಕೆ ನಗರ ಯೋಜನೆಗಳಲ್ಲಿರುವ ಅಧಿಕಾರಿಗಳು ಕಾರಣ

ಎನ್.ಆರ್. ರಮೇಶ್, ಬಿಜೆಪಿ ಮುಖಂಡ

ಪಿಂಚಣಿ ನೀಡಲೂ ಹಣವಿಲ್ಲ, ಸಮಾವೇಶ ಏಕೆ: ಅಶೋಕ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾಥರು, ವೃದ್ಧರು, ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ ವಿವಿಧ ಪೋಷಿತ, ಅಸಹಾಯಕ ಜನರಿಗೆ ರಾಜ್ಯ ಸರ್ಕಾರ ನೀಡುವ ಪಿಂಚಣಿ ಸ್ಥಗಿತಗೊಂಡಿದೆ. ಖಜಾನೆ ಖಾಲಿಯಾಗಿದ್ದರೂ ರಾಜ್ಯ ಸರ್ಕಾರ ಸಾಧನಾ ಸಮಾವೇಶ ಮಾಡಲು ಹೊರಟಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ನೇತೃತ್ವದ ಸರ್ಕಾರ ತಾನು ಮಾಡಿದ ಪಾಪಗಳನ್ನು ಸಮಾವೇಶ ನಡೆಸಿ, ಸಂಭ್ರಮಾಚರಣೆ ಮಾಡುತ್ತಿದೆ. ಗೃಹಲಕ್ಷ್ಮಿಯ ₹5,000 ಕೋಟಿ, ಅನ್ನಭಾಗ್ಯದ ₹700 ಕೋಟಿ ಇನ್ನೂ ಫಲಾನುಭವಿಗಳಿಗೆ ಸಿಕ್ಕಿಲ್ಲ. ಅನಾಥ ಮಕ್ಕಳ ₹73 ಕೋಟಿ ಅನುದಾನ ಬಿಡುಗಡೆಯಾಗಿಲ್ಲ. ಪರಿಶಿಷ್ಟ ಜಾತಿಗಳ ₹45,000 ಕೋಟಿ ಲೂಟಿಯಾಗಿದೆ. ಸಮೀಕ್ಷೆ ಹೆಸರಲ್ಲಿ ರೈತರಿಗೆ ಪರಿಹಾರ ಕೊಟ್ಟಿಲ್ಲ. 12 ಬಗೆಯ ಪಿಂಚಣಿಗಳನ್ನು 3 ತಿಂಗಳಿಂದ ಕೊಟ್ಟಿಲ್ಲ. ₹81.88 ಲಕ್ಷ ಫಲಾನುಭವಿಗಳಿದ್ದು, ತಿಂಗಳಿಗೆ ₹894 ಕೋಟಿ ನೀಡಬೇಕಿದೆ’ ಎಂದರು.

ಎಸ್‌ಐಆರ್‌ಗೆ ಏಕೆ ವಿರೋಧ: ರಾಜ್ಯದಲ್ಲಿ 10 ಲಕ್ಷಕ್ಕೂ ಅಧಿಕ ಬಾಂಗ್ಲಾ ನುಸುಳುಕೋರರಿದ್ದಾರೆ. ಪೊಲೀಸ್ ಆಯುಕ್ತರು 265 ಲಕ್ಷ ಖರ್ಚು ಮಾಡಿ ಬಾಂಗ್ಲಾದ 250 ಪ್ರಜೆಗಳನ್ನು ವಿಮಾನದಲ್ಲಿ ಗಡಿವರೆಗೆ ಬಿಟ್ಟು ಬಂದಿದ್ದಾರೆ. ಮಹದೇವಪುರ, ಚಿಕ್ಕಮಗಳೂರು, ಕೊಡಗು ಕಾಫಿ ಎಸ್ಟೇಟ್‌ಗಳಲ್ಲಿ ಸಾವಿರಾರು ಬಾಂಗ್ಲಾ ದೇಶೀಯರಿದ್ದಾರೆ. ಇದಕ್ಕೆ ಎಸ್‌ಐಆರ್ ಅಂತ್ಯವಾಡಲಿದೆ. ಗುರುತಿನ ಚೀಟಿ ಇದ್ದವರಿಗೆ ಭಯಬೇಡ. ಪ್ರತಿ ಬೂತ್‌ನಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಏಜೆಂಟ್‌ಗಳಿರುವಾಗ ಅರ್ಹ ಮತದಾರರ ಹೆಸರು ರದ್ದಾಗಲು ಸಾಧ್ಯವೇ ಇಲ್ಲ ಎಂದರು.

‘ಹೈ–ಕ: ನೇಮಕಾತಿಗೆ ಪ್ರತ್ಯೇಕ ನೀತಿ ಬೇಕು’

ಬೆಂಗಳೂರು: ಹೈದರಾಬಾದ್ ಕರ್ನಾಟಕ (ಹೈ–ಕ) ಪ್ರದೇಶದ ಸರ್ಕಾರಿ ಹುದ್ದೆಗಳಿಗೆ ಪ್ರತ್ಯೇಕವಾದ ನೇಮಕಾತಿ, ಜ್ಯೇಷ್ಠತೆ, ಬಡ್ತಿ ಮತ್ತು ವರ್ಗಾವಣೆ ನೀತಿ ಅನುಸರಿಸಬೇಕು ಎಂದು ರಾಜ್ಯ ಒಕ್ಕೂಟ ಮೀಸಲಾತಿ ಹೋರಾಟ ಸಮಿತಿ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಪ್ರಧಾನ ಸಂಚಾಲಕ ಅಬಿಟ್ ನಾಗರಾಜ್ ಯಲಚನಹಳ್ಳಿ, ಅಧ್ಯಕ್ಷ ಎಂ. ನಾಗರಾಜ್, ‘ಹೈ–ಕ ಅಧಿಕಾರಿ/ನೌಕರರ ವೃಂದವನ್ನು ಪ್ರತ್ಯೇಕ ಘಟಕವನ್ನಾಗಿ ಮಾಡಬೇಕು. ಕರ್ನಾಟಕದ ‘ಇತರೆ ಭಾಗ’ ಯಾವುದೇ ವೃಂದಕ್ಕೂ ಸೇರಿಸಬಾರದು’ ಎಂದು ಒತ್ತಾಯಿಸಿದರು.

‘ರಾಜ್ಯ ಸರ್ಕಾರ 371–ಜೆ ಅಡಿ ಅನೇಕ ಸರ್ಕಾರಿ ಆದೇಶಗಳನ್ನು ಹೊರಡಿಸಿ, ರಾಜ್ಯ ಮಟ್ಟದ ವ್ಯಾಪ್ತಿಯಲ್ಲಿ ಇಲ್ಲದ ಬಿಬಿಎಂಪಿ, ಬಿಡಿಎ ಕಚೇರಿಗಳಲ್ಲಿನ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಶೇ 8ರಷ್ಟು ಮೀಸಲಾತಿ ನೀಡುವ ಮೂಲಕ ರಾಜ್ಯದ ಬೇರೆ ವಿಭಾಗದ ಜನರಿಗೆ ಅನ್ಯಾಯ ಮಾಡಲಾಗುತ್ತಿದೆ’ ಎಂದು ಆರೋಪಿಸಿದರು.

ಶ್ರೀ ವೇಮನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಧರ್ಮದ ದರದಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಸೌಲಭ್ಯ

ಬೆಂಗಳೂರು: ಶ್ರೀ ವೇಮನ ಚಾರಿಟೇಬಲ್ ಟ್ರಸ್ಟ್ ಈ ಸಂಸ್ಥೆಯು ದೇವರ ಚಿಕ್ಕನಹಳ್ಳಿ, ಬೆಂಗಳೂರು ಇಲ್ಲಿ ಕಳೆದ 26 ವರ್ಷಗಳಿಂದ ಹಳ್ಳಿ ಬಡ ಕುಟುಂಬಗಳಿಂದ ಬಂದು ಬೆಂಗಳೂರಿನ ಕಾಲೇಜಿನಲ್ಲಿ ಓದುವಂತಹ 200 ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವನ್ನು ಧರ್ಮದ ದರದಲ್ಲಿ ಒದಗಿಸಿ ಅವರ ವಿದ್ಯಾಭ್ಯಾಸ ಮಾಡಲು ಸಹಾಯ ನೀಡುತ್ತಾ ಬಂದಿರುತ್ತಾರೆ.

ಈ ಸಂಸ್ಥೆಯ ಮುಖ್ಯ ಉದ್ದೇಶ ಬಡ ವಿದ್ಯಾರ್ಥಿಗಳಿಗೆ ಧರ್ಮದ ದರದಲ್ಲಿ ವಸತಿ ಮತ್ತು ಊಟದ ವ್ಯವಸ್ಥೆ ಮಾಡುವುದಾಗಿದೆ. ಈ ರೀತಿಯ ಸಮಾಜಮುಖಿ ಸೇವೆಯಿಂದ ಉತ್ತೇಜಿತರಾದ ಈ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಟ್ರಸ್ಟಿಗಳು ಒಂದು ವಿದ್ಯಾರ್ಥಿನಿ ನಿಲಯವನ್ನು ಸಹ ಹಳ್ಳಿಯಿಂದ ಬಂದು ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಸಹಾಯ ಮಾಡಲು ನಿರ್ಣಯ ತೆಗೆದುಕೊಂಡು ಬೊಮ್ಮನಹಳ್ಳಿ ಮೆಟ್ರೋ ರೈಲ್ವೇ ಸ್ಟೇಷನ್ ಹಿಂಭಾಗ ಶ್ರೀ ಜಯ ಪ್ರಕಾಶ್ ರೆಡ್ಡಿ ಯವರು ದಾನವಾಗಿ ನೀಡಿರುವ ನಿವೇಶನದಲ್ಲಿ 100 ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಿ 200 ವಿದ್ಯಾರ್ಥಿನಿಯರಿಗೆ ಊಟ ಮತ್ತು ವಸತಿ ಸೌಲಭ್ಯವಿರುವ ಒಂದು ವಸತಿ ನಿಲಯವನ್ನು ನಿರ್ಮಿಸಿರುತ್ತಾರೆ. ಈ ಕೊಠಡಿಗಳಲ್ಲಿ ಸ್ನಾನದ ಮನೆ ಮತ್ತು Furniture, Bed, Almirah ಸೌಲಭ್ಯವಿರುತ್ತದೆ. ಪ್ರಸ್ತುತ ಅಂದರೆ ಜೂನ್ 2026 ರಿಂದ ಈ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶಾತಿ ಮಾಡಿಕೊಳ್ಳಲಾಗುವುದು. ಬೆಂಗಳೂರಿನಲ್ಲಿ ಯಾವುದೇ ಕಾಲೇಜಿನಲ್ಲಿ ಓದುತ್ತಿರುವ ಗಂಡು ಮತ್ತು ಹೆಣ್ಣು ವಿದ್ಯಾರ್ಥಿಗಳಿಗೆ ಈ ಸಂಸ್ಥೆಯಿಂದ ಮೇಲೆ ತಿಳಿಸಿರುವ ಸೌಲಭ್ಯಗಳನ್ನು ನೀಡಲಾಗುತ್ತದೆ.

ಅವರ ಅರ್ಹತೆ ಕನಿಷ್ಠ ಶೇ. 60 ಅಂಕ ಅದಕ್ಕೂ ಹೆಚ್ಚು ಅಂಕ ಪಡೆದಿರಬೇಕು ಮತ್ತು ಹಳ್ಳಿಯಿಂದ ಬಂದು ಬೆಂಗಳೂರಿನ ಯಾವುದೇ ಕಾಲೇಜಿನಲ್ಲಿ ಪಿಯುಸಿ ಅಥವಾ ಹೆಚ್ಚಿನ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಹೆಚ್ಚಿನ ವಿವರಗಳಿಗಾಗಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಮುನಿ ರೆಡ್ಡಿ ಎಂ. ಮೊಬೈಲ್ ನಂ. 9901042916 ರನ್ನು ಸಂಪರ್ಕಿಸಲು ಕೋರಲಾಗಿದೆ.

‘ಖಾತಾ: ಲಂಚ ಪಡೆದರೆ ಕಠಿಣ ಕ್ರಮ’

‘ನನ್ನ ಇ–ಖಾತಾ, ನನ್ನ ಹಕ್ಕು’ ಅಭಿಯಾನಕ್ಕೆ ಡಿಸಿಎಂ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇ–ಖಾತಾ, ಬಿ ಖಾತಾದಿಂದ ಎ ಖಾತಾ ಸೇರಿದಂತೆ ಯಾವ ಪ್ರಕ್ರಿಯೆಗೂ ಸಾರ್ವಜನಿಕರು ಯಾರಿಗೂ ಒಂದೇ ಒಂದು ರೂಪಾಯಿ ಲಂಚ ನೀಡಬಾರದು. ಲಂಚ ಕೇಳಿದವರ ಮಾಹಿತಿ ನೀಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ‘ನನ್ನ ಇ–ಖಾತಾ, ನನ್ನ ಹಕ್ಕು’ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಅಧಿಕಾರಿಗಳಿಗೆ ಸೇರಿದಂತೆ ಯಾವ ಪಕ್ಷದವರಿಗೂ ಲಂಚ ಕೊಡಬಾರದು. ದಲ್ಲಾಳಿಗಳನ್ನು ದೂರ ಇಡಬೇಕು. ಅಧಿಕಾರಿಗಳು ಲಂಚ ಕೇಳಿದರೆ ದೂರು ನೀಡಬೇಕು. ಇದಕ್ಕಾಗಿ ನಿರ್ದಿಷ್ಟ ದೂರವಾಣಿ ಸಂಖ್ಯೆ ನೀಡಲಾಗುವುದು. ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

‘ನನ್ನ ಇ–ಖಾತಾ, ನನ್ನ ಹಕ್ಕು’ ಅಭಿಯಾನದಿಂದ ಬೆಂಗಳೂರಿನ ಸಾರ್ವಜನಿಕರು ಒಂದೇ ಒಂದು ರೂಪಾಯಿ ಲಂಚ ನೀಡದೆ ತಮ್ಮ ಆಸ್ತಿಗಳನ್ನು ‘ಬಿ’ ಖಾತೆಯಿಂದ ‘ಎ’ ಖಾತೆಗೆ ಪರಿವರ್ತನೆ ಮಾಡಿಕೊಂಡು, ಮನೆ ಬಾಗಿಲಲ್ಲೇ ಇ–ಖಾತೆ ಪಡೆಯಬಹುದು. ಏಳು ಲಕ್ಷ ಜನರಿಗೆ ಇದರಿಂದ ಉಪಯೋಗ ಆಗಲಿದೆ ಎಂದು ಮಾಹಿತಿ ನೀಡಿದರು.

‘ಖಾತೆ ದಾಖಲೆಯಲ್ಲಿ ಫೋಟೊ ಸಹ ಇರಲಿದೆ. ಯಾರಾದರೂ ನಕಲಿ ದಾಖಲೆ ನೀಡಿ ಖಾತೆ ಮಾಡಿಸಿಕೊಂಡರೆ ಅದನ್ನು ರದ್ದು ಮಾಡುವ ವ್ಯವಸ್ಥೆಯೂ ಇದೆ. ಉಪ ನೋಂದಣಾಧಿಕಾರಿ ಕಚೇರಿಗೆ ಲಿಂಕ್ ಮಾಡಲಾಗಿದೆ’ ಎಂದರು.

‘ನಿಮ್ಮ ಆಸ್ತಿಗಳ ಮೌಲ್ಯ ಹೆಚ್ಚಳ ಮಾಡಲು ‘ಬಿ’ ಖಾತೆಯಿಂದ ‘ಎ’ ಖಾತೆಗೆ ಪರಿವರ್ತನೆ ಮಾಡಿಕೊಡಲಾಗುತ್ತಿದೆ. ಇದು ಐತಿಹಾಸಿಕ ತೀರ್ಮಾನ. ಇದರಿಂದ ನೀವು ಬ್ಯಾಂಕ್ ನಲ್ಲಿ ಸಾಲ ಪಡೆಯಬಹುದು, ಇತರೇ ಸೌಲಭ್ಯಗಳನ್ನು ನಿಮ್ಮದಾಗಿಸಿಕೊಳ್ಳಬಹುದು. ಬೆಂಗಳೂರಿನಲ್ಲಿರುವ 23 ಲಕ್ಷ ಆಸ್ತಿಗಳಲ್ಲಿ 16 ಲಕ್ಷ ಎ ಖಾತೆಗಳಿದ್ದರೆ 7 ಲಕ್ಷ ಬಿ ಖಾತೆಗಳಿವೆ. ಕೆಳಮಟ್ಟದ ಅಧಿಕಾರಿಗಳು ಖಾತೆ ವಿಚಾರವಾಗಿ ಲಂಚ ಪಡೆದು ಕಿರುಕುಳ ನೀಡುತ್ತಿದ್ದರು ಎನ್ನುವುದು ನನ್ನ ಗಮನಕ್ಕೆ ಬಂದಿತ್ತು. ಅದಕ್ಕಾಗಿ ಪ್ರತಿ ಶನಿವಾರ ಅಭಿಯಾನ ನಡೆಯಲಿದೆ’ ಎಂದು ತಿಳಿಸಿದರು.

‘ಅಧಿಕಾರಿಗಳು ಸ್ಥಳಕ್ಕೆ ಬಂದು ಆಸ್ತಿ ದಾಖಲೆಗಳ ತೊಂದರೆ ಪರಿಶೀಲಿಸಲಿದ್ದಾರೆ. ಆಸ್ತಿಗಳಿಗೆ ಗುರುತಿನ ಸಂಖ್ಯೆ ನೀಡಲಾಗಿರುತ್ತದೆ. ಇದನ್ನು ಬಳಸಿಕೊಂಡು ತಪ್ಪಿರುವ ದಾಖಲೆ ಸರಿ ಮಾಡಲಾಗುವುದು. ಮಾರ್ಗಸೂಚಿ ದರದ ಶೇ 5ರಷ್ಟು ಮೊತ್ತವನ್ನು ಕಟ್ಟಬೇಕಿತ್ತು. ಆದರೆ 100 ದಿನ ರಿಯಾಯಿತಿ ನೀಡಿದ್ದು, ಶೇ 2ರಷ್ಟು ಶುಲ್ಕ ಪಾವತಿ ಮಾಡುವ ಅವಕಾಶ ಕಲ್ಪಿಸಿದ್ದು, ನಿಮ್ಮ ಖಾತೆಯನ್ನು ಫೈಲ್ ರೂಪದಲ್ಲಿ ನೀಡುತ್ತೇವೆ’ ಎಂದರು.

2,939	ಐದೂ ಪಾಲಿಕೆಗಳ ವ್ಯಾಪ್ತಿಯ 52 ಅಭಿಯಾನ ಕೇಂದ್ರಗಳಲ್ಲಿ ಸ್ವೀಕರಿಸಿದ ಒಟ್ಟು ಅರ್ಜಿ
1,080	ಇ–ಖಾತಾಗೆ ಸಲ್ಲಿಸಲಾದ ಅರ್ಜಿಗಳು
568	ಇ–ಖಾತಾ ಅರ್ಜಿ ವಿಲೇವಾರಿ
139	ಮ್ಯುಟೇಷನ್ ಅರ್ಜಿಗಳು
64	ಮ್ಯುಟೇಷನ್ ಅರ್ಜಿ ವಿಲೇವಾರಿ
236	ಹೊಸ ಖಾತಾಗೆ ಅರ್ಜಿಗಳು
90	ಹೊಸ ಖಾತಾ ವಿತರಣೆ
425	ಬಿ–ಖಾತಾದಿಂದ ಎ ಖಾತಾಗೆ ಅರ್ಜಿಗಳು
120	ಬಿ–ಖಾತಾದಿಂದ ಎ ಖಾತಾ ಅರ್ಜಿ ವಿಲೇವಾರಿ
1059	ನಾಗರಿಕರ ದೂರುಗಳು
400	ಪರಿಹರಿಸಿದ ದೂರುಗಳು

ಹಳೆಯ ವಸ್ತು ವಿಲೇವಾರಿಗೆ ‘ಡಿಕ್ಲಟರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಹಳೆಯ ಹಾಗೂ ಬೇಡದಿರುವ ವಸ್ತುಗಳ ವಿಲೇವಾರಿಗಾಗಿ ‘ಡಿಕ್ಲಟರ್’ ತಂತ್ರಾಂಶ ಆರಂಭಿಸಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ಹೇಳಿದ್ದಾರೆ.

ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ನಗರದಾದ್ಯಂತ ಮನೆಮನೆಗೆ ತೆರಳಿ ಹಸಿ ಮತ್ತು ಒಣ ತ್ಯಾಜ್ಯ ಸಂಗ್ರಹಣ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಆದರೆ ಹಳೆಯ ಪೀಠೋಪಕರಣ, ಸೋಫಾ, ಹಾಸಿಗೆ, ಕಪಾಟು, ಹಳೆಯ ಬಟ್ಟೆಗಳು, ಒಡೆದ ಸ್ಯಾನಿಟರಿ ಸಿಂಕ್ ಸಾಮಗ್ರಿ, ಹಳೆಯ ಕಮೋಡ್, ಚಪ್ಪಲಿ ಹಾಗೂ ಇತರೆ ದೊಡ್ಡ ಗಾತ್ರದ ಗೃಹ ಬಳಕೆಯ ತ್ಯಾಜ್ಯಗಳನ್ನು ನಿಯಮಿತ ತ್ಯಾಜ್ಯ ಸಂಗ್ರಹ ವ್ಯವಸ್ಥೆ ಮೂಲಕ ಸಂಗ್ರಹಿಸುತ್ತಿರಲಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಇಂತಹ ತ್ಯಾಜ್ಯವನ್ನು ಜನರು ರಸ್ತೆ ಬದಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಎಸೆಯುತ್ತಿದ್ದು, ಇದರಿಂದ ಪರಿಸರ ಸಮಸ್ಯೆಗಳನ್ನು ಉಂಟಾಗುತ್ತಿವೆ. ಜೊತೆಗೆ ನಗರದ ಸ್ವಚ್ಛತೆ ಮತ್ತು ಸೌಂದರ್ಯಕ್ಕೂ ಧಕ್ಕೆಯುಂಟು ಮಾಡುತ್ತಿತ್ತು. ಹೀಗಾಗಿ, ಬಿಎಸ್‌ಡಬ್ಲ್ಯುಎಂಎಲ್ ಪ್ರಾಯೋಗಿಕವಾಗಿ ಟ್ರ್ಯಾಕ್ಟರ್‌ಗಳನ್ನು ನಿಯೋಜಿಸಿ ರಸ್ತೆ ಬದಿಯಲ್ಲಿ ಬಿದ್ದಿರುವ ಬೃಹತ್ ತ್ಯಾಜ್ಯವನ್ನು ಸಂಗ್ರಹಿಸಲಾಗಿತ್ತು. ವಿವಿಧ ಪ್ರದೇಶಗಳಿಂದ ಸುಮಾರು 6,000 ಟನ್‌ಗಳಷ್ಟು ಬೃಹತ್ ತ್ಯಾಜ್ಯವನ್ನು ಗುರುತಿಸಿ ಸಂಗ್ರಹಿಸಲಾಗಿರುತ್ತದೆ’ ಎಂದಿದ್ದಾರೆ.

‘ನಾಗರಿಕ ಸ್ನೇಹಿ ಪರಿಹಾರದ ಉದ್ದೇಶದಿಂದ ಬಿಎಸ್‌ಡಬ್ಲ್ಯುಎಂಎಲ್, ‘ಡಿಕ್ಲಟರ್’ (DClutter) ಮೊಬೈಲ್ ತಂತ್ರಾಂಶವನ್ನು ಪರಿಚಯಿಸಿದೆ. ಇದು ಗೂಗಲ್ ಪ್ಲೇ ಸ್ಟೋರ್ ಹಾಗೂ ಆ್ಯಪಲ್ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿದ್ದು, ಡೌನ್‌ಲೋಡ್ ಮಾಡಿಕೊಳ್ಳಬೇಕು. ವಿವರಗಳೊಂದಿಗೆ ನೋಂದಾಯಿಸಿಕೊಳ್ಳಬೇಕು. ಬೃಹತ್ ತ್ಯಾಜ್ಯ ವಿಲೇವಾರಿಗೆ ಮನವಿ ಸಲ್ಲಿಸಿ, ಸಮಯವನ್ನೂ ನಿಗದಿಪಡಿಸಿಕೊಳ್ಳಬಹುದು. ಈ ಕೋರಿಕೆಯಂತೆ ಹಾಗೂ ತ್ಯಾಜ್ಯದ ಪ್ರಮಾಣ ಹಾಗೂ ಸ್ವರೂಪವನ್ನು ಅವಲಂಬಿಸಿ ವಾರಕ್ಕೆ ಒಮ್ಮೆ ಬೃಹತ್ ತ್ಯಾಜ್ಯ ಸಂಗ್ರಹಣೆ ನಡೆಸಲಾಗುತ್ತದೆ’ ಎಂದು ವಿವರಿಸಿದ್ದಾರೆ.

‘ಸಂಗ್ರಹಿಸಿದ ತ್ಯಾಜ್ಯದಲ್ಲಿ ಮರುಬಳಕೆ ಸಾಧ್ಯವಿರುವ ವಸ್ತುಗಳನ್ನು ಮರು ಬಳಕೆ ಘಟಕಗಳಿಗೆ ಕಳುಹಿಸಿ, ಉಳಿದದ್ದನ್ನು ವೈಜ್ಞಾನಿಕ ವಿಧಾನದಲ್ಲಿ ಸಂಸ್ಕರಿಸಲು ವೇಸ್ಟ್–ಟು–ಎನರ್ಜಿ ಘಟಕಗಳಿಗೆ ರವಾನಿಸಲಾಗುತ್ತದೆ’ ಎಂದರು.

ಜೆ.ಪಿ. ನಗರದ ಎಂಟನೇ ಹಂತದಲ್ಲಿರುವ ಕಾಂಪೌಂಡ್ ಮೇಲೆ ಆರ್ಟಿ ಫ್ಯಾಸೆಟ್ಸ್ ಕಲಾ ಶಾಲೆಯ ವಿದ್ಯಾರ್ಥಿಗಳು ಚಿತ್ರ ಬಿಡಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ

ಪ್ರಬಂಧ ಸ್ಪರ್ಧೆ

ಬೆಂಗಳೂರು: ಸಂವಿಧಾನ ಓದು ಅಭಿಯಾನ–ಕರ್ನಾಟಕದ ಸಹಯೋಗದಲ್ಲಿ ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾ, ಕಾನೂನು ವಿದ್ಯಾರ್ಥಿಗಳಿಗೆ ಜೂನ್ 13ರಂದು ಮಧ್ಯಾಹ್ನ 12 ಗಂಟೆಗೆ ಭಾರತ ಸಂವಿಧಾನದ ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಹಮ್ಮಿಕೊಂಡಿದೆ.

ಬೇಗೂರು–ಕೊಪ್ಪ ರಸ್ತೆ ಹುಲ್ಲಹಳ್ಳಿಯಲ್ಲಿರುವ ಸಂಸ್ಥೆಯಲ್ಲಿ ಸ್ಪರ್ಧೆ ನಡೆಯಲಿದೆ. 3 ಅಥವಾ 5 ವರ್ಷಗಳ ಎಲ್‌ಎಲ್‌ಬಿ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ 25 ವರ್ಷದೊಳಗಿನ ವಿದ್ಯಾರ್ಥಿಗಳು ಸ್ಪರ್ಧಿಸಬಹುದು. ಪ್ರತಿ ಕಾಲೇಜಿನಿಂದ ಗರಿಷ್ಠ ಐದು ಮಂದಿ ಭಾಗವಹಿಸಬಹುದು. ‘ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎದುರಾಗಿರುವ ಸವಾಲುಗಳು’, ‘ಸಮ ಕಾಲೀನ ಭಾರತದಲ್ಲಿ ನ್ಯಾಯಾಂಗದ ಸ್ವಾತಂತ್ರ್ಯ’, ‘ಪ್ರಜಾಪ್ರಭುತ್ವಕ್ಕಿರುವ ಸವಾಲುಗಳು–ಮುಂದಿನ ದಾರಿಗಳು’, ‘ಭಾರತೀಯ ಸಂವಿಧಾನದ ಅಡಿಯಲ್ಲಿ ಸಾಮಾಜಿಕ ನ್ಯಾಯ’, ‘ಭಾರತೀಯ ಸಂವಿಧಾನದ ಅಡಿಯಲ್ಲಿ ಜಾತ್ಯತೀತತೆ’ ವಿಷಯಗಳ ಮೇಲೆ ಒಂದೂವರೆ ಗಂಟೆ ಕಾಲಮಿತಿಯೊಳಗೆ ಪ್ರಬಂಧವನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಬೇಕು. ಪ್ರಥಮ ಬಹುಮಾನ ₹15 ಸಾವಿರ, ದ್ವಿತೀಯ ಬಹುಮಾನ ₹10 ಸಾವಿರ, ತೃತೀಯ ಬಹುಮಾನ ₹5 ಸಾವಿರ, 25 ಅಭ್ಯರ್ಥಿಗಳಿಗೆ ತಲಾ ₹ 1 ಸಾವಿರ ಸಮಾಧಾನಕರ ಬಹುಮಾನ ಇದೆ. ಆಸಕ್ತರು ಜೂನ್ 1ರೊಳಗೆ https://forms.gle/eBm1kckAZhzkWbFj7 ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. **ಸಂಪರ್ಕಕ್ಕೆ:** 7483321694 ಅಥವಾ 9823967628

RAJYA VOKKALIGARA SANGHA
BANGALORE INSTITUTE OF TECHNOLOGY
(An Autonomous Institution under VTU Belagavi, Approved by AICTE, New-Delhi)
K.R.ROAD, V.V. PURA, BENGALURU-560 004
Phone: 080-26613237, 26615865 Website: bit-bangalore.edu.in

Ref: Store/236/2025-26 RVS/2025-26/SE0007/Call-2 Date: 16.05.2026

SHORT TERM TENDER NOTICE

The Short term Tenders are invited through e-procurement portal from eligible tenderers, registered Companies/Agencies by the Principal, BIT, Bangalore for the works detailed in the table below under standard tender document procedure formats (The tenderers who have executed similar nature of single work costing not less than 50% of this tender amount during 2023-26,). Website: https://kppp.karnataka.gov.in

Sl. No	Name of work	Approx. Value of the works (in Lakhs)	EMD (Rs)	Cost of tender form (GST Included	Period of completion
01	Social Media Management for Bangalore Institute of Technology	6,80,000	17,000	2,360.00	One Month

Calendar of events:

Tender Documents available in E-Procurement website	From **18.05.2026** to **24.05.2026** up to 05.00 PM
Date and Time of Pre-Bid Meeting	**22.05.2026** at 11.30 AM
Last date of receipt of tenders	**24.05.2026** up to 05.00 PM
Opening of Tenders	**25.05.2026** at 11.00.AM (Tentatively)

(1) Tender documents (Specifications, Term & Conditions) may be obtained from e-procurement website https://kppp.karnataka.gov.in **(2)** E.M.D Paid through E-Procurement following modes only, 1.Debit Card, 2.Credit Card, 3.NET Banking, 4.NEFT & 5.RTGS only. **(3)** Cost of Tender form Fee in the form of DD drawn in the name of "The Principal BIT" from any nationalized bank only. The DD soft copy should upload in E-Procurement portal and submit the hard copy of DD at tender opening date to BIT, in default of which the tender is liable to be rejected. **(4)** The Companies / Agencies shall bear the GST on works contract and any corporation and any other Local Authority & royalty due to the Government of Karnataka at the prevailing rates. Sangha / BIT is not responsible for all taxes with respect to the work. **(5)** Tenders may be applied to all items or tenders for individual items also accepted. **(6)** Right to reject any or all the tenders without assigning any reason is reserved with the Sangha / BIT authority. **(7)** In the event of any holiday on the notified dates, the next working day will hold good, **(8)** For any enquiries contact Principal Office at V V Pura, K. R Road Bengaluru-04 during office hours. ***Company/Authorized Dealers can only apply.**

Sd/- Principal BIT | Sd/- Chairman BIT | Sd/- Chairman Purchase Commitee, RVS | Sd/- Treasurer RVS | Sd/- Joint Secretary RVS | Sd/- General Secretary RVS | Sd/- Vice President RVS | Sd/- President RVS

ಭಾರತೀಯ ಸ್ಟೇಟ್ ಬ್ಯಾಂಕ್
ಎಸ್‌ಎಸ್‌ಐ ಪೀಣ್ಯ ಕೈಗಾರಿಕಾ ಎಸ್ಟೇಟ್ ಶಾಖೆ (40284)
ನಂ.120, ಟಿವಿಎಸ್ ಕ್ರಾಸ್ ಹತ್ತಿರ, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, 1ನೇ ಹಂತ, ಬೆಂಗಳೂರು–560058. ಇ–ಮೇಲ್ ಐಡಿ: sbi.40284@sbi.co.in

ಸ್ವಾಧೀನ ಸೂಚನೆ

ಕೆಳಸಹಿದಾರರಾದ ಅಧಿಕೃತ ಅಧಿಕಾರಿಯಾಗಿದ್ದು **ಭಾರತೀಯ ಸ್ಟೇಟ್ ಬ್ಯಾಂಕ್ ಆಫ್** ಇವರು ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ ಕಾಯಿದೆ, 2002 (2002ರ ಆಕ್ಟ್ 54) (“ಕಾಯಿದೆ”) ರ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 (“ನಿಯಮ”) ಆಕ್ಟ್, ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.46,38,198/– (ರೂಪಾಯಿ ನಲವತ್ತಾರು ಲಕ್ಷದ ಮೂವತ್ತೆಂಟು ಸಾವಿರದ ಒಂದುನೂರ ತೊಂಭತ್ತೆಂಟು ಮಾತ್ರ) ದಿನಾಂಕ: 24.02.2026** ರಂತೆ **ದಿನಾಂಕ: 25.02.2026**ರವರೆಗಿನ ಬಡ್ಡಿ ಮತ್ತು ಶುಲ್ಕಗಳನ್ನು ಪಾವತಿ ಮಾಡಲು **ಸಾಲಗಾರರು:** (1) **ಮೆ|| ಎಸ್.ಎಸ್ ಇಂಜಿನಿಯರಿಂಗ್ ವರ್ಕ್ಸ್, ಮಾಲೀಕರು: ಶ್ರೀಮತಿ ಶಿಲ್ಪಾ ಬಿ.ಎಸ್,** 24 ಎ, ನೆಲ ಮಹಡಿ, 9ನೇ ಮುಖ್ಯರಸ್ತೆ, ಲಕ್ಷ್ಮೀದೇವಿ ನಗರ, ಕೆಂಪಮ್ಮ ದೇವಿ ಲೇಔಟ್, ಬೆಂಗಳೂರು–560058, **ಇದನ್ನು ಪ್ರತಿನಿಧಿಸುವ ಮಾಲೀಕರು : ಶ್ರೀಮತಿ ಶಿಲ್ಪಾ ಬಿ.ಎಸ್.** C/o ಶ್ರೀ ದೇವರಾಜು ಬೇಲೂರು, # 177, 7ನೇ ಕ್ರಾಸ್, ಪೀಣ್ಯ 3ನೇ ಹಂತ, ಬೆಂಗಳೂರು–560058, **ಮತ್ತೊಂದು ವಿಳಾಸ: ಶ್ರೀಮತಿ ಶಿಲ್ಪಾ ಬಿ.ಎಸ್.** C/o ಶ್ರೀ ದೇವರಾಜು, ಬೇಲೂರು, # 158, 1ನೇ ಡಿ ಮೇನ್, 6ನೇ ಕ್ರಾಸ್, ಪಾರ್ವತಿನಗರ, ಲಗ್ಗೆರೆ, ಬೆಂಗಳೂರು–560058., ಇವರಿಗೆ **ದಿನಾಂಕ : 24.02.2026** ರಂದು ಡಿಮ್ಯಾಂಡ್ ನೋಟೀಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಪೂರ್ಣ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13(4) ರೊಂದಿಗೆ ನಿಯಮ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 15.05.2026** ರಂದು ಸಾಂಕೇತಿಕವಾಗಿ ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತೇದ್ದೇವೆ. ಹಾಗೂ ಅಂತಹ ಯಾವುದೇ ವ್ಯವಹಾರಗಳು **ಭಾರತೀಯ ಸ್ಟೇಟ್ ಬ್ಯಾಂಕ್,** ಇವರಿಗೆ ಸಂದಾಯವಾಗತಕ್ಕ ಮೊಬಲಗು **ರೂ. 49,96,118/– (ರೂಪಾಯಿ ನಲವತ್ತೊಂಭತ್ತು ಲಕ್ಷದ ತೊಂಭತ್ತಾರು ಸಾವಿರದ ಒಂದುನೂರ ಹದಿನೆಂಟು ಮಾತ್ರ) ದಿನಾಂಕ: 14.05.2026** ರಂತೆ **ದಿನಾಂಕ: 15.05.2026**ರವರೆಗಿನ ಬಡ್ಡಿ/ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮುಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು.

ಷೆಡ್ಯೂಲ್ ಆಸ್ತಿ

(Hypothecation of Movable Properties) ಭಾಗ I : Hypothecation of all Stocks, Spares, Consumables, Book debts, Movables, Receivables, Plant & Machineries & Claims of the company and other Current Assets (Present & Future)

Sl.No.	Description	Supplier / Manufacturer	Quantity
1	SPM Brand CNC 3881020.00 Vertical Machining Center SPM/VL1050N FBT40	S V Technologies	1
2	SPM Brand CNC 4052120.00 Vertical Machining Center SPM/VL1540N BT40	S V Technologies	1

ಭಾಗ II : ಸ್ಥಿರಾಸ್ತಿ : ಇಲ್ಲ

ದಿನಾಂಕ: 15.05.2026 **ಸಹಿ/– ಅಧಿಕೃತ ಅಧಿಕಾರಿ**
ಸ್ಥಳ: ಬೆಂಗಳೂರು **ಭಾರತೀಯ ಸ್ಟೇಟ್ ಬ್ಯಾಂಕ್**

ಬೆಂಗಳೂರು ಉತ್ತರ ನಗರ ಪಾಲಿಕೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕೆಂಪನಹಳ್ಳಿ ಮುಖ್ಯರಸ್ತೆ, ಅಟ್ಟೂರು ಲೇಔಟ್, ಅಟ್ಟೂರು ಅರಣ್ಯ ನರ್ಸರಿ, ಬೆಂಗಳೂರು – 560064.

ಸಂಖ್ಯೆ: ಸಅಸಂ/ಬೆಂಉನಪಾ/ಟೆಂಡರ್/07/2026–27 **ದಿನಾಂಕ: 16–05–2026**

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಗಳಿಗಾಗಿ ಬೆಂಉನ ಪಾಲಿಕೆಯಲ್ಲಿ ನೋಂದಾಯಿಸಿರುವ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ಅರಣ್ಯ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ರ ಬ್ಯಾಟರಾಯನಪುರ ವಿಧಾನಸಭಾ ಮತಕ್ಷೇತ್ರದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0089**
2	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ರ ಪುಲಿಕೇಶಿನಗರ ವಿಧಾನಸಭಾ ಮತಕ್ಷೇತ್ರದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0090**
3	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ರ ಸರ್ವಜ್ಞನಗರ ವಿಧಾನಸಭಾ ಮತಕ್ಷೇತ್ರದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0091**
4	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ರ (ಬ್ಯಾಟರಾಯನಪುರ, ಪುಲಿಕೇಶಿನಗರ ಮತ್ತು ಸರ್ವಜ್ಞನಗರ ವಿಧಾನಸಭಾ ಮತಕ್ಷೇತ್ರ) ದಲ್ಲಿ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು, ಒಂದು ರಾತ್ರಿ ತಂಡ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0092**
5	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ರ (ಬ್ಯಾಟರಾಯನಪುರ, ಪುಲಿಕೇಶಿನಗರ ಮತ್ತು ಸರ್ವಜ್ಞನಗರ ವಿಧಾನಸಭಾ ಮತಕ್ಷೇತ್ರ) ದಲ್ಲಿ 2026–27 ನೇ ಸಾಲಿಗೆ ತ್ವರಿತ ಪ್ರತಿಕ್ರಿಯೆ ತಂಡ–1 ಮರಗಳ ವ್ಯವಸ್ಥಿತ ನಿರ್ವಹಣೆಯ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0093**
6	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ರ (ಬ್ಯಾಟರಾಯನಪುರ, ಪುಲಿಕೇಶಿನಗರ ಮತ್ತು ಸರ್ವಜ್ಞನಗರ ವಿಧಾನಸಭಾ ಮತಕ್ಷೇತ್ರ) ದಲ್ಲಿ 2026–27 ನೇ ಸಾಲಿಗೆ ತ್ವರಿತ ಪ್ರತಿಕ್ರಿಯೆ ತಂಡ–2 ಮರಗಳ ವ್ಯವಸ್ಥಿತ ನಿರ್ವಹಣೆಯ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0094**
7	ವಲಯ–1 ರಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆಗೆ ಸಹಾಯ ಮಾಡಲು 20 ಟನ್ ಸಾಮರ್ಥ್ಯದ ಮೊಬೈಲ್ ಹೈಡ್ರಾಲಿಕ್ ಕ್ರೇನ್ (ಸಿಬ್ಬಂದಿ ಶುಲ್ಕಗಳು ಒಳಗೊಂಡಂತೆ ದರಗಳು, ಇಂಧನ ವೆಚ್ಚ, ಲೂಬ್ರಿಕೆಂಟ್‌ಗಳು, ಸಂಗ್ರಹಗಳು, ಸ್ಥಾಪನೆಗಳು ಒಳಗೊಂಡಂತೆ ಕಾರ್ಯಾಚರಣೆ ಮತ್ತು ನಿರ್ವಹಣೆ ಶುಲ್ಕಗಳು ಮತ್ತು ಡಿಪ್ರೆಷಿಯೇಷನ್ ಹಾಗೂ ಹೈಪೋಥೆಕೇಶನ್ ಮೇಲಿನ ಬಡ್ಡಿ ಶುಲ್ಕಗಳು). **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,00.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0095**
8	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–2 ರ ಯಲಹಂಕ ವಿಧಾನಸಭಾ ಮತಕ್ಷೇತ್ರದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0096**
9	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–2 ರ ಹೆಬ್ಬಾಳ ವಿಧಾನಸಭಾ ಮತಕ್ಷೇತ್ರದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0097**
10	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–2 ರ ದಾಸರಹಳ್ಳಿ ವಿಧಾನಸಭಾ ಮತಕ್ಷೇತ್ರ ಮತ್ತು ರಾಜರಾಜೇಶ್ವರಿನಗರ ಮತಕ್ಷೇತ್ರದ ಒಂದು ಭಾಗದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0098**
11	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–2 ರ (ಯಲಹಂಕ, ಹೆಬ್ಬಾಳ, ದಾಸರಹಳ್ಳಿ ವಿಧಾನಸಭಾ ಮತಕ್ಷೇತ್ರ) ದಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡುವುದು, ಒಂದು ರಾತ್ರಿ ತಂಡ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 40.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 80,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0099**
12	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–2 ರ (ಯಲಹಂಕ, ಹೆಬ್ಬಾಳ, ದಾಸರಹಳ್ಳಿ ವಿಧಾನಸಭಾ ಮತಕ್ಷೇತ್ರ) ದಲ್ಲಿ 2026–27 ನೇ ಸಾಲಿಗೆ ತ್ವರಿತ ಪ್ರತಿಕ್ರಿಯೆ ತಂಡ–1 ನೇಮಿಸುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0100**
13	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–2 ರ (ಯಲಹಂಕ, ಹೆಬ್ಬಾಳ, ದಾಸರಹಳ್ಳಿ ವಿಧಾನಸಭಾ ಮತಕ್ಷೇತ್ರ) ದಲ್ಲಿ 2026–27 ನೇ ಸಾಲಿಗೆ ತ್ವರಿತ ಪ್ರತಿಕ್ರಿಯೆ ತಂಡ–2 ನೇಮಿಸುವುದು. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0101**
14	ವಲಯ–2 ರಲ್ಲಿ 2026–27 ನೇ ಸಾಲಿಗೆ ಮರಗಳ ವ್ಯವಸ್ಥಿತ ನಿರ್ವಹಣೆಗೆ ಸಹಾಯ ಮಾಡಲು 20 ಟನ್ ಸಾಮರ್ಥ್ಯದ ಮೊಬೈಲ್ ಹೈಡ್ರಾಲಿಕ್ ಕ್ರೇನ್ (ಸಿಬ್ಬಂದಿ ಶುಲ್ಕಗಳು ಒಳಗೊಂಡಂತೆ ದರಗಳು, ಇಂಧನ ವೆಚ್ಚ, ಲೂಬ್ರಿಕೆಂಟ್‌ಗಳು, ಸಂಗ್ರಹಗಳು, ಸ್ಥಾಪನೆಗಳು ಒಳಗೊಂಡಂತೆ ಕಾರ್ಯಾಚರಣೆ ಮತ್ತು ನಿರ್ವಹಣೆ ಶುಲ್ಕಗಳು ಮತ್ತು ಡಿಪ್ರೆಷಿಯೇಷನ್ ಹಾಗೂ ಹೈಪೋಥೆಕೇಶನ್ ಮೇಲಿನ ಬಡ್ಡಿ ಶುಲ್ಕಗಳು). **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,00.00, ಇಂಡೆಂಟ್ ಸಂಖ್ಯೆ: ಬಿಎನ್‌ಸಿಸಿ/2026–27/ಎಸ್‌ಇ0102**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **16–05–2026 ರಂದು ಸಂಜೆ 4.00 ಗಂಟೆಯ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಕೆ.ಪಿ.ಪಿ. ಪೋರ್ಟಲ್ ಆನ್‌ಲೈನ್‌ನಲ್ಲಿ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **21–05–2026 ರಂದು ಸಂಜೆ 4.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **21–05–2026 ರಂದು ಸಂಜೆ 4.30 ಗಂಟೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಉನಪಾ, ಕೆಂಪನಹಳ್ಳಿ ಮುಖ್ಯರಸ್ತೆ, ಅಟ್ಟೂರು ಲೇಔಟ್, ಅಟ್ಟೂರು ಅರಣ್ಯ ನರ್ಸರಿ, ಬೆಂಗಳೂರು – 560064 ಇಲ್ಲಿ ನಡೆಯುವುದು.** 4) ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **27–05–2026 ರಂದು ಸಂಜೆ 5.30 ಗಂಟೆವರೆಗೆ.** 5) ತಾಂತ್ರಿಕ ಡಾಕ್ಯೂಮೆಂಟ್‌ನ್ನು ತೆರೆಯುವ ದಿನಾಂಕ: **29–05–2026 ರಂದು ಬೆಳಿಗ್ಗೆ 11.00 ಗಂಟೆಗೆ.** 6) ಪತ್ರ ವ್ಯವಹಾರಕ್ಕೆ ವಿಳಾಸ: **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಉನಪಾ, ಕೆಂಪನಹಳ್ಳಿ ಮುಖ್ಯರಸ್ತೆ, ಅಟ್ಟೂರು ಲೇಔಟ್, ಅಟ್ಟೂರು ಅರಣ್ಯ ನರ್ಸರಿ, ಬೆಂಗಳೂರು – 560064, ಇ–ಮೇಲ್: acfbncc@gmail.com.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಬೆಂಗಳೂರು ಉತ್ತರ ನಗರ ಪಾಲಿಕೆ.

ಭಾರತ ಸರ್ಕಾರ
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ
ಉದ್ಯೋಗ ಮಹಾ ನಿರ್ದೇಶನಾಲಯ
National Career Service
ಪ.ಜಾ/ಪ.ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಸರ್ಕಾರಿ ಐಟಿಐ ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029 ಕರ್ನಾಟಕ.
ಇ–ಮೇಲ್: cgcempbg@nic.in, ಟೆಲಿಫೋನ್:080–29756192

11 ತಿಂಗಳ ವಿಶೇಷ ತರಬೇತಿ ನೀಡಲು ಬೆಂಗಳೂರಿನಲ್ಲಿರುವ ಪ್ರತಿಷ್ಠಿತ/ನೋಂದಾಯಿತ ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಭಾರತ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯ, ನವದೆಹಲಿಯ ಅಧೀನ ಕಛೇರಿಯಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಆವರಣ, ಕೌಶಲ್ಯ ಭವನ ಹಿಂಭಾಗ, ಡೈರಿ ಸರ್ಕಲ್, ಬೆಂಗಳೂರು–560029 ಕಛೇರಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 80 ನಿರುದ್ಯೋಗಿ ಯುವಕ/ಯುವತಿಯರಿಗೆ **“11 ತಿಂಗಳ ವಿಶೇಷ ತರಬೇತಿ”** ಯೋಜನೆಯಡಿ ಸಾಮಾನ್ಯ ಇಂಗ್ಲೀಷ್, ಸಾಮಾನ್ಯ ಜ್ಞಾನ, ಕಂಪೂಟರ್ ಜ್ಞಾನ, ನ್ಯೂಮಿರಿಕಲ್ ಅಬಿಲಿಟಿ, ಶಾರ್ಟಹ್ಯಾಂಡ್/ಸ್ಟೆನೋಗ್ರಾಫೀ (ಶೀಘ್ರಲಿಪಿ) ವಿಷಯಗಳ ತರಬೇತಿ ನೀಡಲು ಬೆಂಗಳೂರಿನಲ್ಲಿರುವ ಅರ್ಹ ಶೈಕ್ಷಣಿಕ ಪ್ರತಿಷ್ಠಿತ/ನೋಂದಾಯಿತ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಗೊಂಡ ಸಂಸ್ಥೆಗೆ ನಿಯಮಾವಳಿಯಂತೆ ಸೇವಾ ಶುಲ್ಕ ನೀಡಲಾಗುತ್ತದೆ. ಕಚೇರಿಯ ಸಮಯದಲ್ಲಿ ಸಂಪರ್ಕಿಸಿ ಅರ್ಜಿಯನ್ನು ಹಾಗೂ ಸೇವಾ ಷರತ್ತುಗಳನ್ನು ಪಡೆಯಬಹುದು. ಅಗತ್ಯ ದಾಖಲೆಗಳ ಜೊತೆಗೆ ಭರ್ತಿ ಮಾಡಿದ ಅರ್ಜಿಯನ್ನು **ದಿನಾಂಕ: 25.05.2026 ಸಂಜೆ 5:00** ಒಳಗಾಗಿ ಕಛೇರಿಗೆ ನೋಂದಾಯಿತ ಪೋಸ್ಟ್ ಅಥವಾ ಖುದ್ದಾಗಿ ಬಂದು ಸಲ್ಲಿಸಲು ತಿಳಿಸಿದೆ.
ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ಪಡೆಯಲು ಕಛೇರಿಯ ಮುಖ್ಯಸ್ಥರಾದ ಶಿವಶಾಂತವೀರ ದಿವಾಕರ, ಉಪ–ಪ್ರಾದೇಶಿಕ ಉದ್ಯೋಗಾಧಿಕಾರಿಗಳು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಬೆಂಗಳೂರುರವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

(ಶಿವಶಾಂತವೀರ ದಿವಾಕರ) ಕೇ.ಸಾ.ಸೇ
ಉಪ–ಪ್ರಾದೇಶಿಕ ಉದ್ಯೋಗಾಧಿಕಾರಿ, ಪ.ಜಾ/ಪ.ಪಂ.ದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಬೆಂಗಳೂರು–560 029
(Ph:080-29756192,Mob:09916188914)

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಬೆಂಗಳೂರು ಜಿಲ್ಲೆ ಯಲಹಂಕ ತಾಲ್ಲೂಕು, ಜಾಲಾ ಹೋಬಳಿ, ಸಾತನೂರು ಗ್ರಾಮದ (1) ಸರ್ವೆ ನಂ. 121 ವಿಸ್ತೀರ್ಣ 1 ಎಕರೆ; (2) ಸರ್ವೆ ನಂ. 122 ವಿಸ್ತೀರ್ಣ 10 ಎಕರೆ ಹಾಗು (3) ಸರ್ವೆ ನಂ. 123 ವಿಸ್ತೀರ್ಣ 4 ಎಕರೆ, ಒಟ್ಟು 15 ಎಕರೆ ವಿಸ್ತೀರ್ಣವುಳ್ಳ ಹಾಗು ಈ ಕೆಳಗೆ ಐಟಂ ನಂ.1, ಐಟಂ ನಂ.2 ಹಾಗು ಐಟಂ ನಂ.3 ರ ಷೆಡ್ಯೂಲ್‌ನಲ್ಲಿ ವಿವರಿಸಿರುವ (“ಷೆಡ್ಯೂಲ್ ಸ್ವತ್ತು) ಸ್ವತ್ತಿನ ವಿಷಯವಾಗಿ ಈ ಕೆಳಗೆ ವಿವರಿಸಿರುವ ಮಾಲೀಕರೊಂದಿಗೆ (ಮಾಲೀಕರು) ಜಂಟಿ ಅಭಿವೃದ್ಧಿ ಕರಾರು ಮಾಡಲು ಇಚ್ಛಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಸ್ವತ್ತಿನ ಮೇಲೆ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ ಆಸಕ್ತಿ ಹೊಂದಿರುವ ಅಥವಾ ಅವುಗಳ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಛಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ಖರೀದಿ/ ವ್ಯವಹಾರದ ವಿರುದ್ಧ ಆಕ್ಷೇಪಣೆ ಇದ್ದಲ್ಲಿ ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ಮಾಲೀಕತ್ವ ಆಸಕ್ತಿ ಹೊಂದಿದ್ದಾರೆ ಎಂಬುದರ ಬಗ್ಗೆ ಅಸಲಿ ಅಥವಾ ಇನ್ನಾವುದೇ ದಾಖಲೆ/ಗಳ ಸಹಿತ ಈ ಸಾರ್ವಜನಿಕ ಸೂಚನೆ ಪ್ರಕಟಗೊಂಡ ಹದಿನೈದು (15) ದಿನಗಳೊಳಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು, ತದನಂತರ, ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಮುಂದುವರೆಯುವರು.

ಷೆಡ್ಯೂಲ್ ಸ್ವತ್ತು

ಈ ಕೆಳಗೆ ನೀಡಿರುವ ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲಾ ಹೋಬಳಿ, ಸಾತನೂರು ಗ್ರಾಮದ ಸರ್ವೆ ನಂಬರುಗಳ ಒಟ್ಟು ವಿಸ್ತೀರ್ಣ 15 ಎಕರೆ ಜಮೀನಿನ ವಿವರ:

ಐಟಂ ನಂ.	ಮಾಲೀಕರ ಹೆಸರು	ಸರ್ವೆ ನಂಬರು	ವಿಸ್ತೀರ್ಣ ಎ	ವಿಸ್ತೀರ್ಣ ಗು	ಚೆಕ್ಕುಬಂದಿ ಪೂರ್ವ	ಚೆಕ್ಕುಬಂದಿ ಪಶ್ಚಿಮ	ಚೆಕ್ಕುಬಂದಿ ಉತ್ತರ	ಚೆಕ್ಕುಬಂದಿ ದಕ್ಷಿಣ
1	(1) ಶ್ರೀ ಶೃಂಗೇರಿ ಶೇಷಗಿರಿ ಬಿನ್ ಶೃಂಗೇರಿ ಸತ್ಯನಾರಾಯಣಯ್ಯ (2) ಶೃಂಗೇರಿ ಮನೋಹರಿ ಕೋಂ ಶೃಂಗೇರಿ ಶೇಷಗಿರಿ (3) ಶ್ರೀ ಶೃಂಗೇರಿ ಶ್ರೀನಾಥ್ ಬಿನ್ ಶೃಂಗೇರಿ ಸತ್ಯನಾರಾಯಣಯ್ಯ (4) ಶ್ರೀಮತಿ ರುಕ್ಮಿಣಿ ಶ್ರೀನಾಥ್ ಕೋಂ ಶೃಂಗೇರಿ ಶ್ರೀನಾಥ್ (5) ಶ್ರೀ ಶೃಂಗೇರಿ ರಾಜರಾಮ್ ಬಿನ್ ಶೃಂಗೇರಿ ಸತ್ಯನಾರಾಯಣಯ್ಯ ಹಾಗೂ (6) ಶ್ರೀ ಶೃಂಗೇರಿ ಕೃಷ್ಣ ಮೋಹನ್ ಬಿನ್ ಶೃಂಗೇರಿ ಸತ್ಯನಾರಾಯಣಯ್ಯ;	121	1	00	ಸರ್ವೆ ನಂ.67 (ಸರ್ವೆ ದಾಖಲೆಯಂತೆ ಸರ್ವೆ ನಂ.124)	ಸರ್ವೆ ನಂ.122 (ಹಳೇ ಸರ್ವೆ ನಂ.67) ಹಾಗೂ ಸರ್ವೆ ನಂ.67 (ಸರ್ವೆ ದಾಖಲೆಯಂತೆ 120)	ಸರ್ವೆ ನಂ.122 (ಹಳೇ ಸರ್ವೆ ನಂ.67)	ಬಾಗಲೂರು ಮುಖ್ಯ ರಸ್ತೆ
2		122	10	00	ಸರ್ವೆ ನಂ.123, 121 (ಹಳೇ ಸರ್ವೆ ನಂ.67), ಸರ್ವೆ ನಂ.67 (ಸರ್ವೆ ದಾಖಲೆಯಂತೆ ಸರ್ವೆ ನಂ.124)	ಸರ್ವೆ ನಂ.67 (ಸರ್ವೆ ದಾಖಲೆಯಂತೆ ಸರ್ವೆ ನಂ.120) ಹಾಗೂ 123 (ಹಳೇ ಸರ್ವೆ ನಂ.67)	ಸರ್ವೆ ನಂ.123 (ಹಳೇ ಸರ್ವೆ ನಂ.67) ಹಾಗೂ ಸರ್ವೆ ನಂ.67	ಸರ್ವೆ ನಂ. 121, 123 (ಹಳೇ ಸರ್ವೆ ನಂ.67) ಹಾಗೂ ಸರ್ವೆ ನಂ.67.
3		123	4	00	ಸರ್ವೆ ನಂ.67) (ಸರ್ವೆ ದಾಖಲೆಯಂತೆ ಸರ್ವೆ ನಂ.124) ಹಾಗೂ ಸರ್ವೆ ನಂ.122 (ಹಳೇ ಸರ್ವೆ ನಂ.67)	ಸರ್ವೆ ನಂ.122 (ಹಳೇ ಸರ್ವೆ ನಂ.67)	ಸರ್ವೆ ನಂ.122 (ಹಳೇ ಸರ್ವೆ ನಂ.67)	ಸರ್ವೆ ನಂ.122 (ಹಳೇ ಸರ್ವೆ ನಂ.67)
	ಒಟ್ಟು ವಿಸ್ತೀರ್ಣ		**15**	**00**				

ಸಹಿ/– (ಗೀತ ಕೆ.ಎನ್), ವಕೀಲರು,
ಸಿ ಎಂ ಎಸ್ ಇಂಡಸ್‌ಲಾ, ನಂ. 101, 1ನೇ ಮಹಡಿ, “ಎಂಬೆಸ್ಸಿ ಕ್ಲಾಸಿಕ್”, ನಂ.11, ವಿಠ್ಠಲ್‌ಮಲ್ಯ ರಸ್ತೆ, ಬೆಂಗಳೂರು – 560 001 ದೂ: 080–40726600.
ದಿನಾಂಕ: 17.05.2026
ಸ್ಥಳ: ಬೆಂಗಳೂರು

ವಿ.ವಿ ಸಿಂಡಿಕೇಟ್ ಸದಸ್ಯರಾಗಿ ರಮ್ಯಾ ರಮೇಶ್

ಬೆಂಗಳೂರು: ಎಚ್‌ಎಂಆರ್ ಸಮೂಹ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ರಮ್ಯಾ ರಮೇಶ್ ಅವರನ್ನು ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ರಾಜ್ಯಪಾಲರು ನೇಮಕ ಮಾಡಿದ್ದಾರೆ.

ಈ ನೇಮಕಾತಿಯು ಜುಲೈ 7 ರಿಂದ ಜಾರಿಗೆ ಬರಲಿದ್ದು, ಮೂರು ವರ್ಷಗಳ ಅವಧಿ ಹೊಂದಿರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹೇಗ್ ಮಧ್ಯಸ್ಥಿಕೆ: ಕೋರ್ಟ್ ಆದೇಶ ತಿರಸ್ಕರಿಸಿದ ಭಾರತ

ನವದೆಹಲಿ (ಪಿಟಿಐ): ಸಿಂಧೂ ಜಲಾಯನ ಪ್ರದೇಶದಲ್ಲಿ ಭಾರತದ ಉದ್ದೇಶಿತ ಜಲವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದಂತೆ ನೆದರ್ಲೆಂಡ್ಸ್‌ನ ಹೇಗ್ ಮೂಲದ ಶಾಶ್ವತ ಮಧ್ಯಸ್ಥಿಕೆ ನ್ಯಾಯಾಲಯ ನೀಡಿದ ಆದೇಶವನ್ನು ಭಾರತ ಶನಿವಾರ ತಿರಸ್ಕರಿಸಿದೆ.

ಸಿಂಧೂ ಜಲ ಒಪ್ಪಂದದ ಚೌಕಟ್ಟಿನಡಿಯಲ್ಲಿ ಪಾಕಿಸ್ತಾನ ಈ ಕುರಿತು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಆಕ್ಷೇಪ ವ್ಯಕ್ತಪಡಿಸಿತ್ತು. ನ್ಯಾಯಾಲಯದ ಆದೇಶವನ್ನು ತಿರಸ್ಕರಿಸಿರುವ ಭಾರತ, ಸಿಂಧೂ ಜಲ ಒಪ್ಪಂದದ ಅಮಾನತು ನಿರ್ಧಾರವು ಜಾರಿಯಲ್ಲಿದೆ. ಈ ವಿಷಯ ಪರಿಶೀಲಿಸಲು ರಚನೆಯಾಗಿರುವ ಮಧ್ಯಸ್ಥಿಕೆ ನ್ಯಾಯಾಲಯವನ್ನು ಭಾರತ ಎಂದಿಗೂ ಮಾನ್ಯ ಮಾಡಿಲ್ಲ' ಎಂದು ವಿದೇಶಾಂಗ ಇಲಾಖೆ ಹೇಳಿದೆ.

ಹೂಡಿಕೆ ಹೆಸರಲ್ಲಿ ವಂಚನೆ

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಆರೋಪಿಗಳು ಎಂಜಿನಿಯರ್ ಒಬ್ಬರಿಗೆ ₹2.73 ಕೋಟಿ ಮತ್ತು ಆಭರಣ ಮಳಿಗೆಯ ಗ್ರಾಹಕರೊಬ್ಬರಿಗೆ ₹1.18 ಕೋಟಿ ವಂಚಿಸಿರುವ ಘಟನೆ ನಡೆದಿದೆ

ಲಾಭದ ಆಮಿಷ: ₹2.73 ಕೋಟಿ ಮೋಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡಲಾಗುವುದು ಎಂಬುದಾಗಿ ಎಂಜಿನಿಯರ್‌ಗೆ ನಂಬಿಸಿದ ಸೈಬರ್ ವಂಚಕರು, ಅವರಿಂದ ₹2.73 ಕೋಟಿ ದೋಚಿದ್ದಾರೆ. ಈ ಬಗ್ಗೆ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮಕೃಷ್ಣರೆಡ್ಡಿ ಲೇಔಟ್‌ನಲ್ಲಿ ನೆಲಸಿರುವ 54 ವರ್ಷ ಎಂಜಿನಿಯರ್, ಆನ್‌ಲೈನ್ ಮೂಲಕ ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ಠಾಣೆ ಪೊಲೀಸರು ತಿಳಿಸಿದರು.

'ಫೆ. 2ರಂದು ದೂರುದಾರರ ಮೊಬೈಲ್ ಸಂಖ್ಯೆಯನ್ನು 'ಸ್ಟಾಕ್ ಟ್ರೇಡಿಂಗ್ ವರ್ಲ್ಡ್ ಬಿ-4' ಹೆಸರಿನ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೈಬರ್ ವಂಚಕರು ಸೇರ್ಪಡೆ ಮಾಡಿದ್ದರು. ಆ ಗ್ರೂಪ್‌ನಲ್ಲಿ 'ಐಪಿಒ ಸ್ಟಾಕ್ ಟ್ರೇಡಿಂಗ್' ಬಗ್ಗೆ ವಂಚಕರು ಚರ್ಚಿಸಿದ್ದರು. ಹೂಡಿಕೆ ಮಾಡಿದರೆ ಅಧಿಕ ಲಾಭ ಬರಲಿದೆ ಎಂಬುದಾಗಿಯೂ ಹೇಳಿದ್ದರು. ನಂತರ, ಅದೇ ಗ್ರೂಪ್‌ನಲ್ಲಿ ಲಿಂಕ್‌ವೊಂದನ್ನು ಕಳುಹಿಸಿ ಜಾಯಿನ್ ಆಗುವಂತೆ ದೂರುದಾರರಿಗೆ ಸೂಚಿಸಿದ್ದರು. ಆರೋಪಿಗಳ ಸೂಚನೆಯಂತೆ 'ಮಾರ್ಕ್ ಸಿಎಂ ಮೊಬೈಲ್ ಆ್ಯಪ್'ಗೆ ಎಂಜಿನಿಯರ್ ಲಾಗಿನ್ ಆಗಿದ್ದರು' ಎಂದು ಪೊಲೀಸರು ಹೇಳಿದರು.

'ಅದಾದ ಮೇಲೆ ಸೈಬರ್ ವಂಚಕರು ದೇಶದ ಬೇರೆ ಬ್ಯಾಂಕ್‌ನಲ್ಲಿ ತೆರೆದಿದ್ದ 32 ನಕಲಿ ಖಾತೆಗಳ ವಿವರವನ್ನು ದೂರುದಾರರಿಗೆ ಕಳುಹಿಸಿದ್ದರು. ದೂರುದಾರರು ತಮ್ಮ ಎರಡು ಬ್ಯಾಂಕ್ ಖಾತೆಗಳಿಂದ ಆ ಖಾತೆಗಳಿಗೆ ಹಂತ ಹಂತವಾಗಿ ₹ 2.73 ಕೋಟಿಯನ್ನು ಆರ್‌ಟಿಜಿಎಸ್, ನೆಫ್ಟ್ ಹಾಗೂ ಐಎಂಪಿಎಸ್ ಮೂಲಕ ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ಹೇಳಿವೆ.



'ಹೂಡಿಕೆ ಮಾಡಿದ್ದ ಹಣ ವಾಪಸ್ ಪಡೆಯಲು ಎಂಜಿನಿಯರ್ ಇತ್ತೀಚೆಗೆ ಯತ್ನಿಸಿದ್ದರು. ಹಣ ವಾಪಸ್ ಪಡೆಯಬೇಕಾದರೆ ಇನ್ನೂ ಹೆಚ್ಚಿನ ಹೂಡಿಕೆ ಮಾಡಬೇಕು ಎಂಬುದಾಗಿ ವಂಚಕರು ಸೂಚಿಸಿದ್ದರು. ಬಳಿಕ ಸೈಬರ್ ವಂಚಕರು ಸಂಪರ್ಕಕ್ಕೆ ಸಿಕ್ಕಿಲ್ಲ. ಆಗ ವಂಚನೆ ನಡೆದಿರುವುದು ಗೊತ್ತಾಗಿ ದೂರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಬುಲಿಯನ್ ವ್ಯವಹಾರ': ₹1.18 ಕೋಟಿ ದೋಖಾ

ಬೆಂಗಳೂರು: 'ಬುಲಿಯನ್ (ಬಂಡವಾಳ ಹೂಡಿಕೆ ಚಿನ್ನ) ವ್ಯವಹಾರದಲ್ಲಿ ಹೂಡಿಕೆ ಮಾಡುವುದು ಸುರಕ್ಷಿತ ಹಾಗೂ ಸುಲಭ ಎಂಬುದಾಗಿ ಗ್ರಾಹಕರೊಬ್ಬರಿಗೆ ನಂಬಿಸಿ, ಅವರಿಂದ ₹1.18 ಕೋಟಿ ಪಡೆದು ವಂಚಿಸಿರುವ ಆಭರಣ ಮಳಿಗೆಯ ಮೂವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲಸೂರು ಕಾರ್ ಸ್ಟ್ರೀಟ್‌ನ ವಿ.ಕೆ.ಶಶಿಕುಮಾರ್ ಅವರು ನೀಡಿದ ದೂರಿನ ಮೇಲೆ ಬಿನ್ನಿಪೇಟೆಯ ಪ್ರಕಾಶ್ ಚಂದ್, ಅವರ ಪತ್ನಿ ಭಾವಿಕಾ ಹಾಗೂ ಅವರ ಸಹೋದರ ಜೆ.ಭರತ್ ಕುಮಾರ್ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಬಿನ್ನಿಪೇಟೆಯಲ್ಲಿ ಮೂವರು ಚಿನ್ನ ಹಾಗೂ ಬೆಳ್ಳಿಯ ಆಭರಣ ಮಾರಾಟ ಮಾಡುತ್ತಿದ್ದಾರೆ. ಚಿನ್ನ ಹಾಗೂ ಬೆಳ್ಳಿಯ ವ್ಯವಹಾರದಲ್ಲಿ ಹೂಡಿಕೆ ಮಾಡುವುದು ಸುರಕ್ಷಿತ ಹಾಗೂ ಹೆಚ್ಚು ಲಾಭದಾಯಕವಾಗಿದೆ ಎಂದು ದೂರುದಾರರಿಗೆ ನಂಬಿಸಿದ್ದರು. ಅಲ್ಲದೇ, ಚಿನ್ನ, ಬೆಳ್ಳಿಯ ಮೇಲೆ ಹೂಡಿಕೆ ಮಾಡುವಂತೆಯೂ ಪ್ರೇರೇಪಿಸಿದ್ದರು. 'ಮಾರುಕಟ್ಟೆಯಲ್ಲಿ ಪ್ರತಿದಿನ ಚಿನ್ನದ ಮೇಲಿನ ಬೆಲೆ ಏರಿಳಿತವಾಗುತ್ತಿದ್ದು, ಬೆಲೆ ಕಡಿಮೆ ಇರುವಾಗ ನಿಮ್ಮ ಪರವಾಗಿ ನಾವೇ ಚಿನ್ನವನ್ನು ಖರೀದಿ ಮಾಡಿ ನಿಮಗೆ ನೇರವಾಗಿ ಭೌತಿಕ ಚಿನ್ನವನ್ನು ಒದಗಿಸುತ್ತೇವೆ ಎಂಬುದಾಗಿ ದೂರುದಾರರಿಗೆ ನಂಬಿಸಿದ್ದರು' ಎಂದು ಶಶಿಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಿರಂತರ ಒತ್ತಡ: 'ಚಿನ್ನದ ವ್ಯವಹಾರದಲ್ಲಿ ಅಪಾರ ಅನುಭವ ಇದೆ. ಉತ್ತಮ ದರದಲ್ಲಿ ಚಿನ್ನ ಖರೀದಿಸಿ ಕೊಡುತ್ತೇವೆ ಎಂಬುದಾಗಿಯೂ ಆರೋಪಿಗಳು ನಂಬಿಸಿದ್ದರು. ಆರೋಪಿಗಳ ಮಾತು ನಂಬಿದ್ದ ಶಶಿಕುಮಾರ್ ಅವರು ಚಿನ್ನದ ಮೇಲೆ ಹೂಡಿಕೆ ಮಾಡಿದ್ದರು. ಆನ್‌ಲೈನ್ ಮೂಲಕ ₹1.18 ಕೋಟಿಯನ್ನು ಹಂತಹಂತವಾಗಿ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ಹಣವನ್ನು ವಾಪಸ್ ನೀಡದೇ ವಂಚಿಸಲಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮಾರತ್‌ಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ
ಸ್ನೇಹಿತನನ್ನು ಕೊಂದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೌಡೇಶ್ವರಿ ರಸ್ತೆಯಲ್ಲಿ ಮೊಬೈಲ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಸ್ನೇಹಿತನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಆರೋಪಿಯನ್ನು ಮಾರತ್‌ಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಹುಬ್ಬಳ್ಳಿಯ ರಾಮು ಬಂಧಿತ ಆರೋಪಿ. ಪರಶುರಾಮ್ ಯಲ್ಲಪ್ಪ ಮಂಗಳಗಟ್ಟಿ(25) ಎಂಬುವರನ್ನು ಕೊಲೆ ಮಾಡಿದ್ದ ಆರೋಪದಡಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಾಮು

'ಮೇ 10 ರಂದು ನಡೆದ ಗಲಾಟೆಯಲ್ಲಿ ಕೊಲೆ ಮಾಡಿ ಆರೋಪಿ ಪರಾರಿಯಾಗಿದ್ದ. ಮೃತನ ಸಹೋದರ ಗಂಗಪ್ಪ ನೀಡಿದ ದೂರಿನ ಮೇರೆಗೆ ಆರೋಪಿ ವಿರುದ್ಧ ಕೊಲೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹುಬ್ಬಳ್ಳಿಯ ಪರಶುರಾಮ್ ಹಾಗೂ ರಾಮು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಮಾರತ್‌ಹಳ್ಳಿ ಠಾಣೆ ವ್ಯಾಪ್ತಿಯ ಚೌಡೇಶ್ವರಿ ರಸ್ತೆಯಲ್ಲಿನ ಬೆಸ್ಕಾಂ ಕಚೇರಿ ಬಳಿ ಬಾಡಿಗೆ ಕೊಠಡಿಯಲ್ಲಿ ಇಬ್ಬರೂ ವಾಸವಿದ್ದರು. ಮೇ 10ರಂದು ರಾಮು ಕೆಲಸ ಮುಗಿಸಿ, ಮಾರ್ಗಮಧ್ಯದಲ್ಲಿ ಬಾರ್‌ಗೆ ತೆರಳಿ, ಮದ್ಯ ಸೇವಿಸಿ ಕೊಠಡಿಗೆ ಬಂದಿದ್ದ. ಕೊಠಡಿಗೆ ಬಂದ ಮೇಲೆ ಪರಶುರಾಮ್ ಅವರ ಮೊಬೈಲ್ ಫೋನ್ ತೆಗೆದುಕೊಂಡು ತಮಾಷೆಗೆಂದು ಬಚ್ಚಿಟ್ಟಿದ್ದ. ಎಚ್ಚರವಾದ ಬಳಿಕ 'ಮೊಬೈಲ್ ಎಲ್ಲಿಟ್ಟಿದ್ದೀಯಾ, ಕೊಡು' ಎಂಬುದಾಗಿ ಪರಶುರಾಮ್ ಕೇಳಿದ್ದರು. ಈ ವೇಳೆ ರಾಮು 'ಮೊಬೈಲ್ ಕೊಡಲ್ಲ' ಎಂದಿದ್ದಕ್ಕೆ ಇಬ್ಬರ ಮಧ್ಯೆ ಗಲಾಟೆ ಆಗಿತ್ತು. ಸಿಟ್ಟಿಗೆದ್ದ ರಾಮು, ಅಡುಗೆ ಕೋಣೆಯಿಂದ ಚಾಕು ತಂದು ಪರಶುರಾಮ್ ಅವರಿಗೆ ಇರಿದಿದ್ದ. ಬಳಿಕ, ಮೊಬೈಲ್ ತೆಗೆದುಕೊಂಡು ಪರಾರಿ ಆಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಕ್ಕಪಕ್ಕದ ಮನೆಯವರು ಗಲಾಟೆ ಗಮನಿಸಿ ಹಲ್ಲೆಗೆ ಒಳಗಾದ ಪರಶುರಾಮ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ.

'ಸುಳ್ಳು ಹೇಳಬೇಡಿ ಸರ್': 'ಸುಮ್ಮನೇ ಸುಳ್ಳು ಹೇಳಬೇಡಿ ಸರ್. ನಾನು ಸಣ್ಣ ಗಾಯ ಮಾಡಿದ್ದೇನೆ ಅಷ್ಟೇ. ಅದಕ್ಕೆ ಅವನು ಸತ್ತಿಲ್ಲ. ಅವನೇ ಹುಡುಕಿಕೊಂಡು ಬರಲಿ ಎಂದು ನಾನೇ ಮೊಬೈಲ್ ತಗೊಂಡು ಹೋಗಿದ್ದೆ. ಆದರೆ, ಜಗಳ ನಡೆದ ಎರಡು ದಿನವಾದರೂ ಸ್ನೇಹಿತ ಬರಲಿಲ್ಲ. ಹೀಗಾಗಿ ಕೊಠಡಿಯುತ್ತ ಬಂದು ನೋಡಿದ್ದೆ. ಆದರೆ, ಬೀಗ ಹಾಕಿತ್ತು ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ' ಎಂದು ಪೊಲೀಸರು ಹೇಳಿದರು.

ಮಹಿಳೆ ಕೊಲೆ: ಅಸ್ಸಾಂನ ವ್ಯಕ್ತಿ ಬಂಧನ

ಬೆಂಗಳೂರು: ಮದುವೆ ಆಗುವಂತೆ ಒತ್ತಾಯ ಮಾಡಿದ್ದ ಮಹಿಳೆಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿ, ಮೃತದೇಹವನ್ನು ಕೆರೆಗೆ ಎಸೆದು ಪರಾರಿಯಾಗಿದ್ದ ಆರೋಪಿಯನ್ನು ಹೆಬ್ಬಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಅಸ್ಸಾಂನ ರತನ್ ದಾಸ್ ಬಂಧಿತ. ಅದೇ ರಾಜ್ಯದ ಅಂಜಲಿ(47) ಅವರನ್ನು ಆರೋಪಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಮೇ 9ರಂದು ಆರೋಪಿ ಕೃತ್ಯ ಎಸಗಿದ್ದ. ಮಹಿಳೆ ಅನುಮಾನಾಸ್ಪದವಾಗಿ ಮೃತಪಟ್ಟಿದ್ದರಿಂದ ಹೆಬ್ಬಗೋಡಿ ಠಾಣೆಯಲ್ಲಿ ಅಸಹಜ ಸಾವು(ಯುಡಿಆರ್) ಪ್ರಕರಣ ದಾಖಲಾಗಿತ್ತು. ಮಹಿಳೆಯ ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಅದಾದ ಮೇಲೆ ಪೊಲೀಸರು ಪ್ರಕರಣದ ತನಿಖೆ ಚುರುಕುಗೊಳಿಸಿದ್ದರು' ಎಂದರು.

'ಆನೇಕಲ್ ತಾಲ್ಲೂಕಿನ ತಿರುಪಾಳ್ಯದಲ್ಲಿ ರತನ್ ದಾಸ್ ವಾಸವಿದ್ದ. ಅಂಜಲಿ ಜೊತೆಗೆ ಸಲುಗೆಯಿಂದ ಇದ್ದ. ಮದುವೆ ಆಗುವಂತೆ ರತನ್ ದಾಸ್‌ನನ್ನು ಅಂಜಲಿ ಒತ್ತಾಯಿಸುತ್ತಿದ್ದರು. ಮದುವೆ ಆಗುವುದು ಆರೋಪಿಗೆ ಇಷ್ಟ ಇರಲಿಲ್ಲ. ಮೇ 9ರಂದು ಇದೇ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಬಳಿಕ ಮಹಿಳೆಯ ಉಸಿರುಗಟ್ಟಿಸಿ ಕೊಲೆ ಮಾಡಿ ಮೃತದೇಹವನ್ನು ಕೆರೆಗೆ ಎಸೆದು ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

ಥಣಿಸಂದ್ರ: 'ನಮ್ಮೂರ ಹಬ್ಬ'

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಥಣಿಸಂದ್ರ ಗ್ರಾಮದಲ್ಲಿ 'ನಮ್ಮೂರ ಹಬ್ಬ' ಗ್ರಾಮ ದೇವರುಗಳ ಜಾತ್ರಾ ಮಹೋತ್ಸವವು ಭಕ್ತಿ-ಭಾವ ಹಾಗೂ ಸಡಗರ ಸಂಭ್ರಮದಿಂದ ನಡೆಯಿತು.

ಮಹೋತ್ಸವದ ಅಂಗವಾಗಿ ಅಣ್ಣಮ್ಮ, ಸಪಲಮ್ಮ, ಕರಗದಮ್ಮ, ಯಲ್ಲಮ್ಮ, ಕಾಟೇರಮ್ಮ, ಕಾಳಿಕಾದೇವಿ ಸೇರಿದಂತೆ ವೇಣುಗೋಪಾಲಸ್ವಾಮಿ, ಬಸವೇಶ್ವರಸ್ವಾಮಿ, ಆಂಜನೇಯಸ್ವಾಮಿ ಹಾಗೂ ಶನೈಶ್ಚರಸ್ವಾಮಿ ದೇವರಿಗೆ ವಿಶೇಷ ಪೂಜೆ, ಅಲಂಕಾರ ಹಾಗೂ ಮಹಾ ಮಂಗಳಾರತಿ ನೆರವೇರಿಸಲಾಯಿತು.

ಇದೇ ವೇಳೆ ದೇವರಿಗೆ ಬೆಲ್ಲದ ಆರತಿ ಬೆಳಗಲಾಯಿತು. ಸಪಲಮ್ಮ, ಕರಗದಮ್ಮ, ಯಲ್ಲಮ್ಮ ಕಾಟೇರಮ್ಮ ಹಾಗೂ ಕಾಳಿಕಾದೇವಿಯರಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಂಬಿಟ್ಟು ಆರತಿಗಳ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ವಿವಿಧ ಬ್ಯಾಂಡ್, ವಾದ್ಯಗಳು ಹಾಗೂ ಜಾನಪದ ಕಲಾತಂಡಗಳ ಪ್ರದರ್ಶನ ಮೆರವಣಿಗೆಗೆ ವಿಶೇಷ ಮೆರುಗು ನೀಡಿತು. ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಬಿಡಿಎ ಸದಸ್ಯ ಎಂ.ಜಯಗೋಪಾಲಗೌಡ, ಸ್ಥಳೀಯ ಮುಖಂಡರಾದ ಟಿ.ಎಂ.ಶ್ರೀನಿವಾಸ್, ಟಿ.ಎನ್.ಮಹೇಶ್ ಕುಮಾರ್, ಮಧು, ಟಿ.ಎಂ.ರವಿ, ಆರ್.ಆರ್.ರಮೇಶ್ ಉಪಸ್ಥಿತರಿದ್ದರು.

ಥಣಿಸಂದ್ರ ಗ್ರಾಮದಲ್ಲಿ ಆಯೋಜಿಸಿದ್ದ 'ನಮ್ಮೂರ ಹಬ್ಬ'ದಲ್ಲಿ ಮಹಿಳೆಯರು ಆರತಿ ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಂಡರು

ಕೆಐಎ: 40 ಕೋಟಿ ಮಂದಿ ಪ್ರಯಾಣ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ) ಆರಂಭವಾದಾಗಿನಿಂದ ಈ ವರ್ಷದ ಏಪ್ರಿಲ್‌ವರೆಗೆ ಒಟ್ಟು 40 ಕೋಟಿ ಮಂದಿ ಪ್ರಯಾಣ ಮಾಡಿದ್ದಾರೆ.

2025-26ನೇ ಹಣಕಾಸು ವರ್ಷದಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರು ಹಾಗೂ ಸರಕು ಸಾಗಣೆಯಲ್ಲಿ ಗಮನಾರ್ಹ ಏರಿಕೆಯಾಗಿದೆ ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಪ್ರಕಟಣೆ ತಿಳಿಸಿದೆ.

ಕರ್ನಾಟಕದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆಯಲ್ಲಿ ನಡೆದ ಬಿಐಎಎಲ್‌ನ 134ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ವಿಮಾನ ನಿಲ್ದಾಣದ ಕಾರ್ಯಕ್ಷಮತೆ ಹಾಗೂ ವಿಸ್ತರಣಾ ಯೋಜನೆಗಳನ್ನು ಪರಿಶೀಲಿಸಲಾಯಿತು.

2025-26ನೇ ಹಣಕಾಸು ವರ್ಷದಲ್ಲಿ ವಿಮಾನ ನಿಲ್ದಾಣದ ಮೂಲಕ ಒಟ್ಟು 4.5 ಕೋಟಿ ಮಂದಿ ಪ್ರಯಾಣಿಸಿದ್ದಾರೆ. ಇದು ಹಿಂದಿನ ವರ್ಷಕ್ಕಿಂತ ಶೇ 6.2ರಷ್ಟು ಏರಿಕೆ ಆಗಿದೆ. ಇದರಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ ಶೇ 23.9ರಷ್ಟು ಏರಿಕೆ ಕಂಡಿದ್ದು, 72.3 ಲಕ್ಷಕ್ಕೆ ತಲುಪಿದೆ. ದೇಶಿಯ ಪ್ರಯಾಣಿಕರ ಸಂಖ್ಯೆ ಶೇ 3.3ರಷ್ಟು ಹೆಚ್ಚಳಗೊಂಡು 3.7 ಕೋಟಿಯಾಗಿದೆ.

ಪ್ರಸ್ತುತ ಕೆಐಎ ಮೂಲಕ 78ಕ್ಕೂ ಹೆಚ್ಚು ದೇಶೀಯ ಹಾಗೂ 34 ಅಂತರ ರಾಷ್ಟ್ರೀಯ ತಾಣಗಳಿಗೆ ನೇರ ವಿಮಾನ ಯಾನ ಸೇವೆ ಲಭ್ಯವಿದೆ. ವಿಮಾನ ಸಂಚಾರದಲ್ಲೂ ಪ್ರಗತಿ ಸಾಧಿಸಲಾಗಿದ್ದು, ವರ್ಷದಲ್ಲಿ ಒಟ್ಟು 2.8 ಲಕ್ಷ ವಿಮಾನ ಗಳು ಹಾರಾಟ ನಡೆಸಿವೆ.

ಸರಕು ಸಾಗಣೆಯೂ ಏರಿಕೆ

ಸರಕು ಸಾಗಣೆಯಲ್ಲಿಯೂ ಸ್ಥಿರ ಬೆಳವಣಿಗೆ ಕಂಡುಬಂದಿದ್ದು, ವಿಮಾನ ನಿಲ್ದಾಣವು 5.32 ಲಕ್ಷ ಟನ್ ಸರಕು ಸಾಗಣೆ ನಿರ್ವಹಿಸಿದೆ. ಇದು ಹಿಂದಿನ ವರ್ಷಕ್ಕಿಂತ ಶೇ 6ರಷ್ಟು ಅಧಿಕ. ಔಷಧ, ಶೀಘ್ರ ಹಾಳಾಗುವ ವಸ್ತು ಗಳು, ವಾಹನ ಭಾಗಗಳು, ಎಲೆಕ್ಟ್ರಾನಿಕ್ಸ್ ಹಾಗೂ ಇ-ಕಾಮರ್ಸ್ ಕ್ಷೇತ್ರಗಳ ವ್ಯಾಪಾರ ವೃದ್ಧಿಯಿಂದ ಈ ಸಾಧನೆ ಆಗಿದೆ ಎಂದು ಬಿಐಎಎಲ್ ತಿಳಿಸಿದೆ.

ಶೀಘ್ರ ನಾಶವಾಗುವ ವಸ್ತುಗಳ ರಫ್ತಿಗೆ ಸಂಬಂಧಿಸಿ ದೇಶದಲ್ಲಿಯೇ ಪ್ರಮುಖ ಕೇಂದ್ರವಾಗಿ ರುವ ಸ್ಥಾನವನ್ನು ಕೆಐಎ ಐದನೇ ವರ್ಷವೂ ಕಾಯ್ದುಕೊಂಡಿದೆ. ಹೂವು, ಮಾವಿನ ಹಣ್ಣಿನ ರಫ್ತು ಐದು ವರ್ಷದ ಗರಿಷ್ಠ ಮಟ್ಟ ತಲುಪಿದ್ದು, ಶೇ 12ರಷ್ಟು ಏರಿಕೆಯಾಗಿದೆ ಎಂದೂ ಹೇಳಿದೆ.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮ ದಿನಾಚರಣೆ ಅಂಗವಾಗಿ ಕೆಪಿಸಿಸಿ ಕಚೇರಿಯಿಂದ ತಮಿಳುನಾಡಿನ ಪೆರಂಬದೂರ್‌ಗೆ ಹೊರಟ 'ರಾಜೀವ್ ಗಾಂಧಿ ಜ್ಯೋತಿ ಯಾತ್ರೆ'ಗೆ ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಜಿ.ಸಿ.ಚಂದ್ರಶೇಖರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಚಾಲನೆ ನೀಡಿದರು

ನಗರದಲ್ಲಿ ಇಂದು

ರೈಡ್ ಫಾರ್ ಕಾಸ್: ಆಯೋಜನೆ: ಟಸ್ಕರ್, ಮಿಡ್‌ಟೌನ್ ರೋಟರಿ, ಸ್ಥಳ: ವಿಕ್ಟೋರಿಯಾ ಆಸ್ಪತ್ರೆ, ಬೆಳಿಗ್ಗೆ 7.30

'ಫಿಲ್ಮ್ ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್' ಕುರಿತ ಕಾರ್ಯಾಗಾರ: ಚೆಂಗಪ್ಪ ಎಂ., ಆಯೋಜನೆ ಮತ್ತು ಸ್ಥಳ: ಟೆಂಟ್ ಸಿನಿಮಾ, ಬೆಳಿಗ್ಗೆ 9.30ರಿಂದ

ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಕೃಷ್ಣ ಎಸ್. ದೀಕ್ಷಿತ್, ರಾಕೇಶ್ ಸಿಂಗ್, ವೆಂಕಟೇಶ್ ಎಂ.ವಿ., ವೂಡೇ ಪಿ. ಕೃಷ್ಣ, ಪಿ. ಶೇಷಾದ್ರಿ, ಸವಿತಕ್ಕ, ಆಯೋಜನೆ: ಆರ್ಟ್ ಆಫ್ ಗಿವಿಂಗ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಎನ್.ಸಂತೋಷ್ ಹೆಗ್ಡೆ

ರಾಷ್ಟ್ರಕವಿ ಕುವೆಂಪು, ಗಾನಗಾರುಡಿಗ ಸಿ. ಅಶ್ವಥ್ ನೆನಪಿನ 'ಕನ್ನಡ ಎನೆ ಕುಣಿದಾಡುವುದೆನ್ನೆದೆ' ಸುಗಮ ಸಂಗೀತ, ವಾದ್ಯ ಸಂಗೀತ, ನೃತ್ಯ ವೈಭವ, ಕನ್ನಡ ನಿತ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಎಲ್.ಎ. ರವಿಸುಬ್ರಮಣ್ಯ, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಪ್ರಶಸ್ತಿ ಪ್ರದಾನ: ಟಿ.ಎ. ಶರವಣ, ಪ್ರಶಸ್ತಿ ಸ್ವೀಕರಿಸುವವರು: ಸುಂದರ್ ರಾಜ್ ಪತ್ತಿ, ಅತಿಥಿಗಳು: ಚಂದ್ರಶೇಖರ, ನಗರ ಶ್ರೀನಿವಾಸ ಉಡುಪ, ಜೆಮ್ ಶಿವು, ಆಯೋಜನೆ: ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಡಾ.ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ನೆನಪಿನ ಅಂಗಳದ ಹಳೆಯ ಪ್ರೌಢಶಾಲಾ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಒಕ್ಕೂಟದ ಸುವರ್ಣ ಮಹೋತ್ಸವ: ಸ್ಥಳ: ಚಾಲ್ತಿಯಲ್ಲಿರುವ ಸರ್ಕಾರಿ ಪ್ರೌಢಶಾಲಾ ಆವರಣ, ಪೊಲೀಸ್ ಠಾಣೆಯ ಸಮೀಪ, ಯಲಹಂಕ, ಬೆಳಿಗ್ಗೆ 10

ಸನ್ಮಾನ, ಗೋಷ್ಠಿ, ಓದು: ವಿವೇಕ್ ಶಾನಭಾಗ ಅವರ 'ಘಾಚರ್ ಘೋಚರ್'ನ ಆಯ್ದ ಭಾಗ ಓದುವುದು: ರೇಣುಕಾ ಕೋಡಗುಂಟಿ, ಅನನ್ಯ ತುಷಿರಾ, ಸನ್ಮಾನ ಸ್ವೀಕರಿಸುವವರು: ಡಾ. ವಸುಂಧರಾ ಭೂಪತಿ, 'ಜಾಗತಿಕ ಮಟ್ಟದಲ್ಲಿ ಕನ್ನಡ ಕಥಾನಕಗಳು' ಗೋಷ್ಠಿ: ಗೀತಾ ವಸಂತ್, ಗುರುಪ್ರಸಾದ್ ಕಂಟಲಗೆರೆ, ಆಯೋಜನೆ: ಈ ಹೊತ್ತಿಗೆ ಟ್ರಸ್ಟ್, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಗೀತಾ ವಿ.ಆರ್. ಅವರ 'ಗೀತಾಮೃತ' ಪುಸ್ತಕ ಬಿಡುಗಡೆ: ಲತಾ ಕುಂದರಗಿ, ಅಧ್ಯಕ್ಷತೆ: ವೈ.ಬಿ.ಎಚ್. ಜಯದೇವ್, ಅತಿಥಿ: ಅಣ್ಣಪ್ಪ ಮೇಟಿಗೌಡ, ಆಯೋಜನೆ ಮತ್ತು ಸ್ಥಳ: ಭೂಮಿಕಾ ಸೇವಾ ಫೌಂಡೇಷನ್, ಹಾವನೂರು ಬಡಾವಣೆ, ಬೆಳಿಗ್ಗೆ 10

'ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರು' ವಿಚಾರ ಸಂಕಿರಣ: ಅತಿಥಿಗಳು: ಬಾನು ಮುಷ್ತಾಕ್, ಕೆ.ಎನ್. ಅನುರಾಧ, ರೂಮನ್ ರಿಜ್ವಾನ್, ಬಿ.ಕೆ. ರೂಪಾ, ಆಯೇಷಾ ಖಾನುಂ, ಎನ್.ಕೆ. ಅನನ್ಯಾ, ಅಧ್ಯಕ್ಷತೆ: ರಖಿಬಾ ಇಕ್ಬಾಲ್, ಆಯೋಜನೆ: ದಿ ವುಮೆನ್ಸ್ ಆಕ್ಸಿಲಿರಿ ಆರ್ಗನೈಸೇಷನ್ ಆಫ್ ದಿ ಅಹಮದೀಯ ಮುಸ್ಲಿಂ ಕಮ್ಯೂನಿಟಿ ಜಕ್ಕೂರು, ಸ್ಥಳ: ವಿಸ್ತಾರ, ಅರ್ಬನ್ ಬುಟಿಕ್ ಹೋಟೆಲ್, ಸಹಕಾರನಗರ, ಬೆಳಿಗ್ಗೆ 10.30

ಬಾನು ಮುಷ್ತಾಕ್

ಎಚ್.ಆರ್. ಸ್ವಾಮಿ ಅವರ 'ಕೊರಚ ಮಾತುಕತೆ' ಮತ್ತು ಇಂಗ್ಲಿಷ್ ಅನುವಾದಿತ 'ದಿ ಕೊರಚಾಸ್ ಆಫ್ ಕರ್ನಾಟಕ' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ಆರ್.ವಿ. ಚಂದ್ರಶೇಖರ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಕೊರಚ ಮಾತುಕತೆ: ಜಿ. ಬಸವರಾಜು, ಆಯೋಜನೆ: ನೇಗಿಲ ಯೋಗಿ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

2025-26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಸುಧಾ ಬೆಳವಾಡಿ, ಕೆ.ಆರ್. ನಿರ್ಮಲ್‌ಕುಮಾರ್, ಬಿ.ಸಿ. ಶಿವಲಿಂಗೇಗೌಡ, ಎನ್. ಎಸ್. ವಿಜಯ, ಬಿ.ಎಲ್. ನಂದಿನಿ, ಅಧ್ಯಕ್ಷೆ: ಎ.ಜಿ. ನಟರಾಜ್, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30

ಸುಧಾ ಬೆಳವಾಡಿ

ನಾ. ಮಲ್ಲಿಕಾರ್ಜುನ ಅವರಿಗೆ ಅಭಿನಂದನೆ ಹಾಗೂ 'ಸೇವಾ ಸಂಪನ್ನ' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಲೀಲಾದೇವಿ ಆರ್. ಪ್ರಸಾದ್, ಅಧ್ಯಕ್ಷತೆ: ಸಿ. ಸೋಮಶೇಖರ್, 'ಸೇವಾ ಸಂಪನ್ನ' ಪುಸ್ತಕ ಬಿಡುಗಡೆ: ಗೊ.ರು. ಚನ್ನಬಸಪ್ಪ, ಅಭಿನಂದನಾ ನುಡಿಗಳು: ಎಸ್. ಷಡಕ್ಷರಿ, ಅತಿಥಿಗಳು: ರು. ಬಸಪ್ಪ, ಅರವಿಂದ ಜತ್ತಿ, ಎಸ್. ಪ್ರಕಾಶ್, ಆಯೋಜನೆ: ನಾ. ಮಲ್ಲಿಕಾರ್ಜುನ-70 ಅಭಿನಂದನಾ ಸಮಿತಿ, ಸ್ಥಳ: ಶಾರದಾ ಸ್ತ್ರೀ ಸಮಾಜ, ಚಾಮರಾಜಪೇಟೆ, ಬೆಳಿಗ್ಗೆ 10.30

ಬಸವ ಜಯಂತಿ ಮತ್ತು ಪ್ರತಿಭಾ ಪುರಸ್ಕಾರ: ಅತಿಥಿಗಳು: ವಿ. ಜಗದೀಶ್, ಎಂ. ಗಂಗಾಧರಮೂರ್ತಿ, ಅಧ್ಯಕ್ಷತೆ: ಎಂ. ಮಂಜುನಾಥ್, ಸನ್ಮಾನಿತರು: ಈ. ರಾಜಶೇಖರಪ್ಪ, ಬಿ. ವಿಶ್ವನಾಥ್, ಸಂತೋಷ್ ಎಸ್.ವಿ., ಎಸ್. ಗಂಗಾಧರಪ್ಪ, ಆಯೋಜನೆ: ಬಾಂಧವ್ಯ ಬೆಂಗಳೂರು ಚಾರಿಟಬಲ್ ಟ್ರಸ್ಟ್, ಸ್ಥಳ: ಯುಆರ್‌ಡಬ್ಲ್ಯುಎ ಕ್ಲಬ್ ಹೌಸ್, ಉಪಕಾರ್ ರೆಸಿಡೆನ್ಸಿ, ಉಲ್ಲಾಳ ಆರ್‌ಟಿಒ ಹತ್ತಿರ, ಬೆಳಿಗ್ಗೆ 10.30

ಸಾಂಸ್ಕೃತಿಕ ಹಬ್ಬ, ಹರದನಹಳ್ಳಿ ಅಶ್ವತ್ಥನಾರಾಯಣ-70ರ ಅಭಿನಂದನೆ, ಪುಸ್ತಕಗಳ ಬಿಡುಗಡೆ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಪ್ರಿಯಕೃಷ್ಣ, ಅಧ್ಯಕ್ಷತೆ: ಅರುಳುಮಲ್ಲಿಗೆ ಪಾರ್ಥಸಾರಥಿ, ಅತಿಥಿಗಳು: ಎಂ. ಕೃಷ್ಣಪ್ಪ, ರವಿ ಸುಬ್ರಮಣ್ಯ, ಕೆ.ವಿ. ಪುತ್ತೂರಾಯ, ಜಿ. ಅಶ್ವತ್ಥನಾರಾಯಣ, ಹಾ.ರಾ. ನಾಗರಾಜಾಚಾರ್ಯ, ಆಯೋಜನೆ: ವೊಕ್ಕರಣೆ ಸೇವಾ ಟ್ರಸ್ಟ್, ಸ್ಥಳ: ಪ್ರಸನ್ನ ಗಣಪತಿ ದೇವಸ್ಥಾನ, ಅಮರಜ್ಯೋತಿನಗರ, ನಾಗರಬಾವಿ ರಸ್ತೆ, ಬೆಳಿಗ್ಗೆ 10.30

ಟ್ರಾನ್ಸ್ ಫೆಮಿನಿಸ್ಟ್ ಕಲೆಕ್ಟಿವ್ ಲೋಕಾರ್ಪಣೆ: ರೂತ್ ಮನೋರಮಾ, ಎ. ಸೌಮ್ಯ, ಅಕ್ಕೈ ಪದ್ಮಶಾಲಿ, ಆಯೋಜನೆ: ಟ್ರಾನ್ಸ್ ಫೆಮಿನಿಸ್ಟ್ ಕಲೆಕ್ಟಿವ್, ಸ್ಥಳ: ಎಸ್‌ಸಿಎಂ ಹೌಸ್, ಮಿಷನ್ ರಸ್ತೆ, ಬೆಳಿಗ್ಗೆ 10.30

ಬಿ.ವಿ. ವೈಕುಂಠರಾಜು ಸಾಹಿತ್ಯ, ಸಂವಾದ ಹಾಗೂ ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಕೆ.ಆರ್. ಸಂಧ್ಯಾರೆಡ್ಡಿ, ಆರ್. ಶ್ರೀಧರ್, ಅಧ್ಯಕ್ಷತೆ: ಭಾಗ್ಯ ಕೃಷ್ಣಮೂರ್ತಿ, ಆಯೋಜನೆ: ರಾಜರ್ಷಿ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಬರಗೂರು ರಾಮಚಂದ್ರಪ್ಪ

ಸಮರ್ಪಣಾ ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 4

ಸ್ನೇಹ ಸಂಜೆ 'ಉತ್ತರ ಕನ್ನಡ ಇತಿಹಾಸದ ಕೌತುಕಗಳು' ಉಪನ್ಯಾಸ: ಲಕ್ಷ್ಮೀಶ ಹೆಗಡೆ ಸೋಂದಾ, 'ಬುರುಕಿ ವ್ರತ' ನಾಟಕ ಪ್ರದರ್ಶನ: ರಚನೆ: ಪರ್ವತವಾಣಿ, ನಿರ್ದೇಶನ: ಪ್ರದೀಪ್ ಅಂಚೆ, ಆಯೋಜನೆ: ಉತ್ತರ ಕನ್ನಡ ಸಂಘ, ಸ್ಥಳ: ಉತ್ತರ ಕನ್ನಡ ಭವನ, ನಂದಿನಿ ಬಡಾವಣೆ, ಸಂಜೆ 4.30

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಬಿ. ಅಶೋಕ್, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5 ಹಾಗೂ 7

ಸಂಸ್ಕೃತಿ ಸುದಿನ ಕಾರ್ಯಕ್ರಮ: ರಂಗ ಗೌರವ ಸ್ವೀಕರಿಸುವವರು: ಶ್ರವಂತ್, ಸಂಹಿತ ಪ್ರಮೋದ್, ಅತಿಥಿಗಳು: ಸಿ. ನಾರಾಯಣಸ್ವಾಮಿ, ಕೆ.ಎ. ದಯಾನಂದ, ಆಯೋಜನೆ: ರಂಗಾಭರಣ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ಕೆಇಬಿ ಬಡಾವಣೆ, ಸಂಜಯನಗರ, ಸಂಜೆ 6.30

'ಸಂಜೆ ಹಾಡು' ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಮಹೇಶ್ ಕುಮಾರ್, ಆಯೋಜನೆ: ರಂಗಚಕ್ರ ರಂಗತಂಡ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

'ನಮ್ಗೇನ್ ಬೆಲೆನೇ ಇಲ್ವಾ?' ನಾಟಕ ಪ್ರದರ್ಶನ: ನಿರ್ದೇಶನ: ಅರುಣ್ ಸೂರ್ಯ, ಆಯೋಜನೆ: ಪಯಣ, ಸ್ಥಳ: ಢಮರು ಸಭಾಂಗಣ, ಶಂಕರ ಫೌಂಡೇಷನ್, ದೊಡ್ಡಕಲ್ಲಸಂದ್ರ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 7.15

'ಮಹಿಷ ವಧೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷೇಶ್ವರಿ ಯಕ್ಷಗಾನ, ಸ್ಥಳ: ಪಂಚಮುಖಿ ಗಣಪತಿ, ಪಂಚಮುಖಿ ಆಂಜನೇಯ, ಪಂಚಮುಖಿ ಗಾಯತ್ರಿದೇವಿ ದೇವಸ್ಥಾನ, ಬೈರಪ್ಪ ಬಡಾವಣೆ, ಹೊಸಕೆರೆಹಳ್ಳಿ, ಸಂಜೆ 6

'ಶ್ರೀಕೃಷ್ಣ ಪಾರಿಜಾತ ಹಾಗೂ ಜಾಂಬವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಆಯೋಜನೆ: ಕೋದಂಡ ಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ಮಹೇಶ್ವರಮ್ಮ ದೇವಸ್ಥಾನ ಹೊಸಹಳ್ಳಿ, ವಿಜಯನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂ ಮಾಪಕರ ಸಂಘದ ಸದಸ್ಯರು ಹಾಗೂ ವಿವಿಧ ಜಿಲ್ಲೆಯ ಸದಸ್ಯರು ಸರ್ಕಾರಿ ಭೂಮಾಪಕರಾಗಿ ಕಾಯಂ ಮಾಡಿಕೊಳ್ಳಬೇಕು ಹಾಗೂ ವಿವಿಧ ಬೇಡಿಕೆಗಳಿಗೆ ಇತ್ತೀಚೆಗೆ ಪ್ರತಿಭಟನೆ ಮಾಡಿದರು. ಪ್ರಜಾವಾಣಿ ಚಿತ್ರ.

ಆಮೆಗತಿಯಲ್ಲಿ ಸಾಗುವ 'ಸರ್ವೆ'

ಒಂದನೇ ಪುಟದಿಂದ...

ಇದು ಬೆಳಗಾವಿ, ಕಲಬುರಗಿ ಮತ್ತು ರಾಯಚೂರು ರೈತರ ಸಮಸ್ಯೆ ಮಾತ್ರವಲ್ಲ; ಇಡೀ ರಾಜ್ಯದಲ್ಲಿ ಕೃಷಿ ಭೂಮಿಯ ಮಾಲೀಕರು ಈ ತೊಂದರೆ ಎದುರಿಸುತ್ತಿದ್ದಾರೆ. ರಾಜ್ಯದಲ್ಲಿ ಮೇ 15ರವರೆಗೆ 5.72 ಲಕ್ಷಕ್ಕೂ ಹೆಚ್ಚು ಸರ್ವೆ ಅರ್ಜಿ ಪ್ರಕರಣಗಳು ಬಾಕಿ ಬಿದ್ದಿವೆ.

ಮುಷ್ಕರದ ಕಾರಣ ರಾಜ್ಯದ ಭೂಮಾಪನಾ ಕೆಲಸಗಳು ಸ್ಥಗಿತಗೊಂಡಿವೆ. ಜಮೀನು ಮಾರಾಟ, ಲೀಸ್ ಹಸ್ತಾಂತರ, ವ್ಯಾಜ್ಯಗಳ ದಾಖಲೆ ಸಲ್ಲಿಕೆ, ರಸ್ತೆ ನಿರ್ಮಾಣ, ಉತಾರ್ ಪರಿಷ್ಕರಣೆ ಮುಂತಾದವು ನಿಂತಲ್ಲೇ ನಿಂತಿವೆ. ರೈತರಿಗೆ ಸಂಕಷ್ಟ ಎದುರಾಗಿದೆ. ಸರ್ಕಾರಿ ಖಜಾನೆಯೂ ಭರ್ತಿ ಆಗುತ್ತಿಲ್ಲ.

ಬಾಕಿ ಉಳಿಯಲು ಕಾರಣವೇನು?: 'ಸೇವಾ ಕಾಯಂ ಮಾಡಬೇಕು' ಎಂದು ಆಗ್ರಹಿಸಿ ಭೂಮಾಪಕರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅನಿರ್ದಿಷ್ಟಾವಧಿ ಧರಣಿ ಶುರು ಮಾಡಿ, 80ಕ್ಕೂ ಹೆಚ್ಚು ದಿನಗಳಾಗಿವೆ. ಈವರೆಗೆ ಅವರಿಗೆ ಭರವಸೆಯೂ ಸಿಕ್ಕಿಲ್ಲ. ಸರ್ಕಾರದಿಂದ ಸ್ಪಂದನೆ ಸಿಗುವ ಲಕ್ಷಣವೂ ಕಾಣುತ್ತಿಲ್ಲ.

ಹೀಗಾಗಿ, ಭೂ ಮಾಪನಾ ಕೆಲಸಗಳು ಸಾಕಷ್ಟು ಬಾಕಿ ಬಿದ್ದಿವೆ. ಇದರೊಂದಿಗೆ ಹೆಸರಿನಲ್ಲಿ ದೋಷ, ಪಹಣಿ ದೋಷ, ತಹಶೀಲ್ದಾರ್ ಸಹಿ, ರೈತರ ವ್ಯಾಜ್ಯ, ಬೆಳೆ ಕಟಾವು ಆಗದಿರುವುದು, ಮಾಲೀಕತ್ವದ ಸಮಸ್ಯೆ ಮುಂತಾದ ಕಾರಣಗಳಿಂದ ಸಾವಿರಾರು ಅರ್ಜಿಗಳು ಪೂರ್ಣಗೊಂಡಿಲ್ಲ. ಮಾತ್ರವಲ್ಲ; ನ್ಯಾಯಾಲಯದ ಬಾಗಿಲು ತಟ್ಟಿರುವ ಸಾವಿರಾರು ಪ್ರಕರಣಗಳು ದಶಕದಿಂದಲೂ ಬಾಕಿ ಉಳಿದಿವೆ.

'ರೈತರ ಸಮಸ್ಯೆ ನಮಗೂ ಅರ್ಥವಾಗುತ್ತಿದೆ. ಆದರೆ, ಧರಣಿ ಶುರು ಮಾಡಿ, ಎರಡು ತಿಂಗಳಾಗಿವೆ. ಕಂದಾಯ ಸಚಿವ ಕೃಷ್ಣ ಬೈರೇಗೌಡರು ಸೌಜನ್ಯಕ್ಕೂ ನಮ್ಮನ್ನು ಮಾತನಾಡಿಸಿಲ್ಲ. ಸಂಭಾವನೆಯನ್ನು ₹ 1,600ಕ್ಕೆ ಹೆಚ್ಚಿಸುತ್ತೇವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ಅದನ್ನು ರೈತರ ಶುಲ್ಕಕ್ಕೆ ಸೇರಿಸಿದ್ದಾರೆ. ನಮ್ಮ ಅನುಕೂಲಕ್ಕಾಗಿ ರೈತರಿಗೆ ಹೊರೆ ಹಾಕಲು ನಾವು ಸಿದ್ಧರಿಲ್ಲ. ಕಾಯಂ ಮಾಡಬೇಕು ಎಂಬುದೊಂದೇ ನಮ್ಮ ಬೇಡಿಕೆ' ಎನ್ನುವುದು ಬೆಳಗಾವಿಯ ಭೂಮಾಪಕ ರವೀಂದ್ರ ಕೋರೆ ಮಾತು.

ಈ ಬೇಡಿಕೆ, ಪ್ರತಿಭಟನೆ, ಆಕ್ರೋಶ, ನೋವು, ಹೋರಾಟ ಎಲ್ಲವೂ ಇತ್ತೀಚಿನದ್ದಲ್ಲ. ಸರ್ಕಾರದಿಂದ ಬರುವ ಆದಾಯ ಕಡಿಮೆಯಾಗಿ ಭೂಮಾಪಕರು ಈಗ ಬಂಡೆದಿದ್ದಾರೆ. 'ಆಗಿದ್ದು ಆಗಲಿ. ನಾವು ಹಿಂದೆ ಸರಿಯುವವರಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಧರಣಿ ನಡೆಸುತ್ತಿದ್ದಾರೆ.

ಭೂ ಅಳತೆ ಹಾಗೂ ಅದಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ಸರ್ಕಾರ ಎರಡು ದಶಕಗಳ ಹಿಂದೆ ಪರವಾನಗಿ ನೀಡಿ ಭೂ ಮಾಪಕರನ್ನು ನಿಯೋಜಿಸಿದೆ. ಆರಂಭದಲ್ಲಿ ಯಾವುದೇ ನಿಯಮ ಅಥವಾ ಭರವಸೆಗಳನ್ನು ನೀಡಿಲ್ಲ. ಆದರೆ, 20 ವರ್ಷಗಳ ದುಡಿಮೆ ಪರಿಗಣಿಸಿ, ಬೆವರಿನ ಪ್ರತಿಫಲ ಕೊಡಬೇಕು. 'ಒಂದು ಬಾರಿ ವಿಶೇಷ ನೇಮಕಾತಿ' ಅಡಿ ಕಾಯಂಗೊಳಿಸಲು ಅವಕಾಶವಿದೆ ಎಂಬುದು ಅವರ ವಾದ. ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘದಿಂದ ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದ್ದಾರೆ.

ಆಗದ ಪರಿಷ್ಕರಣೆ: ಆರಂಭದಲ್ಲಿ ಸರ್ಕಾರಿ ಭೂಮಾಪಕರಿಗೆ ₹5 ಸಾವಿರ ವೇತನವಿತ್ತು. ಪರವಾನಗಿ ಮೂಲಕ ಬಂದವರಿಗೆ ₹9 ಸಾವಿರ ಸಂಭಾವನೆ ಸಿಗುತ್ತಿತ್ತು. ಈಗ ಸರ್ಕಾರಿ ನೌಕರರ ವೇತನ ₹52 ಸಾವಿರ ದಾಟಿದೆ. ಪರವಾನಗಿ ಪಡೆದವರ ಸಂಭಾವನೆ ಅಂದಾಜು ₹12 ಸಾವಿರದ ಆಸುಪಾಸು ಇದೆ. ರೈತರು ಸಲ್ಲಿಸುವ ಅರ್ಜಿ ಶುಲ್ಕದ ಮೊತ್ತವನ್ನು ವರ್ಷದಿಂದ ವರ್ಷಕ್ಕೆ ಏರಿಸಿದರೂ ಭೂಮಾಪಕರ ಸಂಭಾವನೆ ಪರಿಷ್ಕರಣೆ ಆಗಿಲ್ಲ. ಒಂದೇ ಸ್ಥಳದಲ್ಲಿ, ಒಂದೇ ಮಾದರಿಯಲ್ಲಿ, ಒಂದೇ ರೀತಿಯ ಕೆಲಸ ಮಾಡುವ ಇಬ್ಬರ ಮಧ್ಯೆ ₹40 ಸಾವಿರ ವೇತನದ ವ್ಯತ್ಯಾಸವಿದೆ.

ರೈತರ ಒಂದು ಕಡತ ವಿಲೇ ಮಾಡಿಕೊಡಲು ₹1,200 ಸಂಭಾವನೆ ನಿಗದಿಪಡಿಸಲಾಗಿದೆ. ಕೆಲ ಅರ್ಜಿಗಳು ಕೇವಲ ಒಂದು ಅಥವಾ ಎರಡು ಎಕರೆಗೆ ಸಂಬಂಧಿಸಿರುತ್ತವೆ. ಒಂದೇ ದಿನದಲ್ಲಿ ಕೆಲಸ ಮುಗಿಯುತ್ತದೆ. 10 ಎಕರೆಗೂ ಹೆಚ್ಚು ಅಳತೆ ಮಾಡಬೇಕಾದ ಅರ್ಜಿಗಳೂ ಹೆಚ್ಚಾಗಿರುತ್ತವೆ. ಅವುಗಳನ್ನು ಮುಗಿಸಿಕೊಡಲು ಒಂದು ವಾರ ಬೇಕು. ಅದಕ್ಕೂ ಅಷ್ಟೇ ಸಂಭಾವನೆ ಇದೆ.

ಭೂಮಾಪನ ಕೆಲಸವೂ ಶ್ರಮ ಹಾಗೂ ಸಮಯ ಕೇಳುತ್ತದೆ. ಸರ್ಕಾರ ಅರ್ಜಿಗಳ ಲೆಕ್ಕಾಚಾರದಲ್ಲಿ ಮಾತ್ರ ಹಣ ಕೊಡುತ್ತಿದೆ. ಒಂದು ತಿಂಗಳಿಗೆ ಒಬ್ಬರಿಗೆ ಕನಿಷ್ಠ 23 ಭೂಮಾಪನ ಕೆಲಸ ಹಂಚಲಾಗುತ್ತದೆ. ಇದರಲ್ಲಿ 10 ಅಥವಾ 15 ಪ್ರಕರಣ ಮಾತ್ರ ಬಗೆಹರಿಸಲು ಸಾಧ್ಯ. ಅಂದರೆ ₹12 ಸಾವಿರದಿಂದ ₹15 ಸಾವಿರ ಸಂಭಾವನೆ ಸಿಗುತ್ತದೆ. ಅದು ಕೂಡ ಭೂಮಾಪನಾ ಸಂಪೂರ್ಣ 'ಸಕ್ಸಸ್' ಆಗಿ ಆನ್‌ಲೈನ್‌ನಲ್ಲಿ 'ಅಪ್ಲೋಡ್' ಆದಾಗ ಮಾತ್ರ. ಸಣ್ಣಪುಟ್ಟ ತಕರಾರು ಇದ್ದರೆ ತಿರಸ್ಕೃತಗೊಳ್ಳುತ್ತದೆ. ಆಗ ಮಾಡಿದ ಕೆಲಸಕ್ಕೆ ಬಿಡಿಗಾಸೂ ಬರುವುದಿಲ್ಲ. ಕೆಲ ರೈತರೇ ₹500ರಿಂದ ₹1,000ದಷ್ಟು 'ಖುಷಾಲಿ' ಕೊಟ್ಟು ಕಳಿಸುತ್ತಾರೆ ಎಂಬುದು ಭೂಮಾಪಕರ ಹೇಳಿಕೆ.

ಬ್ರಿಟಿಷ್ ಆಡಳಿತ ಕಾಲದಿಂದಲೂ ಈ ಕೆಲಸಕ್ಕಾಗಿ ಭೂ ಮಾಪನಾ ಇಲಾಖೆ ಇದೆ. ಅಪಾರ ಸಂಖ್ಯೆಯ ಸರ್ಕಾರಿ ಸಿಬ್ಬಂದಿಯೂ ಇದ್ದಾರೆ. ಅರ್ಜಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತ ಬಂದ ಕಾರಣ ಸಾಕಷ್ಟು 'ಬಾಕಿ' ಉಳಿದವು. ತುರ್ತಾಗಿ ನಿರ್ವಹಿಸಲು ಪರವಾನಗಿ ಮೂಲಕ ಭೂಮಾಪಕರನ್ನು ನೇಮಕ ಮಾಡಿಕೊಳ್ಳಲಾಯಿತು.

ಎಷ್ಟು ಪ್ರಕರಣ ಬಾಕಿ?: ಮೇ 13ರವರೆಗೆ ರಾಜ್ಯದಲ್ಲಿ 5,72,755 ಪ್ರಕರಣಗಳು ಬಾಕಿ ಉಳಿದಿವೆ. ಇದರಲ್ಲಿ ಅತಿ ಹೆಚ್ಚು ತುಮಕೂರು ಜಿಲ್ಲೆಯಲ್ಲಿ (43,461) ಬಾಕಿ ಇವೆ. ಬೆಳಗಾವಿ ಜಿಲ್ಲೆಯಲ್ಲಿ 34,755 ಬಾಕಿ ಇದ್ದು ಎರಡನೇ ಸ್ಥಾನದಲ್ಲಿದೆ. ಅತಿ ಕಡಿಮೆಯೆಂದರೆ ಕೊಡಗು ಜಿಲ್ಲೆಯಲ್ಲಿ (3,669) ಶಿಲ್ಕು ಬಿದ್ದಿವೆ.

'ಬೇಸಿಗೆಯಲ್ಲಿ ಹೆಚ್ಚು ಕೆಲಸ ಸಿಗುತ್ತದೆ. ಒಮ್ಮೆ ರೈತರು ಬೆಳೆ ಹಾಕಿದರೆ ಸರ್ವೆ ಮಾಡಲು ಆಗುವುದಿಲ್ಲ. ರಾಶಿ ಮುಗಿಯುವವರೆಗೆ ಕಾಯಬೇಕು. ನೀರಾವರಿ ಇರುವ ರೈತರಿಗೆ ಇನ್ನೂ ಸಂಕಷ್ಟ. ಅವರು ಒಂದು ವರ್ಷ ಯಾವುದೇ ಬೆಳೆ ಹಾಕದೇ ಹೊಲ ಖಾಲಿ ಇಟ್ಟುಕೊಳ್ಳಬೇಕು' ಎಂದು ಭೂಮಾಪಕ ರವೀಂದ್ರ ತಿಳಿಸಿದರು.



ಎಐ ಚಿತ್ರ: ಕಣಕಾಲಮಠ

'ಅತಿ ಹೆಚ್ಚು ಕಬ್ಬು ಬೆಳೆಯುವ ಹಾಗೂ ನೀರಾವರಿ ಇರುವ ಬೆಳಗಾವಿ, ಮಂಡ್ಯ, ಬಾಗಲಕೋಟೆಯಂಥ ಜಿಲ್ಲೆಗಳಲ್ಲಿ ಹೆಚ್ಚು ಪ್ರಕರಣಗಳು ಶಿಲ್ಕು ಬೀಳುತ್ತವೆ ಅಥವಾ ಅರ್ಧಕ್ಕೆ ನಿಲ್ಲುತ್ತವೆ. ರೈತರನ್ನು ಇಂಥ ಸಂಕಷ್ಟದಿಂದ ಪಾರು ಮಾಡಲು ಅವರಿಗೆ ಅನುಕೂಲವಿದ್ದ ಸಮಯ ನೋಡಿಕೊಂಡು, ಒಂದಿಬ್ಬರ ಸಹಾಯ ಪಡೆದು ಸರ್ವೆ ಪೂರ್ಣಗೊಳಿಸಲು ಪ್ರಯತ್ನಿಸುತ್ತೇವೆ. ಇದು ಕೂಡ 'ಸೇವೆ' ಎಂದು ಸರ್ಕಾರ ಪರಿಗಣಿಸದೇ ಇರುವುದು ಬೇಸರ ತಂದಿದೆ' ಎಂದು ಅವರು ತಿಳಿಸಿದರು.

ಬಹುಪಾಲು ನಕ್ಷೆಗಳು ಬ್ರಿಟಿಷ್ ಕಾಲದ್ದು ಇವೆ. ತಾಲ್ಲೂಕಿಗೆ ಒಂದು ಅಭಿಲೇಖಾಲಯವಿದೆ. ಅಲ್ಲಿಂದ ನಕ್ಷೆಗಳನ್ನು ಪಡೆದು, ಮೂಲ ನಕ್ಷೆಯಲ್ಲಿ ಇದ್ದಂತೆ ನಿಖರವಾಗಿ ಸರ್ವೆ ಮಾಡಬೇಕು. ಹಳೆಯ ಸರ್ವೆ ಆಗಿ ಬಹಳ ವರ್ಷವಾಗಿವೆ. ಸರಿಯಾಗಿ ಗಡಿ ಗುರುತಿಸಿಲ್ಲ. ನಿಖರ ಸರ್ವೆ ಸವಾಲಿನ ಕೆಲಸ. ಅಕ್ಕಪಕ್ಕದ ರೈತರು ಅಥವಾ ಸಂಬಂಧಿಕರ ನಡುವೆ ತಂಟೆಗಳಿಂದ ಕೆಲಸಗಳು ಅರ್ಧಕ್ಕೆ ಸ್ಥಗಿತಗೊಳ್ಳುತ್ತವೆ.

ಏನೇನು ಕೆಲಸ?: ಜಮೀನು ಪೋಡಿ ಮಾಡುವುದು, ನಕ್ಷೆ ಸಿದ್ಧಪಡಿಸುವುದು, ಖರೀದಿ ನಕ್ಷೆ, ವಿಭಾಗ ನಕ್ಷೆ, ದಾನಪತ್ರ ನಕ್ಷೆ ಹದ್ದುಬಸ್ತು, ದರಖಾಸ್ತು, 11ಇ, ದಾರಿ ನಕ್ಷೆ ಮುಂತಾದ ಅರ್ಜಿಗಳನ್ನು ಇವರು ಬಗೆಹರಿಸುತ್ತಾರೆ.

'ಸರ್ವೆ ಕೆಲಸ ಇಲ್ಲದ ವೇಳೆ ದಾಖಲೆಗಳ ಡಿಜಿಟಲೀಕರಣ, ನಿರ್ವಹಣೆ, ಸಂರಕ್ಷಣೆ, ಹಿಸ್ಸಾ ತಿದ್ದುಪಡಿ, ಜಮೀನು ಒಟ್ಟುಗೂಡಿಸುವಿಕೆ ಮುಂತಾದ ಕೆಲಸಗಳನ್ನು ನೀಡುತ್ತಾರೆ. ಆದರೆ, ಇದಕ್ಕೆ ನಿಗದಿತ ವೇತನ ಇಲ್ಲ. ಮೂರು–ನಾಲ್ಕು ತಿಂಗಳಿಗೊಮ್ಮೆ ₹5 ಸಾವಿರ ಕೊಡುತ್ತಾರೆ. ಪರವಾನಗಿ ಮುಂದುವರಿಯಬೇಕೆಂದರೆ ಇಂಥ ಪುಕ್ಕಟೆ ಕೆಲಸ ಮಾಡಬೇಕು' ಎಂಬುದು ಭೂಮಾಪಕರ ಬೇಸರ.

ಖಾಸಗಿ ಭೂಮಾಪಕರು ಸಿವಿಲ್ ಎಂಜಿನಿಯರಿಂಗ್, ಡಿಪ್ಲೊಮಾ ಸಿವಿಲ್ ಎಂಜಿನಿಯರಿಂಗ್, ಜೆಒಸಿ ಮುಂತಾದ ಪದವಿ ಪಡೆದಿರಬೇಕು ಮತ್ತು ಪದವಿಯಲ್ಲಿ ಶೇ 75ಕ್ಕೂ ಹೆಚ್ಚು ಅಂಕ ಪಡೆದಿರಬೇಕು ಎಂಬ ನಿಯಮ ಮಾಡಿದ್ದಾರೆ. ಸರ್ಕಾರದ ನೇಮಕಾತಿಯಲ್ಲಿ ಪಿಯುಸಿ ಪೂರ್ಣಗೊಳಿಸಿದವರು ಇದ್ದಾರೆ. ಸರ್ಕಾರಿ ಭೂಮಾಪಕರು ಮೇಲ್ವಿಚಾರಕರಾಗಿ, ಭೂ ದಾಖಲೆಗಳ ಸಹಾಯಕ ನಿರ್ದೇಶಕ (ಎಡಿಎಲ್‌ಆರ್), ಉಪನಿರ್ದೇಶಕ (ಡಿಡಿಎಲ್‌ಆರ್), ಜಂಟಿ ನಿರ್ದೇಶಕ (ಜೆಡಿಎಲ್‌ಆರ್) ಆಗಿ ಬಡ್ತಿ ಪಡೆದಿದ್ದಾರೆ. ಪರವಾನಗಿ ಇದ್ದವರಿಗೆ ಈ ಹಕ್ಕೇ ಇಲ್ಲ.

'ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಸಮಾನ ವಿದ್ಯೆಗೆ ಸಮಾನ ಆದ್ಯತೆ ಎಂಬ ನಿಯಮವೇ ಇಲ್ಲಿ ಇಲ್ಲ. ಪ್ರತಿ ತಾಲ್ಲೂಕಿನಲ್ಲಿ ಮೂರು ಕಡೆ ಮಾತ್ರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೇಂದ್ರಗಳಿವೆ. ರೈತರು ಅಲ್ಲಿಗೇ ಹೋಗಿ ಸಲ್ಲಿಸಬೇಕು. ಎಷ್ಟೋ ಜನ ಇದಕ್ಕೂ ನಮ್ಮದೇ ಸಹಾಯ ಕೇಳುತ್ತಾರೆ. ಮರಳಿ ಅಪ್ಲೋಡ್ ಮಾಡಲು ಅಲ್ಲಿಗೇ ಹೋಗಬೇಕು. ರೈತರ ಹೊಲ ಹಾಗೂ ತಾಲ್ಲೂಕು ಕಚೇರಿಗೆ ಅಲೆದಾಡುವುದು ಅನಿವಾರ್ಯ. ಇದರ ಖರ್ಚು ಕೊಡುವುದಿಲ್ಲ' ಎಂಬುದು ಭೂಮಾಪಕರ ಆರೋಪ.

ಪ್ರತಿ ತಿಂಗಳು ₹40 ಕೋಟಿ ಜಮೆ: 'ಪರವಾನಗಿ ಪಡೆದ ಭೂಮಾಪಕರ ಕೆಲಸದಿಂದ ಪ್ರತಿ ತಿಂಗಳು ಸರ್ಕಾರಕ್ಕೆ ₹38 ಕೋಟಿಯಿಂದ ₹40 ಕೋಟಿ ಜಮೆ ಆಗುತ್ತದೆ ಎಂದು ಇಲಾಖೆಯ ಮೂಲಗಳೇ ಖಾತ್ರಿಪಡಿಸಿವೆ. ಸದ್ಯ ಇರುವ 4,600 ಭೂಮಾಪಕರನ್ನು ಕಾಯಂ ಮಾಡಿಕೊಂಡರೆ ₹25 ಕೋಟಿ ವೇತನ ಕೊಡಬೇಕಾಗುತ್ತೆ. ಸರ್ಕಾರಕ್ಕೆ ನಾವು ಹೊರೆ ಅಗುವುದೇ ಇಲ್ಲ' ಎನ್ನುವುದು ಮುಖಂಡ ತಿರುಮಲೆಗೌಡ ಅವರ ಅಭಿಮತ.

ಹಳ್ಳಿಯಲ್ಲಿ ಒಂದು ಅರ್ಜಿಗೆ ₹1,200 ಶುಲ್ಕವಿದೆ. ಎರಡು ಎಕರೆಯ ನಂತರ ಪ್ರತಿ ಎಕರೆಗೆ ₹400 ಹೆಚ್ಚುವರಿ ಕಟ್ಟಬೇಕು. ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಎರಡು ಎಕರೆಗೆ ₹2,500 ಶುಲ್ಕ, ನಂತರದ ಪ್ರತಿ ಎಕರೆಗೂ ₹1,000 ಹೆಚ್ಚುವರಿ ಕಟ್ಟಬೇಕು. ಆದರೆ, ಭೂಮಾಪಕರಿಗೆ ಮಾತ್ರ ಪ್ರತಿ ಅರ್ಜಿಗೆ ₹1,200 ಮಾತ್ರ.

2023ರಲ್ಲಿ ಇದೇ ರೀತಿ ಮುಷ್ಕರ ನಡೆಸಿದಾಗ, 25 ಲಕ್ಷ ಪ್ರಕರಣಗಳು ಬಾಕಿ ಉಳಿದಿದ್ದವು. ಅವುಗಳನ್ನು ವಿಲೇ ಮಾಡಿ ಕೊಟ್ಟರೆ ಕಾಯಂ ಮಾಡುವ ವಿಷಯವನ್ನು ಪರಿಶೀಲಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. 2025ರ ಏಪ್ರಿಲ್ 10ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ 'ಭೂ ಮಾಪಕರ ದಿನಾಚರಣೆ' ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 'ಸೇವೆ ಕಾಯಂ' ಮಾಡುವ ಬಗ್ಗೆ ಭರವಸೆ ನೀಡಿದ್ದರು. ಆದರೆ, ಭರವಸೆ ಈಡೇರಿಲ್ಲ. ನಿರೀಕ್ಷೆಯೂ ಹುಸಿಯಾಗಿದೆ ಎನ್ನುವುದು ಇವರ ಆರೋಪ.

ಹೈಕೋರ್ಟ್ ನಿರ್ದೇಶನ: 'ಇವರ ಸೇವೆಯನ್ನು ಸಹಾನುಭೂತಿಯಿಂದ ನೋಡಿ ಮತ್ತು ಅಗತ್ಯವಿದ್ದರೆ ಕಾಯಂ ಮಾಡಿಕೊಳ್ಳಿ' ಎಂದು ಹೈಕೋರ್ಟ್ 2023ರ ಜೂನ್ 9ರಂದು ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಆದರೆ, ಸರ್ಕಾರ ತನ್ನ ನಿಯಮಗಳಿಗೆ ಅಂಟಿಕೊಂಡಿದೆ ಹೊರತು; ಸೌಜನ್ಯ ತೋರಲು ಸಿದ್ಧವಿಲ್ಲ. ಒಬ್ಬ ಭೂಮಾಪಕ ವರ್ಷದಿಂದ ಬಾಕಿ ಉಳಿದಿದ್ದ ₹1 ಲಕ್ಷ ಸಂಬಾವನೆ ಏಕಕಾಲಕ್ಕೆ ಪಡೆದಿದ್ದರು. ಇದೇ ಪ್ರಕರಣ ನೆಪವಾಗಿಟ್ಟುಕೊಂಡು ಸರ್ಕಾರ ಜಾರಿಕೊಳ್ಳುತ್ತಿದೆ. ಸಾರ್ವತ್ರಿಕವಾಗಿ ಸಮಸ್ಯೆ ನೋಡಬೇಕಾಗಿದೆ' ಎಂಬುದು ಹೋರಾಟಗಾರರ ವಾದ.

ಸರ್ಕಾರ ಮತ್ತು ಭೂಮಾಪಕರ ಸಂಘರ್ಷದಲ್ಲಿ ಭೂಮಾಲೀಕರ ಐದೂವರೆ ಲಕ್ಷಕ್ಕೂ ಹೆಚ್ಚು ಸರ್ವೆ ಪ್ರಕರಣಗಳು ಬಾಕಿ ಉಳಿದಿವೆ. ಇದರಿಂದಾಗಿ ಭೂ ಮಾರಾಟ, ಜಮೀನು ಪೋಡಿ, ಹೊಸ ನಕ್ಷೆ, ಖರೀದಿ ನಕ್ಷೆ, ವಿಭಾಗ ನಕ್ಷೆ, ದಾನಪತ್ರ ನಕ್ಷೆ, ಹದ್ದುಬಸ್ತು ಮೊದಲಾದವಕ್ಕೆ ಮೋಕ್ಷ ಸಿಗಬೇಕಾಗಿದೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಪೂರಕ ಮಾಹಿತಿ: ಬಷೀರಅಹ್ಮದ್ ನಗಾರಿ, ವಿಕ್ರಂ ಕಾಂತಿಕೆರೆ

'ಭೂಮಾಪಕರ ಕಾಯಂ ಸಾಧ್ಯವಿಲ್ಲ'

'ಪರವಾನಗಿ ಪಡೆದ ಭೂಮಾಪಕರ ಸೇವೆ ಕಾಯಂ ಮಾಡಲು ಸಾಧ್ಯವಿಲ್ಲ. ಉಳಿದ ಎಲ್ಲ ಬೇಡಿಕೆ ಈಡೇರಿಸಲು ಸರ್ಕಾರ ಸಿದ್ಧವಿದೆ. ಅವರ ಕೆಲಸಕ್ಕೆ ತಕ್ಕಷ್ಟು ಗೌರವ ಧನ ಸಿಗುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟವಾಗಿ ಹೇಳಿದ್ದಾರೆ.

ಕಳೆದ ಮೂರು ತಿಂಗಳಿನಿಂದ ಭೂ ಮಾಪಕರು ನಡೆಸುತ್ತಿರುವ ಮುಷ್ಕರ ಕುರಿತು ಪ್ರತಿಕ್ರಿಯಿಸಿದ ಸಚಿವರು, 'ಅವರ ಮನವೊಲಿಸುವ ಕೆಲಸ ಮಾಡಲಾಗುತ್ತಿದೆ. ಇನ್ನೆರಡು ತಿಂಗಳಲ್ಲಿ ಎಲ್ಲ ಸಮಸ್ಯೆಗಳು ಬಗೆಹರಿಯುವ ವಿಶ್ವಾಸವಿದೆ' ಎಂದು ಹೇಳಿದ್ದಾರೆ.

'ಹತ್ತಾರು ವರ್ಷಗಳಿಂದ ಅಸಾಧ್ಯವಾಗಿದ್ದ ಪೋಡಿಗಳನ್ನು ಸರ್ಕಾರವೇ ಜನರ ಮನೆ ಬಾಗಿಲಿಗೆ ಹೋಗಿ ಮಾಡಿಕೊಟ್ಟಿದೆ. 2025–26ರಲ್ಲಿ ಶುಲ್ಕವಿಲ್ಲದೆ 2.52 ಲಕ್ಷ ರೈತರ ಪೋಡಿ ಕೆಲಸ ಪೂರ್ಣಗೊಳಿಸಿದ್ದೇವೆ. ಸಾವಿರಾರು ಅರ್ಜಿಗಳ ಕೆಲಸ ಪ್ರಗತಿಯಲ್ಲಿದೆ' ಎಂದೂ ವಿವರಿಸಿದ್ದಾರೆ. '4,783 ದಾಖಲೆರಹಿತ ವಸತಿ ಪ್ರದೇಶಗಳನ್ನು ಹೊಸದಾಗಿ ಕಂದಾಯ ಗ್ರಾಮ ಮಾಡುವ ನಿಟ್ಟಿನಲ್ಲಿ 2.20 ಲಕ್ಷ ಮನೆಗಳನ್ನು ಸರ್ವೆ ಮಾಡಿ ಅವರಿಗೆ ಸ್ಕೆಚ್ ಸಹಿತ ಸಂಪೂರ್ಣ ದಾಖಲೆ ನೀಡಲಾಗಿದೆ' ಎಂದು ಹೇಳಿದ್ದಾರೆ.

'ಈ ವರ್ಷದಿಂದ ಎಲ್ಲ ಸರ್ವೆ ಕೆಲಸಗಳನ್ನು ಡಿಜಟಲೀಕರಿಸುವ ಕೆಲಸ ಕೈಗೆತ್ತಿಕೊಂಡಿದ್ದೇವೆ. 1807ನೇ ಇಸ್ವಿಯಿಂದ ನಡೆದುಬಂದ 'ಮಾನ್ಯುವಲ್' ಪದ್ಧತಿ ಹಾಗೂ ಚೈನ್ ಬಳಸಿ ಮಾಡುವ ಅಳತೆಯ ಬದಲಾಗಿ ಆಧುನಿಕ 'ರೋವರ್' ಮುಖಾಂತರ ಅಳೆಯುವ ಪದ್ಧತಿ ಜಾರಿಗೊಳಿಸುತ್ತಿದ್ದೇವೆ. ಈ ಮೂಲಕ ನಿಖರ ಅಳತೆ ಸಾಧ್ಯವಾಗಲಿದೆ' ಎಂದೂ ಸಚಿವರು ಪ್ರತಿಕ್ರಿಯಿಸಿದ್ದಾರೆ.

ಭೂ ಮಾಪನೆ

ಜಿಲ್ಲೆ	ಬಾಕಿ ಉಳಿದ ಪ್ರಕರಣ
ತುಮಕೂರು	43,461
ಬೆಳಗಾವಿ	34,755
ಹಾಸನ	30,258
ಮಂಡ್ಯ	26,897
ಮೈಸೂರು	25,628
ರಾಯಚೂರು	23,023
ಕಲಬುರಗಿ	22,958
ಬಿಜಾಪುರ	22,058
ಶಿವಮೊಗ್ಗ	21,234
ಬೆಂಗಳೂರು ದಕ್ಷಿಣ	20,505
ದಕ್ಷಿಣ ಕನ್ನಡ	20,391
ದಾವಣಗೆರೆ	19,664
ಹಾವೇರಿ	19,475
ಬೀದರ್	19,339
ಚಿತ್ರದುರ್ಗ	19,276
ಚಿಕ್ಕಬಳ್ಳಾಪುರ	16,845
ಕೋಲಾರ	18,511
ಬೆಂಗಳೂರು ಗ್ರಾಮಾಂತರ	17,102
ಉಡುಪಿ	16,418
ಬೆಂಗಳೂರು ಜಿಲ್ಲೆ	14,737
ಚಿಕ್ಕಮಗಳೂರು	14,121
ಬಾಗಲಕೋಟೆ	13,993
ಕೊಪ್ಪಳ	13,344
ಯಾದಗಿರಿ	12,884
ವಿಜಯನಗರ	12,749
ಉತ್ತರ ಕನ್ನಡ	11,224
ಬಳ್ಳಾರಿ	11,211
ಧಾರವಾಡ	10,867
ಗದಗ	9,252
ಚಾಮರಾಜನಗರ	6,906
ಕೊಡಗು	3,669

ತೆಲಂಗಾಣದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ಪೋಡಿಮುಕ್ತ ರಾಜ್ಯ ಘೋಷಣೆ ಮಾಡಿತು. ಕರ್ನಾಟಕದಲ್ಲೂ ಇದನ್ನು ಅನುಸರಿಸಬೇಕು. ಕಂದಾಯ ವ್ಯಾಜ್ಯಗಳ ವಿಶೇಷ ನ್ಯಾಯಾಲಯ ರಚನೆ ಮಾಡಬೇಕು
ಸಿದಗೌಡ ಮೋದಗಿ, ಅಧ್ಯಕ್ಷ, ಭಾರತೀಯ ಕೃಷಿಕ ಸಮಾಜ (ಕರ್ನಾಟಕ)

ಒಂದು ಪೆನ್ನು, ಒಂದು ಟೇಪ್ ಮತ್ತು ಮೋಜನಿಗಾಗಿ ಒಂದು ಟೇಬಲ್. ನಮ್ಮ ಇಡೀ ಬದುಕು ಇಷ್ಟರ ಮೇಲಿದೆ. ಒಂದು ಕಡೆ ಕೆಲಸ ಇಲ್ಲ ಎಂದಾಗ ಬೇರೆ ಕಡೆ ನಿಯೋಜಿಸುತ್ತಾರೆ. ಅದರ ವೆಚ್ಚ ನೀಡುವುದಿಲ್ಲ.
ರವೀಂದ್ರ ಕೋರೆ, ಜಿಲ್ಲಾ ಘಟಕದ ಅಧ್ಯಕ್ಷ, ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘ, ಬೆಳಗಾವಿ

ಜಮೀನುಗಳಲ್ಲಿ ಬೆಳೆ ಇಲ್ಲದ ವೇಳೆ ಸರ್ವೆ ನಡೆಸಿದರೆ ಅನುಕೂಲ. ಮಳೆಯಾದರೆ, ಕೃಷಿ ಚಟುವಟಿಕೆ ಆರಂಭವಾಗುತ್ತದೆ. ಆಗ ಸರ್ವೆಗೆ ಬಂದರೆ ಕಷ್ಟ ಆಗುತ್ತದೆ. ಈಗ ವಿಳಂಬ ಮಾಡಿದರೆ, ಇಡೀ ವರ್ಷ ತೀವ್ರ ಸಮಸ್ಯೆ ಆಗುತ್ತದೆ.
ವೀರೇಶ ದಿದ್ದಿಗಿ, ರೈತ, ರಾಯಚೂರು ಜಿಲ್ಲೆ

ರೈತ ಒಂದು ಅರ್ಜಿಗೆ ₹1,500 ಆಕಾರ ತೆರಿಗೆ ಭರಿಸಿದರೆ ಮುಗಿಯಿತು. ಅದು ಸರ್ಕಾರಕ್ಕೆ ಹೋಗುತ್ತದೆ. ಇದರಲ್ಲೇ ನಮಗೆ ₹1,200 ಸಂಭಾವನೆ ಕೊಡುತ್ತಾರೆ. ಸರ್ವೆ ತಿರಸ್ಕಾರವಾದರೆ ಸಂಬಾವನೆ ಸಿಗಲ್ಲ. ರೈತರಿಗೂ ಹಣ ಸಿಗಲ್ಲ.
ತೋಪ ಖಾನಪೇಟ, ಭೂಮಾಪಕ, ಬೆಳಗಾವಿ

ಬೆಳಗಾವಿ ಜಿಲ್ಲೆಯಲ್ಲಿ 250 ಪರವಾನಗಿ ಭೂ ಮಾಪಕರು ಇದ್ದಾರೆ. ಎರಡು ತಿಂಗಳಿನಿಂದ ಮುಷ್ಕರ ನಿರತ ಕಾರಣ ಸಾಕಷ್ಟು ಪ್ರಕರಣಗಳು ಬಾಕಿ ಬಿದ್ದಿವೆ. ತುರ್ತು ಅಗತ್ಯವಿದ್ದವರಿಗೆ ಸಹಕಾರ ನೀಡುತ್ತಿದ್ದೇವೆ.
ವಿಜಯಕುಮಾರ್, ಭೂದಾಖಲೆಗಳು ಉಪನಿರ್ದೇಶಕ, ಬೆಳಗಾವಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದರ್ಖಾಸ್ತು–ಪೋಡಿ ಆಂದೋಲನ ನಡೆಯುತ್ತಿದೆ. ಉಳಿಕೆ ಕಡತಗಳನ್ನು ವೇಗವಾಗಿ ವಿಲೇ ಮಾಡಲಾಗುತ್ತಿದೆ. ಪರವಾನಗಿ ಹೊಂದಿರುವವರಿಗೆ ಇದೇ ಆದಾಯದ ಮೂಲವಾಗಿದ್ದು, ಕಾಲಮಿತಿಯೊಳಗೆ ಕೆಲಸ ಮುಗಿಸುತ್ತಿದ್ದರು.
ಪುಷ್ಪರಾಜ್ ಪೂಜಾರಿ, ಭೂದಾಖಲೆಗಳ ಇಲಾಖೆಯ ಪ್ರಭಾರ ಉಪನಿರ್ದೇಶಕ, ದಕ್ಷಿಣ ಕನ್ನಡ

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ, 17-5-2001

● ಎಸ್‌ಸಿ ಎಸ್‌ಟಿ ಉನ್ನತಿಗೆ ಕಾಯಂ ಆಯೋಗ ರಚನೆ

ಬೆಂಗಳೂರು, ಮೇ 16– ಹಿಂದುಳಿದ ವರ್ಗಗಳ ಕಾಯಂ ಆಯೋಗದ ಮಾದರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗಾಗಿ ಒಂದು ಕಾಯಂ ಆಯೋಗವನ್ನು ರಚಿಸಲು ರಾಜ್ಯ ಸರ್ಕಾರ ಮುಂಬರುವ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಿದೆ.

ಈ ವಿಚಾರವನ್ನು ಸಮಾಜ ಕಲ್ಯಾಣ ಸಚಿವ ಕಾಗೋಡು ತಿಮ್ಮಪ್ಪ ಅವರು ಇಂದು ಇಲ್ಲಿ ತಮ್ಮನ್ನು ಭೇಟಿ ಮಾಡಿದ ವರದಿಗಾರರಿಗೆ ತಿಳಿಸಿದರು.

ಹಿಂದುಳಿದ ವರ್ಗಗಳ ಕಾಯಂ ಆಯೋಗಕ್ಕೂ ಇಷ್ಟರಲ್ಲಿಯೇ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸುವುದಾಗಿ ಅವರು ತಿಳಿಸಿದರು.

75 ವರ್ಷಗಳ ಹಿಂದೆ
ಗುರುವಾರ, 17-5-1951

● ಪ್ರಬಲ ವಿರುದ್ಧ ಪಕ್ಷ ರಚಿಸಲು ಶ್ರೀ ಕೃಪಲಾನಿಯವರ ಪ್ರಯತ್ನ

ವತ್ರಾಪ್ (ರಾಮನಾಡ್ ಜಿಲ್ಲೆ), ಮೇ 16– ಕೆಲವು ದಿವಸಗಳ ಹಿಂದೆ ರದ್ದುಗೊಳಿಸಲ್ಪಟ್ಟ ಕಾಂಗ್ರೆಸ್ ಡೆಮೊಕ್ರಾಟಿಕ್ ಫ್ರಂಟ್ ಪಕ್ಷದ ನಾಯಕರಾದ ಆಚಾರ್ಯ ಜೆ.ಬಿ. ಕೃಪಲಾನಿಯವರು ಇಲ್ಲಿ ವ್ಯವಸಾಯ ಕಾರ್ಯಕರ್ತರ ಸಭೆಯೊಂದನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ತಾವು ಪ್ರಮುಖ ವಿರುದ್ಧ ಪಕ್ಷವಾಗಿ ಉಳಿಯುವ ಪ್ರಬಲವಾದ ಅಖಿಲ ಭಾರತ ಪಕ್ಷವೊಂದನ್ನು ರಚಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಶ್ರೀ ಕೃಪಲಾನಿಯವರು ಸಭಿಕರು ಕೇಳಿದ ಹಲವು ಪ್ರಶ್ನೆಗಳಿಗೆ ಸೂಕ್ತ ರೀತಿಯಲ್ಲಿ ಉತ್ತರವಿತ್ತರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

17 ಮೇ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಪ್ರತಿಪತ್ ಗಂ. 21-41, ನಕ್ಷತ್ರ: ಕೃತ್ತಿಕ ಗಂ. 14-32, ಯೋಗ: ಶೋಭನ ಗಂ. 6-16 ನಂತರ ಅತಿಗಂಡ ಗಂ. 26-00 ಕರಣ: ಕಿಂಸ್ತುಘ್ನ ಗಂ. 11-37, ವೃಷಭ ಮಾಸದ 02 ನೇ ದಿನ. ಮಳೆ ನಕ್ಷತ್ರ: ಕೃತ್ತಿಕ 2 ನೇ ಪಾದ. ರಾಹುಕಾಲ: ಸಾಯಂಕಾಲ 04-30 - 06-00, ಸೂರ್ಯೋದಯ: 06-08, ಸೂರ್ಯಾಸ್ತ: 06-46, ಮುಸ್ಲಿಂ ದಿನಾಂಕ: 29, ಜುಲ್ಕಾದಾ, ಅದೃಷ್ಟ ಸಂಖ್ಯೆ: 7, 10

ಮೇಷ: ಹೊಸದಾಗಿ ಕೈಗೊಂಡ ಕೆಲಸ ಸುಗಮವಾಗಿ ಸಾಗಲು ದೇವತಾ ಕಾರ್ಯ ಕೈಗೊಳ್ಳುವುದು ಉತ್ತಮ. ಸಂಬಂಧಿಕರೊಂದಿಗಿದ್ದ ವ್ಯವಹಾರಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಯುವ ಕಲಾವಿದರಿಗೆ ಪ್ರೋತ್ಸಾಹ ಸಿಗುವುದು.

ವೃಷಭ: ನಿಮಗೆ ಎದುರಾಗುವ ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ, ಇನ್ನಷ್ಟು ಮನೋಬಲವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿರಿ. ವಸ್ತ್ರ ವ್ಯಾಪಾರಿಗಳಿಗೆ ಈ ದಿನ ಅಧಿಕ ವ್ಯಾಪಾರ ಮತ್ತು ಲಾಭ ಸಿಗಲಿದೆ.

ಮಿಥುನ: ಮನದಲ್ಲಿ ಸಲ್ಲದ ವಿಚಾರಗಳನ್ನು ತುಂಬಿಕೊಳ್ಳದೇ, ಸಂತೋಷವಾಗಿ ಇರಲು ಯತ್ನಿಸಿ. ಹೊಸ ಮನೆಯೊಂದನ್ನು ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯಲಿದೆ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ಸಂಗ್ರಹವಾಗುವುದು.

ಕರ್ಕಾಟಕ: ಧವಸ-ಧಾನ್ಯಗಳ ವ್ಯಾಪಾರಸ್ಥರು ಅವುಗಳನ್ನು ಶೇಖರಣೆ ಮಾಡಿದ್ದಲ್ಲಿ ಅಧಿಕ ಲಾಭ ಉಂಟಾಗುವ ಸಂಭವ ಇದೆ. ಇನ್ನೊಬ್ಬರಿಂದ ಹೇಳಿಸಿಕೊಂಡ ವಿಚಾರವನ್ನು ಅಗೌರವವೆಂದು ಭಾವಿಸಬೇಡಿ.

ಸಿಂಹ: ಒಂದು ಬಾರಿ ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯುವ ಯೋಚನೆಯನ್ನು ಮಾಡಬೇಡಿ. ಛಾಯಾಗ್ರಾಹಕರಿಗೆ ಪ್ರಶಸ್ತಿ ಪಡೆಯುವ ಅವಕಾಶಗಳು ಸಿಗಲಿವೆ. ಆರ್ಥಿಕವಾಗಿ ಖರ್ಚಿನ ಮೇಲೆ ನಿಯಂತ್ರಣವಿರಲಿ.

ಕನ್ಯಾ: ಮರಕೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ ಕೆಲಸಕ್ಕೆ ಸೋಮಾರಿತನ ಅಡ್ಡಬರುವುದು. ಕೆಲಸದ ನಿಮಿತ್ತ ವಿದೇಶ ಪ್ರಯಾಣ ಮಾಡಬೇಕಾಗಬಹುದು. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮವಾಗಿ ಇರುವುದು.

ತುಲಾ: ನಿಮ್ಮ ಹೋರಾಟದ ಬದುಕಿನಲ್ಲಿ ಇಂದು ಹೊಸ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು. ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುವು. ಮೃದುಭಾಷಿಗಳು ಎನಿಸಿಕೊಳ್ಳುವಿರಿ.

ವೃಶ್ಚಿಕ: ಸಂಗೀತಗಾರರಿಗೆ ಮತ್ತು ಕ್ರೀಡಾಪಟುಗಳಿಗೆ ಸಾಧನೆಗೆ ಅವಕಾಶ ಸಿಗುವುದು. ಬಹಳ ಪ್ರಯತ್ನದಿಂದ ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯ ಆಗುವುದು. ಉಸಿರಾಟದ ಸಮಸ್ಯೆ ಎದುರಾಗಬಹುದು, ನಿರ್ಲಕ್ಷ್ಯಬೇಡ.

ಧನು: ನಿಮ್ಮ ಕೆಲಸಗಳಿಂದ ಬೇರೆಯವರಿಗೆ ನಿಮ್ಮ ಮೇಲಿನ ಅಭಿಪ್ರಾಯಗಳು ಬದಲಾಗುವುವು. ನಿಮ್ಮ ಪ್ರಾಮಾಣಿಕತೆಯನ್ನು ಈ ದಿನ ದುರುಪಯೋಗಪಡಿಸಿಕೊಳ್ಳುವರು ಜಾಗ್ರತೆ. ಎಲ್ಲರನ್ನೂ ಗೌರವಯುತವಾಗಿ ನೋಡಿ.

ಮಕರ: ಗೊಂದಲದಲ್ಲಿ ಯಾವ ಹಾದಿಯನ್ನು ಆಯ್ದುಕೊಳ್ಳಬೇಕೆಂದು ಖಚಿತ ಇಲ್ಲದಿದ್ದರೂ ಮತ್ತೊಂದು ಅವಕಾಶವನ್ನು ಪರ್ಯಾಯವಾಗಿಟ್ಟುಕೊಳ್ಳುವ ಜಾಣ್ಮೆ ಪ್ರದರ್ಶಿಸಿ. ನಿಮ್ಮ ಸ್ಥಿತಿಯು ಬೆಕ್ಕಿನ ಬಾಯಿಗೆ ಸಿಕ್ಕ ಇಲಿಯಂತಿರುವುದು.

ಕುಂಭ: ರಾಜಕಾರಣಿಗಳಿಗೆ ನಿಕಟವರ್ತಿಗಳ ಪ್ರೋತ್ಸಾಹದಿಂದ ಸಾಮಾಜಿಕ ಬದುಕು ಸುಗಮವಾಗಲಿದೆ. ಸ್ನೇಹಿತರೊಂದಿಗೆ ಪ್ರವಾಸ ಮುಂದೂಡುವುದು ಉತ್ತಮ. ಮೇಧಾವಿಗಳ ಮೂಲಕ ಧನ ಸಂಪಾದನೆ ಹೊಂದುವಿರಿ.

ಮೀನ: ಅನಾರೋಗ್ಯದಿಂದ ಹೊರಬರಲು ಚಿಕಿತ್ಸೆಯ ಜೊತೆಯಲ್ಲಿ ಧಾರ್ಮಿಕ ಮಾರ್ಗವನ್ನೂ ಆಚರಿಸುವುದು ಶುಭಫಲಕ್ಕೆ ದಾರಿಯಾಗಲಿದೆ. ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಸಾಧ್ಯವಾಗುತ್ತದೆ.

ಪದಬಂಧ 6405
ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗನು ನೋಡುತ್ತಿರುವ ಯೂನಿವರ್ಸಿಟಿ (6)
4.ಅತಿ ದೊಡ್ಡ ಗಾತ್ರದ ಜಲಚರ ಸಸ್ತನಿ (4)
5.ಮಾಸದ ಕೊನೆಗೆ ಒಂದಾಗಿ ಸೇರಿಸಿದುದು (3)
8.ಅಂಧನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (3)
11.ಚಿಗುರು ಅಥವಾ ಪಲ್ಲವ (3)
13.ಹಡಗನ್ನು ಬೇರೆ ದಿಕ್ಕಿಗೆ ತಿರುಗಿಸುವ ಸಾಧನ (3)
14.ಆನೆಗೆಮದವೇರಿದಾಗ ಕುಂಭಸ್ಥಳದಿಂದ ಸುರಿಯುವ ಜಲ (4)
16.ಪ್ರಪಂಚದ ನಡುವಳಿಕೆಯಿದು (6)

ಮೇಲಿಂದ ಕೆಳಕ್ಕೆ
1.ಈತ ನಾಶಮಾಡುವವನು (4)
2.ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವವನು (2)
3.ವಿಶ್ವವಿದ್ಯಾನಿಲಯದ ಅಧ್ಯಕ್ಷ (4)
6.ಉಚಿತ ಕೊನೆಗಿದ್ದಾಗ ಇದು ತಕ್ಕುದಾದುದು! (4)
7.ಪ್ರಭಲವಾದ ಗಾಳಿ (5)
9.ಬಳ್ಳಿಯೊಡೆಯುತ್ತಿರುವ ಮಿಂಚು (4)
10.ದಾಳಿ ಮಾಡುವುದು (4)
12.ಮರದಲ್ಲಿ ರತ್ನಹಾರ ಕಾಣುತ್ತಿದೆಯಲ್ಲಾ! (4)
15.ಅತಿ ಆಸಕ್ತಿಯುಳ್ಳವ ತಿರುಗಿದ್ದಾನೆ (2)



6404ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶರಸಂಧಾನ 4.ವಾಯುವ್ಯ
5.ಕಾರ್ಪಾಸ 6.ನೆಗಡಿ
8.ಮಯ 9.ಸತಿ
11.ಲಿಕನ 14.ವಿಷಾದ
15.ಗುಲಾಲು 16.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಶತಮೂರ್ಖ 2.ಸಂಪಾದಕೀಯ
3.ನಕಾರ 4.ವಾಸನೆ 7.ಗರತಿ
8.ಮಯಕ 9.ಸಮುದ್ರಯಾನ
10.ಅನುಬಂಧ 12.ನವಿಲು 13.ಪದವಿ

ಸುಡೊಕು 6788

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				8			6	
			1		6		2	3
3		5		2		9	8	
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

6787 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಒಂದೇ ಕೇಂದ್ರದಲ್ಲಿ 74 ಮಂದಿಗೆ 200 ಅಂಕ’

ಕೃಷಿ ಪ್ರಾಯೋಗಿಕ ಪರೀಕ್ಷೆ: ಹಿರಿಯೂರು ಕೇಂದ್ರದಲ್ಲಿ ಅಕ್ರಮ ಶಂಕೆ– ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಗದಗ: ‘ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ತೋಟಗಾರಿಕೆ ಕಾಲೇಜು ಕೇಂದ್ರದಲ್ಲಿ ನಡೆದ ಕೆಸಿಇಟಿ ಕೃಷಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿದ್ದು, ರಾಜ್ಯ ಸರ್ಕಾರ ಕೂಡಲೇ ತನಿಖೆ ನಡೆಸಬೇಕು’ ಎಂದು ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ ಒತ್ತಾಯಿಸಿದ್ದಾರೆ.

ಈ ಕೇಂದ್ರದಲ್ಲಿ ನಡೆದ ಪ್ರಾಯೋಗಿಕ ಪರೀಕ್ಷೆಯಲ್ಲಿ ಫಲಿತಾಂಶ ಶೇ 70ರಷ್ಟು ಇದ್ದರೆ, ರಾಜ್ಯದ ಉಳಿದ 16 ಕೇಂದ್ರಗಳ ಫಲಿತಾಂಶ ಶೇ 30ರಷ್ಟು ಇದೆ’ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೃಷಿ ಕೋಟಾದಡಿ ಬಿಎಸ್‌ಸಿ ಕೃಷಿ, ತೋಟಗಾರಿಕೆ, ಪಶುವೈದ್ಯಕೀಯ ತರಗತಿಗೆ ಪ್ರವೇಶ ಬಯಸಿದ ರೈತರ ಮಕ್ಕಳು ವಿವಿಧ ಕೃಷಿ ಮತ್ತು ತೋಟಗಾರಿಕೆ ಮತ್ತು ಪಶುವೈದ್ಯಕೀಯ ವಿಶ್ವವಿದ್ಯಾಲಯಗಳು ವಿವಿಧ 17 ಕೇಂದ್ರಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಿದ್ದವು. ಖಾಸಗಿ ಕೋಚಿಂಗ್ ಸೆಂಟರ್‌ನವರು ಈ ಎಲ್ಲ ಕೇಂದ್ರಗಳ ಫಲಿತಾಂಶ ಸಂಗ್ರಹಿಸಿ ವಿಶ್ಲೇಷಣೆ ಮಾಡಿರುವ ಪಟ್ಟಿ ಬಿಡುಗಡೆ ಮಾಡಿ, ಅವರು ವಿವರ ಹಂಚಿಕೊಂಡಿದ್ದಾರೆ.

‘ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸೇರುವ ಹಿರಿಯೂರು ಕಾಲೇಜು ಕೇಂದ್ರದಲ್ಲಿ ಪರೀಕ್ಷೆ ಬರೆದ 2,143 ವಿದ್ಯಾರ್ಥಿಗಳಲ್ಲಿ 74 ಮಂದಿ 200ಕ್ಕೆ 200 ಅಂಕ ಪಡೆದಿದ್ದಾರೆ. ಆದರೆ, ರಾಜ್ಯದ ಉಳಿದ 16 ಕೇಂದ್ರಗಳಲ್ಲಿ ಪರೀಕ್ಷೆ ಬರೆದ 22,211 ವಿದ್ಯಾರ್ಥಿಗಳಲ್ಲಿ ಕೇವಲ 21 ವಿದ್ಯಾರ್ಥಿಗಳು 200ಕ್ಕೆ 200 ಅಂಕ ಪಡೆದಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ಹಿರಿಯೂರು ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದ 2,143 ವಿದ್ಯಾರ್ಥಿಗಳಲ್ಲಿ 200 ಅಂಕ ಪಡೆದವರು 74 ಮಂದಿ, 196 ಅಂಕ ಪಡೆದವರು 190 ಮಂದಿ, 192 ಅಂಕ ಪಡೆದ 238 ಮಂದಿ, 188 ಅಂಕ ಪಡೆದ 243 ಮಂದಿ, 184 ಅಂಕ ಪಡೆದ 213 ಮಂದಿ, 180 ಅಂಕ ಪಡೆದ 181 ಮಂದಿ, 176 ಅಂಕ ಪಡೆದ 188 ಮಂದಿ, 172 ಅಂಕ ಪಡೆದ 135 ವಿದ್ಯಾರ್ಥಿಗಳು ಇದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ರಾಜ್ಯದ 16 ಕೇಂದ್ರಗಳಲ್ಲಿ ಪರೀಕ್ಷೆ ಬರೆದ 22,211 ವಿದ್ಯಾರ್ಥಿಗಳಲ್ಲಿ 170ಕ್ಕಿಂತ ಹೆಚ್ಚು ಅಂಕ ಪಡೆದವರು 3,408 ವಿದ್ಯಾರ್ಥಿಗಳು ಇದ್ದರೆ, ಹಿರಿಯೂರು ಕೇಂದ್ರವೊಂದರಲ್ಲೇ 1,462 ವಿದ್ಯಾರ್ಥಿಗಳಿದ್ದಾರೆ’ ಎಂದಿದ್ದಾರೆ.

‘ಪಿಯುಸಿಯಲ್ಲಿ ಪಡೆದ ಅಂಕಗಳಲ್ಲಿ ಶೇ 25, ಕೆಸಿಇಟಿಯಲ್ಲಿ ಪಡೆದ ಶೇ 25 ಅಂಕ ಹಾಗೂ ಕೃಷಿ ಪ್ರಾಯೋಗಿಕ ಪರೀಕ್ಷೆ ಪರೀಕ್ಷೆಯಲ್ಲಿ ಪಡೆದ ಶೇ 50 ಅಂಕ ಗಣನೆಗೆ ತಗೆದುಕೊಂಡು ಕೌನ್ಸಿಲಿಂಗ್ ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ರಾಜ್ಯದ ಕೃಷಿ ಕಾಲೇಜುಗಳಲ್ಲಿ ರೈತರ ಮಕ್ಕಳಿಗೆ ಸರಿಸುಮಾರು ಮೂರು ಸಾವಿರದಷ್ಟು ಸೀಟುಗಳು ಮಾತ್ರ ಇದ್ದು ಅದರ ಅರ್ಧದಷ್ಟು ಸೀಟುಗಳು ಹಿರಿಯೂರು ಕೇಂದ್ರದಲ್ಲಿ ಬರೆದವರಿಗೆ ಲಭ್ಯವಾದರೆ; ರಾಜ್ಯದ ಉಳಿದ ರೈತರ ಮಕ್ಕಳಿಗೆ ಅನ್ಯಾಯವಾಗುತ್ತದೆ. ಕೂಡಲೇ ಈ ಫಲಿತಾಂಶವನ್ನು ರದ್ದುಗೊಳಿಸಿ ಅಕ್ರಮದ ತನಿಖೆ ಕೈಗೊಂಡು ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ಕೆಸಿಇಟಿ ಕೃಷಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಹಿರಿಯೂರು ಕೇಂದ್ರಕ್ಕೆ ಬಂದ ಫಲಿತಾಂಶವು ಕೆಇಟಿ ಪ್ರಕಟಣೆಯಿಂದ ಗೊತ್ತಾಗಿದೆ. ಈ ಕುರಿತು ನಾನು ಸಮಿತಿಗೆ ಎಲ್ಲವನ್ನೂ ಹೇಳುವೆ
ಡಾ. ಸುರೇಶ ಡಿ. ಏಕಬೋಟೆ
ಡೀನ್ ತೋಟಗಾರಿಕೆ ಕಾಲೇಜು, ಹಿರಿಯೂರು

ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕವಾಗಿ ಪ್ರಾಯೋಗಿಕ ಪರೀಕ್ಷೆ ನಡೆಸದೇ, ಇಡೀ ರಾಜ್ಯಕ್ಕೆ ಅನ್ವಯ ಆಗುವಂತೆ ಒಂದೇ ಮಾದರಿಯಲ್ಲಿ ಪರೀಕ್ಷೆ ನಡೆಸಬೇಕು
ಲಿಂಗರಾಜ ಪಾಟೀಲ
ಪ್ರಧಾನ ಕಾರ್ಯದರ್ಶಿ, ಬಿಜೆಪಿ ಜಿಲ್ಲಾ ಘಟಕ



KCET AGRICULTURE PRACTICAL EXAM ANALYSIS 17 CENTERS

S.NO	Name of University /College	Total Number of students	200/200	196	192	188	184	180	176	172	170+ TOTAL
1	College of Agriculture, GKVK Bangalore	2234	1	10	24	44	75	98	123	150	525
2	College of Agriculture, Mandya	1182	5	—	1	2	3	2	11	16	40
3	College of Agriculture,Hassan	1180	—	—	1	2	1	4	10	21	39
4	College of Agriculture, Dharwad	2914	2	14	34	136	99	146	183	213	827
5	College of Agriculture, Vijayapura	2496	—	1	7	18	36	81	112	143	398
6	College of Agriculture, Raichur	1533	0	3	10	36	42	48	63	66	268
7	College of Agriculture, Kalburgi (Gulbarga)	1265	3	8	12	27	17	44	43	49	203
8	College of Agriculture, Shivamogga	2175	—	—	—	1	5	4	7	14	31
9	College of Horticulture, Chitradurga, Hiriyur	2143	74	190	238	243	213	181	188	135	1462
10	Veterinary College, Bidar	752	—	—	—	—	—	—	1	2	3
11	Veterinary College, Hebbal, Bengaluru	112	—	—	1	2	6	2	3	7	21
12	College of Fisheries, Mangaluru	148	—	1	1	—	—	2	5	5	14
13	College of Horticulture, Bagalkot	987	9	29	20	33	46	45	44	62	288
14	College of Horticulture, Mysuru	964	0	0	1	3	0	3	3	13	23
15	College of Horticulture,Munirabad, Koppal	1698	0	3	13	25	25	40	73	92	271
16	College of Horticulture, Arabhavi, Gokak	1509	0	0	7	9	10	18	33	45	122
17	College of Horticulture, Kolar	1062	1	13	26	39	53	65	70	68	335
	OVERALL ANALYSIS	STUDENTS	200/200	196/200	192/200	188/200	184/200	180/200	176/200	172/200	170+
	RESULTS OF ALL 17 CENTERS	24354	95	272	396	620	631	783	972	1101	4870
	HIRIYUR CENTRE	2143	74	190	238	243	213	181	188	135	1462
	16 CENTERS EXCEPT HIRIYUR	22211	21	82	158	377	418	602	784	966	3408

ಲಿಂಗರಾಜ ಪಾಟೀಲ ಅವರು ಬಿಡುಗಡೆ ಮಾಡಿದ ಫಲಿತಾಂಶ ಹೋಲಿಕೆಯ ಪಟ್ಟಿ.

‘ಸಮಗ್ರ ವರದಿ ಶೀಘ್ರ ಸಲ್ಲಿಕೆ’

‘ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ವ್ಯವಸ್ಥಿತವಾಗಿ ನಡೆಸುವುದು ಆಯಾ ಕಾಲೇಜುಗಳ ಡೀನ್‌ಗಳ ಜವಾಬ್ದಾರಿ. ಹಿರಿಯೂರು ಕಾಲೇಜಿನಲ್ಲಿ ಪರೀಕ್ಷೆ ನಡೆಸುವ ಸಂಬಂಧ ಯಾವುದೇ ಲೋಪ ಆಗಿಲ್ಲ’ ಎಂದು ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವ ಡಾ. ಜಹಗೀರ್‌ದಾರ್ ತಿಳಿಸಿದ್ದಾರೆ.

‘ರಾಜ್ಯದ ಇತರೆ ಕೇಂದ್ರಗಳಿಗೆ ಹೋಲಿಸಿದರೆ, ಇಲ್ಲಿ ಪರೀಕ್ಷೆಗೆ ಹಾಜರಾದವರು ಅತಿಹೆಚ್ಚು ಅಂಕಗಳಿಸಿದ್ದು, ಅಕ್ರಮ ನಡೆದಿದೆ ಎಂಬ ಶಂಕೆ ವಿದ್ಯಾರ್ಥಿಗಳಿಂದ ವ್ಯಕ್ತವಾಗಿದೆ. ಈ ಕಾರಣದಿಂದ ಐವರು ತಜ್ಞರ ಸಮಿತಿ ಸಮಗ್ರವಾಗಿ ತನಿಖೆ ನಡೆಸಲಿದ್ದು, ವರದಿಯನ್ನು ಕುಲಪತಿ, ಸರ್ಕಾರಕ್ಕೆ ಸಲ್ಲಿಸಲಿದೆ’ ಎಂದರು.

ಹಂಪಿಯ ಆನೆಲಾಯ ಪ್ರದೇಶದ ಬಳಿ ಉತ್ಖನನ ವೇಳೆ ಕಂಡುಬಂದಿರುವ ದೇವಾಲಯದ ಶಿಖರ –ಪ್ರಜಾವಾಣಿ ಚಿತ್ರ

ಪುರಾತನ ದೇಗುಲದ ಶಿಖರ ಪತ್ತೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿಯ ಆನೆಲಾಯ (ಗಜಶಾಲೆ) ಪ್ರದೇಶದ ಬಳಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ನಡೆಸುತ್ತಿರುವ ಉತ್ಖನನದ ವೇಳೆ ಪ್ರಾಚೀನ ದೇವಾಲಯವೊಂದರ ಶಿಖರ ಪತ್ತೆಯಾಗಿದೆ.

‘ಇದು ವಿಷ್ಣು ಇಲ್ಲವೇ ಜೈನ ದೇವ ಸ್ಥಾನವಾಗಿದ್ದು, 4.30 ಮೀಟರ್ ಉದ್ದ ಮತ್ತು 4.25 ಮೀಟರ್ ಅಗಲವಿದೆ. ಸದ್ಯ ಶಿಖರ ಮತ್ತು ಗರ್ಭಗೃಹ ಇರುವುದು ಗೊತ್ತಾಗಿದೆ. ಪೂರ್ಣ ಚಿತ್ರಣ ಸಿಗಲು ಎರಡು ತಿಂಗಳು ಬೇಕಾಗಬಹುದು’ ಎಂದು ಎಎಸ್‌ಐ ಅಧಿಕಾರಿಯೊಬ್ಬರು ತಿಳಿಸಿದರು.

‘ವಿಜಯನಗರ ಕಾಲಕ್ಕೂ ಹಿಂದೆ ನಿರ್ಮಾಣಗೊಂಡ ದೇಗುಲ ಇದಾಗಿರಬಹುದು. ಏಕೆಂದರೆ ವಿಜಯನಗರ ಕಾಲದ ದೇವಾಲಯಗಳು ಗಾತ್ರದಲ್ಲಿ ದೊಡ್ಡದಿವೆ. ಇದು ಚಿಕ್ಕದಿದೆ’ ಎಂದರು.

‘ಹಂಪಿ ಅಗಾಧ ಅಚ್ಚರಿಗಳ ತಾಣ. ಇಲ್ಲಿ ಇನ್ನೆಷ್ಟು ಕೌತುಕಗಳಿವೆಯೊ?’ ಎಂದು ರಾಜ್ಯ ಪ್ರವಾಸಿ ಮಾರ್ಗದರ್ಶಿಗಳ ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಿ ವಿ.ಹಂಪಿ ಅವರುಹೇಳಿದರು.

ಮುಳುಗಡೆಯಾಗಿದ್ದ ದೇಗುಲ ಗೋಚರ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಕೃಷ್ಣರಾಜಸಾಗರ ಅಣೆಕಟ್ಟೆಯ ನೀರಿನ ಮಟ್ಟ 88 ಅಡಿಗೆ ಇಳಿದಿದ್ದು, ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ನಾರಾಯಣಸ್ವಾಮಿ ದೇಗುಲ 3 ವರ್ಷಗಳ ನಂತರ ಮತ್ತೆ ಸಂಪೂರ್ಣವಾಗಿ ಗೋಚರಿಸುತ್ತಿದೆ.

ಜಲಾಶಯದ ಬೋರೆ ಆನಂದೂರು ಸಮೀಪ ಈ ಹಿಂದೆ ದೇಗುಲ ಕಾಣಿಸಿತ್ತು. ಕಗ್ಗಲಿ ಅರಣ್ಯ ವಲಯದ ಪಕ್ಕದ ಹಿನ್ನೀರಿನ ಬಳಿ ಈರಣ್ಣ, ಸೂರಣ್ಣ ಹೆಸರಿನ ಮೂರ್ತಿಗಳು ಕಾಣಿಸುತ್ತಿವೆ. ಹಳೆಗನ್ನಡದ ಬರಹವಿದ್ದು, ನೀರಿನಲ್ಲಿ ಮುಳುಗಿದ್ದರಿಂದ ಮಸುಕಾಗಿದೆ ಎನ್ನಲಾಗಿದೆ.

ಅಣೆಕಟ್ಟೆಯ ನಿರ್ಮಾಣ ಸಂದರ್ಭದಲ್ಲಿ ನೂರು ವರ್ಷಗಳ ಹಿಂದೆಯೇ ಮೂರ್ತಿಯನ್ನು ಸ್ಥಳಾಂತರಿಸಲಾಗಿತ್ತು. ಉಳಿದಿದ್ದ ಗೋಪುರ ಮತ್ತು ದೇವಸ್ಥಾನ ಕಂಬಗಳು ಈಗ ಕಾಣಿಸಿಕೊಂಡಿವೆ. ದೇಗುಲವು ಸುತ್ತಮುತ್ತಲಿನ ಹತ್ತು ಗ್ರಾಮಗಳ ಮನೆ ದೇವರು. ಮಜ್ಜಿಗೆರ ಗ್ರಾಮದಲ್ಲಿ ದೇಗುಲ ನಿರ್ಮಾಣವಾಗಿದ್ದು, ಮೂಲಮೂರ್ತಿಗೆ ನಿತ್ಯ ಪೂಜೆ ನಡೆಯುತ್ತಿದೆ.

ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ನಾರಾಯಣಸ್ವಾಮಿ ದೇಗುಲ

ಮೂಡಿಗೆರೆ – ಚಿಕ್ಕಮಗಳೂರು ಹೆದ್ದಾರಿಗೆ ಉರುಳಿದ ಮರ, ವಾಹನ ಸಂಚಾರ ವ್ಯತ್ಯಯ

ಚಿಕ್ಕಮಗಳೂರು, ಮೈಸೂರು ಭಾಗದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದಲ್ಲಿ ಶನಿವಾರ ಮಧ್ಯಾಹ್ನ ಅರ್ಧಗಂಟೆಗೂ ಹೆಚ್ಚುಕಾಲ ಗುಡುಗು, ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ.

ಚಿಕ್ಕಮಗಳೂರು– ಮೂಡಿಗೆರೆ ಹೆದ್ದಾರಿಯ ಕೆಳಗೂರು ಸಮೀಪ ಮರ ಧರೆಗುರುಳಿ ಹೆದ್ದಾರಿ ಸಂಚಾರ ಕೆಲ ಗಂಟೆ ಬಂದ್ ಆಗಿತ್ತು. ಕೆಳಗೂರು ಬಳಿ ವಾಹನಗಳು ಸಾಲುಗಟ್ಟಿದ್ದವು.

ಮೂಡಿಗೆರೆ, ಧರ್ಮಸ್ಥಳ, ಉಜಿರೆ, ಮಂಗಳೂರು ಪ್ರಯಾಣಿಕರು ಪರದಾಡಿದರು. ನಂತರ ಆಲ್ದೂರು ಮಾರ್ಗವಾಗಿ ವಾಹನಗಳನ್ನು ಬಿಡಲಾಯಿತು. ಕಡೂರು ಪಟ್ಟಣದಲ್ಲಿಯೂ ಬಿರುಗಾಳಿ ಸಹಿತ ಉತ್ತಮ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲ್ಲೂಕಿನ ಮಾರೂರಿನ ಮೇಲಂದಗುಡ್ಡೆಯಲ್ಲಿ ಮನೆಗೆ ಸಿಡಿಲು ಬಡಿದು ಜಯಂತ್ ಮತ್ತು ಕವಿತಾ ಗಾಯಗೊಂಡಿದ್ದಾರೆ.

ಸಿಡಿಲು ಬಡಿದು ಮಹಿಳೆ ಸಾವು (ಮೈಸೂರು ವರದಿ): ಮೈಸೂರು ಮತ್ತು ಹಾಸನ ಜಿಲ್ಲೆಯಲ್ಲಿ ಶುಕ್ರವಾರ ಮಧ್ಯರಾತ್ರಿ ಹಾಗೂ ಶನಿವಾರ ಜೋರು ಮಳೆಯಾಯಿತು.

ಪಿರಿಯಾಪಟ್ಟಣ ತಾಲ್ಲೂಕಿನ ಸತ್ಯಗಾಲದಲ್ಲಿ ಸಿಡಿಲು ಬಡಿದು ವಿನೋದಾ (44) ಮೃತಪಟ್ಟಿದ್ದು, ಎರಡು ಹಸುಗಳು ಮೃತಪಟ್ಟವು. ಬಾಳೆ, ತೆಂಗು ಬೆಳೆಗೆ ಹಾನಿಯಾಗಿದೆ.

ಮೈಸೂರು ತಾಲ್ಲೂಕಿನ ದೂರ ಗ್ರಾಮದಲ್ಲಿ 5 ಸೆಂ.ಮೀ. ಮಳೆಯಾಗಿದೆ. ಪೊಲೀಸ್ ಬಡಾವಣೆಯಲ್ಲಿ 100ಕ್ಕೂ ಹೆಚ್ಚು ಮರಗಳು ಧರೆಗೆ ಉರುಳಿದವು.

ಹಾಸನ ಜಿಲ್ಲೆಯ ಹಿರೀಸಾವೆ ಹೋಬಳಿಯ ದಿಡಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಶುಕ್ರವಾರ ರಾತ್ರಿ ಬೀಸಿದ ಬಿರುಗಾಳಿಗೆ ಮನೆ ಚಾವಣಿಯ ಶೀಟ್‌ಗಳು ಹಾರಿಹೋಗಿವೆ. 20 ವಿದ್ಯುತ್ ಕಂಬಗಳು, 60ಕ್ಕೂ ಹೆಚ್ಚು ತೆಂಗಿನ ಮರಗಳು ನೆಲಕಚ್ಚಿವೆ.

ಬಾಳೆ ಬೆಳೆ ಹಾನಿ (ಕೊಪ್ಪಳ ವರದಿ): ಕೊಪ್ಪಳ ನಗರ, ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಶುಕ್ರವಾರ ಬೀಸಿದ ಜೋರು ಗಾಳಿ ಹಾಗೂ ಮಳೆಯಿಂದಾಗಿ ಬಾಳೆ ಬೆಳೆ ನೆಲಕ್ಕುರುಳಿದೆ.

ತಾಲ್ಲೂಕಿನ ಹ್ಯಾಟಿ ಮತ್ತು ಮೆಳ್ಳಿಕೇರಿ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಮರಗಳು ಧರೆಗುರುಳಿವೆ. ಮೆಳ್ಳಿಕೇರಿ ಗ್ರಾಮದಲ್ಲಿ ಎರಡು ಎಕರೆ ಬಾಳೆ ಬೆಳೆ ನಾಶವಾಗಿದೆ. ಆದರೆ, ಬಿರುಬಿಸಿಲಿನಿಂದ ಬಸವಳಿದಿದ್ದ ಜನರಿಗೆ ಮಳೆ ತಂಪು ನೀಡಿತು.

ಚಿಕ್ಕಮಗಳೂರು–ಮೂಡಿಗೆರೆ ಹೆದ್ದಾರಿಯ ಕೆಳಗೂರು ಬಳಿ ಮರ ರಸ್ತೆಗೆ ಉರುಳಿದ್ದರಿಂದ ಸಾಲುಗಟ್ಟಿನಿಂತಿದ್ದ ವಾಹನಗಳು

ಎಸ್‌ಎಸ್‌ಎಲ್‌ಸಿ ಅನಘಾ ಪ್ರಥಮ

ತೀರ್ಥಹಳ್ಳಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದ ಇಲ್ಲಿನ ವಾಗ್ದೇವಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಕೆ.ಎಸ್. ಅನಘಾ ಅವರು ಮರು ಮೌಲ್ಯ ಮಾಪನದಲ್ಲಿ 625 ಅಂಕ ಪಡೆದಿದ್ದು, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಕೊಂಡಿದ್ದಾರೆ.

ಅನಘಾ ಸಮಾಜ ವಿಜ್ಞಾನ ವಿಷಯದಲ್ಲಿ 99 ಅಂಕ ಗಳಿಸಿದ್ದರು. ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕಿದ್ದರು. ಈಗ ಈ ವಿಷಯದಲ್ಲೂ 100 ಅಂಕ ಬಂದಿವೆ. ಅನಘಾ ಅವರು ಮೇಲಿನ ಕಡಗೋಡು ಗ್ರಾಮದ ಶಿಕ್ಷಕ ಶಿವಕುಮಾರ ಕೆ.ಎಂ. ಮತ್ತು ಮಂಗಳಾ ಬಿ. ದಂಪತಿಯ ಪುತ್ರಿ.

ಅನಘಾ ಕೆ.ಎಸ್.

ಕಾರು ಅಡ್ಡಗಟ್ಟಿ ₹27 ಲಕ್ಷ ಸುಲಿಗೆ

ಮದ್ದೂರು (ಮಂಡ್ಯ ಜಿಲ್ಲೆ): ನಗರದ ಹೊರವಲಯದಲ್ಲಿ ಶುಕ್ರವಾರ ರಾತ್ರಿ ದುಷ್ಕರ್ಮಿಗಳ ಗುಂಪು ಕಾರನ್ನು ಅಡ್ಡಗಟ್ಟಿ ₹27 ಲಕ್ಷ ಹಣವನ್ನು ಸುಲಿಗೆ ಮಾಡಿ ಪರಾರಿಯಾಗಿದೆ.

ಮೈಸೂರಿನ ಹಿಟಾಚಿ ಸಂಸ್ಥೆಯ ಹಣವನ್ನು ಗೋವಿಂದರಾಜು ಅವರು ಐ–20 ಕಾರಿನಲ್ಲಿ ಬೆಂಗಳೂರಿನ ಕೇಂದ್ರ ಕಚೇರಿಗೆ ಕೊಂಡೊಯ್ಯುತ್ತಿದ್ದರು. ಮೈಸೂರಿನಿಂದಲೇ ಅವರನ್ನು ಹಿಂಬಾಲಿಸಿದ್ದ ಗುಂಪು ಮದ್ದೂರು ನಗರದ ಮೈಸೂರು– ಬೆಂಗಳೂರು ಹೆದ್ದಾರಿಯ ಐಶ್ವರ್ಯ ಶಾಲೆ ಬಳಿ ಅಡ್ಡಗಟ್ಟಿತು. ಮಾರಕಾಸ್ತ್ರಗಳಿಂದ ಬೆದರಿಸಿ ಹಣ ಕಸಿದುಕೊಂಡಿತು. ನಂತರ ಅವರು ಪೊಲೀಸರಿಗೆ ಮಾಹಿತಿ ನೀಡಿದರು.

ಮೈಸೂರಿನಲ್ಲಿ ಶುಕ್ರವಾರ ರಾತ್ರಿ ಕಂಡ ಕೋಲ್ಮಿಂಚು...
ಚಿತ್ರ: ಅನೂಪ್ ರಾಘ ಟಿ.

ಪಂಚಮಸಾಲಿ ಪೀಠಕ್ಕೆ ನೋಟಿಸ್

ದಾವಣಗೆರೆ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪದಚ್ಯುತ ಪೀಠಾಧಿಪತಿ ವಚನಾನಂದ ಶ್ರೀ ಅವರು ಮಸಾಜ್‌ಗೆ ವಿದ್ಯಾರ್ಥಿಗಳನ್ನು ಬಳಸಿಕೊಂಡ ಆರೋಪ ಕುರಿತು ಮಾಹಿತಿ ನೀಡುವಂತೆ ಪೀಠದ ಧರ್ಮದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನೋಟಿಸ್ ನೀಡಿದೆ.

‘ಶ್ರೀಗಳಿಂದ ಮಸಾಜ್‌ಗೆ ವಿದ್ಯಾರ್ಥಿಗಳ ಬಳಕೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಏ.15ರಂದು ವರದಿ ಪ್ರಕಟವಾಗಿದೆ. ಪೀಠದಲ್ಲಿ 5 ವರ್ಷಗಳಿಂದ ದಾಖಲಾದ ಮಕ್ಕಳ ವಿವರ ಸಲ್ಲಿಸಿ’ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನೋಟಿಸ್‌ನಲ್ಲಿ ತಿಳಿಸಿದ್ದಾರೆ. ನೋಟಿಸ್ ನೀಡಿ ಎರಡು ವಾರ ಕಳೆದಿದೆ. ಇದುವರೆಗೂ ಉತ್ತರ ಬಂದಿಲ್ಲ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ ಟಿ.ಎನ್. ತಿಳಿಸಿದರು.

ಪ್ರಯಾಣಿಕನ ಬ್ಯಾಗ್‌ನಲ್ಲಿ 47 ಜೀವಂತ ಪ್ರಾಣಿಗಳು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಜೀವಂತ ಪ್ರಾಣಿಗಳನ್ನು ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪಿಯನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದು, 47 ವಿವಿಧ ಜೀವಿಗಳನ್ನು ರಕ್ಷಿಸಿದ್ದಾರೆ.

ಪ್ರಯಾಣಿಕನ ಬ್ಯಾಗ್ ತಪಾಸಣೆ ವೇಳೆ 47 ಅಪರೂಪದ ಜೀವಿಗಳು ಪತ್ತೆಯಾಗಿವೆ. ಕೆಂಪು ಕಾಲಿನ ಆಮೆ (ರೆಡ್–ಫುಟೆಡ್ ಟಾರ್ಟಾಯಿಸ್), ಸುಲ್ಕಾಟಾ ಆಮೆ (ಆಫ್ರಿಕನ್ ಸ್ಪರ್ಡ್ ಟಾರ್ಟಾಯಿಸ್), ಅರ್ಜೆಂಟೈನ್ ಬ್ಲ್ಯಾಕ್ ಅಂಡ್ ವೈಟ್ ಟೆಗು(ಹಲ್ಲಿ) ಹಾಗೂ ಗೋಲ್ಡೀಸ್ ಮಾರ್ಮೊಸೆಟ್ (ಅಪರೂಪದ ಕೋತಿ) ಬ್ಯಾಗ್‌ನಲ್ಲಿದ್ದವು.

ಕಸ್ಟಮ್ಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಮುಂದಿನ ಕ್ರಮಕ್ಕಾಗಿ ಪ್ರಯಾಣಿಕ ಮತ್ತು ವನ್ಯಜೀವಿಗಳನ್ನು ಬೆಂಗಳೂರು ಗ್ರಾಮಾಂತರ ವಿಭಾಗದ ಅರಣ್ಯ ವ್ಯಾಪ್ತಿ ಅಧಿಕಾರಿ (ಆರ್‌ಎಫ್‌ಒ) ಅವರಿಗೆ ಒಪ್ಪಿಸಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡ ಆಮೆಗಳು

'ಬಿಂದು'ವಿನ ಹೊಸ ಉತ್ಪನ್ನಗಳು: ಸಿಪ್ಪೋನ್ ಟೆಂಡರ್ ಕೋಕೊನಟ್ ವಾಟರ್ ಮತ್ತು ಸಿಪ್ಪೋನ್ ಲೆಮನ್ ಡ್ರಿಂಕ್ ನೈಸರ್ಗಿಕ ಸವಿಯ ಸಿಂಚನ

ಕರ್ನಾಟಕದ ಹೆಮ್ಮೆಯ 'ಬಿಂದು' ಸಂಸ್ಥೆಯು ಇದೀಗ ಎರಡು ಹೊಸ ಉತ್ಪನ್ನಗಳೊಂದಿಗೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. SIPON Tender Coconut Water ಮತ್ತು SIPON Lemon Drink. ಈ ಎರಡೂ ಪಾನೀಯಗಳು ನೈಸರ್ಗಿಕ ಪದಾರ್ಥಗಳಿಂದ ತಯಾರಿಸಲ್ಪಟ್ಟಿದ್ದು, ಆರೋಗ್ಯ ಮತ್ತು ರುಚಿಯ ಪರಿಪೂರ್ಣ ಮಿಶ್ರಣವನ್ನು ನೀಡುತ್ತವೆ.

SIPON Tender Coconut Water: ‘ಗೆಂದಾಳಿ’ಯ ಸಿಹಿ ಮತ್ತು ಆರೋಗ್ಯದ ರಹಸ್ಯ ಏನೆಂದರೆ, ದಕ್ಷಿಣ ಕನ್ನಡದ ಫಲವತ್ತಾದ ಮಣ್ಣಿನಲ್ಲಿ ಹೇರಳವಾಗಿ ಬೆಳೆಯುವ ‘ಆರೆಂಜ್ ಕಿಂಗ್ ಕೋಕೊನಟ್’ ಅಥವಾ ಸ್ಥಳೀಯವಾಗಿ ‘ಗೆಂದಾಳಿ’ ಎಂದು ಕರೆಯಲ್ಪಡುವ ವಿಶೇಷ ತೆಂಗಿನಕಾಯಿಯಿಂದ ತಯಾರಿಸಲಾದ SIPON Tender Coconut Water, ಭಾರತದಲ್ಲೇ ಮೊದಲ ಬಾರಿಗೆ ಬಿಂದು ಸಂಸ್ಥೆಯಿಂದ ಪರಿಚಯಿಸಲ್ಪಟ್ಟಿದೆ.

ಈ ಉತ್ಪನ್ನವನ್ನು ಮಾರ್ಚ್ ಮೊದಲ ವಾರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.ನೈಸರ್ಗಿಕ ಪಲ್ಪ್‌ನಿಂದ ಕೂಡಿದ ಈ ಎಳನೀರು, ಔಷಧೀಯ ಗುಣಗಳಿಂದ ಸಮೃದ್ಧವಾಗಿದ್ದು, ಸಣ್ಣ ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಎಲ್ಲರಿಗೂ ಸೂಕ್ತವಾದ ತಂಪು ಪಾನೀಯವಾಗಿದೆ.

ನೈಸರ್ಗಿಕ ಪೋಷಕಾಂಶಗಳ ಆಗರವಾಗಿರುವ ಇದು ದೇಹವನ್ನು ಹೈಡ್ರೇಟ್ ಆಗಿರಿಸುತ್ತದೆ. SIPON Tender Coconut Water ಅಂತರ-ರಾಷ್ಟ್ರೀಯ ಮಾರುಕಟ್ಟೆಯಲ್ಲೂ ಪ್ರಮುಖ ಉತ್ಪನ್ನವಾಗಿ ಹೊರಹೊಮ್ಮಲಿದೆ ಎಂಬ ಆಶಯವನ್ನು ಸಂಸ್ಥೆ ಹೊಂದಿದೆ.

SIPON Lemon Drink: ಬೇಸಿಗೆಯ ಬಿಸಿಲಿಗೆ ತಂಪೆರೆಯುವ ಪಾನೀಯ. ಜನವರಿ ತಿಂಗಳಲ್ಲಿ ಬಿಡುಗಡೆಯಾದ SIPON Lemon Drink, ಬಿಂದು ಉತ್ಪನ್ನಗಳ ಸಾಲಿಗೆ ಹೊಸ ಸೇರ್ಪಡೆ. ನೈಸರ್ಗಿಕ ತಾಜಾ ನಿಂಬೆ ಹಣ್ಣಿನ ಪಲ್ಪ್‌ನಿಂದ ತಯಾರಿಸಲಾದ ಈ ಪಾನೀಯವು ಬೇಸಿಗೆ ಕಾಲಕ್ಕೆ ಹೇಳಿ ಮಾಡಿಸಿದಂತಿದೆ.

ಈ ಪಾನಿಯ ದೇಹಕ್ಕೆ ಉಲ್ಲಾಸವನ್ನು ನೀಡುತ್ತದೆ. ಬಿಸಿಲಿನ ಝಳದ ನಡುವೆ ದೇಹದಲ್ಲಿ ನೀರಿನಂಶವನ್ನು ಕಾಪಾಡಲು ಮತ್ತು ನಿರ್ಜಲೀಕರಣವನ್ನು ತಡೆಯಲು ಇದು ಉತ್ತಮ ಪಾನೀಯ.

ಬಿಂದು ಸಂಸ್ಥೆಯ ಈ ಎರಡೂ ಹೊಸ ಉತ್ಪನ್ನಗಳಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಷ್ಟ್ರವ್ಯಾಪಿ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ಇವು ಹೆಚ್ಚಿನ ಬೇಡಿಕೆಯನ್ನು ಪಡೆದು ಉಳಿದ ಬಿಂದು ಉತ್ಪನ್ನಗಳಂತೆ ಯಶಸ್ಸು ಗಳಿಸುವ ವಿಶ್ವಾಸವನ್ನು ಮಾರುಕಟ್ಟೆ ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Hosur Road, Bengaluru, India-560 029.
Website: http://www.nimhans.ac.in

Ref. No.: NIMH/A&E/EA1/UG/AY 2026-27 Date: 16.05.2026

ADMISSION NOTICE

Online Application are invited for admissions to the following Under Graduate courses for the Academic Year 2026-27:

Sl. No.	Name of the Course	Total Seats	No. of Seats for Institute Supported Category	No. of Seats under Sponsored / Deputed Category
	B.Sc. Courses			
1.	**B.Sc. in Anaesthesia Technology:**	11		
	a. All India Category (UR – 03, OBC – 01)	04	04	-
	b. Karnataka Domicile Category (UR – 05, OBC – 01, SC – 01)	07	07	-
2.	**B.Sc. in Nursing:**	85		
	a. All India Category (UR – 16, EWS – 03, OBC – 09, SC – 05, ST – 02)	35	35	-
	b. Karnataka State Domicile Category (UR – 22, EWS – 05, OBC – 13, SC – 07, ST – 03)	50	50	-
3.	**B.Sc. in Medical Imaging Technology:**	11		
	a. All India Category (UR – 03, OBC – 01,)	04	04	-
	b. Karnataka State Domicile Category (UR – 05, OBC – 01, SC – 01)	07	07	-
4.	**B.Sc. in Clinical Neurophysiology Technology**	07		
	a. All India Category (UR – 02)	02	02	-
	b. Karnataka Domicile Category (UR – 03, OBC – 01)	04	04	-
	c. Sponsored Category	01	-	01
	Certificate Course			
1.	**Certificate Course in Panchakarma**	05*		-
	a. All India Category (UR – 02)	02	02	
	b. Karnataka Domicile Category (UR – 02)	02	02	
	c. Sponsored Category	01		01
	*Each category shall be filled by one male and one female candidate, as per the course requirements.			

The Entrance test will be conducted in Bengaluru city only on 26.07.2026 (Tentative).
Kindly refer to ‘Admission Notification for undergraduate courses of the Academic Year 2026-27’ or ‘UG Prospectus 2026-27’ on the NIMHANS Website for more details http://www.nimhans.ac.in

Sd/-, DIRECTOR

ಸೃಷ್ಟಿ, ಗಂಗಾ ರಾಜ್ಯಕ್ಕೆ ಟಾಪರ್

ವಿಜಯಪುರ: 2025-26ನೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ರ ಮರು ಮೌಲ್ಯಮಾಪನದಲ್ಲಿ ವಿಜಯಪುರ ಜಿಲ್ಲೆಯ ನಾಗರಬೆಟ್ಟ ಆಕ್ಸ್‌ಫರ್ಡ್ ಪಾಟೀಲ ಶಿಕ್ಷಣ ಸಂಸ್ಥೆಯ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿನಿ ಸೃಷ್ಟಿ ಸಿದ್ದನಗೌಡ ಪಾಟೀಲ, ಮೈಲೇಶ್ವರ ಗ್ರಾಮದ ಬ್ರಿಲಿಯಂಟ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಗಂಗಾ ಅಶೋಕ ಕೋಳೂರ 625ಕ್ಕೆ ತಲಾ 625 ಅಂಕ ಪಡೆದು ರಾಜ್ಯಕ್ಕೆ ಟಾಪರ್ ಆಗಿದ್ದಾರೆ. ಈ ಹಿಂದೆ ಇಬ್ಬರು ಕ್ರಮವಾಗಿ 621 ಮತ್ತು 623 ಅಂಕಗಳನ್ನು ಗಳಿಸಿದ್ದರು.

ಸೃಷ್ಟಿ ಪಾಟೀಲ

ಗಂಗಾ ಕೋಳೂರ

ಅನಧಿಕೃತ ಬಡ್ಡಿ ವ್ಯವಹಾರ: ಬಂಧನ

ಒಂದನೇ ಪುಟದಿಂದ...

‘ಈ ವ್ಯಕ್ತಿ ಯಾವ ಬ್ಯಾಂಕುಗಳ ಜತೆಗೆ ವ್ಯವಹಾರ ಮಾಡಿದ್ದಾರೋ ಅವರನ್ನೂ ತನಿಖೆಯಲ್ಲಿ ಪರಿಗಣಿಸಲಾಗುವುದು. ಕೈ ಜೋಡಿಸಿರುವ ಎಲ್ಲ ಆರೋಪಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡುತ್ತೇವೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದರು.

‘ಯಾರು ಎಷ್ಟು ಹಣ ಕೊಡುತ್ತಾರೋ ಅಷ್ಟೇ ಮೊತ್ತದ ಚೆಕ್ ಅನ್ನು ಈ ವ್ಯಕ್ತಿ ನೀಡಿದ್ದಾರೆ. ಈವರೆಗೂ ನಿಯಮಿತವಾಗಿ ಬಡ್ಡಿ ಕೊಟ್ಟಿದ್ದಾರೆ. ಹೀಗಾಗಿ, ಜನರಿಗೆ ಅನುಮಾನ ಬಂದಿಲ್ಲ’ ಎಂದರು.

ರಾತ್ರಿ ಬಂಧನ: ಜಿಲ್ಲಾಧಿಕಾರಿ ನಿರ್ದೇಶನದಂತೆ ಶಿವಂ ಅಸೋಸಿಯೆಟ್ಸ್ ಮೇಲೆ ಗುರುವಾರ ಬೆಳಿಗ್ಗೆಯೇ ದಾಳಿ ಮಾಡಿದ ಉಪವಿಭಾಗಾಧಿಕಾರಿ ಶ್ರವಣ ನಾಯಕ್ ಅವರ ತಂಡ 24 ತಾಸು ಪರಿಶೀಲಿಸಿತು. ಶುಕ್ರವಾರ ರಾತ್ರಿ 10ರ ಸುಮಾರಿಗೆ ಎಫ್‌ಐಆರ್ ದಾಖಲಿಸಿ, ನೀಲಣ್ಣವರ ಅವರನ್ನು ಬಂಧಿಸಲಾಯಿತು.

ಕಡೂರಿನಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಶಿವಾನಂದ ಆಡಿದ ಮಾತುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ‘ದೊಡ್ಡ ಸಾಮ್ರಾಜ್ಯ ಕಟ್ಟಿದ್ದೇನೆ. ಯಾರಿಗೂ ಹೆದರುವುದಿಲ್ಲ. ನನ್ನ ಬಳಿ 15 ಸಾವಿರ ಬಂದೂಕುಗಳಿವೆ. ಬೇಕಾದರೆ ನಾನು 2028ಕ್ಕೆ ಸಿ.ಎಂ ಆಗಿ ತೋರಿಸಲೇನು’ ಎಂದೆಲ್ಲ ಹೇಳಿಕೊಂಡಿದ್ದರು.

ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ಸತ್ಯವೋ ಸುಳ್ಳೋ ಗೊತ್ತಿಲ್ಲ. ಎಲ್ಲರಿಗೂ ಖುಷಿ ಸಿಗಲಿ. ಜನತೆಗೆ ಒಳ್ಳೆಯದಾಗಲಿ. ಓಂ ನಮಃ ಶಿವಾಯ
ಶಿವಾನಂದ ನೀಲಣ್ಣವರ, ಸಂಸ್ಥಾಪಕ, ಶಿವಂ ಅಸೋಸಿಯೇಟ್ಸ್

ಜಿಲ್ಲೆಯಲ್ಲಿ ಇನ್ನೂ ಹಲವು ಆರ್ಥಿಕ ಅಪರಾಧ ಚಟುವಟಿಕೆಗಳು ಕಂಡುಬಂದಿವೆ. ‘ಕೆಪಿಐಡಿ– ಬಡ್ಸ್ ಆ್ಯಕ್ಟ್’ ಅಡಿಯ ತನಿಖಾ ಶಾಖೆ ಇದೆಲ್ಲವನ್ನೂ ಬಯಲಿಗೆಳೆಯಲಿದೆ
ಮೊಹಮ್ಮದ್ ರೋಷನ್
ಜಿಲ್ಲಾಧಿಕಾರಿ

*ನಿಯಮ ಮತ್ತು ಷರತ್ತುಗಳು ಅನ್ವಯವಾಗುತ್ತವೆ. ಉತ್ಪನ್ನದ ಚಿತ್ರಗಳು ಪ್ರತಿನಿಧೀಕರಣದ ಉದ್ದೇಶಗಳಿಗಾಗಿ ಮಾತ್ರ ಆಗಿವೆ ಮತ್ತು ವಾಸ್ತವಿಕ ಬಣ್ಣಗಳು/ಗಾತ್ರಗಳಲ್ಲಿ ವ್ಯತ್ಯಾಸವಿರಬಹುದು. #HEXACHILL Technology™ ಬಜಾಜ್ ಇಲೆಕ್ಟ್ರಿಕಲ್ಸ್ ಲಿಮಿಟೆಡ್ ಇವರ ಒಂದು ಟ್ರೇಡ್‌ಮಾರ್ಕ್ ಆಗಿದೆ.
~ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಭೇಟಿ ನೀಡಿರಿ : www.bajajelectricals.com/terms-and-conditions/2026
www.bajajelectricals.com | +91 70399 20000 | Free Home Service*: 022 4128 0000 | consumercare@bajajelectricals.com

ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸುವ ಬದಲು ಕೇಂದ್ರ, ರಾಜ್ಯ ಸರ್ಕಾರಗಳು ತೆರಿಗೆ ಕಡಿತ ಮಾಡಬಹುದಿತ್ತಲ್ಲವೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1590)
ಸೋಯಾ (ರಿಫೈನ್ಡ್)	₹1485 (1485)
ಸೂರ್ಯಕಾಂತಿ (ರಿಫೈನ್ಡ್)	₹1635 (1630)
ಪಾಮೋಲಿನ್	₹1475 (1475)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹595
	12 ಕ್ಕೆ	₹86
ಮೈಸೂರು:	100 ಕ್ಕೆ	₹602

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-699
ದ್ವಿತಳಿ (ಬಿ.ವಿ)	₹450-844

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹256.50
ಆರ್‌ಎಸ್‌ಎಸ್-5	₹250
ಗುಡ್ ಲಾಟ್	₹217

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23250
ಎಸಿ	₹14000
ಆರ್‌ಪಿ	₹18300
ಆರ್‌ಸಿ	₹9850

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32500-33000
ಬಂಟ್ವಾಳ	₹9000-10000
ಹಿರಿಯೂರು	₹11000-20000

ಬೆಂಗಳೂರು: ಮನೆ ಮಾರಾಟ ಜಿಗಿತ

ದೇಶದ ಪ್ರಮುಖ 8 ನಗರಗಳಲ್ಲಿ ಮಾರ್ಚ್ ತ್ರೈಮಾಸಿಕದಲ್ಲಿ 95,973 ಮನೆ ಮಾರಾಟ: ಪ್ರಾಪ್ ಟೈಗರ್ ವರದಿ

ನವದೆಹಲಿ (ಪಿಟಿಐ): ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಪ್ರಮುಖ ಎಂಟು ನಗರಗಳಲ್ಲಿ ಮನೆಗಳ ಮಾರಾಟ ಶೇ 2ರಷ್ಟು ಇಳಿಕೆ ಆಗಿದೆ. ಆದರೆ, ಇದೇ ಅವಧಿಯಲ್ಲಿ ಬೆಂಗಳೂರಿನಲ್ಲಿ ಮನೆಗಳ ಮಾರಾಟ ಶೇ 33ರಷ್ಟು ಹೆಚ್ಚಳವಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಪ್ರಾಪ್ ಟೈಗರ್ ಸಿದ್ಧಪಡಿಸಿದ ವರದಿ ಹೇಳಿದೆ.

ಕಳೆದ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಈ ನಗರಗಳಲ್ಲಿ ಒಟ್ಟು 98,095 ಮನೆಗಳು ಮಾರಾಟವಾಗಿದ್ದವು. ಆದರೆ, ಈ ಬಾರಿ 95,973 ಮನೆಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಮನೆಗಳಿಗೆ ಬೇಡಿಕೆ ಇಳಿಕೆ ಆಗಿರುವುದು ಮತ್ತು ಕಡಿಮೆ ಬೆಲೆಯ ಹೊಸ ಮನೆಗಳ ಪೂರೈಕೆಯಲ್ಲಿ ಇಳಿಕೆ ಆಗಿರುವುದರಿಂದ ಮನೆ ಮಾರಾಟ ಕಡಿಮೆ ಆಗಿದೆ ಎಂದು ತಿಳಿಸಿದೆ.

ಉದ್ಯೋಗ ಅವಕಾಶಗಳು, ಮೂಲಸೌಕರ್ಯದ ಸುಧಾರಣೆ ಮತ್ತು ಜನರ ಜೀವನಶೈಲಿಯು ಬೆಂಗಳೂರಿನಲ್ಲಿ ಮನೆಗಳಿಗೆ ಬೇಡಿಕೆ ಹೆಚ್ಚಿರಲು ಕಾರಣವಾಗಿದೆ

ಭರತ್ ಕುಮಾರ್ ಕಂದುಕುರಿ, ಸುಮಧುರ ಸಮೂಹದ ನಿರ್ದೇಶಕ

ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ–ಎನ್‌ಸಿಆರ್, ಹೈದರಾಬಾದ್, ಕೋಲ್ಕತ್ತ, ಎಂಎಂಆರ್ (ಮುಂಬೈ, ನವಿ ಮುಂಬೈ ಮತ್ತು ಥಾಣೆ) ಮತ್ತು ಪುಣೆ ಎಂಟು ಪ್ರಮುಖ ನಗರಗಳಾಗಿವೆ.

ಬೆಂಗಳೂರಿನಲ್ಲಿ ಕಳೆದ ವರ್ಷದ ಇದೇ ಅವಧಿಯಲ್ಲಿ 11,731 ಮನೆಗಳು ಮಾರಾಟವಾಗಿದ್ದರೆ, ಈ ಬಾರಿ 15,603 ಮನೆಗಳು ಮಾರಾಟವಾಗಿದ್ದು, ಶೇ 33ರಷ್ಟು ಏರಿಕೆ ದಾಖಲಿಸಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಹೊಸ ಮನೆಗಳ ಪೂರೈಕೆ (15,806) ಮತ್ತು ಮಾರಾಟವು (15,603) ಸಮಾನ ಮಟ್ಟದಲ್ಲಿದೆ ಎಂದು ಹೇಳಿದೆ.

ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿಸಿಸಿ) ಮತ್ತು ನವೋದ್ಯಮಗಳು ಉದ್ಯೋಗ ಸೃಷ್ಟಿಯ ಎಂಜಿನ್‌ಗಳಾಗಿ ಮುಂದುವರಿದಿವೆ. ಇದು ಬೆಂಗಳೂರಿನಲ್ಲಿ ಮನೆಗಳಿಗೆ ಬೇಡಿಕೆ ಹೆಚ್ಚಳಕ್ಕೆ ಒಂದು ಕಾರಣವಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಚೆನ್ನೈನಲ್ಲಿ 4,774 ಮನೆಗಳು ಮಾರಾಟವಾಗಿದ್ದರೆ, ಈ ಬಾರಿ 6,841 ಮನೆ ಮಾರಾಟವಾಗಿವೆ. ಹೈದರಾಬಾದ್‌ನಲ್ಲಿ ಮನೆ ಮಾರಾಟ ಶೇ 25ರಷ್ಟು ಹೆಚ್ಚಳವಾಗಿದ್ದು, 13,297 ಮಾರಾಟವಾಗಿವೆ. ದೆಹಲಿ ಎನ್‌ಸಿಆರ್‌ನಲ್ಲಿ 9,447 ಮನೆ ಮಾರಾಟವಾಗಿದ್ದು, ಶೇ 11ರಷ್ಟು ಏರಿಕೆ ಕಂಡಿದೆ.

ಆದರೆ, ಮನೆಗಳ ಮಾರಾಟವು ಎಂಎಂಆರ್ ಶೇ 15, ಪುಣೆ ಶೇ 21, ಕೋಲ್ಕತ್ತ ಶೇ 24 ಮತ್ತು ಅಹಮದಾಬಾದ್‌ನಲ್ಲಿ ಶೇ 23ರಷ್ಟು ಇಳಿದಿದೆ. ಎಂಟೂ ನಗರಗಳಲ್ಲಿ ವರ್ಷದಿಂದ ವರ್ಷಕ್ಕೆ ಮನೆಗಳ ಬೆಲೆಯಲ್ಲಿ ಏರಿಕೆ ಆಗಿದೆ ಎಂದು ಹೇಳಿದೆ.

‘ಜಿಸಿಸಿಗಳು, ನವೋದ್ಯಮಗಳು, ಡೀಪ್–ಟೆಕ್ ಕಂಪನಿಗಳು ಹಾಗೂ ಜಾಗತಿಕ ನಾವೀನ್ಯ ಕೇಂದ್ರಗಳ ವಿಸ್ತರಣೆಯು ಹೆಚ್ಚು ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ. ಇದು ವಸತಿ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಉಂಟು ಮಾಡಿದೆ’ ಎಂದು ಬೆಂಗಳೂರು ಮೂಲದ ರಿಯಲ್ ಎಸ್ಟೇಟ್ ಕಂಪನಿ ‘ಸಂಜೀವಿನಿ ಸಮೂಹ’ದ ಅಧ್ಯಕ್ಷ ಉಮೇಶ್ ಗೌಡ ಎಚ್.ಎ ಹೇಳಿದ್ದಾರೆ.

ಸುದ್ದಿ 2 ನಿಮಿಷ

‘ಟಿಸಿಎಸ್: ಅತಿದೊಡ್ಡ ಎ.ಐ. ತಂತ್ರಜ್ಞಾನ ಕಂಪನಿ ಗುರಿ’

ನವದೆಹಲಿ (ಪಿಟಿಐ): ‘ದೇಶದ ಅತಿದೊಡ್ಡ ಮಾಹಿತಿ ತಂತ್ರಜ್ಞಾನ ಕಂಪನಿಯಾಗಿರುವ ಟಿಸಿಎಸ್, ಕೃತಕ ಬುದ್ಧಿಮತ್ತೆ ಆಧಾರಿತವಾಗಿ ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಒದಗಿಸುವ ಜಗತ್ತಿನ ಅತಿದೊಡ್ಡ ಕಂಪನಿ ಆಗುವ ಗುರಿಯನ್ನು ಹೊಂದಿದೆ’ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೆ. ಕೃತಿವಾಸನ್ ಹೇಳಿದ್ದಾರೆ.

2025–26ರ ಆರ್ಥಿಕ ವರ್ಷದ ಕಂಪನಿಯ ವಾರ್ಷಿಕ ವರದಿಯಲ್ಲಿ ಷೇರುದಾರರಿಗೆ ಬರೆದ ಪತ್ರದಲ್ಲಿ, ‘ಕೃತಕ ಬುದ್ಧಿಮತ್ತೆ (ಎ.ಐ) ನೀಡುವ ಅವಕಾಶಗಳನ್ನು ಅರಿತುಕೊಳ್ಳಲು, ವಿಶ್ವದ ಅತಿದೊಡ್ಡ ತಂತ್ರಜ್ಞಾನ ಸೇವೆಗಳ ಕಂಪನಿ ಆಗಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದೇವೆ. ಈ ಆಕಾಂಕ್ಷೆಯನ್ನು ಸಾಕಾರಗೊಳಿಸಲು ಮೂಲಸೌಕರ್ಯದಿಂದ ಬುದ್ಧಿಮತ್ತೆಯವರೆಗೆ ಪೂರ್ಣ ಪ್ರಮಾಣದ ಸೇವೆಗಳನ್ನು ಒದಗಿಸುವ ಕಂಪನಿಯಾಗಬೇಕಿದೆ’ ಎಂದು ಕೃತಿವಾಸನ್ ತಿಳಿಸಿದ್ದಾರೆ.

ಕಂಪನಿಯಲ್ಲಿನ ಸಿಬ್ಬಂದಿ ಕೌಶಲವನ್ನು ಹೆಚ್ಚಿಸಲಾಗಿದೆ. 2.70 ಲಕ್ಷಕ್ಕೂ ಹೆಚ್ಚಿನ ಉದ್ಯೋಗಿಗಳು ಸುಧಾರಿತ ಕೃತಕ ಬುದ್ಧಿಮತ್ತೆ ಕೌಶಲವನ್ನು ಹೊಂದಿದವರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಜಾಗತಿಕ ಮಟ್ಟದ ಉದ್ಯಮಗಳು ಮಾತ್ರವಲ್ಲದೆ, ರಾಷ್ಟ್ರ ಮಟ್ಟದ ಯೋಜನೆಗಳನ್ನು ಕಳೆದ ಆರ್ಥಿಕ ವರ್ಷದಲ್ಲಿ ಟಿಸಿಎಸ್ ಕಾರ್ಯಗತಗೊಳಿಸಿದೆ. ಸರ್ಕಾರದ ಇ–ಮಾರುಕಟ್ಟೆ ತಾಣ (ಜಿಇಎಂ) ಅನ್ನು ವಿಶ್ವದ ಅತಿದೊಡ್ಡ ಸರ್ಕಾರಿ ಇ-ಕಾಮರ್ಸ್ ಮಾರುಕಟ್ಟೆಯಾಗಿ ಪರಿವರ್ತಿಸಲಾಗಿದೆ. ಇಲ್ಲಿ ₹5 ಲಕ್ಷ ಕೋಟಿಗೂ ಅಧಿಕ ಖರೀದಿ ವಹಿವಾಟು ನಡೆಯುತ್ತಿದೆ. ಎಸ್‌ಬಿಐನ ಯೋನೊ 2.0 ಅನ್ನು ನವೀಕರಣ ಮಾಡಲಾಗಿದ್ದು, 10 ಭಾಷೆಗಳಲ್ಲಿ ಲಭ್ಯವಿದ್ದು, 20 ಕೋಟಿಗೂ ಅಧಿಕ ಬಳಕೆದಾರ ರಿದ್ದಾರೆ ಎಂದು ಹೇಳಿದ್ದಾರೆ.

ಟಾಟಾ ಸ್ಟೀಲ್‌ಗೆ ದುಪ್ಪಟ್ಟು ಲಾಭ

ನವದೆಹಲಿ (ಪಿಟಿಐ): 2025–26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಟಾಟಾ ಸ್ಟೀಲ್ ಕಂಪನಿಯು ₹2,965 ಕೋಟಿಯಷ್ಟು ಲಾಭ ಗಳಿಸಿದೆ.

2024–25ರ ಇದೇ ಅವಧಿಯಲ್ಲಿ ಕಂಪನಿಯು ₹1,201 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ದುಪ್ಪಟ್ಟು ಏರಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯ ಒಟ್ಟು ವರಮಾನವು ₹56,679 ಕೋಟಿಯಿಂದ ₹63,518 ಕೋಟಿಗೆ ಹೆಚ್ಚಳವಾಗಿದೆ. ಇದು ಕಂಪನಿಯ ಲಾಭ ಏರಿಕೆಗೆ ಕಾರಣ ಎಂದು ತಿಳಿಸಿದೆ.

2025–26ರ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹10,885 ಕೋಟಿ ಲಾಭ ಗಳಿಸಿದ್ದರೆ, ವರಮಾನವು ₹2.33 ಲಕ್ಷ ಕೋಟಿಯಷ್ಟಾಗಿದೆ. 2024–25ರಲ್ಲಿ ಇವು ಕ್ರಮವಾಗಿ ₹3,173 ಕೋಟಿ ಮತ್ತು ₹2.20 ಲಕ್ಷ ಕೋಟಿ ಎಂದು ತಿಳಿಸಿದೆ.

ಕಂಪನಿಯ ಆಡಳಿತ ಮಂಡಳಿ ₹1 ಮುಖಬೆಲೆಯ ಪ್ರತಿ ಈಕ್ವಿಟಿ ಷೇರಿಗೆ ₹4 ಲಾಭಾಂಶ ನೀಡಲು ಶಿಫಾರಸು ಮಾಡಿದೆ. ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು 3.16 ಕೋಟಿ ಟನ್‌ನಷ್ಟು ಉಕ್ಕು ಉತ್ಪಾದಿಸಿದೆ.

ಎನ್‌ಎಚ್‌ಪಿಸಿಗೆ ₹1,549 ಕೋಟಿ ಲಾಭ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಎನ್‌ಎಚ್‌ಪಿಸಿ ₹1,549 ಕೋಟಿ ನಿವ್ವಳ ಲಾಭ ಗಳಿಸಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹919 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣ ಶೇ 68ರಷ್ಟು ಏರಿಕೆಯಾಗಿದೆ. ಒಟ್ಟು ವರಮಾನವು ₹2,557 ಕೋಟಿಯಿಂದ ₹3,120 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ವರಮಾನ ಹೆಚ್ಚಳದಿಂದ ಕಂಪನಿಯ ಲಾಭದ ಪ್ರಮಾಣ ಏರಿಕೆಯಾಗಿದೆ ಎಂದು ತಿಳಿಸಿದೆ.

ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ 21 ಪೈಸೆ ಅಂತಿಮ ಲಾಭಾಂಶ ನೀಡಲು ಅನುಮೋದನೆ ನೀಡಿದೆ.

ನೂತನ ಅಬಕಾರಿ ಸುಂಕ ನೀತಿಯಿಂದ ಬೆಲೆ ಏರಿಕೆ

ಮದ್ಯ ತುಟ್ಟಿ: ಗ್ರಾಹಕರ ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣದ ಮೇಲೆ ಸುಂಕವಿಧಿಸುವ ನೂತನ ಅಬಕಾರಿ ಸುಂಕ ನೀತಿಯು ಮೇ 11ರಿಂದ ಜಾರಿಗೆ ಬಂದಿದ್ದು, ಆಲ್ಕೋಹಾಲ್ ಪ್ರಮಾಣ ಹೆಚ್ಚುಇರುವ ಎಲ್ಲ ಮದ್ಯಗಳ ಮಾರಾಟ ಬೆಲೆ ಏರಿಕೆಯಾಗಿದೆ. ಹೆಚ್ಚಳಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ನೂತನ ಸುಂಕ ನೀತಿಯಿಂದ ಕಡಿಮೆ ಬೆಲೆಯ ಮದ್ಯಗಳ ದರ ಅತಿಹೆಚ್ಚು ಏರಿಕೆಯಾಗಿದೆ. ಈ ಮೊದಲು 180 ಎಂ.ಎಲ್‌ನ (ಕ್ವಾರ್ಟರ್) ವಿಸ್ಕಿಯ ಟೆಟ್ರಾಪ್ಯಾಕ್‌ನ ಬೆಲೆ ₹70 ಇದ್ದದ್ದು, ₹95–₹98ರವರೆಗೆ ಏರಿಕೆಯಾಗಿದೆ. ಅದೇ ರೀತಿ ₹135ಕ್ಕೆ ಸಿಗುತ್ತಿದ್ದ ಕ್ವಾರ್ಟರ್ ವಿಸ್ಕಿಗೆ ಈಗ ₹160 ನೀಡಬೇಕಾಗಿದೆ.

‘ಕಡಿಮೆ ಬೆಲೆಯ ಮದ್ಯದ ಬೆಲೆಯಲ್ಲಿ ಗಣನೀಯ ಏರಿಕೆಯಾಗಿದ್ದು, ಅದನ್ನು ಬಳಸುತ್ತಿದ್ದವರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಕೆಲವರು ಗೊಣಗಿಕೊಂಡೇ ಹೆಚ್ಚಿನ ಬೆಲೆ ನೀಡಿ ಮದ್ಯ ಖರೀದಿಸಿದರೆ, ಇನ್ನೂ ಕೆಲವರು 180 ಎಂ.ಎಲ್ ಬದಲಿಗೆ 90 ಎಂ.ಎಲ್‌ನ ಟೆಟ್ರಾಪ್ಯಾಕ್ ತೆಗೆದುಕೊಳ್ಳುತ್ತಿದ್ದಾರೆ’ ಎಂದು ನಗರದ ಅಮೃತಹಳ್ಳಿಯಲ್ಲಿ ಮದ್ಯದ ಅಂಗಡಿ ನಡೆಸುತ್ತಿರುವ ಕೃಷ್ಣಕುಮಾರ್ ಎಂ. ಮಾಹಿತಿ ನೀಡಿದರು.

‘ಕ್ವಾರ್ಟರ್‌ಗೆ ₹120–₹150 ಬೆಲೆ ಇರುವ ವಿಸ್ಕಿಗಳು ಸರಿಸುಮಾರು ಒಂದೇ ರೀತಿ ಇರುತ್ತವೆ. ಬೆಲೆ ಏರಿಕೆ ನಂತರ, ₹120 ಇದ್ದದ್ದು ₹150 ಆಗಿದ್ದರೆ, ₹150ರದ್ದು ಈಗ ₹185 ಆಗಿದೆ. ಈ ಹಿಂದೆ ₹150 ಬ್ರ್ಯಾಂಡ್‌ನ ವಿಸ್ಕಿ ಕುಡಿಯುತ್ತಿದ್ದವರು, ತಮ್ಮ ಬ್ರ್ಯಾಂಡ್ ಬದಲಿಸಿದ್ದಾರೆ. ಈ ಹಿಂದೆ ₹120ಕ್ಕೆ ಸಿಗುತ್ತಿದ್ದ ವಿಸ್ಕಿಯನ್ನೇ ಈಗ ₹150 ಕೊಟ್ಟು ಕುಡಿಯುತ್ತಿದ್ದಾರೆ’ ಎಂದು ವಿವರಿಸಿದರು.

ಹಳೆಯ ಅಬಕಾರಿ ಸುಂಕ ನೀತಿ ಜಾರಿಯಲ್ಲಿದ್ದ ಅವಧಿಯಲ್ಲಿ ತಯಾರಾದ ಮದ್ಯದ ತುಸು ಪ್ರಮಾಣ ಇನ್ನೂ ಮಾರಾಟವಾಗದೆ, ಮದ್ಯದಂಗಡಿಗಳಲ್ಲಿ ಉಳಿದಿದೆ. ಹಳೆಯ ಬೆಲೆಗೆ ಮದ್ಯ ಲಭ್ಯವಿರುವ ಅಂಗಡಿಗಳಲ್ಲಿ ದಟ್ಟಣೆ ಹೆಚ್ಚಾಗಿದೆ. ‘ನಮ್ಮಲ್ಲಿ ಹಳೆಯ ದರದ ಕೆಲವು ಮದ್ಯಗಳು ಇವೆ. ಹೊಸ ದರದ ಮದ್ಯಗಳೂ ಇವೆ. ಹೀಗಾಗಿ ಮದ್ಯ ಖರೀದಿಸುವವರಿಗೆ ವಿವರಣೆ ನೀಡಿ ಸಾಕಾಗಿದೆ’ ಎಂದು ನಾಗರಬಾವಿ ವೃತ್ತದಲ್ಲಿರುವ ಮದ್ಯದಂಗಡಿಯಲ್ಲಿ ಕೆಲಸ ಮಾಡುವ ಸಂಜಯ್ ಬೇಸರ ವ್ಯಕ್ತಪಡಿಸಿದರು.

ಪ್ರೀಮಿಯಂ ಮದ್ಯದ ಕ್ವಾರ್ಟರ್ ಬಾಟಲ್‌ನ ಬೆಲೆಯಲ್ಲಿ ₹15–₹20ರಷ್ಟು ಏರಿಕೆಯಾಗಿದೆ. ಅಂತಹ ಮದ್ಯಗಳ ಕ್ವಾರ್ಟರ್ ಬಾಟಲ್‌ಗಳ ಬೆಲೆಯೇ ₹1,000–₹1,500 ಇದ್ದ ಕಾರಣ, ₹10–₹20ರಷ್ಟು ಏರಿಕೆಯಾಗಿದ್ದರೂ ಗ್ರಾಹಕರು ತಲೆಕೆಡಿಸಿಕೊಳ್ಳುತ್ತಿಲ್ಲ ಎಂಬುದು ಮದ್ಯದಂಗಡಿಯವರ ವಿವರಣೆ.

‘ಮಾರಾಟ ಕುಸಿಯುವ ಅಪಾಯ’

ರಾಜ್ಯದಲ್ಲಿ ಅತಿಹೆಚ್ಚು ಮಾರಾಟವಾಗುವುದು ಕಡಿಮೆ ಬೆಲೆಯ ವಿಸ್ಕಿ ಮತ್ತು ರಮ್. ನೂತನ ಸುಂಕ ನೀತಿಯಿಂದ ಈ ವರ್ಗದ ಮದ್ಯದ ಬೆಲೆಯಲ್ಲಿ ಗಣನೀಯ ಏರಿಕೆಯಾಗಿದೆ. ಪರಿಣಾಮವಾಗಿ ಇವುಗಳ ಮಾರಾಟ ಕುಸಿಯುವ ಅಪಾಯ ಎದುರಾಗಿದೆ ಎಂಬುದು ಕರ್ನಾಟಕ ರಾಜ್ಯ ಮದ್ಯ ತಯಾರಕರ ಸಂಘಟನೆ ಸದಸ್ಯರ ಕಳವಳ.

ನೂತನ ನೀತಿ ಜಾರಿ ಬೆನ್ನಲ್ಲೇ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರ ಜತೆಯಲ್ಲಿ ನಡೆದ ಸಭೆಯಲ್ಲಿ ಮದ್ಯ ತಯಾರಕರ ಸಂಘಟನೆಯ ಸದಸ್ಯರು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು ಎಂದು ಗೊತ್ತಾಗಿದೆ.

‘₹600–₹700ಕ್ಕೆ ಮಾರಾಟವಾಗುವ ಕೆಲವು ವಿಸ್ಕಿಗಳ 750 ಎಂ.ಎಲ್‌ನ ಬಾಟಲ್‌ನ ಬೆಲೆಯು ₹750–₹850ರವರೆಗೂ ಹೆಚ್ಚಾಗಿದೆ. ಎರಡೇ ದಿನದಲ್ಲಿ ಇವುಗಳ ಮಾರಾಟ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಆದರೆ ಕೆಲವು ಪ್ರೀಮಿಯಂ ಸ್ಕಾಚ್‌ಗಳ ಬೆಲೆಯಲ್ಲಿ ₹1,000ದಷ್ಟು ಇಳಿಕೆಯಾಗಿದೆ. ಇದು ಮದ್ಯ ಮಾರಾಟದ ಸ್ವರೂಪವನ್ನು ಬದಲಿಸಲಿದೆ’ ಎಂದು ಸಭೆಯಲ್ಲಿ ವಿವರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಕಡಿಮೆ ಬೆಲೆಯ ಮದ್ಯದ ಬೆಲೆ ವಿಪರೀತ ಏರಿಕೆಯಾಗುವಂತೆ ಮತ್ತು ವಿದೇಶಿ ಪ್ರೀಮಿಯಂ ಮದ್ಯದ ಬೆಲೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುವಂತೆ ಸುಂಕಗಳ ಸ್ಲ್ಯಾಬ್ ರೂಪಿಸಲಾಗಿದೆ. ಇದರಿಂದ ದೇಶೀಯ ಮದ್ಯ ತಯಾರಕರ ವಹಿವಾಟಿಗೆ ಹೊಡೆತ ಬೀಳಲಿದೆ ಎಂದು ಸಭೆಯಲ್ಲಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಗಮನ ಹರಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ’ ಎಂದು ಮಾಹಿತಿ ನೀಡಿವೆ.

ಬಿಯರ್ ಬೆಲೆ ಏರಿಳಿತ: ಆಲ್ಕೋಹಾಲ್ ಪ್ರಮಾಣ ಆಧರಿಸಿ ಅಬಕಾರಿ ಸುಂಕ ವಿಧಿಸುವ ನೀತಿಯ ಕಾರಣಕ್ಕೆ ಬಿಯರ್ ಬೆಲೆಯಲ್ಲಿಯೂ ಏರುಪೇರಾಗಿದೆ. ಆಲ್ಕೋಹಾಲ್ ಪ್ರಮಾಣ ಶೇ 5ರಿಂದ ಶೇ 8ರಷ್ಟು ಇರುವ ಬಿಯರ್‌ಗಳ ಬೆಲೆಯಲ್ಲಿ ₹25ರಿಂದ ₹80ರವರೆಗೂ ಇಳಿಕೆಯಾಗಿದೆ. ಆದರೆ ಆಲ್ಕೋಹಾಲ್ ಪ್ರಮಾಣ ಶೇ 10–15ರಷ್ಟು ಇರುವ ಸ್ಟ್ರಾಂಗ್ ಬಿಯರ್ ಬೆಲೆಯಲ್ಲಿ ₹20ರಷ್ಟು ಏರಿಕೆಯಾಗಿದೆ. ಬಿಯರ್ ಅಲ್ಲದ, ಆಲ್ಕೋಹಾಲ್‌ಭರಿತ ಪೇಯಗಳ ಬೆಲೆಯಲ್ಲಿಯೂ ₹20ವರೆಗೆ ಇಳಿಕೆಯಾಗಿದೆ.

ಬೆಳ್ಳಿ ಆಮದಿಗೆ ನಿರ್ಬಂಧ: ಕೇಂದ್ರ

ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿಯ ಸೀಮಾ ಸುಂಕವನ್ನು ಹೆಚ್ಚು ಮಾಡಿದ ನಂತರ ಕೇಂದ್ರ ಸರ್ಕಾರವು ಬೆಳ್ಳಿಯ ಆಮದಿಗೆ ನಿರ್ಬಂಧ ಹೇರಿದೆ.

ಕೇಂದ್ರ ಸರ್ಕಾರವು ಚಿನ್ನ ಹಾಗೂ ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಶೇ 15ಕ್ಕೆ ಹೆಚ್ಚು ಮಾಡಿ ಮೇ 13ರಂದು ಆದೇಶ ಹೊರಡಿಸಿದೆ.

ಈಗ ಬೆಳ್ಳಿಯ ಆಮದು ನೀತಿಯನ್ನು ‘ಮುಕ್ತ’ದಿಂದ ‘ನಿರ್ಬಂಧ’ಕ್ಕೆ ಬದಲಾಯಿಸಲಾಗಿದೆ ಎಂದು ವಿದೇಶ ವ್ಯಾಪಾರಗಳ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಹೇಳಿದೆ.

‘ನಿರ್ಬಂಧ’ ಪಟ್ಟಿಯಲ್ಲಿ ಇರುವ ಸರಕುಗಳನ್ನು ಆಮದು ಮಾಡಿಕೊಳ್ಳಲು ಸರ್ಕಾರದಿಂದ ಪರವಾನಗಿ ಪಡೆಯಬೇಕಾಗುತ್ತದೆ.

‘ಪ್ರಮುಖ ಐಎಸ್ ಉಗ್ರನ ಹತ್ಯೆ’

ವಾಷಿಂಗ್ಟನ್ (ಎಪಿ): ‘ದಕ್ಷಿಣ ಆಫ್ರಿಕಾದ ನೈಜೀರಿಯಾದಲ್ಲಿ ಶುಕ್ರವಾರ ಕಾರ್ಯಾಚರಣೆ ನಡೆಸುವ ಮೂಲಕ ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ಪ್ರಮುಖ ನಾಯಕ ಅಬೂ ಬಕರ್ ಅಲ್ ಮೈನುಕಿಯನ್ನು ಹತ್ಯೆ ಮಾಡಿದ್ದೇವೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಆಫ್ರಿಕಾ ಸೇನೆಯೂ ಭಾಗಿಯಾಗಿತ್ತು ಎಂದು ಟ್ರಂಪ್ ತಿಳಿಸಿದ್ದಾರೆ. ನೈಜೀರಿಯಾದಲ್ಲಿ ಸಕ್ರಿಯವಾಗಿರುವ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಲು ಟ್ರಂಪ್ ಅವರು ಕಳೆದ ಡಿಸೆಂಬರ್‌ನಲ್ಲಿ ತಮ್ಮ ಸೇನೆಗೆ ನಿರ್ದೇಶನ ನೀಡಿದ್ದರು. ಇದೇ ಫೆಬ್ರುವರಿಯಲ್ಲಿ ಸೇನೆಯು ನೈಜೀರಿಯಾದಲ್ಲಿ ಕಾರ್ಯಾಚರಣೆ ಆರಂಭಿಸಿತ್ತು.

‘ಇಸ್ಲಾಮಿಕ್ ಸ್ಟೇಟ್‌ನ ಸಂಘಟನೆ ಮತ್ತು ಹಣಕಾಸಿಕ ವ್ಯವಹಾರಗಳ ಬಗ್ಗೆ ಈತ ನಿಗಾ ಇರಿಸುತ್ತಿದ್ದು, ಅಮೆರಿಕದಲ್ಲಿ ದಾಳಿ ನಡೆಸುವ ಸಂಚು ರೂಪಿಸುತ್ತಿದ್ದ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಕಾರ್ಯಾಚರಣೆ ಕುರಿತು ಆಫ್ರಿಕಾ ಅಧ್ಯಕ್ಷ ಬೊಲಾ ಟಿನುಬು ಕೂಡ ದೃಢಪಡಿಸಿದ್ದಾರೆ.

ಭಾರತದ ಮಹತ್ವಾಕಾಂಕ್ಷೆ ಸೀಮಾತೀತ: ಮೋದಿ

ಒಂದನೇ ಪುಟದಿಂದ...

‘ಭಾರತದ ಆಕಾಂಕ್ಷೆಗಳು ಇಂದು ದೇಶದ ಗಡಿಗಳಿಗಷ್ಟೇ ಸೀಮಿತವಾಗಿಲ್ಲ. ಭಾರತವು ಒಲಿಂಪಿಕ್ ಕ್ರೀಡಾಕೂಟ ಆಯೋಜಿಸಲು, ಜಾಗತಿಕ ಉತ್ಪಾದನಾ ಕೇಂದ್ರವಾಗಲು, ಹಸಿರು ಇಂಧನ ಕ್ಷೇತ್ರದಲ್ಲಿ ನಾಯಕನಾಗಿ ಹೊರಹೊಮ್ಮಲು ಮತ್ತು ಜಗತ್ತಿನ ಬೆಳವಣಿಗೆಯ ಎಂಜಿನ್ ಆಗಿ ಕಾರ್ಯನಿರ್ವಹಿಸಲು ಬಯಸುತ್ತದೆ’ ಎಂದು ಹೇಳಿದರು.

ನಿಕಟ ಸಂಬಂಧ: ‘ಇಂಧನ ಭದ್ರತೆಯಿಂದ ಹಿಡಿದು ನೀರಿನ ಭದ್ರತೆಯವರೆಗೆ ಭಾರತ ಮತ್ತು ನೆದರ್ಲೆಂಡ್ಸ್ ಪರಸ್ಪರ ನಿಕಟವಾಗಿ ಸಹಕರಿಸುತ್ತಿವೆ. ಹಸಿರು ಹೈಡ್ರೋಜನ್ ಕ್ಷೇತ್ರದಲ್ಲಿ ನಮ್ಮ ಸಹಯೋಗವು ಮಹತ್ವದ್ದಾಗಿದೆ. ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಐತಿಹಾಸಿಕ ವ್ಯಾಪಾರ ಒಪ್ಪಂದವು ಉಭಯ ದೇಶಗಳ ನಡುವಿನ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುತ್ತದೆ’ ಎಂದರು.

ಕ್ರೀಡಾ ಕ್ಷೇತ್ರದಲ್ಲೂ ಎರಡೂ ದೇಶಗಳು ಹಲವು ವಿಧಗಳಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದು ಮೋದಿ ಹೇಳಿದರು. ನೆದರ್ಲೆಂಡ್ಸ್ ಕ್ರಿಕೆಟ್‌ಗೆ ಭಾರತೀಯ ಸಮುದಾಯದ ಕೊಡುಗೆಯನ್ನು ಶ್ಲಾಘಿಸಿದ ಅವರು, ‘ತೇಜಾ ನಿಡಮಾನುರು ಮತ್ತು ವಿಕ್ರಮ್‌ಜೀತ್ ಸಿಂಗ್ ಅವರನ್ನು ನೆದರ್ಲೆಂಡ್ಸ್ ಜೆರ್ಸಿಯಲ್ಲಿ ನೋಡಿದಾಗ ಅಥವಾ ಆರ್ಯನ್ ದತ್ ಅವರಂತಹ ಯುವ ಆಟಗಾರರು ನೆದರ್ಲೆಂಡ್ಸ್ ಕ್ರಿಕೆಟ್‌ನ ಭವಿಷ್ಯಕ್ಕೆ ಕೊಡುಗೆ ನೀಡಿದಾಗ ನಮಗೆ ಹೆಮ್ಮೆ ಎನಿಸುತ್ತದೆ’ ಎಂದು ಹೇಳಿದರು.

ರಾಜನ ಭೇಟಿ: ಮೋದಿ ಅವರು ನೆದರ್ಲೆಂಡ್ಸ್ ರಾಜ ವಿಲಿಯಂ ಅಲೆಕ್ಸಾಂಡರ್ ಮತ್ತು ರಾಣಿ ಮ್ಯಾಕ್ಸಿಮಾ ಅವರನ್ನು ಭೇಟಿಯಾದರು. ಈ ವೇಳೆ ಡಿಜಿಟಲ್ ತಂತ್ರಜ್ಞಾನ, ನವೋದ್ಯಮ ಮತ್ತು ಫಿನ್‌ಟೆಕ್ ಕ್ಷೇತ್ರಗಳಲ್ಲಿನ ಸಹಕಾರದ ಬಗ್ಗೆ ಇಬ್ಬರೂ ಚರ್ಚಿಸಿದರು.

‘ವಿಪತ್ತುಗಳ ದಶಕ’

ಕೋವಿಡ್ ಸಾಂಕ್ರಾಮಿಕ, ಜಾಗತಿಕ ಸಂಘರ್ಷಗಳು ಮತ್ತು ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದ ಉಂಟಾದ ಇಂಧನ ಬಿಕ್ಕಟ್ಟನ್ನು ಉಲ್ಲೇಖಿಸಿದ ಮೋದಿ, ಈ ದಶಕವು ಜಗತ್ತಿಗೆ ‘ವಿಪತ್ತುಗಳ ದಶಕ’ವಾಗಿ ಬದಲಾಗುತ್ತಿದೆ ಎಂದು ಹೇಳಿದರು.

‘ಈಗ ಎದುರಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಕ್ಷಿಪ್ರಗತಿಯಲ್ಲಿ ಬದಲಾಯಿಸದಿದ್ದರೆ, ಕಳೆದ ಕೆಲ ದಶಕಗಳಲ್ಲಿ ಮಾಡಿರುವ ಸಾಧನೆಗಳೆಲ್ಲವೂ ಹಾಳಾಗುವುದನ್ನು ನಾವೆಲ್ಲರೂ ನೋಡಬೇಕಾಗಬಹುದು. ವಿಶ್ವದ ಜನಸಂಖ್ಯೆಯ ಒಂದು ದೊಡ್ಡ ಭಾಗವು ಮತ್ತೊಮ್ಮೆ ಬಡತನದ ಕೂಪಕ್ಕೆ ತಳ್ಳಲ್ಪಡಬಹುದು’ ಎಂದು ಎಚ್ಚರಿಸಿದರು.

ಚೋಳರ ಕಾಲದ ಶಾಸನ ಹಸ್ತಾಂತರ

ಚೋಳರ ಕಾಲದ ತಾಮ್ರ ಪಟ ಶಾಸನಗಳನ್ನು ನೆದರ್ಲೆಂಡ್ಸ್, ಶನಿವಾರ ಭಾರತಕ್ಕೆ ಹಸ್ತಾಂತರಿಸಿತು. ಈ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಪಾಲ್ಗೊಂಡರು. 21 ತಾಮ್ರ ಪಟ ಶಾಸನಗಳನ್ನು 11ನೇ ಶತಮಾನದ ಚೋಳ ರಾಜವಂಶದ ಅತ್ಯಂತ ಮಹತ್ವದ ದಾಖಲೆಗಳೆಂದು ಪರಿಗಣಿಸಲಾಗಿದೆ.

ರಾಜರಾಜ ಚೋಳ–1 ಅವರ ಕಾಲಕ್ಕೆ ಸೇರಿದ ಈ ಶಾಸನಗಳು ಸುಮಾರು 30 ಕೆ.ಜಿ ಇದೆ. ಈ ಶಾಸನಗಳ ಪಠ್ಯ ಸಂಸ್ಕೃತ ಮತ್ತು ತಮಿಳು ಭಾಷೆಯಲ್ಲಿದೆ. ಕ್ರೈಸ್ತ ಮಿಷನರಿಯ ಭಾಗವಾಗಿ ಭಾರತದಲ್ಲಿದ್ದ ಫ್ಲೋರೆಂಟಿಯಸ್ ಕ್ಯಾಂಪರ್ ಎಂಬವರು 1,700ನೇ ಇಸವಿಯಲ್ಲಿ ಶಾಸನಗಳನ್ನು ನಾಗಪಟ್ಟಣಂನಿಂದ ನೆದರ್ಲೆಂಡ್ಸ್‌ಗೆ ತಂದಿದ್ದರು. ನಾಗಪಟ್ಟಣಂ ಆಗ ಡಚ್ಚರ ನಿಯಂತ್ರಣದಲ್ಲಿತ್ತು.

ಬೋಯಿಂಗ್‌ನಿಂದ 200 ವಿಮಾನ ಖರೀದಿಗೆ ಚೀನಾ ಒಪ್ಪಿಗೆ

ಏರ್‌ಫೋರ್ಸ್ ಒನ್ (ಎಪಿ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹಾಗೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವೆ ನಡೆದ ಶೃಂಗಸಭೆಯ ಬೆನ್ನಲ್ಲೇ, ದಶಕದ ಬಳಿಕ ಚೀನಾಕ್ಕೆ 200 ವಿಮಾನಗಳನ್ನು ಪೂರೈಸಲು ಬೋಯಿಂಗ್ ಒಪ್ಪಂದ ಮಾಡಿಕೊಂಡಿದೆ.

ಅಮೆರಿಕದ ವೈಮಾನಿಕ ಕಂಪನಿಯ ದೀರ್ಘಕಾಲಿಕ ಬೆಳವಣಿಗೆಯಿಂದ ಈ ಒಪ್ಪಂದವು ಮಹತ್ವದ್ದೆನಿಸಿದೆ.

ಬೀಜಿಂಗ್ ಪ್ರವಾಸ ಮುಗಿಸಿಕೊಂಡು, ಅಮೆರಿಕಕ್ಕೆ ಹಿಂತಿರುಗುವ ವೇಳೆ ‘ಏರ್‌ಫೋರ್ಸ್ ಒನ್’ ವಿಮಾನದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಒಪ್ಪಂದದ ಭಾಗವಾಗಿ 750 ಬೋಯಿಂಗ್ ವಿಮಾನ ಖರೀದಿಸುವ ಹಕ್ಕನ್ನು ಚೀನಾ ಕಾಯ್ದಿರಿಸಿದೆ. ಈ ಪೈಕಿ 200 ವಿಮಾನಗಳ ಪೂರೈಕೆಗೆ ಖರೀದಿ ಆದೇಶವನ್ನು ಚೀನಾದಿಂದ ಪಡೆಯಲಾಗಿದೆ ಎಂದು ಬೋಯಿಂಗ್ ಸಂಸ್ಥೆ ತಿಳಿಸಿದೆ’ ಎಂದು ಅವರು ತಿಳಿಸಿದ್ದಾರೆ.

ಟ್ರಂಪ್ ಅವರು ಬೀಜಿಂಗ್ ಪ್ರವಾಸ ಕೈಗೊಂಡಿದ್ದ ಸಂದರ್ಭದಲ್ಲಿ ಬೋಯಿಂಗ್ ಕಂಪನಿಯ ಸಿಇಒ ಕೆಲ್ಲಿ ಒರ್ಟ್‌ಬರ್ಗ್ ಸೇರಿದಂತೆ ಅಮೆರಿಕದ ಪ್ರಮುಖ ಕಂಪನಿಗಳ ಸಿಇಒಗಳು ಜೊತೆಗೂಡಿದ್ದರು. ಆ ಮೂಲಕ ತಮ್ಮ ಉತ್ಪನ್ನಗಳನ್ನು ಚೀನಾದಲ್ಲಿ ಮಾರುವ ಉತ್ಸಾಹ ವ್ಯಕ್ತಪಡಿಸಿದ್ದರು.

ಈ ಒಪ್ಪಂದದಿಂದ ಜನರಲ್ ಎಲೆಕ್ಟ್ರಿಕ್ ಕಂಪನಿಗೂ ಕೂಡ ಉಪಯೋಗವಾ ಗಲಿದ್ದು, ಈ ಸಂಸ್ಥೆಯು ಚೀನಾಕ್ಕೆ 400ರಿಂದ 450 ಎಂಜಿನ್‌ಗಳನ್ನು ಪೂರೈಸಲಿದೆ ಎಂದು ಟ್ರಂಪ್ ತಿಳಿಸಿದ್ದಾರೆ.

‘ಕಳೆದ ತಿಂಗಳು ಟ್ರಂಪ್ ಹಾಗೂ ಷಿ ಭೇಟಿಯಾಗಿ ವ್ಯಾಪಾರ ಒಪ್ಪಂದ ಕುರಿತಂತೆ ಮಾತುಕತೆ ನಡೆಸಿದ ವೇಳೆ ಬೋಯಿಂಗ್ ಪಾಲಿಗೆ ಅರ್ಥಪೂರ್ಣವಾದ ಅವಕಾಶ ದೊರೆಯಲಿದೆ’ ಎಂದು ಕೆಲ್ಲಿ ಒರ್ಟ್‌ಬರ್ಗ್ ವಿಶ್ವಾಸ ವ್ಯಕ್ತಪಡಿಸಿದ್ದರು.

ಚೀನಾ–ಅಮೆರಿಕ: ಮಹಾನ್ ದೇಶಗಳು– ಟ್ರಂಪ್

ವಾಷಿಂಗ್ಟನ್ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿರುವುದು ಅತ್ಯಂತ ಯಶಸ್ವಿ ಎಂದು ಬಣ್ಣಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಉಭಯ ರಾಷ್ಟ್ರಗಳು ‘ಎರಡು ಮಹಾನ್ ದೇಶಗಳು’ ಎಂದು ಬಣ್ಣಿಸಿದ್ದಾರೆ.

‘ನಿಜಕ್ಕೂ ಚೀನಾ–ಅಮೆರಿಕ ಮಹಾನ್ ದೇಶಗಳು. ನಾನು ಇದನ್ನು ಜಿ–2 ಎಂದು ಕರೆಯುತ್ತೇನೆ. ಇದು ಇತಿಹಾಸದಲ್ಲಿ ಬಹುಮುಖ್ಯವಾದ ಕ್ಷಣ ಎಂದು ಭಾವಿಸುತ್ತೇನೆ’ ಎಂದು ‘ಫಾಕ್ಸ್ ನ್ಯೂಸ್’ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಇದೇ ಸೆಪ್ಟೆಂಬರ್ ತಿಂಗಳಲ್ಲಿ ವಾಷಿಂಗ್ಟನ್‌ಗೆ ಭೇಟಿ ನೀಡುವಂತೆ ಷಿ ಜಿನ್‌ಪಿಂಗ್‌ಗೆ ಟ್ರಂಪ್ ಆಹ್ವಾನ ನೀಡಿದ್ದಾರೆ.

ಮುಂದಿನ ವಾರ ಬೀಜಿಂಗ್‌ಗೆ ಪುಟಿನ್ ಭೇಟಿ

ಮಾಸ್ಕೊ (ಎಪಿ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮುಂದಿನ ವಾರ ಚೀನಾಕ್ಕೆ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಕ್ರೆಮ್ಲಿನ್ ತಿಳಿಸಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ಪ್ರವಾಸ ಮುಗಿಸಿ ಹಿಂತಿರುಗಿದ ಬೆನ್ನಲ್ಲೇ ರಷ್ಯಾದಿಂದ ಈ ಹೇಳಿಕೆ ಹೊರಬಿದ್ದಿದೆ.

‘ಪುಟಿನ್ ಅವರು ಮೇ 19 ಹಾಗೂ 20ರಂದು ಭೇಟಿ ನೀಡಲಿದ್ದಾರೆ. ಅದೇ ಸಮಯ ಚೀನಾ–ರಷ್ಯಾ ಸ್ನೇಹ ಒಪ್ಪಂದದ 25ನೇ ವರ್ಷಾಚರಣೆಗೂ ಹೊಂದಾಣಿಕೆಯಾಗುತ್ತದೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳ ಜೊತೆಗೆ ಅಂತರರಾಷ್ಟ್ರೀಯ ಪ್ರಾದೇಶಿಕ ವಿಚಾರ ಹಾಗೂ ಹಣಕಾಸು ಸಹಕಾರದ ಕುರಿತಂತೆ ಚರ್ಚೆ ನಡೆಸಲಿದ್ದಾರೆ ಎಂದು ತಿಳಿಸಲಾಗಿದೆ.

ಥಾಯ್ಲೆಂಡ್ ಓಪನ್ ಫೈನಲ್‌ಗೆ ಸಾತ್ವಿಕ್–ಚಿರಾಗ್

ಬ್ಯಾಂಕಾಕ್: ಆರಂಭಿಕ ಗೇಮ್‌ನ ಹಿನ್ನಡೆಯಿಂದ ಚೇತರಿಸಿಕೊಂಡ ಅಗ್ರ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಶನಿವಾರ ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಫೈನಲ್‌ಗೆ ಲಗ್ಗೆ ಹಾಕಿತು.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತದ ಆಟಗಾರರು ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ 19-21, 22-20, 21-16ರ ಅಂತರದಿಂದ ಮಲೇಷ್ಯಾದ ಗೋಹ್ ಸ್ಜೆ ಫೀ ಮತ್ತು ನೂರ್ ಇಝುದ್ದೀನ್ ಅವರನ್ನು ಹಿಮ್ಮೆಟ್ಟಿಸಿದರು.

2019 ಮತ್ತು 2024ರಲ್ಲಿ ಪ್ರಶಸ್ತಿ ಗೆದ್ದಿರುವ ಸಾತ್ವಿಕ್–ಚಿರಾಗ್ ಇಲ್ಲಿ ಮೂರನೇ ಕಿರೀಟದ ನಿರೀಕ್ಷೆಯಲ್ಲಿದ್ದಾರೆ. ಭಾನುವಾರ ನಡೆಯುವ ಫೈನಲ್‌ನಲ್ಲಿ ಇಂಡೊನೇಷ್ಯಾದ ಲಿಯೋ ರೋಲಿ ಕಾರ್ನಾಂಡೊ ಮತ್ತು ಡೇನಿಯಲ್ ಮಾರ್ಟಿನ್ ಅವರನ್ನು ಎದುರಿಸಲಿದ್ದಾರೆ. ಲಿಯೋ–ಡೇನಿಯಲ್ ಜೋಡಿ ಮತ್ತೊಂದು ಸೆಮಿಫೈನಲ್‌ನಲ್ಲಿ 21–15, 21–18ರಿಂದ ಚೀನಾದ ರೇನ್ ಕ್ಸಿಯಾಂಗ್ ಯು ಮತ್ತು ಹೇ ಜಿ ಟಿಂಗ್ ಅವರನ್ನು ಮಣಿಸಿತು.

ಕಳೆದ ತಿಂಗಳು ಥಾಮಸ್ ಕಪ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ಭಾಗವಾಗಿದ್ದ ಸಾತ್ವಿಕ್–ಚಿರಾಗ್ ಅವರಿಗೆ ಹಾಲಿ ಋತುವಿನಲ್ಲಿ ಮೊದಲ ಫೈನಲ್ ಇದಾಗಿದೆ. ಒಟ್ಟು ₹4.80 ಕೋಟಿ ಬಹುಮಾನ ಮೊತ್ತದ ಟೂರ್ನಿ ಇದಾಗಿದ್ದು, ಇತರ ವಿಭಾಗಗಳ ಸ್ಪರ್ಧೆಗಳಲ್ಲಿ ಭಾರತದ ಸವಾಲು ಈ ಮೊದಲೇ ಅಂತ್ಯಗೊಂಡಿದೆ.

‘ಈ ಋತುವಿನಲ್ಲಿ ನಾವು ಉತ್ತಮ ಆರಂಭ ಪಡೆದಿರಲಿಲ್ಲ. ಹೀಗಾಗಿ, ಮಾನಸಿಕವಾಗಿ ಒತ್ತಡದಲ್ಲಿದ್ದೆವು. ಥಾಮಸ್ ಕಪ್ ಟೂರ್ನಿಯಲ್ಲಿನ ಆಟವು ನಮ್ಮ ಆತ್ಮವಿಶ್ವಾಸ ಹೆಚ್ಚಿಸಿತು. ಇಲ್ಲಿ ವರ್ಷದ ಮೊದಲ ಫೈನಲ್ ಪಂದ್ಯ ಆಡುತ್ತಿರುವುದು ಖುಷಿ ತಂದಿದೆ. ಪ್ರಶಸ್ತಿ ಗೆಲ್ಲುವ ವಿಶ್ವಾಸವೂ ಇದೆ’ ಎಂದು ಪಂದ್ಯದ ಬಳಿಕ ಚಿರಾಗ್ ಶೆಟ್ಟಿ ಪ್ರತಿಕ್ರಿಯಿಸಿದರು.

ಟ್ರೋಫಿಯೊಂದಿಗೆ ಪೀಟರ್ ಬರ್ ಬಿಯ್ರುಕೋವ್– ಗ್ರಿಗೋರಿ ಲೊಮಾಕಿನ್ (ರನ್ನರ್ಸ್ ಅಪ್) ಹಾಗೂ ನಿಕಿ ಪೂಣಚ್ಚ– ಸಾಕೇತ್ ಮೈನೇನಿ (ಚಾಂಪಿಯನ್)

ಕೀಗನ್ ಸ್ಮಿತ್ ಸಿಂಗಲ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿಶಾಲಿ ಹೊಡೆತಗಳನ್ನು ಆಡಿದ ಅಗ್ರ ಶ್ರೇಯಾಂಕದ ಆಟಗಾರ ಕೀಗನ್ ಸ್ಮಿತ್ ನೇರ ಸೆಟ್‌ಗಳಿಂದ ನಾಲ್ಕನೇ ಶ್ರೇಯಾಂಕದ ಫಿಲಿಪ್ ಸೆಕುಲಿಕ್ ಅವರನ್ನು ಸೋಲಿಸಿ ಕರ್ನಾಟಕ ಓಪನ್ ಎಟಿಪಿ 50 ಚಾಲೆಂಜರ್ ಟೂರ್ನಿಯಲ್ಲಿ ಶನಿವಾರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಅಮೆರಿಕದ ಕೀಗನ್ ಅವರು, ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಒಂದು ಗಂಟೆ 20 ನಿಮಿಷಗಳ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಎದುರಾಳಿಗೆ ಚೇತರಿಸುವ ಅವಕಾಶ ನೀಡದೇ 6–2, 7–5 ರಿಂದ ಪಂದ್ಯ ಗೆದ್ದುಕೊಂಡರು.

ಸ್ಮಿತ್ ಅವರು ಟ್ರೋಫಿ, ₹9.12 ಲಕ್ಷ ನಗದು ಬಹುಮಾನದ ಜೊತೆಗೆ 50 ಎಟಿಪಿ ರ್‍ಯಾಂಕಿಂಗ್ ಪಾಯಿಂಟ್ಸ್ ಗಳಿಸಿದರು. ರನ್ನರ್ ಅಪ್ ಸೆಕುಲಿಕ್ ಅವರ ಖಾತೆಗೆ 25 ಎಟಿಪಿ ಪಾಯಿಂಟ್ಸ್ ಮತ್ತು ₹5.28 ಲಕ್ಷ ನಗದು ಬಹುಮಾನ ಸೇರಿತು.

ನಿಕಿ ಪೂಣಚ್ಚ– ಸಾಕೇತ್‌ಗೆ ಪ್ರಶಸ್ತಿ: ಇದಕ್ಕೆ ಮೊದಲು ಭಾರತದ ನಿಕಿ ಕಲಿಯಂಡ ಪೂಣಚ್ಚ ಮತ್ತು ಸಾಕೇತ್ ಮೈನೇನಿ ಅವರು ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಪೀಟರ್ ಬರ್ ಬಿಯ್ರುಕೋವ್– ಗ್ರಿಗೋರಿ ಲೊಮಾಕಿನ್ ಅವರನ್ನು ಸೋಲಿಸಿ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ವಿಜೇತ ಭಾರತದ ಜೋಡಿ 50 ಎಟಿಪಿ ಪಾಯಿಂಟ್ಸ್ ಜೊತೆಗೆ ₹2.86 ನಗದು ಹಾಗೂ ರನ್ನರ್ ಅಪ್ ಜೋಡಿಗೆ 30 ಎಟಿಪಿ ಪಾಯಿಂಟ್ಸ್ ಮತ್ತು ₹1.67 ಲಕ್ಷ ಬಹುಮಾನ ದೊರೆಯಿತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ ಎಸ್.ಬಿ. ಬೈಯಪ್ಪ
ನಿಧನ : 08-05-2026

ಶ್ರೀ ಎಸ್.ಬಿ. ಬೈಯಪ್ಪ ನವರು ದಿನಾಂಕ: 08-05-2026ರ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಇವರ ಉತ್ತರಕ್ರಿಯಾದಿ ಹಾಗೂ ವೈಕುಂಠ ಸಮಾರಾಧನೆಯನ್ನು ದಿನಾಂಕ: 18-05-2026ನೇ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ನಂ. 235, 7ನೇ ಕ್ರಾಸ್, ಎಸ್.ಟಿ. ಬೆಡ್ 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–34, ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಮಕ್ಕಳು, ಕುಟುಂಬದವರು ಹಾಗೂ ಬಂಧು ಮಿತ್ರರು

ಭಾವಪೂರ್ವಕ ಕೃತಜ್ಞತೆ ಅರ್ಪಣೆ

ನಮ್ಮ ಕುಟುಂಬದ ಹಿರಿಯರು ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದ ಶ್ರೀ ಡಿ. ಸುಧಾಕರ್ ಅವರು ದಿನಾಂಕ 10.05.2026 ರಂದು ದೈವಾಧೀನರಾದ ಹಿನ್ನೆಲೆಯಲ್ಲಿ, ನಮ್ಮ ಕುಟುಂಬವು ತೀವ್ರ ಶೋಕ ಸಾಗರದಲ್ಲಿ ಮುಳುಗಿದೆ. ಈ ಸಂಕಷ್ಟದ ಸಮಯದಲ್ಲಿ ನಮಗೆ ಧೈರ್ಯ ತುಂಬಿ, ಅಂತಿಮ ಸಂಸ್ಕಾರದ ವಿಧಿವಿಧಾನಗಳಲ್ಲಿ ಸಹಕರಿಸಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಸಲ್ಲಿಸುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತೇವೆ.

ದಿನಾಂಕ 11.05.2026 ರಂದು ನಡೆದ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲು ಆದೇಶಿಸಿದ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಚಿವ ಸಂಪುಟದ ಎಲ್ಲಾ ಸಚಿವರುಗಳಿಗೂ ಹಾಗೂ ರಾಜ್ಯ ಸರ್ಕಾರಕ್ಕೂ ನಾವು ಚಿರಋಣಿಯಾಗಿದ್ದೇವೆ. ಅಂತಿಮ ದರ್ಶನಕ್ಕೆ ಆಗಮಿಸಿ ಗೌರವ ಸಲ್ಲಿಸಿದ ಶಾಸಕರುಗಳು, ವಿವಿಧ ಪಕ್ಷಗಳ ಮುಖಂಡರು ಹಾಗೂ ಗಣ್ಯರಿಗೆ ಧನ್ಯವಾದಗಳು.

ವಿಶೇಷವಾಗಿ, ಅಂತ್ಯಕ್ರಿಯೆಯ ವ್ಯವಸ್ಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ ಜಿಲ್ಲಾಧಿಕಾರಿಗಳು, ಪೊಲೀಸ್ ಇಲಾಖೆ, ಅಧಿಕಾರಿ ವರ್ಗ ಮತ್ತು ಸ್ವಯಂಸೇವಕರಿಗೆ ನಮ್ಮ ಅಭಿನಂದನೆಗಳು. ಅಂತಿಮ ದರ್ಶನಕ್ಕೆ ಕಿಕ್ಕಿರಿದು ಜಮಾಯಿಸಿದ್ದರೂ ಶಾಂತಿ ಕಾಪಾಡಿ, ನಮ್ಮ ಕುಟುಂಬದ ದುಃಖದಲ್ಲಿ ಪಾಲ್ಗೊಂಡ ಕ್ಷೇತ್ರದ ಪ್ರೀತಿಯ ಜನತೆ ಹಾಗೂ ಅವರ ಅಸಂಖ್ಯಾತ ಅಭಿಮಾನಿ ಬಾಂಧವರಿಗೆ ನಾವು ಸದಾ ಋಣಿಯಾಗಿರುತ್ತೇವೆ.

ನಿಮ್ಮೆಲ್ಲರ ಈ ಅಪಾರ ಪ್ರೀತಿ ಮತ್ತು ಅಭಿಮಾನವೇ ನಮಗೆ ಈ ನೋವನ್ನು ಭರಿಸುವ ಶಕ್ತಿಯನ್ನು ನೀಡಿದೆ.

ಅವರ ಅಗಲಿಕೆಯ ಸಮಯದಲ್ಲಿ ಸಹಕರಿಸಿದ ಪ್ರತಿಯೊಬ್ಬರಿಗೂ ನಮ್ಮ ಕುಟುಂಬದ ಪರವಾಗಿ ಮತ್ತೊಮ್ಮೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ.



ವಂದನೆಗಳೊಂದಿಗೆ,
ದಿವಂಗತ ಡಿ. ಸುಧಾಕರ್ ಅವರ ಕುಟುಂಬಸ್ಥರು ಮತ್ತು ಬಂಧು-ಮಿತ್ರರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Factory

REQUIRED HELPERS for Plastic Product Manufacturing Co. at Doddaballapur, Bengaluru Rural, free room, Salary 18000/- Contact-9606018797

General

ಚಿಕಬಳ್ಳಾಪುರ ಇಶಾ ಫೌಂಡೇಶನ್ ಬಳಿಯ ಹೋಮ್ ಸ್ಟೇ ನೋಡಿಕೊಳ್ಳಲು ಪ್ರಾಮಾಣಿಕ, ಅನುಭವವಿರುವ ಸಣ್ಣ ಕುಟುಂಬ ಬೇಕಾಗಿದೆ. ವಾಸ್ತವ್ಯ ಸಂಬಳ ಇರುತ್ತದೆ.ಅಡುಗೆ,ಸ್ವಚ್ಛತೆ ಅತಿಥಿ ಸತ್ಕಾರ ತಿಳಿದಿರಬೇಕು. ಸಂಪರ್ಕಿಸಿ:9480385816

Teachers/ Professors

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಮತ್ತು ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು. 08023301363.

ಇತರೆ

Flowers & Plants

'ತೇಗದ ಮರ ಮಾರಾಟಕ್ಕಿವೆ' ಪ್ರಪಂಚದಾದ್ಯಂತ ಜನಪ್ರಿಯತೆ ಹೊಂದಿರುವ ' ನಿಲಂಬೂರು ತೇಗ'ದ ಮರಗಳಿಗಾಗಿ ಸಂಪರ್ಕಿಸಿ : 9739627282

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Mysore

HOUSE FOR SALE : 40/60 SIZE GROUND and FIRST FLOOR. No.3999, 20th Main, Near Hampi circle Back side Road. Vijaya Nagar 2nd Stage MYSORE. Contact: 8073303048

ವೈವಾಹಿಕ

Grooms Wanted

Hindu

BENGALI KAYASTHA girl, 34, 5'5", B.Tech fair pretty working MNC Canada, Toronto as Manager, High pekg, Non veg, never married. Seek educated groom working canada. Excuse Divorce. 9477507531

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೃಷಿ ಜಮೀನನ್ನೂ ಅನ್ಯ ಕಂಪನಿಗೆ ನೀಡಿದ್ದಕ್ಕೆ ಆಕ್ರೋಶ– ಪ್ರತಿಭಟನೆ

ರೈತರು–ಪೊಲೀಸರ ನಡುವೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಕುಡತಿನಿಯ ಬೈಪಾಸ್ ರಸ್ತೆಯಲ್ಲಿ ಭೂಸಂತ್ರಸ್ತ ರೈತರು ಶನಿವಾರ ಪ್ರತಿಭಟನೆ ನಡೆಸಿದರು

ಕುಡತಿನಿ (ಬಳ್ಳಾರಿ ಜಿಲ್ಲೆ): ಕೈಗಾರಿಕೆ ಸ್ಥಾಪಿಸಲು ಸ್ವಾಧೀನಪಡಿಸಿಕೊಂಡ ಕೃಷಿ ಜಮೀನನ್ನು ಅನ್ಯ ಕಂಪನಿಗೆ ನೀಡಿದ್ದನ್ನು ಖಂಡಿಸಿ ನೂರಾರು ಭೂಸಂತ್ರಸ್ತ ರೈತರು ಶನಿವಾರ, ಲಕ್ಷ್ಮಿಮಿತ್ತಲ್ ಕಂಪನಿಯ ಜಮೀನಿಗೆ ಎತ್ತಿನ ಗಾಡಿಗಳ ಮೂಲಕ ನುಗ್ಗಲು ಯತ್ನಿಸಿದರು. ಆಗ ರೈತರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ, ನೂಕಾಟ ಉಂಟಾಯಿತು.

ಪಟ್ಟಣದ ಹೊರವಲಯದ ಬೈಪಾಸ್ ರಸ್ತೆಯಲ್ಲಿ ಪೊಲೀಸರು ಬ್ಯಾರಿಕೇಡ್ ಹಾಕಿದ್ದರು. ರೈತರು, ಬೇರೆ ಮಾರ್ಗದಿಂದ ಜಮೀನಿಗೆ ನುಗ್ಗಲು ಯತ್ನಿಸಿದಾಗ ತಡೆಯಲು ಪೊಲೀಸರು ಹರಸಾಹಸ ಪಟ್ಟರು. ಈ ಸಂದರ್ಭದಲ್ಲಿ ಎತ್ತಿನಗಾಡಿಯೊಂದು ರಸ್ತೆಯಲ್ಲಿ ಬಿತ್ತು. ಮತ್ತೊಂದು ಎತ್ತಿನ ಗಾಡಿ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಹೊರಳಿತು.

> **ರೈತರಿಂದ ಸ್ವಾಧೀನಪಡಿಸಿಕೊಂಡ ಜಮೀನಿಗೆ ನ್ಯಾಯಯುತ ಬೆಲೆಯನ್ನೂ ನೀಡಿಲ್ಲ. ರಾಜ್ಯ ಸರ್ಕಾರ ಈ ಸಮಸ್ಯೆಯನ್ನು ಪರಿಹರಿಸಬೇಕು**
> **ಯು. ಬಸವರಾಜ,** ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ಅಧ್ಯಕ್ಷ

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಯು. ಬಸವರಾಜ ಅವರು, 'ಲಕ್ಷ್ಮಿ ಮಿತ್ತಲ್ ಕಂಪನಿ ಮಾಲೀಕತ್ವದ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಸುಮಾರು 5 ಸಾವಿರ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರು. ಅದರಲ್ಲಿ 800 ಎಕರೆ ಜಮೀನಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸದೆ ಜಿಂದಾಲ್ ಕಂಪನಿಗೆ ಭೂಮಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿರುವುದು ಖಂಡನೀಯ' ಎಂದರು.

ರೈತರನ್ನು ಪೊಲೀಸರು ವಶಕ್ಕೆ ಪಡೆದರು. ವಿವಿಧ ಸಂಘಟನೆಗಳ ಮುಖಂಡರಾದ ಸತ್ಯಬಾಬು, ಜಂಗ್ಲಿಸಾಬ್, ಎಂ. ತಿಪ್ಪೇಸ್ವಾಮಿ, ವಿ. ರಾಜಶೇಖರ್, ವಿ.ಎಸ್. ವೆಂಕಟರಮಣ ಬಾಬು, ತಿಮ್ಮಪ್ಪ, ಬಾವಿ ಶಿವಕುಮಾರ್, ಸಿದ್ದಪ್ಪ, ಮಲ್ಲಯ್ಯ ಇದ್ದರು.

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿವಮೊಗ್ಗ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (KPPP) ಮರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿವಮೊಗ್ಗ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಬಾಲಕರ ಬಾಲಮಂದಿರ, ಸರ್ಕಾರಿ ಬಾಲಕಿಯರ ಬಾಲಮಂದಿರ, ಸರ್ಕಾರಿ ವೀಕ್ಷಣಾಲಯ ಹಾಗೂ ಸರ್ಕಾರಿ ವಿಶೇಷ ದತ್ತು ಸಂಸ್ಥೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ– ಪ್ರಕ್ಯೂರ್‌ಮೆಂಟ್ ಟೆಂಡರ್‌ನ್ನು ಅನುಬಂಧ–1ರಲ್ಲಿ ಲಗತ್ತಿಸಿರುವ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KPPP) 1999 ನಿಯಮಗಳು 2000ರ ಪ್ರಕಾರ ಒಂದು ವರ್ಷದ ಅವಧಿಗೆ KPPP ವೆಬ್‌ಸೈಟ್ ಮೂಲಕ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್‌ದಾರರು ಟೆಂಡರ್ ಬಿಡನ್ನು ದಿನಾಂಕ:15–05–2026 ರಿಂದ 22–05– 2026ರವರೆಗೆ ಸಂಜೆ:4.00 ಗಂಟೆಯೊಳಗೆ https://Kppp.Karnataka.gov.in ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ: DCP/2026-27/SE0261/CALL-2 ದಿನಾಂಕ:15–05–2026.

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಆಲ್ಕೊಳ ಶಿವಮೊಗ್ಗಕ್ಕೆ ದೂರವಾಣಿ ಸಂಖ್ಯೆ:08182–295709ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/75/05/245

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಟ್ರಾಫಿಕ್ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, 2 ನೇ ಮಹಡಿ, 9 ನೇ ಮುಖ್ಯ ರಸ್ತೆ, ಜಯನಗರ 2 ನೇ ಬ್ಲಾಕ್, ಬೆಂಗಳೂರು –560011

ಸಂಖ್ಯೆ: ಕಾಪಾಅ/ಟಿಇ– ಮೊ ಸೆಲ್/ಬೆಂ.ದ.ನ.ಪಾ/ಟೆಂಡರ್/06/2026–27 ದಿನಾಂಕ: 16–05–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಟಿಇ&ಎಂಸಿ (ಬೆಂ.ದ.ನ.ಪಾ) ಇವರು ಆಯುಕ್ತರ ಪರವಾಗಿ, ಬೆಂಗಳೂರು ದಕ್ಷಿಣ ನಗರ ಪಾಲಿಕೆಗೆ ಪದವಿ ಸಿವಿಲ್ ಇಂಜಿನಿಯರ್ / ಡಿಪ್ಲೋಮಾ ಸಿವಿಲ್ ಇಂಜಿನಿಯರ್‌ಗಳೊಂದಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸಲು ಏಜೆನ್ಸಿ ನಿಯೋಜನೆ ಮಾಡಲು ಆನ್‌ಲೈನ್ . ಟೆಂಡರ್‌ಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೆಂಗಳೂರು ದಕ್ಷಿಣ ನಗರ ಪಾಲಿಕೆಗೆ ಪದವಿ ಸಿವಿಲ್ ಇಂಜಿನಿಯರ್/ ಡಿಪ್ಲೋಮಾ ಸಿವಿಲ್ ಇಂಜಿನಿಯರ್‌ಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : ₹.215.32 ಲಕ್ಷಗಳು, ಇಎಂಡಿ ಮೊತ್ತ: ₹.3,25,000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **18–05–2026**ರಿಂದ ದೊರೆಯುತ್ತವೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **22–05–2026**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **22–05–2026**ರ ಸಂಜೆ **4:00** ಗಂಟೆಯವರೆಗೆ. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **30–05–2026**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **01–06–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್‌ಗಳನ್ನು ದಿನಾಂಕ **02–06–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು (ಸಾಧ್ಯವಾದಲ್ಲಿ)

ಸಹಿ/– ಕಾರ್ಯಪಾಲಕ ಅಭಿಯಂತರರು (ವಲಯ–1&2), ಟ್ರಾಫಿಕ್ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, ಬೆಂ.ದ.ನ.ಪಾಲಿಕೆ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ
ಪ್ರಾಂಶುಪಾಲರವರ ಕಛೇರಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ನಂ.2, ಪಿ.ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ ಬೆಂಗಳೂರು–560027
ದೂರವಾಣಿ ಸಂಖ್ಯೆ: 080–22222681

ಸಂಖ್ಯೆ: FFSDA/2025-26/SE0028/Call-2 ದಿನಾಂಕ: 16.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ–2ನೇ ಕರೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನ ಪ್ರಾಧಿಕಾರ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರು ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು. ಇಲ್ಲಿಗೆ ಬೇಕಾಗಿರುವ AMC for Software Maintenance ಒದಗಿಸಲು ಟೆಂಡರ್ ಮೂಲಕ ಸರಬರಾಜುದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಫಾರಂಗಳನ್ನು ವೆಬ್‌ಸೈಟ್: https://kppp.karnataka.gov.in (Karnataka Public Procurement Portal Government of Karnataka) ನಿಂದ **ದಿನಾಂಕ: 16.05.2026 ರಿಂದ 26.05.2026ರ ಸಂಜೆ 5:30 ಗಂಟೆಯವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ ಬಗ್ಗೆ ಪ್ರಶ್ನಾವಳಿ/ವಿಚಾರಿಸಲು ಕೊನೆಯ **ದಿನಾಂಕ: 21.05.2026ರ ಸಂಜೆ 5:30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 01.06.2026 ರಂದು ಬೆಳಿಗ್ಗೆ 11:30 ಗಂಟೆಗೆ** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ : 04.06.2026** ನಂತರ ಆಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕವು ಸಾರ್ವತ್ರಿಕ ರಜೆಯೆಂದು ಘೋಷಿಸಲ್ಪಟ್ಟರೆ, ಅದರ ಮುಂದಿನ ಅಧಿಕೃತ ಕೆಲಸದ ದಿನದಂದು ತಾಂತ್ರಿಕ ಬಿಡ್ ತೆರೆಯಲಾಗುವುದು. ಇತರೆ ವಿವರಗಳನ್ನು **ಪ್ರಾಂಶುಪಾಲರವರ ಕಛೇರಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ನಂ.2, ಪಿ. ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ ಬೆಂಗಳೂರು–560027** ಇಲ್ಲಿ ಖುದ್ದಾಗಿ ಪಡೆಯಬಹುದು.

ಸಹಿ/– ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ಬೆಂಗಳೂರು–560027.

ವಾಸಾಸಂಇ/ವಾಪ್ರ/ಜಿಎ/700/2026–27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.02, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು, ಜಿಲ್ಲೆ: ಮಂಡ್ಯ ಪಿನ್‌ಕೋಡ್–571428

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :02/2026–27 ದಿ:15.05.2026

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ : 02/2026–27 ದಿನಾಂಕ: 15.05.2026 ರಲ್ಲಿ ಒಟ್ಟು ಆರು ಸಂಖ್ಯೆಯ ಕಾಮಗಾರಿಗಳಿಗೆ (ಅಂದಾಜಿನ ಕನಿಷ್ಠ ಮೊತ್ತ 5.00 ಲಕ್ಷ & ಗರಿಷ್ಠ ಮೊತ್ತ 20.00 ಲಕ್ಷ) ಅರ್ಹ ಕೆಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ಕ್ಲಾರಿಫಿಕೇಷನ್‌ಗಾಗಿ as per e-portal, ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಟೆಂಡರ್‌ನ್ನು ತೆರೆಯುವ ದಿನಾಂಕ as per e-portal ಮತ್ತು ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 08231–200282 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.02, ವಿ.ಸಿ.ವಿಭಾಗ, ಮದ್ದೂರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/133/2026–27

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ ಬೈತ್‌ಖೋಲ್, ಕಾರವಾರ

ಕ್ರ.ಸಂ.ಕಜಮಂ–26/ಕಾಮಗಾರಿ–III/2025–26 ದಿನಾಂಕ: 14.05.2026

ಅಲ್ಪಾವಧಿ ಟೆಂಡರು ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000 ರನ್ವಯ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ, ESI ಮತ್ತು EPF ರಲ್ಲಿ ನೋಂದಾಯಿತ ಗುತ್ತಿಗೆದಾರ / ಸಂಸ್ಥೆಗಳಿಂದ 'ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್' ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ನಿಗದಿತ ಸಿಬ್ಬಂದಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಗೆ ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ಅನುಭವವುಳ್ಳ ಆಸಕ್ತ ನೋಂದಾಯಿತ ಸಂಸ್ಥೆ / ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್ ಡಾಕ್ಯೂಮೆಂಟ್ ಮತ್ತು ಇತರ ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in website ನಿಂದ (Download) ಪಡೆದುಕೊಳ್ಳಬಹುದಾಗಿದೆ.

ಕಾಮಗಾರಿಯ ಹೆಸರು: **Providing Security Guards (with arms), Security Guards (without arms), Security Supervisor through outsource basis for Karwar and Old Mangalore port. Service Estimate Number (IDD/2026-27/SE0071),** ಟೆಂಡರ್‌ನ ವೆಚ್ಚ ರೂ. **1,66,39,200.00** (GST ಹೊರತುಪಡಿಸಿ), ಇ.ಎಂ.ಡಿ: ರೂ. **2,50,000.00** ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: **22.05.2026 @ 17.00 hours,** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **27.05.2026 @17.00 hours**

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ಸಾಮಾನ್ಯ ವಿಚಾರಣೆಗಾಗಿ ಟೆಂಡರ್‌ನ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕದೊಳಗೆ ಈ ಕಛೇರಿಯ E-mail: piwtdev.wks@gmail.com ಅಥವಾ ದೂರವಾಣಿ ಸಂ.: 08382 221035/221494ಕ್ಕೆ ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಬಂದರು ಇಂಜಿನೀಯರ್ ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/135/26-27
Dt: 14.05.2026

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್/ಸಿಆರ್–01/2025–26 ದಿನಾಂಕ:15.05.2026

ಅಲ್ಪಾವದಿ ಮರು ಇ–ಟೆಂಡರ್ (ಕಾಲ್ –3) ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026–27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ನೆಡುತೋಪು ರಚನೆ, ನೆಡುತೋಪು ನಿರ್ವಹಣೆ ಮತ್ತು ವಿವಿಧ ಅಳತೆಯ ಸಸಿಗಳ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2025–26 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:22.05.2026 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/67/05/235

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಇವರ ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕನೀನಿನಿ, ಜಿಎಲ್‌ಬಿಸಿ, ವಿಭಾಗ ನಂ–1 ಘಟಪ್ರಭಾ ತಾ॥ಗೋಕಾಕ,

ಸಂ: ಘ.ಎ.ದಂ.ಕಾ./ವಿ–1/ಪಿಬಿಇ/2025–26/198 ದಿನಾಂಕ:16.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿತ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿಎಲ್‌ಬಿಸಿ, ವಿಭಾಗ ನಂ. 1 ಘಟಪ್ರಭಾ ಕಚೇರಿ ವ್ಯಾಪ್ತಿಯಲ್ಲಿ Standard Tender Document/Works/(KW- 1 & KW-3) ಪದ್ಧತಿಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗಿನಂತೆ ಅಹ್ವಾನಿಸಲಾಗಿದೆ.

Notification No.197 dated: 16.05.2026

ಕ್ರ.ಸಂ:1:ಕಾಮಗಾರಿ ಇಂಡೆಂಟ್ ಸಂಖ್ಯೆ:KNNL/2025-26/BB/ WORK_INDENT4269/CALL-2, ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ: 160.80, ಮಿಸಲಾತಿ: –

1.ಗುತ್ತಿಗೆದಾರರ ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ 19.05.2026 [11.00 PM ಗೆ]. 2. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:19.05.2026 [11.30 AM ಗೆ] 3.ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:25.05.2026 [5.00 PM ಗೆ]. 4. KPP Portal ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.05.2026 [11.00 AM ಗೆ]. 5. KPP Portal ಮುಖಾಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು KPP Portal ನಲ್ಲಿ ನೊಡಿಕೊಳ್ಳಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು ಘ.ಎ.ದಂ ಕಾಲುವೆ ವಿಭಾಗ ನಂ–1, ಘಟಪ್ರಭಾ

DIPR/BGM/RO-NO-261/KSMCA/2026-27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 4701 ಲೆಕ್ಕ ಶೀರ್ಷಿಕೆಯ Providing and Making Cattle Proof Trench (CPT) and fixing Boundary Stone pillars for compensatory Afforest Land (CA) Land & Marshettihalli State resevre Forest in Gubbi,Tumkur & Chikkanayakanahalli Taluk for Yettinahole project ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.24.48 ಲಕ್ಷಗಳ ಕಾಮಗಾರಿಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ದಿ:18–05–2026 ರಿಂದ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಸರ್ಕಾರಿ ಬಾಲಕರ ಬಾಲಮಂದಿರ, ಬೆಂಗಳೂರು, ಡಾ. ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು ನಗರ ಜಿಲ್ಲೆ. ದೂರವಾಣಿ : 080–29561226,
ಇ–ಮೇಲ್ : balakaramandira@gmail.com

ಸಂಖ್ಯೆ : ಬಾಬಾಮಂ/ಬೆಂನ/ಪ.ಪ್ರ/2026–27/29 ದಿನಾಂಕ 15.05.2026

ಬಾಲಕರಾದ **1. ಬೇಜುಬಾನ್** 16ವರ್ಷ, **2. ರಾಮು (ಮೂಗ)** (ಅನಾಮಧೇಯ) 16ವರ್ಷ, **3. ರಂಗ (ಮೂಗ)** (ಅನಾಮಧೇಯ) 15ವರ್ಷ, **4. ರಾಜು (ಮೂಗ & ಕಿವುಡ)** (ಅನಾಮಧೇಯ) 15 ವರ್ಷ, **5. ಮೊಹಮ್ಮದ್ ರಫೀಕ್** 14 ವರ್ಷ ಹಾಗೂ **6. ದೇವರಾಜ್** 8 ವರ್ಷ, **ಸದರಿ ಬಾಲಕರು ಸರ್ಕಾರಿ ಬಾಲಕರ ಬಾಲಮಂದಿರ,** ಕಿದ್ವಾಯಿ ಆಸ್ಪತ್ರೆ ಹಿಂಭಾಗ, ಹೊಸೂರು ರಸ್ತೆ, ಬೆಂಗಳೂರು ಈ ಸಂಸ್ಥೆಯಲ್ಲಿ ಅಭಿರಕ್ಷಣೆಯಲ್ಲಿದ್ದು, ಈವರೆವಿಗೂ ಬಾಲಕರ ಪೋಷಕರ ಪತ್ತೆಯಾಗಿರುವುದಿಲ್ಲ. ಸಂಬಂಧಪಟ್ಟವರು ಯಾರಾದರೂ ಇದ್ದಲ್ಲಿ ಮೇಲ್ಕಂಡ ವಿಳಾಸ ಸಂಪರ್ಕಿಸುವುದು.

ಸಂಪರ್ಕ ಸಂಖ್ಯೆ: 8105826929

1. ಬೇಜುಬಾನ್

2. ರಾಮು

3. ರಂಗ

4. ರಾಜು

5. ಮೊಹಮ್ಮದ್ ರಫೀಕ್

6. ದೇವರಾಜ್

ಸಹಿ/– ಅಧೀಕ್ಷಕರು ಸರ್ಕಾರಿ ಬಾಲಕರ ಬಾಲಮಂದಿರ ಬೆಂಗಳೂರು

ವಾಸಾಸಂಇ/ವಾಪ್ರ/704/ಶಿರಡಿ ಸಾಯಿ/2026–27

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು.

ಸಂಖ್ಯೆ : 05/2026–27 ದಿನಾಂಕ: 15.05.2026

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯೂ–2ರಿಂದ ಕೆ.ಡಬ್ಲ್ಯೂ–4ರ ರ ರೀತ್ಯ ಒಟ್ಟು 09 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಮೊತ್ತ ಕನಿಷ್ಠ **ರೂ.40.00 ಲಕ್ಷಗಳು** ಮತ್ತು ಗರಿಷ್ಠ **ರೂ. 200.00 ಲಕ್ಷಗಳಾಗಿರುತ್ತದೆ,** ಇ.ಎಂ.ಡಿ ಕನಿಷ್ಠ **ರೂ 0.64 ಲಕ್ಷಗಳು** ಮತ್ತು ಗರಿಷ್ಠ **ರೂ 2.41 ಲಕ್ಷಗಳಾಗಿರುತ್ತದೆ.**

ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವದಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್" ನಲ್ಲಿ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್'ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

1) ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ: **ದಿನಾಂಕ 02.06.2026, ಸಂಜೆ 5–30 ಗಂಟೆ**

2)ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: **03.06.2026, ಸಂಜೆ 5–30 ಗಂಟೆ**

3) ಬಿಡ್ ತೆರೆಯುವ ದಿನಾಂಕ : **05.06.2026 ರ ಬೆಳಿಗ್ಗೆ 11–00 ಗಂಟೆ ನಂತರ.**

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು, ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಗಳನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಸನೀ ಮತ್ತು ಅಂ.ಅ ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/194/ಎಸ್‌ಎಸ್‌ಸಿ/2026–27

BANGALORE DEVELOPMENT AUTHORITY
T. Chowdaiah Road, Kumara Park West, Bengaluru - 560 020

OFFICE OF THE COMMISSIONER, BANGALORE DEVELOPMENT AUTHORITY, BENGALURU

PRELIMINARY NOTIFICATION UNDER SECTION 17(1) & (3) OF BDA ACT 1976

No. BDA/BBC80LAC/1/2026/BBC8, Bangalore Date: 23.04.2026

Whereas it appears to the Bangalore Development Authority, that the lands specified in the Schedule hereto are likely to be required for the public purpose i.e., for the **"formation of Peripheral Ring Road (PRR)" Between Hosur Road - Mysore Road and Tumkur Road (Part-II)** in the outskirts of Bengaluru City.

Notice to that effect is hereby given to all whom it may concern in accordance with the provisions **of Sub-Section (1) & (3) of Section 17 of Bangalore Development Authority Act 1976** (Karnataka Act No. 12 of 1976).

In accordance with Section 36 of **BDA Act, the Special Land Acquisition Officer, Bangalore Development Authority, Bengaluru,** his staff and workmen are hereby authorized to exercise the power conferred under **Section 4(2) of Land Acquisition Act 1894.**

Any persons interested in the land may prefer his/her objections within **30 days** from the date of publication of this Notification to the **Special Land Acquisition Officer, Bangalore Development Authority, T.Chowdaiah Road, Bengaluru-560 020.**

In respect of column No.2 of this notification where Khatedars name is not mentioned, any person having interest in these lands may also prefer their objection with relevant Revenue Records to prove their title over land within 30 days from the date of publication of this notification.

All persons interested in the said lands are hereby warned not to obstruct or interfere with any Surveyor or any persons employed upon to the said lands for the purpose of said Acquisition. Any contracts for the disposal of the said lands by **Sale, Mortgage, Assignment, Exchange or otherwise or any outlay or Improvements** made there-in without sanction of the **Deputy Commissioner (Land Acquisition), Bangalore Development Authority, Bengaluru-560 020,** after the date of publication of this Notification shall under **Section 24 (Clause Seventhly) of the Land Acquisition Act 1894,** be disregarded by the Officer assessing compensation for such parts of the said lands as may be finally acquired.

The particulars of the Scheme, the **Maps** of the area comprised therein and the statement specifying the lands which is proposed to be acquired may be seen in the **Office of the Special Land Acquisition Officer, Bangalore Development Authority, Bengaluru,** during the office hours on all working days.

SCHEDULE

Name of the District	Name of the Taluk	Name of the Hobli	Village Name	Page No.
Bengaluru Urban	Bengaluru South	Beguru	Basavanapura	1

Sl. No.	Name of the Khathedars / Anubhavadars Smts/Sriuthas	Sy. No.	Hissa	Whether/ Dry / Wet/ Garden	Total Extent		Kharabh Extent		Remaining Extent		Assesment	Extent Proposed for Acquisition		Boundaries			
					A	G	A	G	A	G		A	G	East	West	North	South
1	2	3	4	5	6		7		8		9	10		11	12	13	14
Village: Basavanapura					Hobli: Begur									Taluk: Bengaluru South			
1	Rashmidevi W/o Sajjanrao	9	3	Dry	4	30	0	21	4	9	9.90	3	2	Road	8/4, 7	9/2	9/3 Part

Helpline / Whatsapp: 9483166622 (24x7) @BDAOfficialGok

Sd/- Commissioner, Bangalore Development Authority

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/
Phone/Fax No.08172-231699, 231599,
Email:directorhims@yahoo.com

No : HIMS/ACC/SCT/1/2026-ACCT-HIMS-HSN
Date: 13.05.2026

ಇ–ಟೆಂಡರ್ ಪ್ರಕಟಣೆ

ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಮತ್ತು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯವಿರುವ ಟ್ಯಾಬ್ ಮತ್ತು ಇತರೆ ಪರಿಕರಗಳು ಮತ್ತು ವೈದ್ಯಕೀಯ ಪುಸ್ತಕಗಳನ್ನು ಸರಬರಾಜಿಗಾಗಿ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. Sl.No.Name of the Equipments 1)Tabs Qty 205 EMD 67,000/- 2)Stethoscope (for Medical Students) Qty 39 EMD 25,000/- 3)Stethoscope (for other students) Qty 138 EMD 25,000/- 4)Emergency table Lamp Qty 39 EMD 25,000/- 5)B P Monitor Qty 177 EMD 25,000/- 6)Apron Qty 233 EMD 25,000/- 7)Medical Books Qty Refer Tender document EMD 50,000/- ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ(ಹಿಂದಿರುಗಿಸಲಾಗುವುದಿಲ್ಲ)ದೊಡನೆ ಇ–ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ:15.05.2026.ರಿಂದ ಪ್ರಾರಂಭವಾಗುವುದು,ಭರ್ತಿ ಮಾಡಿದ ಇ–ಟೆಂಡರ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ:29.05.2026.ರ ಸಂಜೆ 5.00ಗಂಟೆ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/142/ಕೆಎಸ್‌ಎಂಸಿಎ/2026–27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ. ದೂರವಾಣಿ: 08426–281027.
ಇ–ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆವಿ/ಪಿಬಿ/ಟೆಂಡರ್/2026–27/231
ದಿನಾಂಕ:13.05.2026

ಕೊಟೇಶನ್ ದರವನ್ನು ಪಡೆಯುವ ಕುರಿತು

ಆಲಮಟ್ಟಿ ಆಣೆಕಟ್ಟಿಗೆ ಸಂಬಂಧಿಸಿದ ಕಾಮಗಾರಿಯ ಅಂದಾಜು ಪತ್ರಿಕೆಯನ್ನು ತಯಾರಿಸಿ ಸಲ್ಲಿಸಲು ದರಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸಲು ಕೋರಲಾಗಿದೆ. ಕೆಲಸದ ವಿವರ ಈ ಕೆಳಗಿನಂತಿದೆ.

1. AI Enforcement ANPR Cameras
2. PTZ Cameras
3. IP Varifocal Face Detection Bullet Cameras
4. Active LED video wall
5. Surveillance system
6. Boom Barrier System with UHF Reader
7. X Ray Baggage Scanner
8. Door Frame Metal Detectors
9. Portable Under Vehicle Surveillance System and accessories

ಮೇಲೆ ಹೇಳಿರುವ ಕೆಲಸಗಳ ವಿವರವಾದ ಮಾಹಿತಿಗಾಗಿ ಹಾಗೂ ಇನ್ನಿತರ ಮಾಹಿತಿಗಾಗಿ ಖುದ್ದಾಗಿ ಈ ಕಚೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ದರಪಟ್ಟಿಯನ್ನು ನೀಡುವದಕ್ಕಿಂತ ಮೊದಲು ಸ್ಥಳ ಪರಿಶೀಲಿಸಲು ವಿನಂತಿಸಲಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೋಹರಬಂದ ಆಗಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದುಪಡಿಸುವ ಹಕ್ಕು ಈ ಕಚೇರಿಗೆ ಇರುತ್ತದೆ. ನಿಮ್ಮ ಶಿಲ್ಡ್ ಕೋಟೇಶನ್‌ಗಳನ್ನು ಪಡೆಯುವ ಕೊನೆಯ ದಿನಾಂಕ: 21.05.2026.

ಸಂಪರ್ಕಿಸುವ e-mail ವಿಳಾಸ:
dam_division@rediffmail.com,
aeegates26@gmail.com

ಸಂಪರ್ಕಿಸುವ ದೂರವಾಣೆ ಸಂಖ್ಯೆ: Sri Tarasing Dodamani, EE Mob No: 94484 05892, Sri.Vithal Jadhav,A.E. Ph.No. 9480165309

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.

ವಾಸಾಸಂಇ/ವಿಜಯಪುರ/97/ಕೆಎಸ್‌ಎಂಸಿಎ/2026–27

ಜೂನ್ 1ಕ್ಕೆ ಶಾಲಾ ಪ್ರಾರಂಭೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಾಲೆಗಳು ಜೂನ್ 1ರಿಂದ ಆರಂಭವಾಗಲಿದ್ದು, ಅಂದೇ ಪ್ರೋತ್ಸಾಹಕ-ಶಿಕ್ಷಕರ ಮಹಾ ಸಭೆಯನ್ನೂ ಆಯೋಜಿಸಲಾಗುತ್ತಿದೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, 2026–27ನೇ ಸಾಲಿನ ಶೈಕ್ಷಣಿಕ ವರ್ಷದ ಸಿದ್ಧತೆಗಳ ಕುರಿತು ಇಲಾಖೆಯ ಅಧಿಕಾರಿಗಳ ಜತೆಗೆ ಹಾಗೂ ರಾಜ್ಯದ 46,000 ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರ ಜತೆ ಶನಿವಾರ ಸಂವಾದ ನಡೆಸಿದರು.

ನಂತರ ಮಾತನಾಡಿ, 'ಹೊಸ ಶೈಕ್ಷಣಿಕ ವರ್ಷದ ಆರಂಭದ ದಿನ ಮಕ್ಕಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಾಗತಿಸಲಿದ್ದಾರೆ. ನಂತರ ಪೋಷಕ-ಶಿಕ್ಷಕರ ಜತೆ ನೇರ ಸಂವಾದ ನಡೆಸುವರು. ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಎಸ್ಎಸ್ಎಲ್‌ಸಿ ಮತ್ತು ಪಿಯು ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶಕ್ಕೆ ಶ್ರಮಿಸಿದ ಶಿಕ್ಷಕರು, ಅಧಿಕಾರಿಗಳನ್ನು ಗೌರವಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಗರಿಷ್ಠ ಮಟ್ಟಕ್ಕೆ ಏರಿಸುವುದು ಮೊದಲ ಆದ್ಯತೆಯಾಗಬೇಕು. ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಮರಳಿ ಶಾಲೆಗೆ ಕರೆತರಬೇಕು. ಶಾಲಾ ಆರಂಭದಲ್ಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಸೇರಿದಂತೆ ಎಲ್ಲಾ ಅಗತ್ಯ ಸಾಮಗ್ರಿಗಳನ್ನು ವಿತರಿಸಲು ಸೂಚಿಸಲಾಗಿದೆ' ಎಂದರು.

'ಸಿದ್ದರಾಮಯ್ಯನವರೇ ಬಿಡದಿಗೆ ಬನ್ನಿ'

ಅಧ್ಯಕ್ಷರ ಒತ್ತಡಕ್ಕೆ ಮಣಿದು ರೈತ ವಿರೋಧಿ ನಿಲುವು ತಳೆಯಬೇಡಿ: ಎಚ್.ಡಿ. ದೇವೇಗೌಡ

ದೇವೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ಸ್ನೇಹಿತ ಮತ್ತು ಇಬ್ಬರೂ ಒಟ್ಟಿಗೆ ಕೆಲಸ ಮಾಡಿದ್ದೇವೆ. ಸಿದ್ದರಾಮಯ್ಯ ಅವರು ನನ್ನೊಂದಿಗೆ ಬರಲಿ. ಟೌನ್‌ಶಿಪ್ ಹೆಸರಿನಲ್ಲಿ ಬಿಡದಿ ರೈತರ ಮೇಲಾಗುತ್ತಿರುವ ದೌರ್ಜನ್ಯ ಅವರಿಗೆ ಅರ್ಥವಾಗುತ್ತದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಸಿದ್ದರಾಮಯ್ಯ ಅವರು ಬಡವರು, ಹಿಂದುಳಿದವರ ಬಗ್ಗೆ ಮಾತನಾಡುತ್ತಾರೆ. ಅಂತಹವರ ಪರವಾಗಿ ನಿರ್ಧಾರ ತೆಗೆದುಕೊಳ್ಳುವ ಸಮಯವಿದು. ಅವರ ಪಕ್ಷದ ರಾಷ್ಟ್ರ ಘಟಕದ ಅಧ್ಯಕ್ಷರ ಒತ್ತಡಕ್ಕೆ ಮಣಿದು, ಸಿದ್ದರಾಮಯ್ಯ ಅವರು ರೈತ ವಿರೋಧಿ ನಿಲುವು ತಳೆಯಬಾರದು. ಬಿಡದಿ ರೈತರ ಸಮಸ್ಯೆಯನ್ನು ಶಾಸಕರು, ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳು ಕೇಳುತ್ತಿಲ್ಲ. ಸಿದ್ದರಾಮಯ್ಯ ಅವರಾದರೂ ನನ್ನೊಂದಿಗೆ ಬಂದರೆ, ಅವರಿಗೆ ವಸ್ತುಸ್ಥಿತಿಯನ್ನು ಅರ್ಥಮಾಡಿಸುತ್ತೇವೆ' ಎಂದು ಹೇಳಿದರು.

'ಸಿದ್ದರಾಮಯ್ಯ ಅವರ ಸಾಮಾಜಿಕ ನ್ಯಾಯದ ಬಗ್ಗೆ ಚೆನ್ನಾಗಿ ಗೊತ್ತಿದೆ. ಆ ಕಾರಣಕ್ಕೆ ಅವರಿಗೆ ಪತ್ರ ಬರೆದು, ಬೆಂಗಳೂರು ಸುತ್ತಮುತ್ತ ಸುಮಾರು 20,000 ಎಕರೆ ಭೂಮಿ ಕೇಂದ್ರ ಮಂದಿಯ ತೆಕ್ಕೆಯಲ್ಲಿದೆ. ಈ ಬಗ್ಗೆ ತನಿಖೆ ನಡೆಸಿ ಎಂದು ಹೇಳಿದ್ದೆ, ಆದರೆ ಅವರು ಏಕೋ ಅತ್ತ ಮನಸ್ಸು ಮಾಡಲಿಲ್ಲ' ಎಂದರು.

'ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿ ಕಸಿದುಕೊಳ್ಳಲಾಗುತ್ತಿದೆ. ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ₹250 ಕೋಟಿ ವೆಚ್ಚದಲ್ಲಿ ಆ ಭಾಗಕ್ಕೆ ನೀರಾವರಿ ಕಲ್ಪಿಸಿದ್ದರು. ನೀರಾವರಿಯ ಕಾರಣಕ್ಕೆ ಬಿಡದಿ ಸುತ್ತಮುತ್ತ ಕೃಷಿ ಮತ್ತು ಹೈನುಗಾರಿಕೆ ಅಭಿವೃದ್ಧಿಯಾಗಿದೆ. ಅಂತಹ ಚಿನ್ನದ ಭೂಮಿಯನ್ನು ಕಸಿದುಕೊಳ್ಳುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

'ಬೆಂಗಳೂರಿನಲ್ಲಿ ವಾಹನ ಮತ್ತು ಜನದಟ್ಟಣೆ ಕಡಿಮೆ ಮಾಡಬೇಕು ಎಂದು ಹೊಸಕೋಟೆ, ಮಾಗಡಿ, ಬಿಡದಿ ಸೇರಿ ಐದು ಕಡೆ ಟೌನ್‌ಶಿಪ್ ಮಾಡಲು ಕುಮಾರಸ್ವಾಮಿ ಮುಂದಾಗಿದ್ದರು. ಜನರಿಂದ ವಿರೋಧ ವ್ಯಕ್ತವಾದ ಕಾರಣ, ಅದನ್ನು ಕೈಬಿಟ್ಟರು. ಈಗ ಅದೇ ಯೋಜನೆಯನ್ನು ನಾವೇ ಆರಂಭಿಸಿದ್ದೇವೆ ಎಂದು ಕೆಲವರು ಹೇಳುತ್ತಿದ್ದಾರೆ. ವಾಸ್ತವದಲ್ಲಿ ಟೌನ್‌ಶಿಪ್ ಹೆಸರಿನಲ್ಲಿ ಭೂಮಿಯನ್ನು ಕಬಳಿಸಲಾಗುತ್ತಿದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರೈತರಿಂದ ಹೊಡೆಸಿಕೊಂಡು ಬರಲಿ'

'ಬಿಡದಿ ರೈತರು ತನಗೆ ಒಂದು ಹೊಡೆದರೂ ಪರವಾಗಿಲ್ಲ' ಎಂದು ಬಿಡದಿ ಟೌನ್‌ಶಿಪ್ ಮಾಡಲು ಹೊರಟಿರುವ ವ್ಯಕ್ತಿ ಹೇಳಿದ್ದಾರೆ. ಅವರು ರೈತರ ಬಳಿಗೆ ಹೋಗಿ, ಹೊಡೆಸಿಕೊಂಡು ಬರಲಿ. ಅನಂತರ ಅವರೊಂದಿಗೆ ಮಾತನಾಡುತ್ತೇನೆ' ಎಂದು ದೇವೇಗೌಡ ಹೇಳಿದರು.

ಡಿ.ಕೆ.ಶಿವಕುಮಾರ್ ಹೆಸರು ಉಲ್ಲೇಖಿಸದೇ ಅವರು ಹೀಗೆ ಹೇಳಿದರು. 'ನೀರಾವರಿ ಖಾತೆ, ಬೆಂಗಳೂರು ಅಭಿವೃದ್ಧಿ ಖಾತೆ, ಕಾಂಗ್ರೆಸ್ ರಾಜ್ಯ ಘಟಕದ ಹುದ್ದೆಯ ಹೊಣೆಯನ್ನು ಒಬ್ಬರೇ ಹೊತ್ತಿದ್ದಾರೆ. ಅವರು ಮುಖ್ಯಮಂತ್ರಿ ಆಗಬೇಕೆಂದು ಒಬ್ಬರಿಂದಲೇ ಆಗಿದೆಯಂತೆ. ದಿನವೂ ಇವರ ಮನೋರಂಜನೆ ನೋಡಿ ಸಾಕಾಗಿದೆ' ಎಂದರು. 'ಇವರೆಲ್ಲ ಮೊದಲು, 'ದೇವೇಗೌಡರು ಸುದ್ದಿಗೋಷ್ಠಿಯಲ್ಲಿ ಕಣ್ಣೀರಿಡುತ್ತಾರೆ' ಎಂದು ಟೀಕೆ ಮಾಡುತ್ತಿದ್ದರು. ಈಗ ಇವರ ಈ ಮನೋರಂಜನೆಯನ್ನು ನೋಡಿ ನಾನು ದಿನವೂ ನಗುತ್ತಿದ್ದೇನೆ' ಎಂದು ಹೇಳಿದರು.

'ಬೆದರಿಸಿ ಆಸ್ತಿ ಬರೆಯಿಸಿಕೊಂಡ ಕುಟುಂಬ'

ಶಿವಕುಮಾರ್

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಕುಟುಂಬ ರಿಯಲ್ ಎಸ್ಟೇಟ್ ಮೂಲಕ ಆಸ್ತಿ ಮಾಡಿಕೊಂಡಿದ್ದಾರೆ. ಉದ್ದೇಶಿತ ಪಿಆರ್‌ಆರ್ ರಸ್ತೆಯ ಆಸುಪಾಸಿನ ಜನರನ್ನು ಹೆದರಿಸಿ, ಅವರ ಅಣ್ಣ ಆಸ್ತಿಗಳನ್ನು ಬರೆಯಿಸಿಕೊಂಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಡದಿ ಉಪನಗರ ಯೋಜನೆಗೆ ಅಧಿಸೂಚನೆ ಹೊರಡಿಸಿದ್ದೇ ಕುಮಾರಸ್ವಾಮಿ. ಪಿಆರ್‌ಆರ್ ರಸ್ತೆ ನೆಪದಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸಿದ್ದಾರೆ. ದೊಡ್ಡಗುಬ್ಬಿ, ಚಿಕ್ಕಗುಬ್ಬಿ ಭಾಗದಲ್ಲಿ ಜನರನ್ನು ಹೆದರಿಸಿ, ಆಸ್ತಿಗಳನ್ನು ₹7 ಲಕ್ಷ, ₹ 8 ಲಕ್ಷ, ₹10 ಲಕ್ಷಕ್ಕೆ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂಬ ದೂರುಗಳಿವೆ. ಆಗ ಬರೆಯಿಸಿಕೊಂಡ ಆಸ್ತಿಗಳ ಮೌಲ್ಯ ಈಗ ಕ್ರಮವಾಗಿ ₹25 ಕೋಟಿ, ₹30 ಕೋಟಿ, ₹50 ಕೋಟಿಗಳಷ್ಟಾಗಿದೆ' ಎಂದರು.

'ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆ ಬಗ್ಗೆ, ಚಿನ್ನ ಖರೀದಿ ಮಾಡಬೇಡಿ ಎಂಬ ಪ್ರಧಾನಮಂತ್ರಿ ಹೇಳಿಕೆ ಬಗ್ಗೆ ಏಕೆ ಮಾತನಾಡುತ್ತಿಲ್ಲ. ಬೇರೆಯವರ ವಿರುದ್ಧ ಟೀಕೆ ಮಾಡುವುದು ಬಿಟ್ಟರೆ ಅವರಿಗೆ ಬೇರೆ ಕೆಲಸವೇ ಇಲ್ಲ' ಎಂದರು.

'ಜನ್ಮದಿನಕ್ಕೆ ಅಧಿಕಾರ ಹಸ್ತಾಂತರವಾಗಲಿದೆ ಎಂದು ಕನಸು ಕಾಣುತ್ತಿದ್ದೆ ಎಂಬುದಾಗಿ ಎಚ್.ಡಿ. ದೇವೇಗೌಡರು ಹೇಳಿದ್ದಾರೆ. ಸಮ್ಮಿಶ್ರ ಸರ್ಕಾರ ಇದ್ದಾಗ ಅವರ ಮಗ ಅಧಿಕಾರ ಹಸ್ತಾಂತರ ವಿಚಾರದಲ್ಲಿ ಏನು ಮಾಡಿದ್ದರು ಎನ್ನುವುದನ್ನು ನೆನಪು ಮಾಡಿಕೊಳ್ಳಬೇಕು. ಆಮೇಲೆ ಬೇರೆ ವಿಚಾರದ ಬಗ್ಗೆ ಮಾತನಾಡಬೇಕು. ಶುಲ್ಕ ಪಾವತಿಸಿ, ಖಾತಾ ಬದಲಾವಣೆ ಮಾಡಿಕೊಳ್ಳಬಾರದು, ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದಿರುವ ಕುಮಾರಸ್ವಾಮಿ ಹಗಲುಗನಸು ಕಾಣುತ್ತಿರುತ್ತಾರೆ. ಅವರ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ' ಎಂದು ಟೀಕಿಸಿದರು.

'ಬಿಜೆಪಿಯವರ ಸಲಹೆ ಪಡೆದೇ ಕೆಲಸ'

ಬೆಂಗಳೂರು ಅಭಿವೃದ್ಧಿ ವಿಷಯದಲ್ಲಿ ನನ್ನ ಕೆಲಸದ ಬಗ್ಗೆ ಬಿಜೆಪಿಯವರೇ ಖುಷಿ ಪಡುತ್ತಿದ್ದಾರೆ. ಅವರ ಸಲಹೆ ಪಡೆದೇ ಕೆಲಸ ಮಾಡುತ್ತಿದ್ದೇನೆ' ಎಂದು ಶಿವಕುಮಾರ್ ಹೇಳಿದರು.

'ಅವರು ಅಧಿಕಾರದಲ್ಲಿ ಇದ್ದಾಗ ಬಡವರಿಗಾಗಿ ಒಂದಾದರೂ ಕೆಲಸ ಮಾಡಿದ್ದಾರಾ? ಜನರಿಗೆ ಕುಡಿಯುವ ನೀರು ಕೊಡಿಸಲು ಆಗಿರಲಿಲ್ಲ. ನಾವು ಕೆಲಸ ಮಾಡಿದ್ದೇವೆ. ಜನರ ಆಸ್ತಿ ದಾಖಲೆ ಸರಿ ಮಾಡಲಾಗುತ್ತಿದೆ. ಬೆಂಗಳೂರು ನಗರದಲ್ಲಿ ಆಡಳಿತ ಸುಧಾರಣೆಗೆ ಐದು ಪಾಲಿಕೆ ಮಾಡಲಾಗಿದೆ. ಕೆಲವರು ಅಸೂಯೆಯಿಂದ ಕೈ ಹಿಸುಕಿಕೊಂಡು ಟೀಕೆ ಮಾಡುತ್ತಿದ್ದಾರೆ. ಅವರಿಗೆ ಹೊಟ್ಟೆಯುರಿ ಬಿಟ್ಟು ಬೇರೆ ಏನೂ ಇಲ್ಲ' ಎಂದು ಕುಮಾರಸ್ವಾಮಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಎಸ್‌ಇಪಿ ಪರಾಮರ್ಶೆಗೆ ಸಂಪುಟ ಉಪಸಮಿತಿ ರಚನೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗವು (ಎಸ್‌ಇಪಿ) ಸಲ್ಲಿಸಿರುವ ಅಂತಿಮ ವರದಿಯನ್ನು ಪರಾಮರ್ಶಿಸಿ, ಸೂಕ್ತ ಶಿಫಾರಸು ಗಳನ್ನು ಮಾಡಲು ಗೃಹ ಸಚಿವ ಜಿ.ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯನ್ನು ಸರ್ಕಾರ ರಚಿಸಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಈಚೆಗೆ ನಡೆದಿದ್ದ ಸಂಪುಟ ಸಭೆಯಲ್ಲಿ ವರದಿಯ ಕುರಿತು ವಿಸ್ತೃತವಾಗಿ ಚರ್ಚೆ ನಡೆಸಲಾಗಿತ್ತು. ವರದಿಯನ್ನು ಅಧ್ಯಯನ ಮಾಡಿ, ಶಿಫಾರಸುಗಳ ಅನುಷ್ಠಾನಕ್ಕೆ ವರದಿ ನೀಡಲು ಉಪ ಸಮಿತಿ ರಚಿಸಲು ನಿರ್ಧರಿಸಿ, ಸಮಿತಿಯ ರಚನೆ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿತ್ತು.

ಬಿಜೆಪಿ ಆಡಳಿತದ ಅವಧಿಯಲ್ಲಿ ತರಾತುರಿಯಲ್ಲಿ ಸಿದ್ಧಪಡಿಸಿದ್ದ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ರದ್ದು ಮಾಡುವುದಾಗಿ ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ರಾಷ್ಟ್ರೀಯ ಶಿಕ್ಷಣ ನೀತಿ ಬದಲು ರಾಜ್ಯ ಶಿಕ್ಷಣ ನೀತಿ ರೂಪಿಸಲು ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು. 2,197 ಪುಟಗಳಿರುವ ಮೂರು ಸಂಪುಟ ಒಳಗೊಂಡ ತನ್ನ ಅಂತಿಮ ವರದಿಯನ್ನು ಜುಲೈ 8ರಂದು ಸರ್ಕಾರಕ್ಕೆ ಸಲ್ಲಿಸಿತ್ತು.

ಹಿಂದೂ ಮಹಿಳೆಗಾಗಿ ನೆರವು ಯಾಚಿಸಿದ ಮುಸ್ಲಿಂ ಮಹಿಳೆಯರು

ಉಡುಪಿ: 35 ವರ್ಷಗಳ ಹಿಂದೆ ಸರ್ಕಾರದಿಂದ ನಿವೇಶನ ಮಂಜೂರು ಆಗಿದ್ದರೂ ಅರಣ್ಯ ಇಲಾಖೆಯ ಅಡ್ಡಿಯಿಂದಾಗಿ ಮನೆ ಕಟ್ಟಲಾಗದೆ ಸಂಕಷ್ಟಕ್ಕೆ ಸಿಲುಕಿರುವ ವಿಧವೆ, ಹಿಂದೂ ಮಹಿಳೆಯೊಬ್ಬರ ಪರ ನೆರೆಮನೆಯ ಮುಸ್ಲಿಂ ಮಹಿಳೆಯರು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ ಅವರಲ್ಲಿ ಶನಿವಾರ ನೆರವು ಯಾಚಿಸಿದರು.

ತಾಲ್ಲೂಕಿನ 80 ಬಡಗಬೆಟ್ಟು ನಿವಾಸಿ ಗಿರಿಜಾ ಶೆಟ್ಟಿಗಾರ್ ಎಂಬುವವರು ಒಬ್ಬಂಟಿಯಾಗಿ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. ಅವರಿಗೆ 1989ರಲ್ಲಿ ಭೂರಹಿತರಿಗೆ ವಿತರಿಸಲಾಗುವ ವಸತಿ ನಿವೇಶನ ಯೋಜನೆಯಡಿ 5 ಸೆಂಟ್ಸ್ ಭೂಮಿ ಮಂಜೂರಾಗಿ, ಹಕ್ಕುಪತ್ರವನ್ನು ನೀಡಲಾಗಿತ್ತು. ಆದರೆ ಆ ಭೂಮಿ ರಕ್ಷಿತಾರಣ್ಯ ವ್ಯಾಪ್ತಿಗೆ ಸೇರಿದ್ದೆಂದು ಅರಣ್ಯ ಇಲಾಖೆ ಅಧಿಕಾರಿಗಳು ಮಹಿಳೆ ಸ್ವಾಧೀನಕ್ಕೆ ನೀಡಿರಲಿಲ್ಲ. ಅದರ ವಿರುದ್ಧ ಹೋರಾಡುವ ಸ್ಥಿತಿಯಲ್ಲಿ ಮಹಿಳೆ ಇರಲಿಲ್ಲ.

ಕಾನೂನು ಪ್ರಕಾರ ಭೂಮಿಯ ವಾಸ್ತವ್ಯ ಪಡೆಯಲು ನೆರೆಮನೆಯ ಸಲಾಹುದ್ದೀನ್ ಅವರ ಕುಟುಂಬದವರು ಗಿರಿಜಾ ಅವರನ್ನು ಹಲವು ಅಧಿಕಾರಿಗಳ ಬಳಿಗೆ ಕರೆದೊಯ್ದಿದ್ದಾರೆ. ಆದರೆ ಯಾವುದೇ ಪ್ರಯೋಜನ ಆಗಿಲ್ಲ. ಆ ಕಾರಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಮೊರೆ ಹೋಗಿದ್ದಾರೆ. ಅತಿಥಿಗೃಹದ ಬಳಿ ಬಂದು ಸಚಿವೆಗೆ ಮನವಿ ಸಲ್ಲಿಸಿದ್ದಾರೆ. ಸಮಸ್ಯೆ ಆಲಿಸಿದ ಸಚಿವೆ, ಸಮಸ್ಯೆ ಪರಿಹರಿಸಲು ಜಿಲ್ಲಾಧಿಕಾರಿಗೆ ಸೂಚಿಸುವ ಭರವಸೆ ನೀಡಿದ್ದಾರೆ.

ಮುಸ್ಲಿಂ ಸಮಾವೇಶ: 2 ಬಿ ಮೀಸಲಾತಿ ಮರುಸ್ಥಾಪಿಸುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹ

'ಒಂದೇ ಭರವಸೆ ಈಡೇರಿಸಿದ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷವು ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಹತ್ತು ಭರವಸೆಗಳ ಪೈಕಿ ಒಂದನ್ನು ಮಾತ್ರ ಈಡೇರಿಸಿದೆ. 2 ಬಿ ಮೀಸಲಾತಿ ಮರುಸ್ಥಾಪನೆ ಮಾಡಬೇಕು, ಗೋಹತ್ಯೆ ನಿಷೇಧ ಕಾಯ್ದೆ ರದ್ದುಗೊಳಿಸಬೇಕು ಹಾಗೂ ಮುಸ್ಲಿಮರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವುದು ಸೇರಿದಂತೆ ಹಲವು ಭರವಸೆಗಳನ್ನು ಈಡೇರಿಸಬೇಕು ಎಂದು ಮುಸ್ಲಿಂ ಸಮಾವೇಶ ಒತ್ತಾಯಿಸಿತು.

ನಗರದ ಪುರಭವನದಲ್ಲಿ ಶನಿವಾರ ಕರ್ನಾಟಕ ಮುಸ್ಲಿಂ ಸಂಘಟನೆಗಳ ಒಕ್ಕೂಟ ಆಯೋಜಿಸಿದ್ದ ಮುಸ್ಲಿಂ ಸಮಾವೇಶದಲ್ಲಿ, 'ಕಾಂಗ್ರೆಸ್ ಸರ್ಕಾರ ಹೇಳಿದ್ದೇನು? ಮಾಡಿದ್ದೇನು? ಮುಂದೇನು?' ಎಂಬ ವರದಿ ಮತ್ತು ಆಗ್ರಹಗಳ ಪಟ್ಟಿ ಬಿಡುಗಡೆ ಮಾಡಿ, ಕಾಲಮಿತಿಯಲ್ಲಿ ಈಡೇರಿಸುವಂತೆ ಆಗ್ರಹಿಸಿತು.

ಈ ವರದಿಯನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಂಬಂಧಪಟ್ಟ ಸಚಿವರು ಹಾಗೂ ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೂ ತಲುಪಿಸಲು ಸಮಾವೇಶ ನಿರ್ಧಾರ ಕೈಗೊಂಡಿತು.

ಸಮಾವೇಶದಲ್ಲಿ ಮಾತನಾಡಿದ ಮುಖಂಡರು, 'ಈ ಸಮಾವೇಶ ಕಾಂಗ್ರೆಸ್ ಪಕ್ಷದ ವಿರುದ್ಧ ಅಲ್ಲ. ಮುಸ್ಲಿಂ ಸಮುದಾಯಕ್ಕೆ ಕೊಟ್ಟ ಭರವಸೆ ಈಡೇರಿಸಲಾಗಿದೆಯೇ? ಎಂಬುದನ್ನು ಜನರ ಮುಂದಿಡುವ ಉದ್ದೇಶವಾಗಿದೆ. ರಾಜ್ಯ ಸರ್ಕಾರ ಕೂಡಲೇ ಸಮುದಾಯದ ಆಶೋತ್ತರಗಳನ್ನು ಈಡೇರಿಸಬೇಕು. ಅಲ್ಲದೇ ರಾಜ್ಯ ಸರ್ಕಾರ ಸಾಂವಿಧಾನಿಕ ಅಧಿಕಾರ ಬಳಸಿ, ಎಸ್‌ಐಆರ್ ಜಾರಿಗೊಳಿಸಲು ಬಿಡಬಾರದು' ಎಂದರು.

ಸಮಾವೇಶದ ಸಂಚಾಲಕ ಸುಹೈಲ್ ಅಹ್ಮದ್ ಮಾತನಾಡಿ, 'ಬೇಡಿಕೆಗಳಲ್ಲಿ ಒಂದಾಗಿದ್ದ ಹಿಜಾಬ್ ನಿಷೇಧವನ್ನು ವಾಪಸ್ ಪಡೆಯಲಾಗಿದೆ. ಉಳಿದ ಬೇಡಿಕೆಗಳನ್ನು ಈಡೇರಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಮಾಜಿಕ ಹೋರಾಟಗಾರ ಮೊಹಮ್ಮದ್ ಯಾಸೀನ್ ಮಲ್ಪೆ ಮಾತನಾಡಿ, 'ದ್ವೇಷ ಹರಡುವವರನ್ನು ನಿಯಂತ್ರಿಸಲಾಗುವುದು ಎಂದು ಚುನಾವಣೆಗೂ ಮೊದಲು ಕಾಂಗ್ರೆಸ್ ಭರವಸೆ ನೀಡಿತ್ತು. ಆದರೆ, ದ್ವೇಷ ಹರಡುವ ಸಂಘಟನೆಗಳ ವಿರುದ್ಧ ಕ್ರಮ ಕೈಗೊಂಡಿಲ್ಲ. ಗೋಹತ್ಯೆ ನಿಷೇಧ ಕಾಯ್ದೆ ರದ್ದು ಮಾಡಬೇಕು' ಎಂದು ಒತ್ತಾಯಿಸಿದರು.

ಅಂಕಣಕಾರ ಶಿವಸುಂದರ್ ಮಾತನಾಡಿ, 'ಸಮುದಾಯದ ಬೇಡಿಕೆಯನ್ನು ಕಾಲಮಿತಿಯಲ್ಲಿ ಈಡೇರಿಸಬೇಕು. ಸಂವಿಧಾನದ ಮೇಲೆ ದಾಳಿ ಮಾಡುವ ಯೋಜಿತ ಪ್ರಯತ್ನ ನಡೆಯುತ್ತಿದೆ. ಚುನಾವಣೆ ವೇಳೆ ಬಹಿರಂಗವಾಗಿಯೇ ಸಂವಿಧಾನ ಬದಲಿಸುತ್ತೇವೆ ಎಂದು ಬಿಜೆಪಿ ನಾಯಕರು ಹೇಳಿದ್ದರು. ಸಹಬಾಳ್ವೆ , ಬಂಧುತ್ವ ಇಲ್ಲವೆಂದರೆ ದೇಶಕ್ಕೆ ಉಳಿಗಾಲವಿಲ್ಲ' ಎಂದು ಎಚ್ಚರಿಸಿದರು.

ಬೆಂಗಳೂರಿನಲ್ಲಿ ಆಯೋಜಿಸಿದ್ದ ಮುಸ್ಲಿಂ ಸಮಾವೇಶದಲ್ಲಿ ವಕೀಲ ಮುಜಫರ್, ಮೊಹಮ್ಮದ್ ಯಾಸೀನ್ ಮಲ್ಪೆ, ಸುಹೈಲ್ ಅಹಮದ್, ಹ್ಯಾರಿಸ್ ಸಿದ್ದಿಕಿ ಮತ್ತು ಶಿವಸುಂದರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬೇಡಿಕೆಗಳು

- ವಿವಿಧ ನಿಗಮ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಬೇಕು
- ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ವಾಪಸ್ ಪಡೆಯಬೇಕು
- ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಹತ್ತು ಸಾವಿರ ಕೋಟಿ ರೂಪಾಯಿ ಅನುದಾನ ನೀಡಬೇಕು
- ವಕ್ಫ್ ಆಸ್ತಿಗಳ ಅತಿಕ್ರಮಣ, ಅಸಮರ್ಪಕ ಬಳಕೆ, ವಕ್ಫ್ ಅಭಿವೃದ್ಧಿ ವಿಚಾರವಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು
- ರಾಜ್ಯ ಸರ್ಕಾರ ಕೂಡಲೇ ಸಾಮಾಜಿಕ, ಶೈಕ್ಷಣಿಕ ವರದಿಯನ್ನು ಬಿಡುಗಡೆ ಮಾಡಬೇಕು
- ತೆಲಂಗಾಣದ ಮಾದರಿಯಲ್ಲಿ ಮೌಲಾನಾ ಆಜಾದ್ ಶಾಲೆ ಅಭಿವೃದ್ಧಿಗೊಳಿಸಬೇಕು
- ಮತಾಂತರ ನಿಷೇಧ ಕಾಯ್ದೆ ರದ್ದು ಮಾಡಬೇಕು

ಸಂಸ್ಕರಣೆಯಾಗದ 2,447 ಟನ್ ಕಸ

5,880 ಟನ್, ಜಿಬಿಎ ವ್ಯಾಪ್ತಿಯಲ್ಲಿ ನಿತ್ಯ ಸಂಗ್ರಹವಾಗುವ ಕಸ

7,393 ಟನ್ 326 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಕಸ

4,522 ಟನ್, ಜಿಬಿಎ ವ್ಯಾಪ್ತಿಯಲ್ಲಿ ಸಂಸ್ಕರಣೆಯಾಗುವ ಕಸ

6,304 ಟನ್, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಸ್ಕರಣೆಯಾಗುವ ಕಸ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನಗರ ಪ್ರದೇಶಗಳಲ್ಲಿ ಪ್ರತಿದಿನ 13,273 ಟನ್ ಕಸ ಸಂಗ್ರಹವಾಗುತ್ತಿದ್ದು, 10,826 ಟನ್ ಕಸ ಮಾತ್ರ ಸಂಸ್ಕರಣೆಯಾಗುತ್ತಿದೆ. 2,447 ಟನ್ ಕಸ ಸಂಸ್ಕರಣೆಯಾಗದೆ ಕೊಳೆಯುತ್ತಿದೆ.

ಕಸ ವಿಲೇವಾರಿ ಸಮಸ್ಯೆ ಬಗ್ಗೆ ವಿಚಾರಣೆ ನಡೆಸುತ್ತಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠಕ್ಕೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಇದೇ 15ರಂದು ಸಲ್ಲಿಸಿರುವ ವರದಿಯಲ್ಲಿ ಈ ಮಾಹಿತಿ ಇದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಒಂಬತ್ತು ಡಂಪಿಂಗ್ ಯಾರ್ಡ್‌ಗಳಲ್ಲಿ 97 ಲಕ್ಷ ಟನ್ ಹಳೆಯ ಕಸ ಇದೆ. ಈ ಪೈಕಿ, 14.84 ಲಕ್ಷ ಟನ್ ಹಳೆಯ ಕಸವನ್ನು ಜೈವಿಕ ಸಂಸ್ಕರಣೆ ವಿಧಾನದ ಮೂಲಕ ಸಂಸ್ಕರಿಸಲಾಗಿದೆ. 24.8 ಲಕ್ಷ ಟನ್ ಕಸ ವಿಲೇವಾರಿಗ ಟೆಂಡರ್ ಕರೆಯಲಾಗಿದೆ. ಈ ಎಲ್ಲ ಕಸಗಳನ್ನು 2027ರ ಆಗಸ್ಟ್ ಒಳಗೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುವುದು ಎಂದಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 222 ಡಂಪಿಂಗ್ ಯಾರ್ಡ್‌ಗಳಲ್ಲಿ 78.26 ಲಕ್ಷ ಟನ್ ಹಳೆಯ ಕಸವಿದೆ. ಈ ಪೈಕಿ, 11.34 ಲಕ್ಷ ಟನ್ ಹಳೆಯ ಕಸವನ್ನು ಜೈವಿಕ ಸಂಸ್ಕರಣೆ ವಿಧಾನದ ಮೂಲಕ ಸಂಸ್ಕರಿಸಲಾಗಿದೆ. ಎಲ್ಲ ಕಸಗಳನ್ನು 2027ರ ಡಿಸೆಂಬರ್ ಅಂತ್ಯದ ಒಳಗೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ರಾಜ್ಯದಲ್ಲಿ ಪ್ರತಿದಿನ 4,146 ದಶಲಕ್ಷ ಲೀಟರ್ ಕೊಳಚೆ ನೀರು ಉತ್ಪತ್ತಿಯಾಗುತ್ತಿದೆ. ಈ ಪೈಕಿ, 2,065 ದಶಲಕ್ಷ ಲೀಟರ್ ಕೊಳಚೆ ನೀರು ಎಸ್‌ಟಿಪಿಗಳ ಮೂಲಕ ಸಂಸ್ಕರಣೆಯಾಗುತ್ತಿದೆ. ಉಳಿದ 2,056 ದಶಲಕ್ಷ ಲೀಟರ್ ಕೊಳಚೆ ನೀರು ಸಂಸ್ಕರಣೆಯಾಗದೆ ಜಲಮೂಲಗಳಿಗೆ ಸೇರುತ್ತಿದೆ. 401 ಹೊಸ ಎಸ್‌ಟಿಪಿಗಳನ್ನು ಸ್ಥಾಪಿಸಲಾಗುತ್ತಿದ್ದು, ಇವುಗಳ ಸಾಮರ್ಥ್ಯ 2,514 ದಶಲಕ್ಷ ಲೀಟರ್ ಎಂದು ಮಾಹಿತಿ ನೀಡಿದ್ದಾರೆ.

ಚುನಾವಣಾಧಿಕಾರಿಗೆ ಕೆಪಿಸಿಸಿ ಪತ್ರ

ಪ್ರಜಾವಾಣಿ ವಾರ್ತೆ


ರಮೇಶ್ ಬಾಬು

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗ ಜೂನ್ 20 ರಿಂದ ಕರ್ನಾಟಕದಲ್ಲಿ ಆರಂಭಿಸುತ್ತಿರುವ ಮೂರನೇ ಹಂತದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಎಂಟು ಪ್ರಮುಖ ಅಂಶಗಳತ್ತ ಗಮನ ಹರಿಸಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಅವರು ಪತ್ರ ಬರೆದಿದ್ದಾರೆ.

'ರಾಜ್ಯದ 5.55 ಕೋಟಿ ಮತದಾರರಲ್ಲಿ ಒಬ್ಬರೂ ಪಟ್ಟಿಯಿಂದ ಹೊರಗುಳಿಯದಂತೆ ಪರಿಷ್ಕರಿಸುವುದಾಗಿ ಆಯೋಗ ನೀಡಿರುವ ಆಶ್ವಾಸನೆ ಉಳಿಸಿಕೊಳ್ಳಬೇಕು' ಎಂದಿದ್ದಾರೆ.

1951ರಿಂದ ಇಲ್ಲಿಯವರೆಗೆ ಎಂಟು ಬಾರಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಆಗಿದೆ. ಆದರೆ, ಕಳೆದ 21 ವರ್ಷಗಳಲ್ಲಿ ಚುನಾವಣಾ ಆಯೋಗವು ಮತದಾರರ ವಿಶೇಷ ಪರಿಷ್ಕರಣೆ ಕಾರ್ಯ ನಡೆಸಿಲ್ಲ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ವಿಶೇಷ ಪರಿಷ್ಕರಣೆಯ ಹೆಸರಿನಲ್ಲಿ ಕೆಲವು ರಾಜಕೀಯ ಪಕ್ಷಗಳನ್ನು ಗುರಿಯಾಗಿಸಿಕೊಂಡು ಪರಿಷ್ಕರಣೆ ಮಾಡಲಾಗಿದೆ. ಇದರಿಂದ ಚುನಾವಣಾ ಫಲಿತಾಂಶವು ಏರುಪೇರಾಗಿದೆ ಎಂದಿದ್ದಾರೆ.

ಎಸ್‌ಐಆರ್

ಎಂಟು ಅಂಶಗಳು

- 2008ರ ಕ್ಷೇತ್ರ ಪುನರ್ ವಿಂಗಡಣೆಯಿಂದ ಹಲವು ವಿಧಾನಸಭಾ ಕ್ಷೇತ್ರಗಳು ಅಸ್ತಿತ್ವ ಕಳೆದುಕೊಂಡಿದ್ದು, ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ 2002ರ ಮತದಾರರ ಪಟ್ಟಿಗೆ ಹೊಂದಾಣಿಕೆಯಾಗದ ಮತದಾರರು
- ಕರ್ನಾಟಕದಲ್ಲಿ ಜನಿಸಿ ಮತದಾರರ ಪಟ್ಟಿಯನ್ನು ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ಬದಲಾಯಿಸಿಕೊಂಡವರು
- ಮದುವೆ, ಶಿಕ್ಷಣ ಅಥವಾ ಉದ್ಯೋಗಕ್ಕಾಗಿ ಕ್ಷೇತ್ರ ಬದಲಾವಣೆ ಆಗಿರುವ ಮಹಿಳೆಯರು
- ವರ್ಗಾವಣೆಯ ಕಾರಣಕ್ಕಾಗಿ ಕ್ಷೇತ್ರ ಬದಲಾಸಿರುವ ಸರ್ಕಾರಿ ನೌಕರರು
- ವ್ಯಾಪಾರ, ಉದ್ಯೋಗ ಅಥವಾ ಜೀವನೋಪಾಯಕ್ಕಾಗಿ ಸ್ಥಳಾಂತರಗೊಂಡಿರುವವರು
- ಕರ್ನಾಟಕದಲ್ಲಿ ಜನಿಸಿ, ವಾಸಿಸುತ್ತಿರುವ ಮತದಾರರು
- ಅಲೆಮಾರಿ, ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳ ಮತದಾರರು
- ಸ್ಥಳೀಯ ಸಂಸ್ಥೆ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ ವಾಸ ದೃಢೀಕರಣ ಹೊಂದಿರುವವರು

ಜಿಎಸ್‌ಟಿ ವಂಚನೆ: ಟ್ರಾವೆಲ್ಸ್ ಕಂಪನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಿ ವಸ್ತುಗಳ ಹೆಸರಿನಲ್ಲಿ ರಾಜ್ಯ ಸರ್ಕಾರಕ್ಕೆ ₹420 ಕೋಟಿಯಷ್ಟು ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚಿಸಿದ್ದ ಪ್ರಕರಣದಲ್ಲಿ ನಗರದ ಪ್ರತಿಷ್ಠಿತ ಟ್ರಾವೆಲ್ಸ್ ಕಂಪನಿ ಒಂದಕ್ಕೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ.

ನಗರದ ನಾಯಂಡಹಳ್ಳಿಯಲ್ಲಿ ಎಸ್‌ಕೆಎಸ್ ಟ್ರೇಡರ್ಸ್ ಮತ್ತು ಕೆಎಚ್ ಇ-ವೇಸ್ಟ್ ರಿಸೈಕ್ಲರ್ ಎಂಬ ಕಂಪನಿಗಳನ್ನು ನಡೆಸುತ್ತಿದ್ದ ಸಲೀಮುಲ್ಲಾ ಬೇಗ್ ಮತ್ತು ಹಸನ್ ಬೇಗ್ ಎಂಬುವವರನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಈಚೆಗೆ ಬಂಧಿಸಿದ್ದರು. ಈ ಇಬ್ಬರೂ 127 ಖೊಟ್ಟಿ ಕಂಪನಿಗಳನ್ನು ಸೃಷ್ಟಿಸಿ, ಅವುಗಳೊಂದಿಗೆ ₹2,384 ಕೋಟಿಯಷ್ಟು ವಹಿವಾಟು ನಡೆಸಿರುವುದಾಗಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿದ್ದರು.

ತೆರಿಗೆ ಮತ್ತು ಐಟಿಸಿ ವಂಚನೆ ಬಗ್ಗೆ ನೋಟಿಸ್ ನೀಡುತ್ತಿದ್ದಂತೆಯೇ ಖೊಟ್ಟಿ ಕಂಪನಿಗಳ ನೋಂದಣಿ ರದ್ದುಮಾಡಿಸುತ್ತಿದ್ದರು. ಇವರು ₹2,000 ಕೋಟಿಗೂ ಹೆಚ್ಚು ಮೊತ್ತದ ನಕಲಿ ಇನ್‌ವಾಯ್ಸ್ ಮತ್ತು ಇ-ವೇ ಬಿಲ್‌ಗಳನ್ನು ಸೃಷ್ಟಿಸಿದ್ದಾರೆ. ಇ-ವೇ ಬಿಲ್‌ಗಳಲ್ಲಿ ಟ್ರಕ್‌ಗಳ ನೋಂದಣಿ ಸಂಖ್ಯೆ ನಮೂದಾಗಿದ್ದು, ಅವುಗಳ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬಸ್ ಮತ್ತು ಟ್ರಕ್ ಪಾರ್ಸಲ್ ಸೇವೆ ಒದಗಿಸುವ ನಗರದ ಪ್ರತಿಷ್ಠಿತ ಟ್ರಾವೆಲ್ಸ್ ಕಂಪನಿಯ 25ಕ್ಕೂ ಹೆಚ್ಚು ವಾಹನಗಳ ನೋಂದಣಿ ಸಂಖ್ಯೆ ಈ ಇ-ವೇ ಬಿಲ್‌ಗಳಲ್ಲಿ ನಮೂದಾಗಿದೆ. ಇ-ವೇ ಬಿಲ್‌ಗಳಲ್ಲಿ ಕೆಲವು ಬಸ್‌ಗಳ ನೋಂದಣಿ ಸಂಖ್ಯೆಯೂ ಇದೆ. ಆರೋಪಿಗಳು ಈ ಟ್ರಕ್‌ಗಳ ಸೇವೆಯನ್ನು ಪಡೆದುಕೊಂಡಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಟ್ರಾವೆಲ್ಸ್ ಕಂಪನಿಗೆ ನೋಟಿಸ್ ನೀಡಲಾಗಿದೆ ಎಂದು ಮಾಹಿತಿ ನೀಡಿವೆ.

ಇ-ವೇ ಬಿಲ್‌ಗಳಲ್ಲಿ ನಮೂದಾಗಿರುವ 25 ಟ್ರಕ್‌ಗಳ ಪೈಕಿ, 20 ಟ್ರಕ್‌ಗಳನ್ನು ಟ್ರಾವೆಲ್ಸ್ ಕಂಪನಿಯು ಇತರರಿಂದ ಗುತ್ತಿಗೆ ಪಡೆದುಕೊಂಡಿತ್ತು. ಆ ಟ್ರಕ್‌ಗಳನ್ನು ಎಸ್‌ಕೆಎಸ್ ಟ್ರೇಡರ್ಸ್ ಮತ್ತು ಕೆಎಚ್ ಇ-ವೇಸ್ಟ್ ರಿಸೈಕ್ಲರ್ ಕಂಪನಿಗಳಿಗೆ ಬಾಡಿಗೆಗೆ ನೀಡಲಾಗಿತ್ತೇ ಎಂಬುದನ್ನು ಪರಿಶೀಲಿಸಿ ಮಾಹಿತಿ ಒದಗಿಸುತ್ತೇವೆ ಎಂದು ಟ್ರಾವೆಲ್ಸ್ ಕಂಪನಿಯು ತಿಳಿಸಿದೆ ಎಂದು ವಿವರಿಸಿವೆ.

ಹುಬ್ಬಳ್ಳಿಯಲ್ಲಿ 12ನೇ ಮೇ ಸಾಹಿತ್ಯ ಮೇಳ ಆರಂಭ

'ದೇಶದ ಒಗ್ಗಟ್ಟಿಗೆ ಹೋರಾಟ ಅನಿವಾರ್ಯ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನಿರಂಕುಶ ಪ್ರಭುತ್ವವಾದಿಗಳು ಜಾತಿಗಳ ಮಧ್ಯೆ ಒಡಕು ಸೃಷ್ಟಿಸುತ್ತಾರೆ. ಸಾಂಸ್ಕೃತಿಕ ಅಸ್ತ್ರವನ್ನು ಬಳಸಿ ಸಮಾಜದಲ್ಲಿ ಬಿರುಕು ಮೂಡಿಸುತ್ತಾರೆ. ಭಾರತವನ್ನು ಛಿದ್ರವಾಗಲು ಬಿಡದೆ, ನಾವೆಲ್ಲ ಒಗ್ಗಟ್ಟಾಗಿ ಹೋರಾಡಬೇಕು' ಎಂದು ತೆಲುಗು ಸಾಹಿತಿ ಪಾಣಿ ತಿಳಿಸಿದರು.

ಶನಿವಾರ ಇಲ್ಲಿ ಆರಂಭಗೊಂಡ ಎರಡು ದಿನಗಳ 12ನೇ ಮೇ ಸಾಹಿತ್ಯ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಅವರು, 'ಹೋರಾಟವೇ ನಮ್ಮ ಪರಿಭಾಷೆ. ಚೈತನ್ಯಶೀಲ ಸಮಾಜವನ್ನು ಪುನಶ್ಚೇತನ ಮಾಡುವುದು ಪ್ರತಿಯೊಬ್ಬ ಬರಹಗಾರನ ಕರ್ತವ್ಯ' ಎಂದರು.

'ತುಪ್ಪ ತಿಂದವರು ಮಾತ್ರ ಪ್ರತಿಭೆಗಳಲ್ಲ, ಮಣ್ಣಿನಲ್ಲೂ ಪ್ರತಿಭೆಗಳಿವೆ ಎಂಬುದಕ್ಕೆ ಈ ಮೇಳ ಸಾಕ್ಷಿ. ಕೋಮುವಾದಿ, ಮನುವಾದಿಗಳನ್ನು ಎದುರಿಸಲು ಇಂತಹ ಸಮ್ಮೇಳನ ಸಹಕಾರಿ. ನಾವೆಲ್ಲ ಸಂಸ್ಕೃತಿಯ ಉದ್ಧಾರಕರು, ಸಾಹಿತ್ಯದ ಆರಾಧಕರು ಆಗಬೇಕು. ಇದು ಈ ದಿನಗಳಲ್ಲಿ ಅಗತ್ಯ ಮತ್ತು ಅನಿವಾರ್ಯ' ಎಂದು ಮಾಜಿ ಸಂಸದ ಪ್ರೊ. ಐ.ಜಿ. ಸನದಿ ತಿಳಿಸಿದರು.

ಪತ್ರಕರ್ತ ಸನತ್‌ಕುಮಾರ ಬೆಳಗಲಿ ಅವರು, 'ಪ್ರಜಾಪ್ರಭುತ್ವ ರಾಷ್ಟ್ರ ನಾಶ ಮಾಡಿ ಮನುವಾದಿ ರಾಷ್ಟ್ರ ನಿರ್ಮಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಸಂಸದೀಯ ವ್ಯವಸ್ಥೆ ಮತ್ತು ಸಹಬಾಳ್ವೆಯಲ್ಲಿ ನಂಬಿಕೆ ಇರುವ ಶಕ್ತಿಗಳೆಲ್ಲ ಇದರ ವಿರುದ್ಧ ಹೋರಾಡಬೇಕು. ಅವರಿಂದ ಅಧಿಕಾರ ಕಿತ್ತುಕೊಳ್ಳುವವರೆಗೂ ಅಪಾಯ ತಪ್ಪಿದ್ದಲ್ಲ' ಎಂದರು.

ಈ ಸಲದ ಮೇಳದಲ್ಲಿ 'ಸಾಂವಿಧಾನಿಕ ಪ್ರಜಾಸತ್ತೆಯ ಮೇಲಿನ ದಾಳಿ: ಚಹರೆ ಮತ್ತು ಹೊರದಾರಿಗಳು' ಎಂಬ ವಿಷಯವನ್ನು ಕೇಂದ್ರೀಕರಿಸಲಾಗಿದ್ದು, ಈ ಕುರಿತು ವಿವಿಧ ಗೋಷ್ಠಿಗಳು ನಡೆದವು. ಪ್ರಮುಖರಾದ ದಿನೇಶ್ ಅಮಿನ್ ಮಟ್ಟು, ಬಿ.ಆರ್. ಮಂಜುನಾಥ, ಸುಧೀರ್ ಕುಮಾರ್ ಮುರೊಳ್ಳಿ, ಬಿ.ಟಿ. ವೆಂಕಟೇಶ್, ಎನ್.ಎಂ. ಇಸ್ಮಾಯಿಲ್ ಅವರು ವಿಷಯಗಳನ್ನು ಮಂಡಿಸಿದರು.

ಪುಸ್ತಕ ಮಳಿಗೆ, ಕಲಾಕೃತಿಗಳ ಪ್ರದರ್ಶನ ನಡೆಯಿತು. ಮೇಳದ ಸಂಚಾಲಕರಾದ ಬಸವರಾಜ ಸೂಳಿಭಾವಿ, ಕೆ. ನೀಲಾ, ಅನ್ವರ ಮುಧೋಳ, ಲಿಂಗರಾಜ ಅಂಗಡಿ, ಮಹೇಶ ಪತ್ತಾರ, ಗುರುನಾಥ ಉಳ್ಳಿಕಾಶಿ, ವಿ.ಬಿ. ಮಾಗನೂರ, ಶರೀಫ್ ಬಿಳೆಮಲೆ ಇದ್ದರು.

ಹುಬ್ಬಳ್ಳಿಯಲ್ಲಿ ಶನಿವಾರ 12ನೇ ಮೇ ಸಾಹಿತ್ಯ ಮೇಳವನ್ನು ದೇಶದ ನಕ್ಷೆ ಜೋಡಿಸುವ ಮೂಲಕ ಗಣ್ಯರು ಚಾಲನೆ ನೀಡಿದರು – ಪ್ರಜಾವಾಣಿ ಚಿತ್ರ

ಬಸವಾದಿ ಶರಣರ ಹೆಸರಲ್ಲಿ ಹಿಂದೂ ಸಮಾವೇಶ ಮಾಡುವುದು ಸರಿಯಲ್ಲ. ಇದರಿಂದ ಬಸವಾದಿ ಶರಣರ ಮೂಲತತ್ವಕ್ಕೆ, ತ್ಯಾಗ-ಬಲಿದಾನಕ್ಕೆ ದ್ರೋಹ ಮಾಡಿದಂತಾಗುತ್ತದೆ
ಕೆ.ನೀಲಾ, ಹೋರಾಟಗಾರ್ತಿ

ಸಂವಿಧಾನ ಇಂದು ಐಸಿಯುನಲ್ಲಿದೆ. ಅದರ ರಕ್ತ, ಮಾಂಸ, ಮಜ್ಜೆಯನ್ನು ಹೀರಿದ್ದಾರೆ. ಸಜ್ಜನರು ಮೌನಮುರಿದರೆ ಐಸಿಯುನಲ್ಲಿರುವ ಸಂವಿಧಾನ ಉಳಿಸಲು ಸಾಧ್ಯ
ದಿನೇಶ್ ಅಮಿನ್ ಮಟ್ಟು, ಪತ್ರಕರ್ತ

ಮೇಳದ ಹಕ್ಕೊತ್ತಾಯಗಳು

- ಎಸ್‌ಐಆರ್ ಮೂಲಕ ಪೌರತ್ವ ಕಸಿಯಲು ಅವಕಾಶ ನೀಡುವುದಿಲ್ಲ
- ಕನ್ನಡ ಶಾಲೆಗಳಿಗೆ ಮೂಲಸೌಲಭ್ಯ ಕಲ್ಪಿಸಿ, ಅಭಿವೃದ್ಧಿ ಪಡಿಸಬೇಕು
- ಅಲೆಮಾರಿ ಸಮುದಾಯಗಳಿಗೆ ಶೇ 1ರಷ್ಟು ಒಳಮೀಸಲಾತಿ ಕಲ್ಪಿಸಬೇಕು
- ರೈತ ವಿರೋಧಿ ಮೂರು ಕಾಯ್ದೆಗಳನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು
- ಗುಡಿಸಲು ವಾಸಿಗಳ ಸಮೀಕ್ಷೆ ಮಾಡಿ, ಅರ್ಹರಿಗೆ ಮನೆ ನಿರ್ಮಿಸಬೇಕು
- ಭೂ ಸುಧಾರಣಾ ಕಾಯ್ದೆ ವ್ಯಾಜ್ಯ ಜೀವಂತವಿದ್ದು, ಭೂಮಿ ಪಡೆದ ರೈತರ ಹಿತ ಕಾಪಾಡಬೇಕು
- ರಾಜ್ಯದಲ್ಲಿ ದ್ವಿ ಭಾಷಾ ನೀತಿ ಜಾರಿಗೊಳಿಸಬೇಕು
- 'ಕೊಪ್ಪಳ ಬಚಾವೊ' ಆಂದೋಲನಕ್ಕೆ ಬೆಂಬಲವಿದೆ. ಬೃಹತ್ ಕೈಗಾರಿಕೆ ವಿಸ್ತರಣೆ ಬೇಡ
- ಸರ್ಕಾರಿ ಜಾಗಗಳಲ್ಲಿ ಧಾರ್ಮಿಕ ಕಾರ್ಯಕ್ರಮ ನಿಷೇಧಿಸಬೇಕು

ಪಕ್ಷಗಳ ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ದೇಶ-ಒಂದು ಚುನಾವಣೆ' ಕುರಿತಾಗಿ ರಾಜಕೀಯ ಪಕ್ಷಗಳು ಸಲ್ಲಿಸಿರುವ ಎಲ್ಲ ಸಲಹೆ ಮತ್ತು ಮನವಿಗಳನ್ನು ಶಿಫಾರಸಿನಲ್ಲಿ ಸೇರಿಸುತ್ತೇವೆ' ಎಂದು ಸಂವಿಧಾನದ 129ನೇ ತಿದ್ದುಪಡಿ ಮೇಲಿನ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ ತಿಳಿಸಿದರು.

ಜಂಟಿ ಸಂಸದೀಯ ಸಮಿತಿಯು ದೇಶದ ಎಲ್ಲ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳ ಅಭಿಪ್ರಾಯ ಸಂಗ್ರಹಿಸುತ್ತಿದೆ. ಈ ಭಾಗವಾಗಿ ರಾಜ್ಯದ ಪ್ರಮುಖ ಪಕ್ಷಗಳ ಜತೆಗೆ ಶನಿವಾರ ಸಭೆ ನಡೆಸಿತು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಎಎಪಿ ಸೇರಿ ಹಲವು ಪಕ್ಷಗಳು ಸಭೆಯಲ್ಲಿ ಭಾಗಿಯಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸಿದವು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚೌಧರಿ, 'ಒಂದು ದೇಶ-ಒಂದು ಚುನಾವಣೆಯ ಅನುಕೂಲಗಳ ಬಗ್ಗೆ ಪಕ್ಷಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಎಲ್ಲರೂ ತಮ್ಮ-ತಮ್ಮ ಅಭಿಪ್ರಾಯ ಮತ್ತು ನಿಲುವನ್ನು ಸಭೆಯಲ್ಲಿ ಮಂಡಿಸಿದವು' ಎಂದರು.

'ಒಂದು ಚುನಾವಣೆಯಿಂದ ದೇಶಕ್ಕೆ ಹಲವು ಅನುಕೂಲಗಳಿವೆ. ಲೋಕಸಭೆ ಮತ್ತು ಎಲ್ಲ ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಸಲು ಆಗುತ್ತಿರುವ ಒಟ್ಟು ವೆಚ್ಚದಲ್ಲಿ, ಸುಮಾರು ₹7.50 ಲಕ್ಷ ಕೋಟಿಯಷ್ಟು ಉಳಿತಾಯ ಮಾಡಲು ಒಂದು ದೇಶ-ಒಂದು ಚುನಾವಣೆಯಿಂದ ಸಾಧ್ಯವಾಗಲಿದೆ' ಎಂದರು.

'ಒಂದು ದೇಶ-ಒಂದು ಚುನಾವಣೆ'ಯ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕು ಎಂದು ಜೆಡಿಎಸ್ ಮನವಿ ಸಲ್ಲಿಸಿದೆ. ಸಂಸದ ಮಲ್ಲೇಶ್ ಬಾಬು ನೇತೃತ್ವದಲ್ಲಿ ಜೆಡಿಎಸ್ ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು.

ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವುದರಿಂದ, ನಿರಂತರ ಚುನಾವಣಾ ವರ್ತುಲವನ್ನು ತಪ್ಪಿಸಬಹುದು. ಚುನಾವಣಾ ವೆಚ್ಚವನ್ನು ಕಡಿಮೆ ಮಾಡಬಹುದು. ಈ ಸುಧಾರಣಾ ಪರಿಕಲ್ಪನೆಯ ಪರವಾಗಿ ನಮ್ಮ ಪಕ್ಷ ನಿಲ್ಲುತ್ತದೆ ಎಂಬುದನ್ನು ಸಭೆಯ ಮುಂದೆ ಸ್ಪಷ್ಟಪಡಿಸಿದ್ದೇವೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಕಾಂಗ್ರೆಸ್ ವಿರೋಧ: ಡಿಕೆಶಿ

'ಕೇಂದ್ರ ಸರ್ಕಾರದ 'ಒಂದು ದೇಶ-ಒಂದು ಚುನಾವಣೆ' ರಾಜಕೀಯ ಪ್ರೇರಿತವಾಗಿದ್ದು, ರಾಜ್ಯಗಳನ್ನು ದುರ್ಬಲಗೊಳಿಸುವ ಮೂಲಕ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರಲಿದೆ. ಹಾಗಾಗಿ, ಪ್ರಸ್ತಾವವನ್ನು ವಿರೋಧಿಸುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಜಂಟಿ ಸಂಸದೀಯ ಅಧ್ಯಯನ ಸಮಿತಿ ಶನಿವಾರ ಆಯೋಜಿಸಿದ್ದ 'ಒಂದು ರಾಷ್ಟ್ರ ಒಂದು ಚುನಾವಣೆ' ಕುರಿತ ಸಂವಾದದಲ್ಲಿ ಅವರು ಅಭಿಪ್ರಾಯ ಮಂಡಿಸಿದರು.

'ಕೇಂದ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿದವರ ಅನುಕೂಲಕ್ಕೆ ತಕ್ಕಂತೆ ಒಂದು ದೇಶ-ಒಂದು ಚುನಾವಣೆ ರೂಪಿಸಲಾಗುತ್ತಿದೆ. ಜಾರಿಗೆ ಬಂದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆಯಾಗುವ ಅಪಾಯವಿದೆ. ಈಗಾಗಲೇ ಕರ್ನಾಟಕ ವಿಧಾನಸಭೆ ನಿರ್ಣಯ ಅಂಗೀಕರಿಸಿದೆ' ಎಂದರು.

ಮುನಿಸು ಮರೆತ ಚೆನ್ನಿತ್ತಲಗೆ ಗೃಹ ಖಾತೆ

ಕೇರಳಂ: ಸಂಪುಟ ಸೇರ್ಪಡೆ– ಮಾತುಕತೆ ತೃಪ್ತಿದಾಯಕ: ಕೆಪಿಸಿಸಿ ಅಧ್ಯಕ್ಷ ಸಣ್ಣಿ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ: ಕೇರಳಂನ ನಿಯೋಜಿತ ಮುಖ್ಯಮಂತ್ರಿ ವಿ.ಡಿ ಸತೀಶನ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಸೇರಿದಂತೆ ಕಾಂಗ್ರೆಸ್ ಮುಖಂಡರ ಸತತ ಮನವೊಲಿಕೆ ನಂತರ, ಗೃಹ ಸಚಿವರಾಗಿ ಸಂಪುಟ ಸೇರಲು ರಮೇಶ್ ಚೆನ್ನಿತ್ತಲ ಒಪ್ಪಿಕೊಂಡಿದ್ದಾರೆ.

ರಮೇಶ್ ಚೆನ್ನಿತ್ತಲ ಅವರು ಈ ಬಾರಿ ಕೇರಳಂ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಹೆಸರನ್ನು ಅಂತಿಮಗೊಳಿಸಿತು.

2011ರಲ್ಲೂ ಚೆನ್ನಿತ್ತಲ ಅವರಿಗೆ ಅವಕಾಶ ಕೈತಪ್ಪಿತ್ತು. ಈ ಬಾರಿಯೂ ಮುಖ್ಯಮಂತ್ರಿ ಸ್ಥಾನ ಸಿಗದ ಕಾರಣ ಮುನಿಸಿಕೊಂಡ ಚೆನ್ನಿತ್ತಲ, ಯುಡಿಎಫ್ ಸಭೆಯಿಂದ ದೂರ ಉಳಿದಿದ್ದರು. ಈಗ ಮನವೊಲಿಕೆ ನಂತರ ಸಂಪುಟ ಸೇರಲು ಅವರು ಒಪ್ಪಿದ್ದಾರೆ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಸ್ಥಾನಕ್ಕೆ ಇನ್ನೊಬ್ಬ ಪ್ರಬಲ ಆಕಾಂಕ್ಷಿಯಾಗಿದ್ದ ಕೆ.ಸಿ. ವೇಣುಗೋಪಾಲ್ ಕೂಡ ಸತೀಶನ್ ನೇತೃತ್ವದ ಸರ್ಕಾರಕ್ಕೆ ಬೆಂಬಲ ಘೋಷಿಸಿದ್ದಾರೆ.

'ರಾಜಕೀಯದಲ್ಲಿ ಅವಕಾಶಗಳು ವಿಭಿನ್ನ ರೂಪಗಳಲ್ಲಿ ಬರುತ್ತವೆ. ವೇಣುಗೋಪಾಲ್ ಅವರು ಎಐಸಿಸಿಯಲ್ಲಿ ಪ್ರಮುಖ ಹುದ್ದೆಯಲ್ಲಿದ್ದಾರೆ. ಕೇರಳಂನ ಯುಡಿಎಫ್ ಸರ್ಕಾರಕ್ಕೆ ಅವರ ಬೆಂಬಲ ಅತ್ಯಗತ್ಯ' ಎಂದು ವಿ.ಡಿ ಸತೀಶನ್ ಹೇಳಿದ್ದಾರೆ.

> ಐಯುಎಂಎಲ್ ಸಹೋದರ ಪಕ್ಷ. ಕೇರಳದ ಜಾತ್ಯತೀತ ಚೌಕಟ್ಟನ್ನು ಸಂರಕ್ಷಿಸುವಲ್ಲಿ ಈ ಪಕ್ಷ ಪ್ರಮುಖ ಪಾತ್ರ ವಹಿಸುತ್ತಿದೆ
>
> **ವಿ.ಡಿ ಸತೀಶನ್**
> ಕೇರಳಂ ನಿಯೋಜಿತ ಮುಖ್ಯಮಂತ್ರಿ

> ವಿ.ಡಿ.ಸತೀಶನ್ ಅವರ ಸಚಿವ ಸಂಪುಟದಲ್ಲಿ ಸ್ಥಾನ ಕೇಳುವುದಿಲ್ಲ. ಅವರಾಗಿಯೇ ಆಹ್ವಾನ ಕೊಟ್ಟರೆ ಬೇಡ ಎನ್ನುವುದಿಲ್ಲ
>
> **ಜಿ. ಸುಧಾಕರನ್**
> ಯುಡಿಎಫ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿ

ಚೆನ್ನಿತ್ತಲ ಅವರೊಂದಿಗೆ ಅವರ ಕೆಲವು ನಿಷ್ಠಾವಂತರು ಸಹ ಸಂಪುಟ ಸೇರುವ ಸಾಧ್ಯತೆ ಇದೆ.

ಉಮ್ಮನ್ ಚಾಂಡಿ ನೇತೃತ್ವದ ಯುಡಿಎಫ್ ಸರ್ಕಾರದಲ್ಲಿ 2014ರಿಂದ 2016ರವರೆಗೆ ಚೆನ್ನಿತ್ತಲ ಗೃಹ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

'ಎಲ್ಲ ಸಚಿವ ಸ್ಥಾನಗಳನ್ನು ಭಾನುವಾರದೊಳಗೆ ನಿರ್ಧರಿಸ ಲಾಗುತ್ತದೆ. ಇಡೀ ಸಚಿವ ಸಂಪುಟದ ಪ್ರಮಾಣ ವಚನ ಸೋಮವಾರ ನಡೆಯಲಿದೆ' ಎಂದು ಸತೀಶನ್ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಸಚಿವ ಸಂಪುಟದ ಮೊದಲ ಸಭೆಯಲ್ಲಿ, ಕಾಂಗ್ರೆಸ್‌ನ ಚುನಾವಣಾ ಭರವಸೆಯಾದ 'ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ'ದ ಬಗ್ಗೆ ನಿರ್ಧಾರ ಹೊರಬೀಳುವ ಸಾಧ್ಯತೆ ಇದೆ.

'ತೃಪ್ತಿದಾಯಕ ಮಾತುಕತೆ': 'ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ, ಖಾತೆ ಹಂಚಿಕೆ ಬಗ್ಗೆ ಮಾತುಕತೆ ತೃಪ್ತಿದಾಯಕವಾಗಿ ಮುಂದುವರಿದಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಸಣ್ಣಿ ಜೋಸೆಫ್ ಶನಿವಾರ ಹೇಳಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಇಲ್ಲಿನ ಅವರ ನಿವಾಸದಲ್ಲಿ ಭೇಟಿಯಾದ ಬಳಿಕ ಜೋಸೆಫ್ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಾಂಗ್ರೆಸ್‌ನ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸದಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಈಗ ಎಲ್ಲ ಸಮಸ್ಯೆಗಳು ಬಗೆಹರಿದಿವೆ. ಯುಡಿಎಫ್ ಮಿತ್ರ ಪಕ್ಷಗಳಿಗೂ ಸಂಪುಟದಲ್ಲಿ ಸ್ಥಾನ ಕಲ್ಪಿಸುವ ಬಗ್ಗೆ ಮಾತುಕತೆ ಸರಾಗವಾಗಿ ನಡೆದಿದೆ' ಎಂದು ಅವರು ಹೇಳಿದರು.

ತಪ್ಪಾಗಿ ವ್ಯಾಖ್ಯಾನಿಸಲಾಗಿದೆ: ಸಿಜೆಐ

ನವದೆಹಲಿ (ಪಿಟಿಐ): ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು 'ಜಿರಲೆ', 'ಪರಾವಲಂಬಿ' ಹೇಳಿಕೆಗೆ ಸಂಬಂಧಿಸಿದಂತೆ ಶನಿವಾರ ಸ್ಪಷ್ಟನೆ ನೀಡಿದ್ದಾರೆ. ಯುವಜನರನ್ನು ಟೀಕಿಸಿದ್ದಾಗಿ ಬಿಂಬಿಸಿರುವ ಮಾಧ್ಯಮಗಳ ವರದಿಯಿಂದ ಅತೀವ ನೋವುಂಟಾಗಿದೆ ಎಂದು ಅವರು ಹೇಳಿದ್ದಾರೆ.

'ನಿಷ್ಪ್ರಯೋಜಕ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ನೀಡಿದ ಹೇಳಿಕೆಯನ್ನು ಕೆಲವು ಮಾಧ್ಯಮಗಳು ತಪ್ಪಾಗಿ ಅರ್ಥೈಸಿ ವರದಿ ಮಾಡಿರುವುದನ್ನು ಓದಿ ನೋವುಂಟಾಯಿತು' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ನಿರ್ದಿಷ್ಟವಾಗಿ ನಕಲಿ ಮತ್ತು ಬೋಗಸ್ ಡಿಗ್ರಿ ಮೂಲಕ ವಕೀಲಿಕೆ ವೃತ್ತಿ ಪ್ರವೇಶಿಸುವವರನ್ನು ಉದ್ದೇಶಿಸಿ ಆ ಹೇಳಿಕೆ ನೀಡಿದ್ದೆ. ಆದರೆ ಕೆಲವು ಮಾಧ್ಯಮಗಳು ಅದನ್ನು ತಪ್ಪಾಗಿ ಉಲ್ಲೇಖಿಸಿವೆ. ಇಂಥದ್ದೇ ಜನರು ಮಾಧ್ಯಮ, ಸಾಮಾಜಿಕ ಮಾಧ್ಯಮ ಮತ್ತು ಇತರ ಪ್ರಮುಖ ವೃತ್ತಿಗಳಲ್ಲೂ ತೂರಿಕೊಂಡಿದ್ದಾರೆ. ಅವರು ಸಹ ಪರಾವಲಂಬಿಗಳು' ಎಂದು ಹೇಳಿದ್ದಾರೆ.

'ದೇಶದ ಯುವ ಜನತೆಯನ್ನು ನಾನು ಟೀಕಿಸಿದ್ದಾಗಿ ವರದಿ ಮಾಡಿರುವುದು ಆಧಾರರಹಿತ. ವರ್ತಮಾನ ಮತ್ತು ಭವಿಷ್ಯದ ಮಾನವ ಸಂಪನ್ಮೂಲದ ಬಗ್ಗೆ ಹೆಮ್ಮೆ ಪಡುತ್ತೇನೆ. ದೇಶದ ಪ್ರತಿಯೊಬ್ಬ ಯುವ ಜನತೆಯೂ ನನಗೆ ಪ್ರೇರಣೆ. ಭಾರತೀಯ ಯುವಜನತೆಗೂ ನನ್ನ ಮೇಲೆ ಅಪಾರ ಗೌರವವಿದೆ ಎಂದರೆ ಅದು ಅತಿಶಯೋಕ್ತಿ ಅಲ್ಲ. ಯುವಜನರನ್ನು ದೇಶದ ಆಧಾರಸ್ತಂಭಗಳಂತೆ ನಾನು ಕಾಣುತ್ತೇನೆ' ಎಂದಿದ್ದಾರೆ.

'ಪದಾಂಕಿತ ಹಿರಿಯ ವಕೀಲ' ಸ್ಥಾನ ಪಡೆಯಲು ವಕೀಲರೊಬ್ಬರು ಸಲ್ಲಿಸಿದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸೂರ್ಯ ಕಾಂತ್ ಅವರು 'ಪರಾವಲಂಬಿ', 'ಜಿರಲೆ' ಎಂಬ ಪದಬಳಕೆ ಮಾಡಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು.

'ಸಿಜೆಐ ಹೇಳಿಕೆ ಸ್ವೀಕಾರಾರ್ಹ ಅಲ್ಲ'

ಮುಂಬೈ: ಸಿಜೆಐ ಸೂರ್ಯ ಕಾಂತ್ ಅವರು ದೇಶದ ನಿರುದ್ಯೋಗಿ ಯುವಕರನ್ನು 'ಪರಾವಲಂಬಿ'ಗಳು, 'ಜಿರಲೆಗಳು' ಎಂದಿರುವುದು ಸ್ವೀಕಾರಾರ್ಹ ಅಲ್ಲ ಎಂದು ಎನ್‌ಸಿಪಿ (ಎಸ್‌ಪಿ) ನಾಯಕ ರೋಹಿತ್ ಪವಾರ್ ಶನಿವಾರ ಹೇಳಿದ್ದಾರೆ.

ಸಿಜೆಐ ಹೇಳಿಕೆ ಟೀಕೆಗಳು ಮತ್ತು ಪ್ರಶ್ನೆಗಳ ವಿರುದ್ಧದ ಅಸಹಿಷ್ಣುತೆಯ ಪ್ರತಿಬಿಂಬ ಎಂದಿದ್ದಾರೆ.

'ಭಾರತೀಯ ನ್ಯಾಯಾಂಗದಲ್ಲಿ ಅತ್ಯುನ್ನತ ಸ್ಥಾನ ಅಲಂಕರಿಸಿರುವ ಸೂರ್ಯ ಕಾಂತ್ ಅವರ ಹೇಳಿಕೆಯು ತೀವ್ರ ನೋವುಂಟು ಮಾಡಿದೆ. ಸುಳ್ಳು ಭರವಸೆಗಳು, ಅವಕಾಶಗಳ ಕೊರತೆ ಮತ್ತು ನಿರುದ್ಯೋಗ ಹೆಚ್ಚಳದಿಂದಾಗಿ ಪರದಾಡುತ್ತಿರುವ ಇಡೀ ಪೀಳಿಗೆಯನ್ನೇ ಅವರು ಅಣಕ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ.

ಸೆಂಗೊಟ್ಟೈಯನ್‌ಗೆ ಹಣಕಾಸು ಖಾತೆ

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ತಮ್ಮ ಸಂಪುಟ ಸಹೋದ್ಯೋಗಿಗಳಿಗೆ ಖಾತೆಗಳನ್ನು ಶನಿವಾರ ಹಂಚಿದ್ದಾರೆ.

ಗೃಹ, ಸಾಮಾನ್ಯ ಆಡಳಿತ, ಮಹಿಳಾ ಮತ್ತು ಯುವಜನ ಕಲ್ಯಾಣ, ಮಕ್ಕಳ ಕಲ್ಯಾಣ, ವಯಸ್ಸಾದವರು, ಅಂಗವಿಕಲರ ಕಲ್ಯಾಣ, ಪೌರಾಡಳಿತ ಹಾಗೂ ನಗರ ನೀರು ಸರಬರಾಜು ಖಾತೆಗಳನ್ನು ಮುಖ್ಯಮಂತ್ರಿಯೇ ನಿರ್ವಹಿಸಲಿದ್ದಾರೆ.

ಹಿರಿಯ ನಾಯಕ ಕೆ.ಎ. ಸೆಂಗೊಟ್ಟೈಯನ್ ಅವರನ್ನು ಹಣಕಾಸು ಸಚಿವರನ್ನಾಗಿ ನೇಮಿಸಲಾಗಿದ್ದು, ರಾಜ್ಯಪಾಲರು ಅನುಮೋದಿಸಿದ್ದಾರೆ ಎಂದು ಲೋಕಭವನ ತಿಳಿಸಿದೆ.

ಎನ್. ಆನಂದ್ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಜಲಸಂಪನ್ಮೂಲ, ಆಧವ್ ಅರ್ಜುನ– ಲೋಕೋಪಯೋಗಿ (ಕಟ್ಟಡಗಳು, ಹೆದ್ದಾರಿಗಳು ಮತ್ತು ಸಣ್ಣ ಬಂದರುಗಳು) ಹಾಗೂ ಕ್ರೀಡಾ ಅಭಿವೃದ್ಧಿ, ಡಾ. ಕೆ.ಜಿ. ಅರುಣರಾಜ್– ಆರೋಗ್ಯ, ವೈದ್ಯಕೀಯ ಶಿಕ್ಷಣ ಮತ್ತು ಕುಟುಂಬ ಕಲ್ಯಾಣ. ಪಿ. ವೆಂಕಟರಮಣನ್– ಆಹಾರ ಮತ್ತು ನಾಗರಿಕ ಸರಬರಾಜು, ಆರ್. ನಿರ್ಮಲಕುಮಾರ್– ಇಂಧನ, ಕಾನೂನು, ರಾಜಮೋಹನ್– ಶಾಲಾ ಶಿಕ್ಷಣ, ತಮಿಳು ಅಭಿವೃದ್ಧಿ, ಮಾಹಿತಿ ಮತ್ತು ಪ್ರಚಾರ, ಡಾ. ಟಿ.ಕೆ. ಪ್ರಭು– ನೈಸರ್ಗಿಕ ಸಂಪನ್ಮೂಲ, ಖನಿಜ, ಗಣಿ, ಎಸ್. ಕೀರ್ತನಾ ಅವರು ಕೈಗಾರಿಕಾ ಖಾತೆಯ ಹೊಣೆ ನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯಕ್ಕೆ 1,122 ಹೆಚ್ಚುವರಿ ವೈದ್ಯಕೀಯ ಸೀಟು ಲಭ್ಯ

ಒಂದನೇ ಪುಟದಿಂದ...

'ರಾಜ್ಯಕ್ಕೆ ಲಭ್ಯವಾಗಿರುವ ಹೆಚ್ಚುವರಿ ಸೀಟುಗಳ ಪೈಕಿ ಕೊಪ್ಪಳ, ಗದಗ, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಹೆಚ್ಚಿನ ಪಾಲು ದೊರೆತಿದೆ. ಈ ಸೀಟುಗಳ ನಿರ್ವಹಣೆಗೆ ಕೇಂದ್ರ ಸರ್ಕಾರವು ಒಟ್ಟು ₹1,090 ಕೋಟಿ ಅನುದಾನ ಒದಗಿಸಲಿದ್ದು, ರಾಜ್ಯ ಸರ್ಕಾರವು ₹646.80 ಕೋಟಿ ಭರಿಸಬೇಕಾಗುತ್ತದೆ. ಕೇಂದ್ರವು ಅನುದಾನ ಬಿಡುಗಡೆ ಮಾಡಿದ ನಂತರ, ರಾಜ್ಯವು ತನ್ನ ಪಾಲಿನ ವೆಚ್ಚವನ್ನು ಬಿಡುಗಡೆ ಮಾಡಲಿದೆ' ಎಂದು ಶರಣ ಪ್ರಕಾಶ ಪಾಟೀಲ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನೀಟ್ ಹೊಣೆ ರಾಜ್ಯಗಳಿಗೆ ನೀಡಲಿ': 'ಕರ್ನಾಟಕದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮಾದರಿಯು ದೇಶದಲ್ಲೇ ಅತ್ಯುತ್ತಮವಾದುದಾಗಿದೆ. ನೀಟ್‌ನಂತಹ ವೈದ್ಯಕೀಯ ಸೀಟುಗಳ ಪ್ರವೇಶ ಪರೀಕ್ಷೆ ನಡೆಸುವ ಹೊಣೆಗಾರಿಕೆಯನ್ನು ರಾಜ್ಯಗಳಿಗೆ ನೀಡಿ ಮತ್ತು ಇದಕ್ಕಾಗಿ ಕರ್ನಾಟಕ ಸಿಇಟಿ ಮಾದರಿಯನ್ನು ಅಳವಡಿಸಿಕೊಳ್ಳಿ ಎಂದು ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಪತ್ರ ಬರೆದಿದ್ದೇವೆ. ಕೇಂದ್ರ ಅದನ್ನು ಕಡೆಗಣಿಸುತ್ತಲೇ ಬಂದಿದೆ' ಎಂದು ಶರಣ ಪ್ರಕಾಶ ಪಾಟೀಲ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಪ್ರತಿ ವರ್ಷ ನೀಟ್ ನಡೆಸುವಾಗ ಒಂದಲ್ಲ ಒಂದು ಸಮಸ್ಯೆ ಎದುರಾಗುತ್ತಲೇ ಇದೆ. ಅದನ್ನು ಕೇಂದ್ರವು ನಿರ್ಲಕ್ಷ್ಯಿಸುತ್ತಲೇ ಬಂದಿದೆ. ಈಗ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವುದು ಕೇಂದ್ರ ಸರ್ಕಾರದ ವೈಫಲ್ಯ ಅಲ್ಲದೆ ಮತ್ತೇನಲ್ಲ. ವಿದ್ಯಾರ್ಥಿಗಳ ಭವಿಷ್ಯ ಮತ್ತು ಜೀವದ ಜತೆಗೆ ಕೇಂದ್ರವು ಚೆಲ್ಲಾಟ ಆಡುತ್ತಿದೆ' ಎಂದು ಆರೋಪಿಸಿದರು.

'ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿ ಇದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಮಾನ ಹೊಣೆಗಾರಿಕೆ ಇದೆ. ರಾಜ್ಯಗಳ ಸಲಹೆಯನ್ನು ಕೇಳಬೇಕಾದುದು ಕೇಂದ್ರದ ಕರ್ತವ್ಯ. ಆದರೆ, ಕೇಂದ್ರದ ಬಿಜೆಪಿ ಸರ್ಕಾರ ಆ ಕೆಲಸವನ್ನು ಮಾಡುತ್ತಿಲ್ಲ. ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರೇ ಭಾಗಿಯಾಗಿದ್ದಾರೆ. ಈ ಬಗ್ಗೆ ಸಿಬಿಐ ನಡೆಸುತ್ತಿರುವ ತನಿಖೆ ಮೇಲೆ ನಮಗೆ ನಂಬಿಕೆ ಇಲ್ಲ. ನ್ಯಾಯಾಂಗ ತನಿಖೆ ನಡೆಸಲಿ' ಎಂದು ಆಗ್ರಹಿಸಿದರು.

> ಕರ್ನಾಟಕ ಹೊರತುಪಡಿಸಿ ಬೇರೆ ಯಾವ ರಾಜ್ಯಕ್ಕೂ ಸಾವಿರ ಸೀಟುಗಳು ಹೆಚ್ಚುವರಿಯಾಗಿ ದೊರೆತಿಲ್ಲ. ವೈದ್ಯಕೀಯ ಶಿಕ್ಷಣದಲ್ಲಿ ರಾಜ್ಯದ ಸಾಧನೆಗೆ ದೊರೆತ ಮನ್ನಣೆ ಇದು
>
> **ಶರಣ ಪ್ರಕಾಶ ಪಾಟೀಲ**
> ವೈದ್ಯಕೀಯ ಶಿಕ್ಷಣ ಸಚಿವ

ನೀಟ್: ಉಪನ್ಯಾಸಕಿ ಬಂಧನ

ಒಂದನೇ ಪುಟದಿಂದ...

'ನೀಟ್–ಯುಜಿ ಪರೀಕ್ಷಾ ಪ್ರಕ್ರಿಯೆಯಲ್ಲಿ ಮಂಧಾರೆ ನೇರವಾಗಿ ಭಾಗಿಯಾಗಿದ್ದರು. ಅವರನ್ನು ತಜ್ಞರನ್ನಾಗಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನೇಮಕ ಮಾಡಿತ್ತು. ಅವರಿಗೆ ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನ ಪ್ರಶ್ನೆ ಪತ್ರಿಕೆಗಳು ಪೂರ್ಣವಾಗಿ ಲಭ್ಯವಾಗಿದ್ದವು' ಎಂದು ಅವರು ತಿಳಿಸಿದ್ದಾರೆ.

ಮನೆಯಲ್ಲಿ ವಿಶೇಷ ತರಗತಿ: 'ಮಂಧಾರೆ ಅವರು ಮತ್ತೊಬ್ಬ ಆರೋಪಿ ಮನಿಶಾ ವಾಘ್ಮರೆ ಅವರ ನೆರವು ಪಡೆದು ಏಪ್ರಿಲ್‌ನಲ್ಲಿ ಕೆಲ ನೀಟ್ ಆಕಾಂಕ್ಷಿಗಳಿಗೆ ಪುಣೆಯ ತನ್ನ ನಿವಾಸದಲ್ಲಿ ವಿಶೇಷ ತರಬೇತಿ ನೀಡಿದ್ದಾರೆ. ಆಯ್ದ ವಿದ್ಯಾರ್ಥಿಗಳಿಗೆ ಅವರು ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನದ ಪ್ರಶ್ನೆಗಳು ಮತ್ತು ಉತ್ತರಗಳನ್ನು ಹೇಳಿ, ಲಕ್ಷಾಂತರ ರೂಪಾಯಿಗಳನ್ನು ಶುಲ್ಕವಾಗಿ ಪಡೆದಿದ್ದಾರೆ ಎಂಬ ಆರೋಪವಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಪ್ರಶ್ನೆಗಳಲ್ಲಿ ಹೆಚ್ಚಿನವು ಮೇ 3ರಂದು ನಡೆದ ನೀಟ್–ಯುಜಿ ಪರೀಕ್ಷೆಯಲ್ಲಿ ಕಾಣಿಸಿಕೊಂಡಿವೆ ಎಂದು ಅವರು ತಿಳಿಸಿದ್ದಾರೆ.

ರಸಾಯನವಿಜ್ಞಾನದ ನಿವೃತ್ತ ಪ್ರಾಧ್ಯಾಪಕ ಪಿ.ವಿ. ಕುಲಕರ್ಣಿ ಅವರನ್ನು ಸಿಬಿಐ ಶುಕ್ರವಾರ ಬಂಧಿಸಿತ್ತು. ಅವರು ನೀಟ್ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವ ಸಮಿತಿಯಲ್ಲಿ ವರ್ಷಗಳ ಕಾಲ ಕೆಲಸ ಮಾಡಿದ ವ್ಯಕ್ತಿಯಾಗಿದ್ದಾರೆ.

ಏಪ್ರಿಲ್ ಕೊನೆಯ ವಾರದಲ್ಲಿ ಕುಲಕರ್ಣಿ ಅವರು, ಮನಿಶಾ ವಾಘ್ಮರೆ ಅವರ ನೆರವಿನೊಂದಿಗೆ ತಮ್ಮ ಮನೆಯಲ್ಲಿ ಆಯ್ದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ನಡೆಸಿ ಪ್ರಶ್ನೆಗಳು, ಆಯ್ಕೆಗಳು ಮತ್ತು ಉತ್ತರಗಳನ್ನು ನೀಡಿದ್ದರು. ಅದಕ್ಕಾಗಿ ವಿದ್ಯಾರ್ಥಿಗಳು ಲಕ್ಷಾಂತರ ರೂಪಾಯಿ ಪಾವತಿಸಿದ್ದರು. ಆ ಪ್ರಶ್ನೆಗಳು 'ನೀಟ್–ಯುಜಿ' ಅಧಿಕೃತ ಪ್ರಶ್ನೆ ಪತ್ರಿಕೆಯಲ್ಲಿ ಕಾಣಿಸಿಕೊಂಡ ಪ್ರಶ್ನೆಗಳೊಂದಿಗೆ ತಾಳೆ ಆಗಿವೆ ಎಂದು ಮೂಲಗಳು ತಿಳಿಸಿವೆ.

ಆರು ಕಡೆ ಶೋಧ: ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಶುಕ್ರವಾರ ಮತ್ತು ಶನಿವಾರ ದೇಶದ ಆರು ಸ್ಥಳಗಳಲ್ಲಿ ತೀವ್ರ ಶೋಧ ನಡೆಸಿದೆ. ಹಲವು ಅಪರಾಧಿಕ ದಾಖಲೆಗಳು, ಲ್ಯಾಪ್‌ಟಾಪ್‌ಗಳು, ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು ಮತ್ತು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದು, ಪರಿಶೀಲಿಸಲಾಗುತ್ತಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

ಈ ಪ್ರಕರಣದ ಆರೋಪಿಗಳಾದ ಪುಣೆಯ ಮನಿಶಾ ವಾಘ್ಮರೆ, ಅಹಲ್ಯಾನಗರದ ಧನಂಜಯ ಲೋಖಂಡೆ, ನಾಸಿಕ್‌ನ ಶುಭಂ ಖೈರ್‌ನಾರ್, ಜೈಪುರದ ಮಂಗಿಲಾಲ್ ಬಿವಾಲ್, ವಿಕಾಸ್ ಬಿವಾಲ್, ದಿನೇಶ್ ಬಿವಾಲ್, ಗುರುಗ್ರಾಮದ ಯಶ್ ಯಾದವ್ ಅವರನ್ನು ಈಗಾಗಲೇ ಸಿಬಿಐ ಬಂಧಿಸಿದೆ. ಇವರುಗಳ ಪೈಕಿ ದಿನೇಶ್ ಬಿವಾಲ್ ಬಿಜೆಪಿ ಯುವ ಮೋರ್ಚಾದ ಸ್ಥಳೀಯ ಘಟಕದ ಜತೆ ಗುರುತಿಸಿಕೊಂಡಿದ್ದಾರೆ.

ಪ್ರಧಾನ್ ವಜಾಕ್ಕೆ ರಾಹುಲ್ ಆಗ್ರಹ: 'ನೀಟ್–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ತುರ್ತಾಗಿ ವಜಾಗೊಳಿಸಿ ಅಥವಾ ವೈಯಕ್ತಿಕ ಹೊಣೆಗಾರಿಕೆ ತೆಗೆದುಕೊಳ್ಳಿ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ.

'ನೀಟ್ ಪರೀಕ್ಷೆಗೂ ಎರಡು ದಿನ ಮುನ್ನ ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಪ್ರಶ್ನೆಪತ್ರಿಕೆ ಹರಿದಾಡಿವೆ ಎಂಬುದು ಇಡೀ ದೇಶಕ್ಕೇ ಗೊತ್ತಿದೆ. ಆದರೆ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ವಿಷಯಕ್ಕೂ ತನಗೂ ಸಂಬಂಧವೇ ಇಲ್ಲ ಎಂಬಂತೆ ಮಾತನಾಡಿದ್ದಾರೆ' ಎಂದು ರಾಹುಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಆರೋಪ ಮಾಡಿದ್ದಾರೆ.

ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ವಿರೋಧಿಸಿ ನವದೆಹಲಿಯಲ್ಲಿ ಶನಿವಾರ ಪ್ರತಿಭಟಿಸಿದ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು ಪಿಟಿಐ ಚಿತ್ರ

ಮುಖ್ಯಾಂಶಗಳು

- ಸಿಬಿಐನಿಂದ ಬಂಧಿತರ ಸಂಖ್ಯೆ 9ಕ್ಕೆ ಏರಿಕೆ
- ಎನ್‌ಟಿಎ ನೇಮಿಸಿದ್ದ ತಜ್ಞರದ್ದೇ ಕೃತ್ಯದಲ್ಲಿ ಪ್ರಧಾನ ಪಾತ್ರ

3ನೇ ಮಗುವಿಗೆ ₹30 ಸಾವಿರ ನಾಲ್ಕನೆಯದ್ದಕ್ಕೆ ₹40 ಸಾವಿರ

ನರಸನ್ನಪೇಟೆ (ಪಿಟಿಐ): ಆಂಧ್ರಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಳಕ್ಕಾಗಿ ಪ್ರೋತ್ಸಾಹಧನ ನೀಡುವುದಾಗಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಶನಿವಾರ ಪ್ರಕಟಿಸಿದರು.

ಶ್ರೀಕಾಕುಳಂ ಜಿಲ್ಲೆಯ ನರಸನ್ನಪೇಟೆಯಲ್ಲಿ ಆಯೋಜಿಸಿದ್ದ 'ಸ್ವರ್ಣಾಂಧ್ರ– ಸ್ವಚ್ಛಾಂಧ್ರ' ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಯು, ಮೂರನೇ ಮಗುವಿನ ಜನನಕ್ಕೆ ₹30 ಸಾವಿರ ಹಾಗೂ ನಾಲ್ಕನೇ ಮಗುವಿನ ಜನನಕ್ಕೆ ₹40 ಸಾವಿರ ನೀಡುವುದಾಗಿ ಘೋಷಿಸಿದರು.

'ಸರ್ಕಾರವು ಈ ನಿರ್ಧಾರ ತೆಗೆದುಕೊಂಡಿದ್ದು, ಒಂದು ತಿಂಗಳೊಳಗೆ ಸಮಗ್ರ ವಿವರ ಪ್ರಕಟಿಸಲಾಗುವುದು. ಇದು ಸರಿಯಾದ ನಿರ್ಧಾರ ಅಲ್ಲವೇ?' ಎಂದರು.

'ಈ ಹಿಂದೆ ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪ್ರತಿಪಾದಿಸಿದ್ದರೂ, ಇದೀಗ ಜನನ ಪ್ರಮಾಣ ದರವನ್ನು ಹೆಚ್ಚಿಸಲು ಸಮಾಜವು ಒಟ್ಟಾಗಿ ಕೆಲಸ ಮಾಡುವ ಸಮಯ ಬಂದಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

'ಎರಡನೇ ಮಗುವನ್ನು ಹೊಂದುವ ದಂಪತಿಗೆ ₹25ಸಾವಿರ ಪ್ರೋತ್ಸಾಹಧನ ನೀಡುವುದನ್ನು ಪರಿಗಣಿಸಲಾಗುತ್ತಿದೆ' ಎಂದು ನಾಯ್ಡು ಅವರು ಮಾರ್ಚ್ 5ರಂದು ವಿಧಾನಸಭೆಯಲ್ಲಿ ಹೇಳಿದ್ದರು.

'ಮೂರನೇ ಮಗುವನ್ನು ಹೊಂದುವ ಕುಟುಂಬಕ್ಕೆ ಪ್ರೋತ್ಸಾಹಧನ ನೀಡಲು ಸರ್ಕಾರ ನಿರ್ಧರಿಸಿದೆ' ಎಂದು ಆರೋಗ್ಯ ಸಚಿವ ಸತ್ಯಕುಮಾರ್ ಯಾದವ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಚೊಚ್ಚಲ ಮಗು ಗಂಡಾದರೆ, ಮತ್ತೊಂದು ಮಗುವಿನ ಯೋಚನೆಯನ್ನೇ ಹಲವು ದಂಪತಿ ಮಾಡುತ್ತಿಲ್ಲ. ಇದರ ಪರಿಣಾಮದಿಂದಾಗಿ ಜನಸಂಖ್ಯಾ ಬೆಳವಣಿಗೆ ದರ ಕುಸಿಯುತ್ತಿದೆ' ಎಂದು ನಾಯ್ಡು ಹೇಳಿದ್ದಾರೆ.

₹182 ಕೋಟಿ ಮೊತ್ತದ ಡ್ರಗ್ಸ್ ವಶ

ನವದೆಹಲಿ (ಪಿಟಿಐ): ಮಾದಕವಸ್ತು ನಿಗ್ರಹ ದಳದ (ಎನ್‌ಸಿಬಿ) ಅಧಿಕಾರಿಗಳು ದೇಶದಲ್ಲಿ ಮೊದಲ ಬಾರಿಗೆ 'ಜಿಹಾದಿ ಡ್ರಗ್ಸ್' ಎಂದು ಕರೆಯಲಾಗುವ ₹182 ಕೋಟಿ ಮೊತ್ತದ 227.7 ಕೆ.ಜಿಯಷ್ಟು 'ಕ್ಯಾಪ್ಟಗಾನ್' ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

'ಆಪರೇಷನ್ ರೇಜ್‌ಪಿಲ್' ಕಾರ್ಯಾಚರಣೆ ಮೂಲಕ 'ಎನ್‌ಸಿಬಿ' ದೇಶದಲ್ಲಿ ಮೊದಲ ಬಾರಿಗೆ ಬೃಹತ್ ಕಾರ್ಯಾಚರಣೆ ನಡೆಸಿದೆ. 'ಮೋದಿ ಸರ್ಕಾರವು 'ಮಾದಕ ವಸ್ತು ಮುಕ್ತ ಭಾರತ' ಮಾಡಲು ಸಂಕಲ್ಪ ಮಾಡಿದೆ. ಎನ್‌ಸಿಬಿ ಅಧಿಕಾರಿಗಳಿಗೆ ಅಭಿನಂದನೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ನವದೆಹಲಿಯ ನೆಬ್ ಸರೈನಲ್ಲಿರುವ ಮನೆಯೊಂದರ ಮೇಲೆ ಮೇ 11ರಂದು ಎನ್‌ಸಿಬಿ ನಡೆಸಿದ ದಾಳಿಯಲ್ಲಿ 31.5 ಕೆಜಿಯಷ್ಟು ಕ್ಯಾಪ್ಟಗಾನ್ ಮಾತ್ರೆಗಳನ್ನು ವಶಕ್ಕೆ ಪಡೆಯಲಾಯಿತು. ಈ ಮಾತ್ರೆಗಳನ್ನು ಚಪಾತಿ ತಯಾರಿಸುವ ಯಂತ್ರದಲ್ಲಿ ಬಚ್ಚಿಟ್ಟು, ಸೌದಿ ಅರೇಬಿಯಾಕ್ಕೆ ರಫ್ತು ಮಾಡುವ ಯೋಜನೆ ರೂಪಿಸಲಾಗಿತ್ತು. ಈ ಮನೆಯಲ್ಲಿ ಬಾಡಿಗೆಗೆ ಇದ್ದ ಆರೋಪಿ, ಸಿರಿಯಾ ದೇಶದ ಪ್ರಜೆಯನ್ನು ವಿಚಾರಣೆಗೆ ಒಳಪಡಿಸಿದಾಗ ಕ್ಯಾಪ್ಟಗಾನ್ ಅಕ್ರಮ ಆಮದು–ರಫ್ತು ವಹಿವಾಟು ಜಾಲ ಗೊತ್ತಾಗಿದೆ.

ಸಿಬಿಎಸ್‌ಇ: 9ನೇ ತರಗತಿಗೆ ತ್ರಿಭಾಷಾ ಅಧ್ಯಯನ ಕಡ್ಡಾಯ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಜುಲೈ 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ತ್ರಿಭಾಷಾ ಅಧ್ಯಯನವನ್ನು ಕಡ್ಡಾಯಗೊಳಿಸಿದೆ.

ಕನಿಷ್ಠ ಎರಡು ಸ್ಥಳೀಯ ಭಾರತೀಯ ಭಾಷೆಗಳು ಸೇರಿ ಮೂರು ಭಾಷೆಗಳ ಕಲಿಕೆ ಕಡ್ಡಾಯಗೊಳಿಸಲಾಗಿದೆ.

'ರಾಷ್ಟ್ರೀಯ ಶಿಕ್ಷಣ ನೀತಿ –2020, ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು –2023' ಯೋಜನೆಯ ಭಾಗವಾಗಿ ಸಿಬಿಎಸ್‌ಇ ಈ ಪರಿಷ್ಕರಣೆ ಮಾಡಿದೆ. ಎರಡು ಸ್ಥಳೀಯ ಭಾರತೀಯ ಭಾಷೆ ಅಧ್ಯಯನ ಮಾಡಿದ ನಂತರವೇ ವಿದ್ಯಾರ್ಥಿಗಳಿಗೆ ಮೂರನೇ ಭಾಷೆಯಾಗಿ ಅಥವಾ ನಾಲ್ಕನೆಯ ಹೆಚ್ಚುವರಿ ಭಾಷೆಯಾಗಿ ವಿದೇಶಿ ಭಾಷೆಯ ಆಯ್ಕೆಗೆ ಅವಕಾಶ ಇದೆ ಎಂದು ಸಿಬಿಎಸ್‌ಇ ಪ್ರಕಟಣೆ ತಿಳಿಸಿದೆ.

ಪೋಕ್ಸೊ: ಬಂಡಿ ಭಗೀರಥ ಬಂಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಅವರ ಪುತ್ರ ಬಂಡಿ ಸಾಯಿ ಭಗೀರಥನನ್ನು ಸೈಬರಾಬಾದ್ ಪೊಲೀಸರು ಶನಿವಾರ ರಾತ್ರಿ ಬಂಧಿಸಿದ್ದಾರೆ.

ಆರೋಪಿಯು ದೇಶಬಿಟ್ಟು ತೆರಳದಂತೆ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿಗೊಳಿಸಿದ್ದರು.

'ನರಸಿಂಗಿಯ ಟಿಜಿಪಿಎ ಜಂಕ್ಷನ್‌ನಲ್ಲಿ ಆರೋಪಿಯನ್ನು ಬಂಧಿಸಿ, ಪೆಟ್ ಬಶೀರಾಬಾದ್ ಠಾಣೆಗೆ ತರಲಾಗಿದೆ' ಎಂದು ಸೈಬರಾಬಾದ್ ಪೊಲೀಸ್ ಆಯುಕ್ತ ಪಿ ರಮೇಶ್ ರೆಡ್ಡಿ ತಿಳಿಸಿದ್ದಾರೆ.

ಬಂಧನದಿಂದ ರಕ್ಷಣೆ ಕೋರಿ ಭಗೀರಥ ಅವರು ತೆಲಂಗಾಣ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಮಧ್ಯಂತರ ತಡೆ ನೀಡಲು ನ್ಯಾಯಾಲಯವು ನಿರಾಕರಿಸಿತ್ತು.

'ಬುಡಕಟ್ಟು ಕೃಷಿಕರ ಸಂಘ'ದ ಮೂಲಕ ಕ್ರಾಂತಿ ಸೃಷ್ಟಿಸಿದ ಧೀಮಂತ

ಅಸಂಖ್ಯಾತ ಹಣತೆ ಬೆಳಗಿದ ಮಹಾ ಪ್ರಜ್ವಲ

● ಮುಸ್ತಾಫ ಕೆ.ಎಚ್.

ನುಡಿ ನಮನ

ಕಾಡಿನ ನಿಶ್ಯಬ್ದದಲ್ಲಿ ಜೇನು ಕೀಳುವ, ಹಣ್ಣು ಆಯುವ, ಗಿಡಮೂಲಿಕೆ ಅರೆಯುವ ಕೈಗಳಿಗೆ ಬಿಲ್ಲು-ಬಾಣ ಹಿಡಿಯಲು ಕಲಿಸಿದ ಆ ಚೇತನ ಇನ್ನಿಲ್ಲ. ಹಸಿದ ಹೊಟ್ಟೆ ತುಂಬಿಸಲು ಮಣ್ಣು ತಿನ್ನುತ್ತಿದ್ದ ಸೋಲಿಗರ ಒಡಲ ಬೇಗೆಯನ್ನು ಕಂಡು ತನ್ನಿಡೀ ಬದುಕನ್ನೇ ಹೋರಾಟದ ದಳ್ಳುರಿಗೆ ಒಡ್ಡಿಕೊಂಡ ಆ ಮುತ್ಸದ್ದಿ ಈಗ ಬದುಕಿನ ಯಾತ್ರೆ ಮುಗಿಸಿದ್ದಾರೆ. ಕೊಡಗಿನ ಗಿರಿಶಿಖರಗಳ ನಡುವೆ, ನಾಗರಹೊಳೆಯ ಹಸಿರು ಮಡಿಲಲ್ಲಿ 'ಬುಡಕಟ್ಟು ಕೃಷಿಕರ ಸಂಘ'ದ ಮೂಲಕ ಅಪ್ರತಿಮ ಕ್ರಾಂತಿ ಸೃಷ್ಟಿಸಿದ ವಿಜಯಸಿಂಗ್ ರೆನಾರ್ಡ್ ರಾಯ್ ಡೇವಿಡ್ ಅವರ ನಿರ್ಗಮನ ಕೇವಲ ಒಬ್ಬ ವ್ಯಕ್ತಿಯ ಅಂತ್ಯವಲ್ಲ; ಅದೊಂದು ಧೀಮಂತ ಹೋರಾಟದ ಯುಗದ ಮುಕ್ತಾಯ.

ಅದು 1976ರ ಕಾಲಘಟ್ಟ. ಸರ್ಕಾರಿ ಕಾಗದಗಳ ಮೇಲೆ ದೇವರಾಜ ಅರಸರ 'ಉಳುವವನೇ ಭೂಮಿಯ ಒಡೆಯ' ಕಾಯ್ದೆ ಅಬ್ಬರಿಸುತ್ತಿತ್ತು. ಆದರೆ ವಾಸ್ತವದ ನೆಲೆಯಲ್ಲಿ ಧಣಿಗಳ ದೌರ್ಜನ್ಯ ಮುಗಿಲು ಮುಟ್ಟಿತ್ತು. ಪದವೀಧರ ಯುವಕ ರಾಯ್ ಡೇವಿಡ್ ಅಂದು ದಕ್ಷಿಣ ಕನ್ನಡ ಜಿಲ್ಲೆಯ ಅಬ್ಬೆಟ್ಟು ಗ್ರಾಮಕ್ಕೆ ಕಾಲಿಟ್ಟಾಗ ಎದುರಾಗಿದ್ದು ರಕ್ತಸಿಕ್ತ ಬಟ್ಟೆ ತೊಟ್ಟ ಗ್ರಾಮೀಣ ಮಹಿಳೆಯರ ಆರ್ತನಾದ ಹಾಗೂ ಪ್ರಾಣಭಯದಿಂದ ಬೆಟ್ಟಗುಡ್ಡಗಳಲ್ಲಿ ಅಡಗಿ ಕುಳಿತಿದ್ದ ದಲಿತರ ಆಕ್ರಂದನ. ಜಯಪ್ರಕಾಶ ನಾರಾಯಣ ಅವರು ಅಂದು ಯುವ ಡೇವಿಡ್ ಅವರ ಹೆಗಲ ಮೇಲೆ ಕೈಯಿಟ್ಟು, 'ಈ ಜನರನ್ನು ಇಂತಹ ಸ್ಥಿತಿಯಿಂದ ಹೊರಗೆ ತರಬೇಕು' ಎಂದಾಗ, ಅದು ಕೇವಲ ಬಾಯಿ ಮಾತಾಗಿ ಉಳಿಯಲಿಲ್ಲ; ಡೇವಿಡ್ ಬದುಕಿನ ಮಹಾ ದೀಕ್ಷೆಯಾಯಿತು.

ಮಹಿಳೆಯರನ್ನು ಸಂಘಟಿಸಿ 'ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ' ಕಟ್ಟಿದಾಗ ಧಣಿಗಳ ಸಾಮ್ರಾಜ್ಯ ನಡುಗಿತು. ಸುಳ್ಳು ಕೇಸುಗಳು, ದೌರ್ಜನ್ಯಗಳು, ಮಹಿಳೆಯರ ಮೇಲೆ ಅತ್ಯಾಚಾರದ ಯತ್ನಗಳು ನಡೆದಾಗ ಡೇವಿಡ್ ಅಂಜಲಿಲ್ಲ. ಈ ಹೋರಾಟದ ಹಾದಿಯಲ್ಲಿ ಅವರು ತಮ್ಮ ಒಂದು ಕೈಯನ್ನೇ ಕಳೆದುಕೊಳ್ಳಬೇಕಾಯಿತು. ಆದರೆ, ಆ ಅಂಗವೈಕಲ್ಯ ಅವರೊಳಗಿನ ಹೋರಾಟಗಾರನನ್ನು ಮತ್ತಷ್ಟು ಉಗ್ರವಾಗಿಸಿತೇ ಹೊರತು ಕುಗ್ಗಿಸಲಿಲ್ಲ. ಮುಂಬೈ, ಬೆಂಗಳೂರಿನ ಸ್ಲಂಗಳಲ್ಲಿ ಪ್ರಾಣಿಗಳಿಗಿಂತ ಕಡೆಯಾಗಿ ಬದುಕುವ ವಲಸೆ ಕಾರ್ಮಿಕರನ್ನು ಕಂಡಾಗ, 'ಗ್ರಾಮಗಳಲ್ಲೇ ಗಟ್ಟಿ ಬದುಕು ಕಟ್ಟಿಕೊಡಬೇಕು' ಎಂಬ ದೃಢಸಂಕಲ್ಪದೊಂದಿಗೆ ಅವರು ಕೊಡಗಿನ ಕಾಡುಗಳಿಗೆ ಮರಳಿದರು.

ನಾಗರಹೊಳೆಯ ಹಂದಿಗುಡ್ಡ ಕಾವಲು ಎಂಬಲ್ಲಿ ಸೋಲಿಗರ ಹಾಡಿಗೆ ಡೇವಿಡ್ ಹೋದಾಗ ಕಂಡ ದೃಶ್ಯ ಎಂಥವರ ಕಣ್ಣಲ್ಲೂ ನೀರು ತರಿಸುವಂತಿತ್ತು. ಗಂಡಸರ ಮೈಯೆಲ್ಲಾ ಊತ ಕಾಣಿಸಿಕೊಂಡರೆ, ಹೆಂಗಸರಿಗೆ ಗರ್ಭಪಾತಗಳಾಗಿ ಶಿಶುಗಳು ಸಾಯುತ್ತಿದ್ದವು. ಕಾರಣ ಹುಡುಕ ಹೊರಟಾಗ ಸಿಕ್ಕ ಸತ್ಯ ಎದೆಯನ್ನು ಹಿಂಡುವಂತಿತ್ತು. ಹಸಿವಿನ ತೀವ್ರತೆಗೆ ಅಲ್ಲಿನ ಆದಿವಾಸಿಗಳು ಜೇಡಿಮಣ್ಣನ್ನು ಹುರಿದು ಕಡಲೆಕಾಯಿಯಂತೆ ತಿನ್ನುತ್ತಿದ್ದರು.

ಡೇವಿಡ್ ಕೇವಲ ಭಾಷಣ ಮಾಡಲಿಲ್ಲ. ವೈದ್ಯರನ್ನು ಕರೆಸಿ ಚಿಕಿತ್ಸೆ ಕೊಡಿಸಿದರು. ಅವರಿಗೆ ಕೃಷಿಯ ಪಾಠ ಮಾಡಿದರು. ಹಸುಗಳನ್ನು ತಮ್ಮ ಹಣದಿಂದ ಕೊಡಿಸಿದರು. ಮಕ್ಕಳಿಗಾಗಿ ಕುಟೀರ ಶಾಲೆ ತೆರೆದರು. 'ನಮ್ಮ ಜನ ನಿದ್ರಿಸುತ್ತಿದ್ದಾರೆ, ಅವರನ್ನು ಎಚ್ಚರಿಸಿ' ಎಂದು ಆದಿವಾಸಿಗಳು ಕೇಳಿಕೊಂಡಾಗ, ಡೇವಿಡ್ ಇಡೀ ಕಾಡಿನ 22 ಹಾಡಿಗಳನ್ನು ಒಟ್ಟುಗೂಡಿಸಿ 1984ರಲ್ಲಿ 'ಬುಡಕಟ್ಟು ಕೃಷಿಕರ ಸಂಘ'ಕ್ಕೆ ಜನ್ಮ ನೀಡಿದರು. ಅಲ್ಲಿಂದ ಶುರುವಾಯಿತು ನೋಡಿ ಗಿರಿಜನರ ಆತ್ಮವಿಶ್ವಾಸದ ಜೈತ್ರಯಾತ್ರೆ.

ಬಿಲ್ಲಿನ ಝೇಂಕಾರ: ರಾಯ್ ಡೇವಿಡ್ ಅವರ ಹೋರಾಟದ ಇತಿಹಾಸದಲ್ಲಿ ರಾಣಿಗೇಟಿನ ಕಾಳಗ ರೋಮಾಂಚನಕಾರಿಯಾದದ್ದು. ಸುಗಂಧ ದ್ರವ್ಯ ಕಂಪನಿಗೆ ಗಿರಿಜನರ ಭೂಮಿ ನೀಡಿದಾಗ ತಾಯ್ನೆಲಕ್ಕಾಗಿ ಆದಿವಾಸಿಗಳು ಮರುಹೋರಾಟಕ್ಕೆ ನಿಂತರು. ಬೆಂಬಲಕ್ಕೆ ಬಂದಂತೆ ನಟಿಸಿ, ಗಿರಿಜನರ ಫಲವತ್ತಾದ ಭೂಮಿಯನ್ನೇ ಕಬಳಿಸಲು ಬಂದ ರೈತ ಸಂಘದ ಧೋರಣೆಯನ್ನು ಆದಿವಾಸಿಗಳು ಸಹಿಸಲಿಲ್ಲ. 500 ಜನ ರೈತ ಸಂಘದವರ ವಿರುದ್ಧ ಬಿಲ್ಲು-ಬಾಣ ಹಿಡಿದು ನಿಂತಿದ್ದು ಕೇವಲ 150 ಜನ ಗಿರಿಜನರು. ಅಂದು ಕಾಡಿನ ಮಕ್ಕಳು ತೋರಿದ ರೌದ್ರಾವತಾರಕ್ಕೆ ರೈತ ಸಂಘದವರು ಹೊಳೆಗೆ ಬಿದ್ದು ಓಡಬೇಕಾಯಿತು.

ಅರಣ್ಯ ಇಲಾಖೆಯು ಇವರ ಬೆಳೆಗಳನ್ನು ತುಳಿದಾಗ, 'ನಮ್ಮ ಮಕ್ಕಳನ್ನೇ ಕೊಂದ ಹಾಗಾಯಿತು' ಎಂದು ರೊಚ್ಚಿಗೆದ್ದ ಆದಿವಾಸಿಗಳು ಅರಣ್ಯಾಧಿಕಾರಿಗಳನ್ನು ಹತ್ತು ಕಿಲೋಮೀಟರ್‌ವರೆಗೆ ಕಾಲಿಗೆ ಬುದ್ಧಿ ಹೇಳುವಂತೆ ನಡೆಸಿದ್ದರು. ದರ್ಪದಿಂದ 69 ಗುಡಿಸಲುಗಳನ್ನು ಸುಟ್ಟಾಗಲೂ ಧೃತಿಗೆಡದ ಡೇವಿಡ್, ಜಿಲ್ಲಾಧಿಕಾರಿಯವರನ್ನೇ ಸ್ಥಳಕ್ಕೆ ಕರೆತಂದು ಪ್ರತಿ ಮನೆಗೆ ನಾಲ್ಕು ಎಕರೆ ಜಮೀನು ಕೊಡಿಸಿದರು. ಆಶ್ರಮ ಶಾಲೆ ತೆರೆಸಿದರು. ತಂತಿ ಬೇಲಿ ಹಾಗೂ ಪಂಪ್‌ಸೆಟ್‌ಗಳನ್ನು ಕೊಡಿಸಿ ಇತಿಹಾಸ ಬರೆದರು.

ನಾಗರಹೊಳೆಯ ಮೂರುಕಲ್ಲಿನ ಬಳಿ ಭವ್ಯ ತಾಜ್ ಹೋಟೆಲ್ ತಲೆಯೆತ್ತಲು ನಿಂತಾಗ, ಲಂಚದ ಆಮಿಷ ಮೆಟ್ಟಿನಿಂತು ಹೋಟೆಲ್ ಬರದಂತೆ ತಡೆದರು. ಇಂದು ಕಾಡುಪ್ರಾಣಿಗಳ ಆವಾಸಸ್ಥಾನವಾಗಿರುವ ಆ ಅರ್ಧಂಬರ್ಧ ಕಟ್ಟಡಗಳು ಆದಿವಾಸಿಗಳ ಸ್ವಾಭಿಮಾನದ ವಿಜಯ ಸ್ಮಾರಕಗಳಂತೆ ಕಂಗೊಳಿಸುತ್ತಿವೆ. ವಿಶ್ವಬ್ಯಾಂಕಿನ ಪರಿಸರ ಅಭಿವೃದ್ಧಿ ಯೋಜನೆಯ ಹೆಸರಿನಲ್ಲಿ ನಡೆದ ಭ್ರಷ್ಟಾಚಾರವನ್ನು ವಿರೋಧಿಸಿ ಮಡಿಕೇರಿ ಜೈಲು ಸೇರಿದಾಗ, ಡೇವಿಡ್ ಮತ್ತು ಅವರ ಐದು ಜನ ಸಂಗಾತಿಗಳು ನಡೆಸಿದ 92 ದಿನಗಳ ಉಪವಾಸ ಸತ್ಯಾಗ್ರಹ, ಕಡೆಗೆ ಜೈಲಿನಲ್ಲಿ ಕುಡಿಯಲು ನೀರಿಲ್ಲದೆ ಮೂತ್ರ ಕುಡಿದ ಪ್ರಸಂಗ ಅಪ್ರತಿಮ ತ್ಯಾಗಕ್ಕೆ ಸಾಕ್ಷಿ. ಮುಂದೆ 'ಪೆಸಾ' ಕಾಯ್ದೆ ಜಾರಿಗೆ ಬಂದು ಆದಿವಾಸಿಗಳಿಗೆ ಸ್ವಯಂ ಆಡಳಿತದ ಹಕ್ಕು ಸಿಗುವಂತಾಯಿತು. 2006ರ ಅರಣ್ಯ ಹಕ್ಕು ಕಾಯ್ದೆಯ ಹಿಂದೆ ಇವರ ಸುದೀರ್ಘ ಹೋರಾಟದ ಬೆವರಿದೆ.

'ಪ್ರಪಂಚದ ವೈಜ್ಞಾನಿಕ ಅಧ್ಯಯನದ ಪ್ರಕಾರ ಎಲ್ಲಿ ಗಿರಿಜನರಿದ್ದಾರೋ ಅಲ್ಲಿ ಕಾಡು ಸುರಕ್ಷಿತವಾಗಿದೆ. ಕಾಡು ಇವರಿಗೆ ಹಣ ಮಾಡುವ ವಸ್ತುವಲ್ಲ, ಅದು ಅವರ ದೇವರು, ಪ್ರಾಣಿ-ಪಕ್ಷಿಗಳು ಅವರ ಬಂಧುಬಳಗ' ಎಂಬ ರಾಯ್ ಡೇವಿಡ್ ಅವರ ಮಾತುಗಳು ಇಂದಿನ ನಕಲಿ ಪರಿಸರವಾದಿಗಳಿಗೆ ಚಾಟಿ ಏಟಿನಂತಿವೆ. ಒಂದು ಕೈಯನ್ನು ಕಳೆದುಕೊಂಡರೂ, ಇಡೀ ಬುಡಕಟ್ಟು ಜನಾಂಗಕ್ಕೆ ಸಹಸ್ರ ಹಸ್ತಗಳ ಶಕ್ತಿಯನ್ನು ತುಂಬಿದ ರಾಯ್ ಡೇವಿಡ್ ಇಂದು ನಮ್ಮೊಂದಿಗಿಲ್ಲ. ಆದರೆ, ಅವರು ಹಚ್ಚಿದ ಹೋರಾಟದ ಹಣತೆ ನಾಗರಹೊಳೆಯ ಪ್ರತಿ ಹಾಡಿಯಲ್ಲಿ, ಪ್ರತಿಯೊಬ್ಬ ಆದಿವಾಸಿಯ ಕಣ್ಣಿನ ಭರವಸೆಯಾಗಿ ಸದಾ ಉರಿಯುತ್ತಿರುತ್ತದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ

ಹೋರಾಟಗಾರ ರಾಯ್ ಡೇವಿಡ್ ನಿಧನ

ಮಡಿಕೇರಿ: ಕೊಡಗು ಜಿಲ್ಲೆಯ ಕುಶಾಲನಗರದ ನಿವಾಸಿ, ಆದಿವಾಸಿಗಳ ಪರ ಹೋರಾಟಗಾರ ರಾಯ್ ಡೇವಿಡ್ (71) ಹೃದಯಾಘಾತದಿಂದ ಶನಿವಾರ ಬೆಂಗಳೂರಿನಲ್ಲಿ ನಿಧನರಾದರು. ಶಿವಮೊಗ್ಗದಲ್ಲಿ ಸಭೆಯಲ್ಲಿ ಭಾಗವಹಿಸಿ ಬೆಂಗಳೂರಿಗೆ ಬಂದಿದ್ದರು. ಉಸಿರಾಟದ ಸಮಸ್ಯೆ ಕಾರಣಕ್ಕೆ ಶನಿವಾರ ಬೆಂಗಳೂರಿನ ಸಂತ ಫಿಲೊಮಿನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂತ್ಯಕ್ರಿಯೆ ಮೇ 18ರಂದು ಕುಶಾಲನಗರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ಪತ್ನಿ ಶಮಂತಕ ಡೇವಿಡ್, ಪುತ್ರರಾದ ರೋಷನ್ ಡೇವಿಡ್, ರೋಹನ್ ಡೇವಿಡ್ ಹಾಗೂ ಪುತ್ರಿ ರಚನಾ ಇದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ಮುಖ್ಯ ಅಭಿಯಂತರರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ" ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105,
ದೂ: 08472-220817, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಎಸ್.ಜಿ.ಪಿ ಎನ್.ಜಿ.ಆರ್/2026–27/169 ದಿನಾಂಕ: 16–05–2026

–: ಟೆಂಡರ್ ಆಹ್ವಾನಿಸುವ ಸೂಚನೆ :–

1) ಕಾಮಗಾರಿ ವಿವರ: ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರಡಿ ಸಿರುಗುಪ್ಪ ನಗರದ ಅದೋನಿ ರಸ್ತೆಯಲ್ಲಿರುವ ಹಾಲಿ ಇರುವ ಜಲಶುದ್ಧೀಕರಣ ಘಟಕದಿಂದ ಹಾಲಿ ಇರುವ ಜ್ಯಾಕ್‌ವೆಲ್ ವರೆಗೆ 406 ಮಿ.ಮೀ ವ್ಯಾಸದ x 5.6 ಮಿ.ಮೀ ದಪ್ಪದ ಎಮ್.ಎಸ್ ಕಚ್ಚಾ ನೀರಿನ ಕೊಳವೆ ಮಾರ್ಗ ಒದಗಿಸುವುದು ಹಾಗೂ ಅಳವಡಿಸುವ ಕಾಮಗಾರಿ (ಲಂಪಸಮ್ – ವೇರಿಯೇಷನ್ ಇರುವುದಿಲ್ಲ) **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/ 2026–27/ ಡಬ್ಲ್ಯೂಎಸ್/ವರ್ಕ _ಇಂಡೆಂಟ್507)**, 2) ಕಾಮಗಾರಿ ಅಂದಾಜು ಮೊತ್ತ: **ರೂ. 259.57 ಲಕ್ಷಗಳು** (ಜಿ.ಎಸ್.ಟಿ ಹೊರತುಪಡಿಸಿ), 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 3,89,000/–, 5) ಕಾಮಗಾರಿಯ ಅವಧಿ: 06 (ಆರು) ತಿಂಗಳು, 6) ಇ– ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: **20–05–2026 ಸಮಯ : 13:00 ಗಂಟೆಯ ನಂತರ**, 7) ಪೂರ್ವ ಟೆಂಡರ್ ಸಭೆ ದಿನಾಂಕ: **04–06–2026 ಸಮಯ 11:30 ಗಂಟೆಯವರೆಗೆ**, 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **17–06–2026 ಸಮಯ 17:30 ಗಂಟೆಯವರೆಗೆ**, 9) ಟೆಂಡರ್ ತೆರೆಯುವ ದಿನಾಂಕ: **19–06–2026 ಸಮಯ 11:00 ಗಂಟೆಯ ನಂತರ**, 10) ಹೆಚ್ಚಿನ ವಿವರಗಳಿಗೆ : ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472–220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/130/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in

No.KIADB/CE-1/E-Auction-01/367/2026-27 Date: 15.05.2026

ಕೈಗಾರಿಕಾ ನಿವೇಶನಗಳ ಹಂಚಿಕೆಗಾಗಿ ಇ–ಹರಾಜು.

ಈ ಮೂಲಕ ತಿಳಿಸುವುದೇನೆಂದರೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಇ–ಹರಾಜಿನ ಮೂಲಕ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದೆ. ವಿವರಗಳು ಕೆಳಗಿನಂತಿವೆ :

ಕ್ರ ಸಂ	ಕೈಗಾರಿಕಾ ಪ್ರದೇಶ	ನಿವೇಶನ ಸಂಖ್ಯೆ	ವಿಸ್ತೀರ್ಣ ಚದರ ಅಡಿಗಳಲ್ಲಿ	ವಿಸ್ತೀರ್ಣ (ಎಕರೆ–ಗುಂಟೆ)	ಇಎಂಡಿ (ರೂ.ಲಕ್ಷಗಳಲ್ಲಿ)
1	ಹಾಸನ ಬೆಳವಣಿಗೆ ಕೇಂದ್ರ	233 (ಮೂಲೆ ನಿವೇಶನ)	2150.72	0ಎಕರೆ–21.26ಗುಂಟೆ	5.00
2	ಹಾಸನ ಬೆಳವಣಿಗೆ ಕೇಂದ್ರ	373 ಪಿ (ಮಧ್ಯಂತರ ನಿವೇಶನ)	1894.11	0ಎಕರೆ–18.72ಗುಂಟೆ	5.00

ಇ–ಹರಾಜಿನ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರಕಾರದ ಇ–ಪೋರ್ಟಲ್ https://kppp.karnataka.gov.in ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಇ–ಹರಾಜಿನ ವೇಳಾಪಟ್ಟಿ ಈ ಕೆಳಗಿನಂತಿವೆ : 1) ಬಿಡ್ಡರ್ ಗಳ ನೋಂದಣಿ ಪ್ರಾರಂಭದ ದಿನಾಂಕ : 18.05.2026. 2) ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06.06.2026 ಸಂಜೆ 5.00 ಗಂಟೆವರೆಗೆ. 3) ಲೈವ್ ಬಿಡ್ಡಿಂಗ್ : 09.06.2026 ರ 10.30 ಗಂಟೆಗೆ ಪ್ರಾರಂಭವಾಗಿ 15.00 ಗಂಟೆಗೆ ಮುಗಿಯಲಿದೆ.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ

DIPR/CP/695/NR/2026-27

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

KARNATAKA REDDYJANA SANGHA® (Estd -1925)
KRJS GROUP OF INSTITUTIONS
REQUIRES

Applications are invited from eligible candidates for the following posts in KRJS institutions

Vemana Institute of Technology
Principal: 01
Professors: CSE:02, ISE:01, AI &ML:01, Civil:01, CSE-DSc:01, Cyber Security:01, Physics:01, Maths:01.
Associate Professors: CSE:02, Civl:01, Cyber Security:01, AI & ML:01.
Assistant Professors: CSE:04, ISE:03, ECE:02, Civill:01, ME:01, CSE-Dsc:02, Cyber Security:02, Chemistry:01, Maths:01, English:01.
System Analyst: CSE:01, Asst. Librarian:02, Library Assistant:01.
Lab Instructor: CSE:03, ISE:02, D.Sc:01, Chemistry:01, AI& ML:01, Civil:01, Receptionist:01, Telecaller :02 for Admission Cell.

RJS - Institute of Management Studies
Asst. Professor: Kannada:01, Asst. Librarian:01

CJR RJS Marathalli College
Physical Education Director:01, Lab Instructor / Programmer:01

RJS First Grade College
English Lecturer:01

Vemana Institute of Physiotherapy
Professor - Musculoskeletal Science:01, Neuroscience:01, Cardiopulmonary Science:01, Sports Science:01.
Asst. Professor - Musculoskeletal Science:02, Sports Science:01, Attender:01

DBM & RJS School
Primary School Teacher - Hindi:01, Art & Craft Teacher for High School:01, Librarian:01.

RJS School, Roopena Agrahara
Assistant Teacher: 01

RJS School Doddanekkundi
Teachers : Middle school:01

Head Office
Electrical Engineer:01, Bus Driver:01

Apply within 10 days to the General Secretary, Karnataka Reddyjana Sangha, No.1, Mahayogi Vemana Road, 3rd Block, Koramangala, Bangalore-34. For more details visit / E-mail: krjsho25@gmail.com

For more details visit
www.reddyjanasangha.org | Ph: 080-25534194

HERITAGE PUBLIC SCHOOL Srinidhi Layout 7th Phase JP Nagar Konanakunte, requires SCIENCE ENGLISH and KANNADA TEACHERS for Middle School and KINDERGARTEN TEACHERS. WhatsApp or email resume to Mob : 9901733776. Email : heritagepublicschoolkk@gmail.com

BHARATHAMATHA EDUCATION SOCIETY, Wanted Immediately LIBRARIAN: B.Lib/M.Lib Graduates with experience in Institutional Library Management OFFICE MANAGER: Experienced Lady Commerce Graduates, with Good Computer knowledge including Tally, Proficiency in Kannada and English Typing. Very good knowledge of Accounts Maintenance. Please apply immediately with a detailed Resume with Photograph, to reach on or before 18/05/2026.To The Secretary, BHARATHAMATHA EDUCATION SOCIETY, Hanumanthanagar, Bangalore- 560019 Phone: 9110669225 Email: bharathamatha.edusoc@gmail.com

WANTED B.A, B.Ed. lady teachers to teach Kannada and English for High School. Contact: Max Muller English High School, No. 173/1, 3rd Main, H.V.R.Layout, Magadi Main Road, Bangalore - 79. Ph. 23284559, 23285559. info@maxmullerhighschool.com

WANTED B.A., B.Ed. Lady Teachers to teach Kannada and English for High School. Contact:- Max Muller English High School, No. 173/1, 3rd Main, H.V.R. Layout, Magadi Main Road, Bangalore- 79. Ph: 23284559, 23285559. info@maxmullerhighschool.com

WANTED ENGLISH Medium Nursery, Primary & High School TEACHERS, OFFICE ASST., AYAS, ATTENDERS, HOUSEKEEPERS. Food & accommodation available for needy. Dr. Swamy: 7090398888/ 9449819999.

TEACHER REQUIRED for Grade 6 to 10 State board for Maths and Science at The Kenmore School Basavanagudi whatsapp 9901501185

Required qualified and experienced Staff:
- Computer Science Teacher - MCA / BCA
- Office Assistant with Computer knowledge and Administrative skills
- Experienced lady Physical Education Teacher (B.PEd)

Send your resume to: st.thomaswfd@gmail.com
St. Thomas School, 311, Inner Circle, Whitefield, Bangalore-66 Ph: 080-28452484

ST.PHILOMENA'S English School, Doddabommasandra, Bengaluru 97 Hiring Principal Qualification: B.Ed,M.Ed.`Phd Experience Minimum 5years`SUBJECT: Computer Teacher: Qualification: MCA- Experience 5years Admin Staff Qualification Bachelor's Degree- Apply now!`WhatsApp 9741275231 Email: office.stps@gmail.com 080-48537655

WANTED TEACHERS for High School Classes Maths, Hindi and Computer Subjects. 'SRI VIDYA KENDRA', Peenya 1st stage, Bangalore-58. Ph- 9900708182, 28398833, 41179155.

VIDYAVAHINI ENGLISH SCHOOL Anandnagar Bangalore-24 mail:principalvves@srsect.edu.in Ph:080-23538869 9071119031 9343865939 9008396542 Urgently Requires Experienced Qualified Teacher for the-post of Hindi, Chemistry, EVS, Computer Teacher, Moral Science & Van Driver.

INDIAN RED CROSS SOCIETY
Karnataka State Branch
No. 26, 1st Floor, Red Cross Bhavan, Race Course Road, Bangalore- 560 001. Ph: 080-22264205 /080- 22268435
e-mail: ircskar@gmail.com; rajeev.shetty@yahoo.in

REQUIRED

ASST. SECRETARY:- 01post
Graduate from any recognized university with ten years of vast administrative experience. A retired Gazetted Officer not below the rank of Group B having minimum 5 years of experience in Group A or B category. OR a graduate of any recognized university must have worked in any Nationalized Banks with executive cadre.

PUBLIC RELATION OFFICER:- 01 post
Post-Graduate Diploma in Public Relationhaving 05 years' of experience in media or public relations. Experience in PR campaigns and media management Excellent writing, oral presentation and communication skills. Familiar with use of computers, internet, M.S. Office including Excel, Power Point Presentation [familiarity / experience in handling social media will definitely be an added advantage]

SENIOR ACCOUNTANT: - 01 post
B.Com / M.Com / MBA [FINANCE] / CA / CA Inter / CA Article ship. Minimum 7 to 10 years experience in accounts, GST, TDS, Taxation, Payroll & finalization of accounts. Candidates should be well versed in computers with knowledge of Tally and MS excel.

NOTE: Salary negotiable depending upon qualification and experience. Application with testimonials should reach the undersigned at the above address **on or before 30th May 2026 before 5.00 p.m. with candidate's mobile number, e-mail id.**
For all further details and information please visit
www.redcrosskarnataka.org

Sd/-
General Secretary

Bharatiya Vidya Bhavan,
Bengaluru
An institution of National eminence recognized by the Govt of India, promoting education, art and culture invites applications for the following positions:
- **Joint Director - Administration**
- **Registrar - Education**
- **Estate Engineer**

Qualified and Experienced candidates, with exposure to literary and cultural activities and who have served in mid-level positions.
Salary/Honorarium will commensurate with qualification and experience. Selected candidates will be appointed on contract basis. Interested may send their CV to:
jobdatabase.bhavan2023@gmail.com
on or before 30 May 2026.

Engg/ Production Technical

WANTED
Bengaluru based Construction Company hiring for following post:
- 05 To 15 years experienced **Civil Quantity Surveyor** *(Male)* -to work In **Bengaluru** for immediate appointment.
- 01 To 15 years experienced **Civil Site Engineer** *(Male)* - to work In **Shillong (Meghalaya), Muzaffarnagar (Delhi)** for immediate appointment.

Call / send your Resume In Whatsapp : 944989044 Email Id: shrijay05@gmail.com

A LEADING Pharma Distributor Company near Kengeri looking for Drivers 4 wheeler Call: 9513306536 9916902503

Domestic Helpers / Housekeeping

Baby Caretaker Required
Looking for a caring trust worthy and experienced lady, to take care of a 3 year old child, should be fond of children. Experience in baby care is preferred.
Suitable salary will be provided.
Location: RPC Layout, Vijayanagar, Bangalore
Contact No: 9341257670

Accounts & Finance

REQUIRED EXPERIENCED GENERAL MANAGER (Accounts)for A Hospital in Padmanabhanagar. Good Salary Offered. Candidates Residing Nearby Only Call-9513362681 Apply E-Mail: ceo.mahb@gmail.com

Receptionist/ Secretary

WANTED SECRETARY to HMT Employees' Co-Opeative House Building Society At Jalahalli B.Com Graduate with Kannada English Computer Knowledge. Contact: 9845345391

Hospital & Medical Jobs

MD PHYSICIAN, Receptionist, Ayah, Nurses for Manjushree Speciality Hospital, near Commercial Street. +91 9164386593, +91 9632267184, 9945235615

Drivers

WANTED DRIVER For Omini`Cargo Vehicle`for LINE`SALES`with 3`or`4`Years`of Experience. Contact:- Modern Coffee Co. #117,Lalbagh Fort Road,V.V.Puram Bangalore 560004 Mob:9986060608.

General

WANTED MANPOWER SUPERVISOR for Peenya to arrange Manpower and monitor the work force. Contact: 9187456956

MATRIMONIAL

Brides Wanted

Kannada

Wanted Bride
South Indian Family searching for an alliance for their son , 1998 Born / 6'1/ IAS Officer. Alliance invited
7200200946

Wanted Bride
Kannada Gowda groom 1995 Born / MS- Doctor/ Bangalore looking for a suitable bride.
080-69070604

Marathi

Wanted Bride
Alliance invited for a Marathi Boy 1995 born, 5'9 , Businessman , Only Son / Properterial belonging of 2000 Cr Contact -
7200200946

Muslim

Wanted Bride
Educated Sunni Muslim boy (Sep-1993), MS in Engineering, well-settled in USA, Green Card holder, seeks compatible match
(9164400029)

Wanted Bride
Professionally well-settled Sunni Muslim boy, 28 years, M.Tech Software Developer (CTC ₹80 LPA), looking for suitable alliance.
(080-69144026)

Telugu

Wanted Bride
Alliance invited for a Telugu Boy 1994 Born/ Surgeon Doctor/ Bangalore/ affluent family. Contact
(6361613179)

Wanted Bride
Telugu Reddy Boy 1998 / 5'10/ Businessman / Networth 1000 cr/ Bangalore/ is looking for a suitable HNI bride (CNB). Contact
(6361613179)

Grooms Wanted

Muslim

Wanted Groom
Sunni Muslim girl from a respectable and affluent family, 2003 born, BE educated, seeking suitable proposal.
(080-6914 1325)

DH DECCAN HERALD The Power of Good
Classifieds
More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW

*Conditions apply
For more details contact:
+91 9731810277 | +91 9886213331
+91 9845114560 | +91 9900428036
080- 45557163/164

ಕ್ಲಾಸಿಫೈಡ್ಸ್
EDUCATION CORNER

BRIGHT WAY SCHOOL
BRIGHT WAY SCHOOL BANGALORE - 560 061

SSLC EXAMINATION RESULT 2025-26

VIKAS V. SULIKERI
614/625, 98.24%

Congratulations
100% RESULT

Ushashree .M 607/625, 97.12%
Eshwari Nagappa 602/625, 96.32%
Chinmayee Iyer 601/625, 96.12%
Pavan Singh 600/625, 96.00%
Shreyas P.A 593/625, 94.88%
Rahul .J 591/625, 94.56%
Rachana .P 586/625, 93.76%
Spoorthi H.D 585/625, 93.60%
Priyanka .R 580/625, 92.80%
Likith .M 579/625, 92.64%
Megha .M 572/625, 91.52%
Bhuvana .M 571/625, 91.36%
Praveen Gopal .H 571/625, 91.36%
Kunguma Aishwarya 567/625, 90.72%
Dhanush S.B 565/625, 90.00%
Hemanth Kumar N.G 562/625, 89.92%
Sahana .H 561/625, 89.76%
Kaushal .J 551/625, 88.16%

Kanigiri Pujitha .H 549/625, 87.84%
Harshitha H.S 542/625, 86.72%
Kaushik Yadhava .S 539/625, 86.24%
Sanjana .S 537/625, 85.92%
Rahul Devasi 532/625, 85.12%

DISTINCTION - 24
1st Class - 37
2nd Class - 07
PASS - 02

KSEAB Departmental Gradation - A

The Management extends warm congratulations to all our SSLC students on their remarkable achievement.

BHARATH EDUCATION SOCIETY®
BES Pre-University College of Science, Commerce & Arts
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011

Email: principalas018@gmail.com
Website: www.besinstitutions.com
080-26637018 / 98863 52466



Sahakara Rathna
B.L. Lakke Gowda
Founder
B.E.S Institutions

Free Integrated Course NEET, JEE, K-CET, COMED-K
Affordable Fee for I & II PUC Science

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

COURSES OFFERED FOR : 2026-27
PUC PCMB PCMC HEBA SEBA CEBA HEPS

Languages Offered: English, Kannada, Hindi & Sanskrit

BES EVENING PU COLLEGE OF COMMERCE & ARTS
080-26533736 / 95387 98956 Email: beseveningpucollege@gmail.com
PUC HEBA HEPS

Sri Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Prof Srinivasa C., Principal, BES PU College
Sri Suresh, Principal, BES Evening PU College

BES-26707

BUSINESS

Business to Business

Business

AVAILABLE ON lease a 10 ton ice cubes manufacturing unit at Goa, in operation. 9823594527

Business Offers

Business For Sale

SALE MULTI-SPECIALITY Hospitals. Manyata Tech park, Marthahalli, Kasturinagar and Bannerghatta Road. Arun 9845077299.

BUILDERS ESSENTIAL

Water Proofing

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

MORE Classifieds Ads on Subsequent Pages

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

WEEKEND CORNER

ಕ್ಲಾಸಿಫೈಡ್ಸ್

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Anjanapura

ANJANAPURA BBMP A Khatha Site For Sale 30×50 South West Corner Opposite Sattva Forest Ridge Apartment Price. 10.500/- Slightly Negotiable. Contact Pavan Real Estate: 9845298419

FOR-SALE BDA-SITE in Anjanapura 10th Block 40X60 East facing contact- 9482461127. (Brokers Excuse)

Banashankari

***BANASHANKARI 6TH**-STAGE,7TH-**BLOCK** 30x40East-South Cornersite sale both-side 40ft-rd good location Builder Location.Cont: 9341733480/ 9844533371

BDA SITE For Sale Banashankari 6th Stage 7th Block 40x60 E/F Anjanapura 7th Block 30x40 S/F: 9964627255

BANASHANKARI 6TH Stage 11th Block, 40x60 Site Sale, Close to 80 Feet Road. 9972720488/ 9880448478.

Banaswadi

BABUSAPALYA, CHELEKERE, 1224 Sqft Site Area With 4000 sqft (Duplex) Built-Up Area For Sale Including Luxury Interior. Call:9353084848 8073977742

Electronic City

"ELECTRONIC CITY 30x40 DC conversion E-Katha, Gated Community 38 Sites Sale total 1.5 acres with Basic Amenities, Bank Loan Available, Ready for Registration near VIBGYOR School, 1.75kms from Hosa Road, Metro Station. 9620424103/ 9448670671"

MORE Classifieds Ads on Subsequent Pages

RAMAN GROUP OF INSTITUTIONS
134, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
36, Magadi Main Road, Next to Samrudhi Hotel, Opp. Pooja Convension Hall, Bengaluru-560079
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE
BBA | BCom | BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-26701

ಅಭಿನಂದನೆಗಳು

2025–26 ನೇ ಸಾಲಿನ SSLC ಪರೀಕ್ಷೆಯಲ್ಲಿ
ವಿದ್ಯಾವಾಹಿನಿ ಆಂಗ್ಲ ಶಾಲೆಯ
ವಿದ್ಯಾರ್ಥಿ **H.U. ಪೂಜನ್ ದೇವಾಂಗ 92%** ಅಂಕ ಗಳಿಸಿದ ಪ್ರಯುಕ್ತ ಶಾಲೆಯ ಆಡಳಿತಾಧಿಕಾರಿ ಅಧ್ಯಕ್ಷರು **ಶ್ರೀ ಆರ್ ಕೃಷ್ಣಪ್ಪ** ಮಾಜಿ ಮಂತ್ರಿಗಳು ಕರ್ನಾಟಕ ಸರ್ಕಾರ ಇವರು ಪ್ರೋತ್ಸಾಹಿಸಿ ಪುರಸ್ಕರಿಸಿದ್ದಾರೆ.

Kempegowda Layout

SITE FOR SALE NADAPRABHU KEMPEGOWDA LAYOUT
1.Commercial Site for sale in 6th D sector 100ft Road 40×60 (Arkavathi alternative)
2.Residential site for sale in 7th Block F Sec 30x40 (Arkavathi alternate)
Contact: Owner
Mob: 7204897695 / 9844262220

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

KEMPEGOWDA LAYOUT Sites No. 509, 510 2nd Block West 20x30 Rs. 57 Lakhs Negotiable: 9845793121

Kanakapura Road

"AVAILABLE 30X40, 40x60, 50x80 Residential/ Commercial Sites/ Houses Kanakapura Road, Anjanapura, Banashankari 6th Stage. 9846286505"

Magadi Road

D GROUP Layout 30x40 West Facing, 3rd Block, Andrahalli, Magadi Road, Rs. 13750/- Psft: 9740073482

Mysore Road

30X40 EAST Facing Site for Sale @ SLN City, Chunchanakuppe, Mysore Road. Call: 9845515075/ 9900266984

Nelamangala

SITE SALE 35x50 West face, Rashi gateway near D-mart, Nelamangala-Tumkur toll. Mob-9880093622

Bannerghatta Road

SHIVANAHALLI RAMAKRISHNA ASHRAM Attach 3.4 Acers 8Cr. Akshayangr 52x72 SEC 14000/-, 50x97 SF 12000/- 6361162072

Mallathalli

SITE FOR SALE MALLATHAHALLI NGEF LAYOUT
BDA 40x60 South facing opposite Mallathahalli Cricket Ground, behind Mallathahalli Lake Ready for construction site
Contact:
Mob: 7204897695 / 9844262220

Vijayanagar

PRIME LOCATION SITE SALE 60x90 WEST FACING WOC ROAD RPC LAYOUT VIJAYANAGAR CONTACT: 9845038343/ 6363250343

Vishweshwariah Layout

"26X40 PRIME RESIDENTIAL CORNER SITE VISHVESHWARAIAH LAYOUT NEAR 100 FEET ROAD, PROPOSED BDA COMPLEX 9845143579"

NGEF LAYOUT Mallathalli 40×60 Site Sale BDA Katha N/F 40ft Road Near Narayana E Techno School: 8217392686

Rajanukunte

SALE 5000 sft approved Villa plot near upcoming Taj Groupresorts, Rajanakunte. 5000/ sft. 9980560293

Sadashiva Nagar

OLD HOUSE Lower Palace Arcade Sadashivnagar 20X25, R.T.NAGAR BDA Site 40X61,and 50X88 Bangalore 9448473358 9980072843

Residential/ Commercial

J P Nagar

COMMERCIAL SITE Sale Panduranga Layout, 3640 Sqft, 'A' Khata North East Corner Contact: 9945114693 9632852947

Sulakshmi Silks Proudly Presents
Seere Utsava By Sulakshmi Silks
6th SEERE UTSAVA
6ನೇ ಸೀರೆ ಉತ್ಸವ
A Celebration of Elegance
PRE VARAMAHALAKSHMI SALE
FLAT 50% OFF
on all Pure Mysore Silk Saree collections
Exclusive Health Offer!
Get a FREE Blood Checkup
(Includes 50 comprehensive tests)
on every bill above Rs. 10,000
ನಿಮ್ಮ ಆರೋಗ್ಯವೇ ನಮ್ಮ ಭಾಗ್ಯ!
6th - 17th May 2026
Address: Hemachandra Sagara Kalyana Mantapa, Jayanagar, Bengaluru
Call: 99727 18898 | 96631 27606
Experience the legacy

House

Bannerghatta Road

BANNERGHATTA ROAD, Vijaya Bank Layout, 1500Sft, South facing, with 3bhk House 3.30 Crores Reddy 9880226644.

Kanakapura Road

11KM FROM Bangalore, Kanakapura Road.7500sft With House Price 1950/-sft AND 32000sft only 1350/- 9731466365

Nagarabhavi

DIRECT OWNER BDA 20x20 G + 2 Independent House NF Pattegarapalya, Nagarabhavi, 68 Lakh 9739957911

Commerical

Jayanagar

SALE 30X50,40X60 45x90,50x75 Residencesial & 30x40 Prime Commercial Corner Property 60feet Road Jayanagar 4th T Block only Genuine-Buyers Call GTV: 9986490019

Koramangala

COMMERCIAL BUILDING SALE @ Koramangala, Near Sony Signal, 60x40 Site, Getting 7L, Sale 11cr. 9980577227.

Flat

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

CONSTRUCTION MACHINERS FOR SALE
Used Mixer Machiners 1, 2, 3 & 4 Bag Mixers in good condition for sale. Tractor Mounted 15 KVA D.G. Set, Material Hoist Wire Rope Type and Rack & Pinion type for sale
Contact:
6360605636 / 8431164733

Industrial & Factory

Kanakapura Road

INDUSTRIAL SHED FOR SALE AT CHUNCHAGHATTA MAIN ROAD
Shed 45 Feet hight. 7400/= Sq.ft 10HP Power with Borewell East Facing and 600 sqft 2BHK & 1BHK fully furnished **FOR SALE** with car parking.
Contact:
7760835596 / 8971391795

Mysore Road

2.5 ACRES Industrial Land For-Sale in Bidadi Industrial area opposite-to Mico Bosch Near Eagleton Resort North/Facing Rs.4000/-sqft Nego: 9901011122

Farm House/ Land/ Resorts

Devanahalli

CONVERTED LAND For Sale- Devanahalli 22,325 sft Residentially Converted Land For Sale, STRR, Service Road Approached Land, Devanahalli Taluk, Bangalore North. Excellent Investment Opportunity in Fast-growing North Bangalore Corridor. For Details What'sapp: 9606902899

Out-Station

CHANNAPATNA 3.05ACRE Farm Land (For Farm House) With Coconut Tree, Thar Rd only 2.95000 Per Gunta: 9731466365

Commercial Building

Yelahanka

YELAHANKA, RAJANNAKUNTE, Premium Building with 43 Rooms, 12500 Sft for Sale, Further details contact: 6302608936

REAL ESTATE BUYING

House

Jayanagar

NRI BUYER, required in Jayanagar, J.P.Nagar 30x40, 40x60, 50x80 any facing genuine sellers call- 9845144365

Industrial & Factory

Hoskote

REQUIRE INDUSTRIAL Land (2-5 acres) Outright Purchase in Hoskote.Also Require Industrial Sheds (20,000-70,000 sq. ft.) for Manufacturing anywhere in Bangalore MNC clients/ Prefer KIADB industrial areas.Blumefield Industrial Realty 9900570439

Sites

Anjanapura

WANTED BDA SITES COMMERCIAL & RESIDENCIAL ANJANAPURA, BANASHANKARI 6TH STAGE 20×30/ 30×40/ 40×60/ 50×80. CONTACT: PAVAN REAL ESTATE 9845298419

A JAIN INSTITUTION
AGI **ADARSH GROUP OF INSTITUTIONS**
Estd: 1971
5th Main Road, Chamarajpet, Bengaluru-18 | www.agieducation.org
ADMISSIONS OPEN
PUC SCIENCE: PCMB | PCMCs | PCME
With CET NEET JEE
PUC COMMERCE: MSBA | SEBA | CsSBA | HEBA | CsEBA
DEGREE COURSES: BBA | BCA | BCOM
BA | BSC
PG COURSES: MBA DUAL Specialisation | MCOM
EVENING COLLEGE: PUC | BCOM | MCOM
NAAC A
Scholarship for meritorious students
SCAN FOR SCHOLARSHIPS
PUC | UG DEGREE | EVENING COLLEGE | PG MBA
+91 74067 40011/22 www.agieducation.org

PRM/KA/RERA/1251/310/PR/150223/005721
DS MAX SAMYAK
SUPER LUXURIOUS 2 & 3-BHK APARTMENTS
DS MAX
MYSORE RD.
NEAR CHALLAGHATTA METRO
2-BHK HOMES STARTS @ ₹75 L*
BDA APPROVED | G+14 FLOORS
*T & C Apply
CREDAI BENGALURU
8880 461 461
www.dsmaxproperties.com

Banashankari

BDA SITES WANTED ARKAVATI ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 40x60 30x40 BCCHS LAYOUT NARAYANNAGAR BANASHANKARI 6th STAGE, ANJANAPURA KANAKAPURA ROAD BROKER EXCUSE. Call 9663454878.

Multiple Locations

WANTED 40X60 Site in Malleswaram/ Rajajinagar/ Vijaynagar/ Chandra Layout/ Anjanapura. Contact: durga824@gmail.com

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

PRIME BUILT UP WAREHOUSE SPACE-57,000 sqft. AVAILABLE FOR LEASE AT DODDAKALLASANDRA NEXT TO METRO STATION, KANAKAPURA MAIN ROAD. CALL OWNERS: Ravi C. 9845006864 K.S. Murthy 9845001381 AGENTS EXCUSE

RENT: BTM LYT, NEW- 55,000 Sft- 5 Floors, 13,000 Sft Plot 12.5 Feet Floor Height 3 Sides Road N/S/W Double Cellar Parking. Water, Power & 2 Elevators. Suitable: MNC, Hospitals, Educational Institution. 'TASK REALITY': 9845005855

FOR RENT -Commercial space 1600 Sq Ft available near Sparsh Hospital, Off Tumkur Road. Suitable for Cloud Kitchen, Polyclinic, Offices, Godown-cum-Office, Courier Services, and other commercial use. Contact : 9845026300

COMMERCIAL 2000 sqft. Space for Rent K.G. Road, Gandhinagar. Contact: 9448363096.

PERSONAL

Change of Name

I, HARISH KUMAR.A residing at SF-1, Homly Homes Apartments, 1st Cross, Hegde Nagar, Bengaluru-560077 have changed my name to HARSHAVARADHAN KUMAR GARUDA .A vide affidavit dated 16-05-2026 before Notary Y.R.Chandrasekar, Bangalore.

CHANGE OF NAME
I, **SUNDARA KUPPARAJU** W/o **K.V. Kupparaju,** residing at No. 281, 2nd Cross, 8th Main, 4th Phase Dollars Colony, JP Nagar, Bengaluru-560078, have changed my name to **SUNDARAMMA KUPPARAJU** vide affidavit dated 16-05-2026 before notary V Earappa, Bengaluru.

I, SHREYA KUMARI SANTHALIA, have changed to New name SHREYA SARAOGI Residing at Flat 2121, Sobha Windsor, Immadihalli Main Road, Nagondanahalli, Whitefield post, Bengaluru - 560066, vide affidavit dated 16/05/2026 before Notary Veena J, Bengaluru.

I, SRI. Prabhakara H C, R/at No. 63, Sun Grace, KPA Block, 1st Main, 6th Cross, Near KFC Restaurant, Chandra Layout, Vijayanagar, Bangalore-560040, I have changed the name of my minor son "ANSHU SURYA P" to "ARYAN P" vide Affidavit dated 16.05.2026 sworn before Notary K.C. Shashikala at Bengaluru, Henceforth, my minor child shall be known as "ARYAN P" for all purposes. All concerned authorities may please note.

CHANGE OF NAME
I, **REETU RANI MARJIT,** R/at No. Flat No. G3, Ground Floor, Sri Sai Palace Apartment, 3rd Main, 8th Cross, Hoysala Nagar, Ramamurthy Nagar, Doorvaninagar Post, Bengaluru- 560016, have changed my name to **REETU C BHALLA** W/o **Chetan Bhalla** vide affidavit dated 15-05-2026 before notary Uday Kumar K, Bangalore.

CHANGE OF NAME
I, **KAUSTHUBHA PRIYAN,** R/at 373, 43rd Main, Ideal Homes Layout, RR Nagar, Bangalore-560098, do hereby declare that **"Kausthubha Priyan HR", "Kausthubha Priyan"** and **"Kausthubh Priyan HR".** Hence all the three names belong to the same person i.e, me. Vide affidavit dated 15.05.2026, before notary, K.V.Prema Kumari , Bangalore

I, SOUHARD BASARALU LOKESH have changed my name to SOUARD BASARALU LOKESH vide affidavit dated: 15/5/2026 Before Notary Manohar Jeerige Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds
More value, more impact
REAL ESTATE
www.dhclassifieds.com
ಪ್ರಜಾವಾಣಿ
BOOK NOW
BOOK YOUR REAL ESTATE ADS IN DH ALL KARNATAKA + PRAJAVANI BENGALURU CITYON SATURDAY + SUNDAY
@ 2481/-* FOR 15 WORDS
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

ಜಲನಾರಾಯಣರು...
ನೇಪಾಳದ ಮೂರು ಜಲನಾರಾಯಣ ಮೂರ್ತಿಗಳನ್ನು ನೋಡಿದ ಅನುಭವ ಮನಸ್ಸಿನಲ್ಲಿ ಅಚ್ಚೊತ್ತಿದೆ... 13

ಚಿಟ್ಟೂರಿನ ದೊಡ್ಡಕೆರೆಯಲ್ಲಿ ಮೀನು ಬೇಟೆಯ ನೋಟ

ಚಿಟ್ಟೂರಿನಲ್ಲಿ ಕೆರೆಬೇಟೆ ಸಂಭ್ರಮ

ಕೆರೆಬೇಟೆ ಇಲ್ಲಿನ ಜನರಿಗೆ ಕೇವಲ ಮೀನು ಹಿಡಿಯುವ ಸಂಭ್ರಮವಲ್ಲ; ಅದು ಊರಿನ ಒಗ್ಗಟ್ಟು, ತಲೆಮಾರುಗಳಿಂದ ಬಂದ ಸಂಸ್ಕೃತಿ ಮತ್ತು ಸಮುದಾಯದ ಹಬ್ಬ. ಚಿಟ್ಟೂರಿನ ಕೆರೆಯಲ್ಲಿ ಹದಿನೈದು ವರ್ಷಗಳ ನಂತರ ನಡೆದ ಮೀನುಬೇಟೆಯ ರೋಚಕ ಕ್ಷಣಗಳು, ಜನರ ಹುರುಪು ಮತ್ತು ಗ್ರಾಮೀಣ ಬದುಕಿನ ಜೀವಂತ ಚಿತ್ರಣ ಇಲ್ಲಿದೆ.

ಇವಿಷ್ಟು ನನ್ ಬೇಟೆ

• ವೆಂಕಟೇಶ ಜಿ.ಎಚ್

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಚಿಟ್ಟೂರಿನ ಕೆರೆ ಏರಿಯ ಹಾದಿಯಲ್ಲಿ ಹನುಮಪ್ಪನ ಗುಡಿ ದಾಟಿ ಸರ್ಕಾರಿ ಶಾಲೆಯ ಅಂಗಳಕ್ಕೆ ಬಂದಾಗ ಬೆಳಗಿನ ಬಿಸಿಲು ನಿಧಾನವಾಗಿ ಹರಡತೊಡಗಿತ್ತು. ಕೆರೆಯ ದಂಡೆಯತ್ತ ಹೋಗುವ ರಸ್ತೆ ತುಂಬ ಬೈಕ್, ಆಟೊ, ಜನರ ಓಡಾಟದಿಂದ ಗಿಜಿಗುಡುತ್ತಿತ್ತು. ದೂರದಿಂದಲೇ ಗದ್ದಲ ಕೇಳಿಬರುತ್ತಿತ್ತು. ಕೈಯಲ್ಲಿ ಕೂಣಿ, ಜರಡಿ ಬಲೆ, ಚೀಲ ಹಿಡಿದವರು ಗುಂಪು ಗುಂಪಾಗಿ ಕೆರೆಯತ್ತ ನಡೆದುಹೋಗುತ್ತಿದ್ದರು. ಸೊರಬದ ಭಾಸ್ಕರ್ ಗೆಂಡ್ಲ, 'ಬೇಗ ಬನ್ನಿ... ಜನ ಈಗಲೇ ಕೆರೆಗೆ ಇಳಿಯೋಕೆ ಸಜ್ಜಾಗಿದ್ದಾರೆ' ಎಂದು ಹೇಳುತ್ತಾ ನಮ್ಮನ್ನು ದಂಡೆಯತ್ತ ಕರೆದೊಯ್ದರು.

ಶಿವಮೊಗ್ಗದಿಂದ ಶಿರಾಳಕೊಪ್ಪ ದಾಟಿ, ಅಕ್ಕಮಹಾದೇವಿಯ ಹುಟ್ಟೂರು ಉಡುಗಣಿ–ತಡಗಣಿ ಹಾದಿಯಾಗಿ ಬಂದ ನಮ್ಮ ಪ್ರಯಾಣದ ಕೊನೆ ಚಿಟ್ಟೂರಿನ ಕೆರೆಯ ದಂಡೆಯಲ್ಲಿ ನಿಂತಾಗಲೇ ಸಾರ್ಥಕ ಅನ್ನಿಸಿತು.

ಆ ದಿನ ಕೆರೆ ಹಬ್ಬದ ಮೈದಾನವಾಗಿತ್ತು. ಕೆರೆಯ ಅಂಗಳ ಈಗಾಗಲೇ ಜನರಿಂದ ತುಂಬಿಹೋಗಿತ್ತು. ಕೆಲವರು ಚಡ್ಡಿಯಲ್ಲಿ, ಕೆಲವರು ಮಡಿಚಿದ ಧೋತ್ರದಲ್ಲಿ. ಹಲವರು ಬರೀ ಮೈಯಲ್ಲಿ. ಕೈಯಲ್ಲಿ ಕೂಣಿ, ಜರಡಿ ಬಲೆ, ಚೀಲಗಳು. ಕೆಲವರು ಭುಜದ ಮೇಲೆ ಒದ್ದೆಯಾದ ಬಲೆ ಸುತ್ತಿಕೊಂಡಿದ್ದರೆ, ಕೆಲವರು ನೀರಿಗೆ ಇಳಿಯುವ ಮುನ್ನವೇ ಮಣ್ಣಿನ ಮೇಲೆ ಕುಳಿತು ಕಾಲಿಗೆ ಮಣ್ಣು ಅಂಟಿಸಿಕೊಂಡು ಸಿದ್ಧರಾಗುತ್ತಿದ್ದರು.

ಎಲ್ಲರ ಕಣ್ಣುಗಳೂ ಒಂದೇ ಕಡೆ–ಕೆರೆಯ ನೀರಿನ ಮೇಲೆ. ಅಲ್ಲಿ ನೀರಿಗಿಂತ ಹೆಚ್ಚು ಇದ್ದದ್ದು ಜನರ ಉತ್ಸಾಹ.

ಐಸ್‌ಕ್ರೀಂ, ಕಬ್ಬಿನ ಹಾಲಿನ ಗಾಡಿಯವರು ಪೀಪಿ ಊದುತ್ತಾ ಜನರ ನಡುವೆ ದಾರಿ ಮಾಡಿಕೊಂಡು ಹೋಗುತ್ತಿದ್ದರು. ಆ ಗದ್ದಲದ ಮಧ್ಯೆ ಕೆರೆಬೇಟೆ ಆಯೋಜಕರ ವಾಹನ ದಂಡೆಯ ಸುತ್ತ ತಿರುಗುತ್ತಿತ್ತು. ಧ್ವನಿವರ್ಧಕದ ಗರಗರ ಶಬ್ದ ಗಾಳಿಯಲ್ಲಿ ಚದುರಿಕೊಂಡಿತ್ತು.

'ತಂಟೆ ತಕರಾರು ಮಾಡುವವರಿಗೆ ಅವಕಾಶವಿಲ್ಲ... ಗ್ರಾಮ ಸಮಿತಿಯ ಅನುಮತಿ ಇಲ್ಲದೇ ಕೆರೆಗೆ ಇಳಿಯುವಂತಿಲ್ಲ... ದೊಣ್ಣೆ, ಕತ್ತಿ ಬಳಸುವಂತಿಲ್ಲ... ₹600 ಶುಲ್ಕ ಪಾವತಿ ಕಡ್ಡಾಯ...'

ಈ ಪ್ರಕಟಣೆ ಜನರ ಗದ್ದಲದಲ್ಲಿ ಕಿವಿಗೆ ಕ್ಷೀಣವಾಗಿ ಬೀಳುತ್ತಿತ್ತು. ಅಲ್ಲೇ ಪೊಲೀಸ್ ಮೀಸಲು ಪಡೆ ವಾಹನ ನಿಂತಿತ್ತು. ಹಬ್ಬದ ಸಂಭ್ರಮದ ಮಧ್ಯೆಯೂ ಎಚ್ಚರಿಕೆಯ ಕಣ್ಣುಗಳು ಸುತ್ತಾಡುತ್ತಿದ್ದವು.

ಟೈಂ ಆಗೋಯ್ತು ಬೇಗ..ಬೇಗ...

ಚಿತ್ರಗಳು: ಶಿವಮೊಗ್ಗ ನಾಗರಾಜ್

ಜರಡಿ ಬಲೆಯ ಗೌರವ

ಕೆರೆಯ ಅಂಚಿನಲ್ಲಿ ಜರಡಿ ಬಲೆ ಹಿಡಿದು ನಿಂತಿದ್ದ ಕಾರೇಕೊಪ್ಪದ ಟಿ.ಪಿ. ಅಶೋಕ್ ಮುಖದಲ್ಲಿ ವಿಚಿತ್ರ ಆತ್ಮವಿಶ್ವಾಸ ಕಾಣಿಸುತ್ತಿತ್ತು. 'ಬಾಳ ವರ್ಷ ಬೇಟೆ ಮಾಡದ ಕೆರೆ ಸಿಕ್ಕಿದ್ರೆ ಮೀನು ಹಿಡಿಯುವವರಿಗೆ ಹಬ್ಬ. ಚಿಟ್ಟೂರಿನಲ್ಲಿ ಈ ಬಾರಿ ಜರಡಿ ಬಲೆಗೆ ಅವಕಾಶ ಕೊಟ್ಟಿದ್ದಾರೆ. ಬೇರೆ ಕಡೆ ಇದಕ್ಕೆ ಅನುಮತಿ ಸಿಗಲ್ಲ' ಎಂದರು. ಅವರ ಸುತ್ತ ನಿಂತವರು ಕುತೂಹಲದಿಂದ ಕೇಳುತ್ತಿದ್ದರು.

'ದೊಡ್ಡ ಮೀನು ನೀರಿನ ಆಳದಲ್ಲಿ ಇರುತ್ತವೆ. ಜರಡಿ ಬಲೆಯಲ್ಲಿ ಆಳಕ್ಕೆ ಗೋರಲಿಕ್ಕೆ ಆಗೊಲ್ಲ. ಮೇಲೆ ಗೋರುತ್ತಾ ಹೋದಂತೆ ಸಣ್ಣ ಮೀನು ಹೆಚ್ಚು ಬೀಳುತ್ತವೆ. ದೊಡ್ಡ ಮೀನು ಸುಸ್ತಾಗಿ ತಲೆ ಎತ್ತಿ ಬಂದಾಗ ಇದಕ್ಕೆ ಸಿಕ್ಕುತ್ತವೆ...'–ಅವರ ಮಾತು ಕೇಳಿದಾಗ ಅದು ಕೇವಲ ಮೀನು ಹಿಡಿಯುವ ತಂತ್ರವಲ್ಲ ಅನ್ನಿಸಿತು. ಅದು ಅನುಭವದ ಜ್ಞಾನ. ನೀರಿನ ಸ್ವಭಾವ ತಿಳಿದವರ ಮಾತು.

ಕುಪ್ಪುಗಡ್ಡೆಯ ನಾಗರಾಜ ಮತ್ತೊಂದು ಕಡೆ ಗೆಳೆಯರ ಜೊತೆ ನಿಂತಿದ್ದರು. ಅವರ ಮುಖದಲ್ಲಿ ಇತರರಿಗಿಂತ ಹೆಚ್ಚು ಖುಷಿ ಕಾಣಿಸುತ್ತಿತ್ತು.

'ಇದೊಂಥರಾ ಚಟ. ಮೀನು ಸಿಗಲಿ ಬಿಡಲಿ... ಬೇಟೆಗೆ ಬರಲೇಬೇಕು' ಎಂದು ನಕ್ಕರು.

ಅವರು ಮುಂಜಾನೆ ಆರು ಗಂಟೆಗೆ ಬನವಾಸಿಗೆ ಹೋಗಿ ಗೆಳೆಯನ ಕರೆತಂದಿದ್ದರಂತೆ.

'ಈ ಗದ್ದಲ... ಈ ಓಟ... ಜನರ ಕೂಗು... ಅದೇ ಮಜಾ' ಎಂದರು.

ಪ್ರತಿಷ್ಠೆ ಹೆಚ್ಚಿಸುವ ಬೇಟೆ

ಚಿಟ್ಟೂರಿನ ರತ್ನಾಕರ ಮಾತ್ರ ಕೆರೆಗೆ ಇಳಿಯದೇ ದಂಡೆಯಲ್ಲೇ ನಿಂತು ಎಲ್ಲವನ್ನೂ ಗಮನಿಸುತ್ತಿದ್ದರು.

'ನಾವು ಮೀನು ತಿನ್ನಲ್ಲ. ನೋಡೋಕೆ ಬಂದಿದ್ದೇವೆ. ಇದು ನಮ್ಮೂರ ಹಬ್ಬ' ಎಂದರು. ಅವರ ಕಣ್ಣಲ್ಲಿ ಊರಿನ ಬಗ್ಗೆ ಹೆಮ್ಮೆ ಮಿನುಗುತ್ತಿತ್ತು.

'ಇಲ್ಲಿ ಗೆದ್ದವರಿಗೆ ಬಹುಮಾನ ಕೊಡಲ್ಲ. ಆದರೆ ಹೆಚ್ಚು ಮೀನು ಹಿಡಿದವರ ಫೋಟೊ ವಾಟ್ಸಪ್, ಫೇಸ್‌ಬುಕ್‌ನಲ್ಲಿ ಓಡಾಡುತ್ತವೆ. ಇನ್ನೊಂದು ವಾರ ಸೀಮೆಯೆಲ್ಲ ಅವರದ್ದೇ ಮಾತು. ಯಾವ ಮೀನು ಹಿಡಿದರು, ಎಷ್ಟು ತೂಕ, ಹೇಗೆ ಹಿಡಿದರು–ಎಲ್ಲವೂ ಚರ್ಚೆ ಆಗುತ್ತವೆ. ಮುಂದಿನ ಬೇಟೆಯಲ್ಲಿ ಜನ ಅವರನ್ನು ಗುರುತಿಸಿ ಮಾತಾಡಿಸುತ್ತಾರೆ. ಅದೇ ಇಲ್ಲಿ ಬಹುಮಾನ'. ಗ್ರಾಮೀಣ ಬದುಕಿನ ಹೊಸ ಪ್ರತಿಷ್ಠೆ ಅದು. ಒಮ್ಮೆ ಊರ ಚಾವಡಿಯಲ್ಲಿ ಹರಿದಾಡುತ್ತಿದ್ದ ಕಥೆಗಳು ಈಗ ಮೊಬೈಲ್ ಪರದೆಯಲ್ಲಿ ಹರಿದಾಡುತ್ತಿವೆ.

ಬೆಳಿಗ್ಗೆ ನಿಧಾನವಾಗಿ ಬಿಸಿಲು ಹೆಚ್ಚಾಗುತ್ತಿತ್ತು. ಕೆರೆಯ ನೀರು ದೂರದಿಂದ ಶಾಂತವಾಗಿ ಕಾಣಿಸುತ್ತಿದ್ದರೂ, ದಂಡೆಯಲ್ಲಿ ನಿಂತವರಲ್ಲಿ ತಳಮಳ ಕಾಣಿಸುತ್ತಿತ್ತು.

ಯಾರೋ ಒಬ್ಬರು ಬಲೆಯ ಗಂಟು ಬಿಗಿಸಿದರು. ಮತ್ತೊಬ್ಬರು ಚೀಲವನ್ನು ತಲೆಗೆ ಕಟ್ಟಿ ಸಿದ್ಧರಾದರು. ಕೆಲವರು ಕಾಲುಗಳನ್ನು ಮಣ್ಣಿನಲ್ಲಿ ಒರೆಸಿ ಹಿಡಿತ ಪರೀಕ್ಷಿಸಿದರು. ಕೆಲವರು ನೀರಿನ ಆಳವನ್ನು ಕಣ್ಣಿಂದಲೇ ಅಳೆಯುತ್ತಿದ್ದರು. 12ನೇ ಪುಟಕ್ಕೆ...

ಚಾಲಕನ ಜೊತೆ ದೇಶಿ ಬೀಜಗಳ ಪಯಣ!

ಬೊಗಸೆ ತುಂಬಾ ದೇಶಿ ಬೀಜಗಳು...

• ಡಿ.ಎಂ.ಕುರ್ಕೆ ಪ್ರಶಾಂತ್

ಆ ಲಾರಿ ಡ್ರೈವರ್ ಸೀಟಿನ ಪಕ್ಕದಲ್ಲಿ ಯಾವಾಗಲೂ ಒಂದು ಪುಟ್ಟ ಕೈಚೀಲ ಇರುತ್ತದೆ. ಅದರೊಳಗೆ ಬಗೆಬಗೆಯ ದೇಶಿ ಬಿತ್ತನೆ ಬೀಜಗಳು–ಕಪ್ಪು ಮತ್ತು ಬಿಳಿ ಬಣ್ಣದ ತುಪ್ಪದ ಹೀರೆಕಾಯಿ, ಸೋರೆ, ಕತ್ತಿ ಅವರೆ, ಕಾಡು ಅವರೆ, ಬಳ್ಳಿ ಆಲೂಗಡ್ಡೆ...

ಒಮ್ಮೆ ಪ್ರತಿ ಮನೆಯ ಹಿತ್ತಲಿನಲ್ಲೂ ಸಾಮಾನ್ಯವಾಗಿ ಬೆಳೆಯುತ್ತಿದ್ದ ಈ ದೇಶಿ ಬೀಜಗಳು ಈಗ ನಿಧಾನವಾಗಿ ಕಾಣೆಯಾಗುತ್ತಿವೆ. ಅಂತಹ ಅಪರೂಪದ ಬೀಜಗಳನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ಹಳ್ಳಿಗಳಿಂದ ಸಂಗ್ರಹಿಸಿ, ಮತ್ತೊಂದು ಜಿಲ್ಲೆಯ ರೈತರ ತೋಟಗಳಿಗೆ ತಲುಪಿಸುವ ಕೆಲಸವನ್ನು ಎಸ್.ಎಂ. ಗೊಲ್ಲಹಳ್ಳಿಯ ಮಂಜುನಾಥ್ ಮಾಡುತ್ತಿದ್ದಾರೆ. ಹೀಗೆ ಒಂದು ಊರಿನ ಹಿತ್ತಲಿನಿಂದ ಹೊರಡುವ ಬೀಜ, ಮತ್ತೊಂದು ಊರಿನ ಮಣ್ಣಿನಲ್ಲಿ ಮತ್ತೆ ಮೊಳಕೆಯೊಡೆಯುತ್ತಿದೆ.

ವೃತ್ತಿಯಲ್ಲಿ ಲಾರಿ ಮತ್ತು ಆಟೊ ಚಾಲಕರಾದ ಮಂಜುನಾಥ್, ಹಲವು ವರ್ಷಗಳಿಂದ ದೇಶಿ ಬಿತ್ತನೆ ಬೀಜಗಳನ್ನು ಊರಿನಿಂದ ಊರಿಗೆ ಕೊಂಡೊಯ್ಯುವ ಅಪರೂಪದ ಕೆಲಸ ಮಾಡುತ್ತಿದ್ದಾರೆ. ಅವರ ಲಾರಿ ಈಗ ಕೇವಲ ಸರಕು ಸಾಗಿಸುವುದಿಲ್ಲ; ಹಳ್ಳಿಗಳ ನಡುವೆ ದೇಶಿ ಬೀಜಗಳನ್ನೂ ಸಾಗಿಸುತ್ತಿದೆ. ಅವರು ಪ್ರಯಾಣಿಸುವ ದಾರಿಗಳ ಜೊತೆಗೇ ಬೀಜಗಳ ಪ್ರಯಾಣವೂ ಸಾಗುತ್ತಿದೆ.

ದೇಶಿ ಕೃಷಿ ಸಂಸ್ಕೃತಿಯ ಅರಿವು ಹೊಂದಿರುವ ಲಾರಿ ಚಾಲಕ ಮಂಜುನಾಥ್ ಅವರು ತಮ್ಮ ಲಾರಿಯೊಂದಿಗೆ ಪುಟ್ಟ ಕೈಚೀಲವನ್ನು ತಪ್ಪದೇ ಕೊಂಡೊಯ್ಯುತ್ತಾರೆ ಏಕೆ?

ಮಹಾರಾಷ್ಟ್ರದ ದೂರದ ಹಳ್ಳಿಯಿಂದ 'ಕತ್ತಿ ಅವರೆ' ಬೀಜ ತರುತ್ತಾರೆ. ಬಿಹಾರದ 'ಸೋರೆ' ಬೀಜವನ್ನು ಇಲ್ಲಿನ ರೈತರಿಗೆ ನೀಡುತ್ತಾರೆ. ಅವರ ಬಳಿ ಸದಾ 10 ರಿಂದ 15 ಬಗೆಯ ದೇಶಿ ಬಿತ್ತನೆ ಬೀಜಗಳ ಸಂಗ್ರಹ ಇರುತ್ತದೆ. ಎಲ್ಲಿಗೆ ಹೋದರೂ ಆ ಕೈಚೀಲವನ್ನು ಮರೆಯುವುದಿಲ್ಲ. ಕೆಲವೊಮ್ಮೆ ಪ್ರಯಾಣದ ನಡುವೆ ಪರಿಚಯವಾದ ರೈತರಿಂದ ಹೊಸ ಬೀಜಗಳನ್ನೂ ಸಂಗ್ರಹಿಸುತ್ತಾರೆ.

ಇಲ್ಲಿಯವರೆಗೆ 50ಕ್ಕೂ ಹೆಚ್ಚು ರೈತರಿಗೆ ಅಪರೂಪದ ಬಿತ್ತನೆ ಬೀಜಗಳನ್ನು ಹಂಚಿದ್ದಾರೆ. ಯಾರಿಗೆ ಯಾವ ಬೀಜ ಕೊಟ್ಟರು, ಯಾರಿಂದ ಯಾವ ಬೀಜ ಪಡೆದರು ಎನ್ನುವ ವಿವರಗಳನ್ನು, ಮೊಬೈಲ್ ಸಂಖ್ಯೆ ಮತ್ತು ವಿಳಾಸ ಸಮೇತ ದಾಖಲಿಸಿಕೊಂಡಿದ್ದಾರೆ. ತಮ್ಮ ಬಳಿ ಇರುವ ಬೀಜಗಳು ಯಾವ ಊರಿಗೆ ತಲುಪಿವೆ ಎನ್ನುವುದನ್ನೂ ನೆನಪಿಟ್ಟುಕೊಳ್ಳುತ್ತಾರೆ.

ಲಾರಿ ಚಾಲನೆ ಮಾಡಿಕೊಂಡು ಊರು, ಪೇಟೆಗಳನ್ನು ಸುತ್ತುವ ಮಂಜುನಾಥ್, ಕಾಫಿ–ಟೀ ವಿರಾಮಗಳಲ್ಲಿ ಅಥವಾ ಲೋಡ್, ಅನ್‌ಲೋಡ್ ನಡುವಿನ ಬಿಡುವಿನಲ್ಲಿ ರೈತರನ್ನು ಮಾತಿಗೆ ಎಳೆಯುತ್ತಾರೆ. ಅಪರಿಚಿತರು ಕೂಡ ಕೆಲವೇ ನಿಮಿಷಗಳಲ್ಲಿ ಅವರಿಗೆ ಆಪ್ತರಾಗಿಬಿಡುತ್ತಾರೆ.

'ನಿಮ್ಮ ಊರಲ್ಲಿ ಅಪರೂಪದ ತರಕಾರಿ ಗಿಡಗಳು ಉಳಿದಿವೆಯಾ? ನಿಮ್ಮ ಅಜ್ಜಿ–ಅಮ್ಮನ ಕಾಲದಲ್ಲಿ ಬೆಳೆದ ಗಿಡಗಳ ಬೀಜ ಇದೆಯಾ? ನನ್ನ ಬಳಿ ಕೆಲ ಬೀಜಗಳಿವೆ, ಬೇಕಿದ್ದರೆ ಕೊಡುತ್ತೇನೆ. ನಿಮ್ಮ ಬಳಿ ಇರುವ ಬೀಜಗಳನ್ನು ನನಗೂ ಕೊಡಿ...' ಹೀಗೆ ಆರಂಭವಾಗುವ ಮಾತುಕತೆ, ನಿಧಾನವಾಗಿ ಬೀಜ ವಿನಿಮಯಕ್ಕೆ ತಿರುಗುತ್ತದೆ. ಮಾತು ಮುಗಿಯುವಷ್ಟರಲ್ಲಿ ಅವರ ಕೈಚೀಲದಲ್ಲಿದ್ದ ಕೆಲವು ಬೀಜಗಳು ಮತ್ತೊಬ್ಬ ರೈತನ ಮನೆಯತ್ತ ಪ್ರಯಾಣ ಆರಂಭಿಸಿರುತ್ತವೆ. ಹೊಸ ಬೀಜಗಳು ಮಂಜುನಾಥ್ ಅವರ ಕೈಚೀಲ ಸೇರಿರುತ್ತವೆ.

ಮಂಜುನಾಥ್ ಅವರ ಈ ಕೆಲಸಕ್ಕೆ ಮುಖ್ಯ ಪ್ರೇರಣೆ ಸಾವಯವ ಕೃಷಿಕ ದಿವಂಗತ ಎಲ್.ನಾರಾಯಣರೆಡ್ಡಿ. ಹಲವು ವರ್ಷಗಳ ಹಿಂದೆ ಕೇಳಿದ್ದ ಅವರ ಉಪನ್ಯಾಸವೊಂದು ಮಂಜುನಾಥ್ ಅವರನ್ನು ಆಳವಾಗಿ ಚಿಂತನೆಗೆ ಹಚ್ಚಿತ್ತು. 11ನೇ ಪುಟಕ್ಕೆ...

ಮಂಜುನಾಥ್ ಜೊತೆ ಪಯಣಕ್ಕೆ ಸಜ್ಜಾದ ಬೀಜಗಳ ಕೈಚೀಲ

ದೇವರ ಚಿತ್ರಗಳಿಗೂ ಬೇಕಿತ್ತು ವಿಸರ್ಜನೆ

ಸಂಗ್ರಹವಾದ ಫೋಟೊ ಫ್ರೇಮ್‌ಗಳ ವಿಲೇವಾರಿ

• ಗಣೇಶ ಚಂದನಶಿವ

ಕದ್ರಿ ಶ್ರೀ ಮಂಜುನಾಥ ದೇವಸ್ಥಾನ ಪರಿಸರದ ಅಶ್ವತ್ಥ-ಮರದ ಕೆಳಗೆ ಮಳೆ ನೀರು ಬಿದ್ದು ಮಸುಕಾಗಿದ್ದ ದೇವರ ಫೋಟೊವೊಂದು ಅರ್ಧ ಮುಚ್ಚಿಕೊಂಡು ಬಿದ್ದಿತ್ತು. ಅದರ ಪಕ್ಕದಲ್ಲೇ ಕೈ ಮುರಿದ ಗಣೇಶ ಮೂರ್ತಿ. ಸ್ವಲ್ಪ ದೂರದಲ್ಲಿ ಹಳೆಯ ಕ್ಯಾಲೆಂಡರ್‌ಗಳ ರಾಶಿ. ಒಣಗಿದ ಹೂವು, ಕರಕಲಾದ ಅಗರಬತ್ತಿ ಕಡ್ಡಿ, ಒಡೆದ ಫ್ರೇಮ್‌ಗಳ ಗಾಜು ಎಲ್ಲವೂ ಒಂದೇ ಜಾಗದಲ್ಲಿ ಬೆರೆತು ಹೋಗಿದ್ದವು.

ಆ ಆವರಣದಲ್ಲಿ ಶ್ರಮದಾನ ಮಾಡುತ್ತಿದ್ದ ಸ್ವಯಂಸೇವಕರು ಕ್ಷಣಕಾಲ ಅಲ್ಲೇ ನಿಂತರು. ಭಕ್ತಿಯಿಂದ ಪೂಜಿಸಿದ್ದ ವಸ್ತುಗಳು ಕೊನೆಗೆ ಯಾರಿಗೂ ಬೇಡವಾದ ಕಸದಂತೆ ಬಿದ್ದಿದ್ದವು. ಆದರೆ ಅವನ್ನು ಎತ್ತಿ ಕಸದ ಬುಟ್ಟಿಗೆ ಹಾಕಲು ಯಾರ ಕೈಯೂ ಹೋಗುತ್ತಿರಲಿಲ್ಲ.

'ಇವನ್ನು ಗೌರವದಿಂದ ವಿಸರ್ಜಿಸುವ ದಾರಿ ಇಲ್ಲವೇ...'

ಸ್ವಯಂಸೇವಕರ ನಡುವೆ ಕೇಳಿಬಂದ ಈ ಪ್ರಶ್ನೆಯೇ ಮುಂದೆ ಒಂದು ವಿಶೇಷ ಅಭಿಯಾನಕ್ಕೆ ಕಾರಣವಾಯಿತು.

ಮಂಗಳೂರಿನ ರಾಮಕೃಷ್ಣ ಮಿಷನ್ ಹಾಗೂ ಸ್ವಚ್ಛ ಮಂಗಳೂರು ಪ್ರತಿಷ್ಠಾನ ಪ್ರತಿ ತಿಂಗಳ ಮೊದಲ ಭಾನುವಾರ ನಗರದ ವಿವಿಧ ಭಾಗಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸುತ್ತಿವೆ. ಅಂಥದ್ದೇ ಒಂದು ಶ್ರಮದಾನದ ವೇಳೆ ಸ್ವಯಂಸೇವಕರಿಗೆ 'ಧರ್ಮಸೂಕ್ಷ್ಮ'ದ ಪ್ರಶ್ನೆ ಎದುರಾಯಿತು. ಮುರಿದ ದೇವರ ವಿಗ್ರಹಗಳು, ಹಳೆಯ ಫೋಟೊಗಳು, ಪೂಜಾ ಸಾಮಗ್ರಿಗಳನ್ನು ಹೇಗೆ ಗೌರವಪೂರ್ವಕವಾಗಿ ವಿಲೇವಾರಿ ಮಾಡಬೇಕು? ಜನರ ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಅದನ್ನು ಹೇಗೆ ನಿರ್ವಹಿಸಬೇಕು?

ಹಲವು ಸುತ್ತಿನ ಚರ್ಚೆಗಳ ಬಳಿಕ ಧಾರ್ಮಿಕ ತ್ಯಾಜ್ಯವನ್ನು ಶ್ರದ್ಧೆಯಿಂದ ಸಂಗ್ರಹಿಸಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡುವ 'ವಿಸರ್ಜನೆ' ಅಭಿಯಾನ ರೂಪುಗೊಂಡಿತು.

ವಿರೂಪಗೊಂಡ ದೇವರ ಫೋಟೊ–ಮೂರ್ತಿಗಳನ್ನು ದೇವಸ್ಥಾನಗಳ ಬಳಿಯೋ, ನದಿ–ಹೊಂಡಗಳಲ್ಲಿಯೋ ಹಾಕುವುದನ್ನು ಕೆಲವರು ಸಂಪ್ರದಾಯದಂತೆ ರೂಢಿಸಿಕೊಂಡಿದ್ದಾರೆ. ಇದೇ ಈಗ ದೇವಸ್ಥಾನಗಳು, ನದಿಗಳು, ಹೊಂಡಗಳು ಮತ್ತು ಕಲ್ಯಾಣಿಗಳ ಪರಿಸರಕ್ಕೆ ಮಾರಕವಾಗುತ್ತಿದೆ. ಭಕ್ತಿ ಮತ್ತು ಪರಿಸರದ ನಡುವಿನ ಈ ಸೂಕ್ಷ್ಮ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನವಾಗಿ ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಜಿತಕಾಮಾನಂದಜಿ ಅವರ ಮಾರ್ಗದರ್ಶನದಲ್ಲಿ ಈ ಅಭಿಯಾನ ಆರಂಭವಾಯಿತು.

ಮಂಗಳೂರಿನ ವಿವಿಧ ಭಾಗಗಳಲ್ಲಿ ವಿಶೇಷ ಹುಂಡಿಗಳನ್ನು ಇಡಲಾಯಿತು. ಮಂಗಳಾದೇವಿ ದೇವಸ್ಥಾನದ ಮೂಲೆ, ಕದ್ರಿ ದೇವಸ್ಥಾನದ ಬಳಿ, ಬಿಜೈನ ಭಾರತ್ ಮಾಲ್, ಪಾಂಡೇಶ್ವರದ ಫೋರಂ ಮಾಲ್, ಕೆ.ಎಸ್.ರಾವ್ ರಸ್ತೆಯ ಸಿಟಿ ಸೆಂಟರ್ ಮಾಲ್ ಹಾಗೂ ಸುರತ್ಕಲ್‌ನ ಗೋವಿಂದದಾಸ ಕಾಲೇಜು ಆವರಣದಲ್ಲಿ ಹುಂಡಿಗಳು ಕಾಣಿಸಿಕೊಂಡವು.

ಅಭಿಯಾನದ ಹುಂಡಿಯಲ್ಲಿ ಸಂಗ್ರಹವಾದ ಧಾರ್ಮಿಕ ತ್ಯಾಜ್ಯ

ಹೊಸ ಬಟ್ಟೆ ಹೊದಿಸಿ ಅವನ್ನು ಸಿಂಗರಿಸಲಾಗಿತ್ತು. ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಎಲ್ಲ ವ್ಯವಸ್ಥೆ ಮಾಡಲಾಗಿತ್ತು. ಸ್ವಯಂಸೇವಕರು ಅಲ್ಲೇ ನಿಂತು ಜನರಿಗೆ ವಿವರಿಸುತ್ತಿದ್ದರು:

'ಹಳೆಯ ದೇವರ ಫೋಟೊಗಳು, ಮುರಿದ ಮೂರ್ತಿಗಳು, ಪೂಜಾ ಸಾಮಗ್ರಿಗಳನ್ನು ಇಲ್ಲಿ ಹಾಕಬಹುದು...'

ಮೊದಲ ದಿನ ಜನರು ದೂರದಿಂದ ನೋಡುತ್ತಿದ್ದರು. ಎರಡನೇ ದಿನ ಕೆಲವರು ಎಚ್ಚರಿಕೆಯಿಂದ ಚೀಲ ಹಿಡಿದು ಬಂದರು. ಮೂರನೇ ದಿನಕ್ಕೆ ಹುಂಡಿಗಳೊಳಗೆ ನಿಧಾನವಾಗಿ ಕಥೆಗಳು ತುಂಬತೊಡಗಿದವು.

ವೃದ್ಧೆಯೊಬ್ಬರು ಹಳೆಯ ಮರದ ಫ್ರೇಮ್‌ನಲ್ಲಿದ್ದ ಲಕ್ಷ್ಮೀದೇವಿಯ ಚಿತ್ರವನ್ನು ಎರಡು ಕೈಗಳಲ್ಲಿ ಹಿಡಿದುಕೊಂಡು ಅಲ್ಲಿಗೆ ಬಂದರು.

'ಇದು ನಮ್ಮ ಹಳೆಯ ಮನೆಯಲ್ಲಿದ್ದದ್ದು... ಬಿಸಾಡಲು ಮನಸ್ಸಾಗಲಿಲ್ಲ...' ಎಂದು ನಿಧಾನವಾಗಿ ಹುಂಡಿಯೊಳಗೆ ಇಟ್ಟರು.

ಒಬ್ಬ ಯುವಕ ಪತ್ರಿಕೆಯಲ್ಲಿ ಸುತ್ತಿದ ಪುಟ್ಟ ಮೂರ್ತಿಯನ್ನು ಕೊಟ್ಟು, 'ಅಜ್ಜಿಯ ಕಾಲದ್ದು' ಎಂದಷ್ಟೇ ಹೇಳಿದ. ಕೆಲವರು ಮೌನವಾಗಿ ವಸ್ತು ಹಾಕಿ ಹೊರಟರು. ಕೆಲವರು 'ಇದನ್ನು ಏನು ಮಾಡ್ತೀರಾ?' ಎಂದು ಕುತೂಹಲದಿಂದ ಕೇಳಿದರು.

ಹತ್ತು ದಿನಗಳಲ್ಲಿ ಹುಂಡಿಗಳು ತುಂಬ ತೊಡಗಿದವು. ದೇವರ ಫೋಟೊಗಳ ಚೌಕಟ್ಟುಗಳು ಒಂದರ ಮೇಲೊಂದು ಒರಗಿಕೊಂಡಿದ್ದವು. ಕುಂಕುಮದ ಡಬ್ಬಿಗಳು, ಹಳೆಯ ಪಂಚಾಂಗಗಳು, ಪೂಜೆಯ ಗಂಟೆಗಳು, ಒಡೆದ ಗಾಜಿನ ಫ್ರೇಮ್‌ಗಳು... ಭಕ್ತಿಯ ಅನೇಕ ರೂಪಗಳು ಅಲ್ಲಿ ರಾಶಿಯಾಗಿದ್ದವು.

ಒಟ್ಟು ಆರು ಸಾವಿರಕ್ಕೂ ಹೆಚ್ಚು ಕುಟುಂಬಗಳು ತಮ್ಮ ಮನೆ–ಕಚೇರಿಗಳಲ್ಲಿದ್ದ ಧಾರ್ಮಿಕ ತ್ಯಾಜ್ಯವನ್ನು ತಂದು ಒಪ್ಪಿಸಿದ್ದವು. 12.5 ಟನ್ ತ್ಯಾಜ್ಯ ಸಂಗ್ರಹವಾಯಿತು. ಇದರಲ್ಲಿ 15 ಸಾವಿರ ದೇವರ ಫೋಟೊ ಫ್ರೇಮ್‌ಗಳೂ ಸೇರಿದ್ದವು. ಮೂರ್ತಿಗಳು, ಪುಸ್ತಕಗಳು, ಕುಂಕುಮ, ಪ್ರಸಾದ, ಮರ, ಗಾಜು, ಲೋಹ, ಪ್ಲಾಸ್ಟಿಕ್ ಸೇರಿದಂತೆ ವಿವಿಧ ರೀತಿಯ ವಸ್ತುಗಳು ಸಂಗ್ರಹವಾಗಿದ್ದವು.

13ನೇ ಪುಟಕ್ಕೆ...

ಇದು ಬರೀ ಮನೆ ಅಲ್ಲ ನೆನಪುಗಳ ಮ್ಯೂಸಿಯಂ

ಶೋಕೇಸ್‌ನಲ್ಲಿ ತಾಮ್ರ, ಹಿತ್ತಾಳೆ ವಸ್ತುಗಳು

ಮನೆಯನ್ನು ಪೀಠೋಪಕರಣಗಳು, ಸುಣ್ಣ, ಬಣ್ಣಗಳಿಂದ ಅಲಂಕರಿಸುವುದು ಸಹಜ. ಆದರೆ ಇಲ್ಲೊಂದು ಮನೆ ಹಳೆ ಕಾಲದ ವಸ್ತುಗಳಿಂದ ಕಂಗೊಳಿಸುತ್ತಿದೆ. ಮನೆಯ ಯಾವ ಮೂಲೆಗೆ ಹೋದರು ಇತಿಹಾಸದ ಕಥೆ ಹೇಳುವ ಕಂಚು, ಹಿತ್ತಾಳೆ, ತಾಮ್ರದ ವಸ್ತುಗಳು ಸಿಗುತ್ತವೆ....

• ಸುರೇಂದ್ರ ಪೈ

ಸಾಮಾನ್ಯವಾಗಿ ಮನೆ ಎಂದರೆ ನಮ್ಮ ಪ್ರೀತಿಪಾತ್ರರೊಂದಿಗೆ ಬದುಕು ಕಟ್ಟಿಕೊಳ್ಳುವ ನೆಲೆ. ದಿನನಿತ್ಯದ ಸಣ್ಣ ಸಂತೋಷಗಳು, ಮಾತುಗಳು, ನೆನಪುಗಳು ಬೆರೆತು ರೂಪುಗೊಳ್ಳುವ ಆತ್ಮೀಯ ಜಾಗ. ಅದನ್ನು ಆಧುನಿಕ ಪೀಠೋಪಕರಣಗಳು, ಅಲಂಕಾರಿಕ ವಸ್ತುಗಳು, ಲೈಟಿಂಗ್‌ಗಳಿಂದ ಸುಂದರಗೊಳಿಸುವುದು ನಮ್ಮ ಕಾಲದ ರೂಢಿ. ಆದರೆ ಕಾಲದ ಹೊಳೆಯಲಿ ನಿಧಾನವಾಗಿ ಮಾಯವಾಗುತ್ತಿರುವ ಹಳೆಯ ಬದುಕಿನ ಗುರುತುಗಳನ್ನು ಮನೆಯಲ್ಲಿ ಉಳಿಸಿಕೊಂಡರೆ?

ಅವುಗಳನ್ನು ಕೇವಲ ಸಂಗ್ರಹ ವಸ್ತುಗಳಾಗಿ ಅಲ್ಲ, ಬದುಕಿನ ಭಾಗವಾಗಿಯೇ ನೋಡಿದರೆ? ಆ ಕಲ್ಪನೆಯನ್ನು ನಿಜಗೊಳಿಸಿದವರು ಮಂಗಳೂರಿನ ರಘುನಾಥ ಪ್ರಭು.

ಮಂಗಳೂರಿನ ಮಣ್ಣಗುಡ್ಡೆ–ಬೊಕ್ಕಪಟ್ಣ ದಾರಿಯಲ್ಲಿರುವ ಅವರ ಮನೆಗೆ ಕಾಲಿಟ್ಟ ಕ್ಷಣವೇ, ನಾವು ವರ್ತಮಾನದಿಂದ ನಿಧಾನವಾಗಿ ಹಿಂದೆ ಜಾರಿದ ಅನುಭವವಾಗುತ್ತದೆ. ಹೊರಗಿನ ಜಗತ್ತಿನ ಗದ್ದಲ ಒಂದು ಕ್ಷಣಕ್ಕೆ ನಿಶ್ಶಬ್ದವಾಗುತ್ತದೆ. ಒಳಗೆ ಕಾಲಿಟ್ಟ ಕೂಡಲೇ ಗೋಡೆಯ ಮೇಲೆ ನೇತು ಹಾಕಿರುವುದು ಫೋಟೊಗಳಲ್ಲ; ನೆನಪುಗಳ ತುಣುಕುಗಳು. ಕಪಾಟುಗಳಲ್ಲಿ ಜೋಡಿಸಿರುವುದು ವಸ್ತುಗಳಲ್ಲ; ಇತಿಹಾಸದ ಪದರಗಳು. ಇದು ಮನೆ ಮಾತ್ರವಲ್ಲ; ಒಂದು ಕಾಲಘಟ್ಟವನ್ನು ಉಸಿರಾಡುತ್ತಿರುವ ಜೀವಂತ ಸಂಗ್ರಹಾಲಯ.

ಈ ಸಂಗ್ರಹದ ಹಿಂದೆ ಒಬ್ಬ ನಿವೃತ್ತ ಬ್ಯಾಂಕ್ ನೌಕರನ ಹವ್ಯಾಸ ಮಾತ್ರವಿಲ್ಲ; ಒಂದು ಪೀಳಿಗೆಯ ಬದುಕನ್ನು, ಅದರ ಸರಳತೆಯನ್ನು, ಅದರ ಶ್ರಮದ ಸೊಗಡನ್ನು ಉಳಿಸಬೇಕೆಂಬ ಹಂಬಲ ಇದೆ. ಮಂಗಳೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್‌ನಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ರಘುನಾಥ ಪ್ರಭು, ತಮ್ಮ ತಂದೆಯಿಂದ ಬಂದ ನಾಣ್ಯ ಹಾಗೂ ಅಂಚೆಚೀಟಿ ಸಂಗ್ರಹದ ಆಸಕ್ತಿಯನ್ನು ಜೀವನದ ಭಾಗವನ್ನೇ ಮಾಡಿಕೊಂಡವರು.

ಕಾಲೇಜು ದಿನಗಳಲ್ಲಿ ಆರಂಭವಾದ ಈ ಹವ್ಯಾಸ, ಮದುವೆಯ ನಂತರ ತನ್ನದೇ ಮನೆ ಕಟ್ಟಿದಾಗ ಹೊಸ ತಿರುವು ಪಡೆದುಕೊಂಡಿತು. ಕಳೆದ ಇಪ್ಪತ್ತೆರಡು ವರ್ಷಗಳಿಂದ, ಅವರು ಹಳೆಯ ಕಾಲದ ದಿನನಿತ್ಯ ಬಳಕೆಯ ವಸ್ತುಗಳನ್ನು ಹುಡುಕುತ್ತಾ, ಊರು-ಗ್ರಾಮ ಸುತ್ತುತ್ತಾ, ಜನರ ಮನೆಗಳ ಮಡುಗಳಲ್ಲಿ ಮರೆತುಹೋಗಿದ್ದ ನೆನಪುಗಳನ್ನು ಕಲೆಹಾಕುತ್ತಾ ಬಂದಿದ್ದಾರೆ. ಇಂದು ಆ ಸಂಗ್ರಹವೇ ಅವರ ಮನೆಯನ್ನು 'ಸಾಂಸ್ಕೃತಿಕ ದೇಗುಲ'ವನ್ನಾಗಿ ರೂಪಿಸಿದೆ. ಎಲ್ಲವೂ ಮೌನದಲ್ಲೇ ಮಾತನಾಡುವ ದೇವಾಲಯದಂತೆ.

ರಘುನಾಥ ಪ್ರಭು

ಈ ಮನೆಯಲ್ಲಿರುವ ವಸ್ತುಗಳ ವೈವಿಧ್ಯ ಅಚ್ಚರಿಗೊಳಿಸುವಂತದ್ದು–ಮಣ್ಣು, ಮರ, ಕಲ್ಲು, ಕಂಚು, ಹಿತ್ತಾಳೆ, ತಾಮ್ರ, ಕಬ್ಬಿಣ, ಬೆಳ್ಳಿ, ಗಾಜು, ಪಿಂಗಾಣಿ…ಅದರ ಜೊತೆ ಅಂಚೆಚೀಟಿಗಳು, ನಾಣ್ಯಗಳು, ನೋಟುಗಳು, ಹಳೆಯ ಪತ್ರಿಕೆಗಳು, ಅಪರೂಪದ ಸ್ಮರಣ ಸಂಚಿಕೆಗಳು…ಹಳೆಯ ಟೇಪ್ ರೆಕಾರ್ಡರ್, ಗ್ರಾಮಫೋನ್, ಲ್ಯಾಂಡ್‌ಲೈನ್ ಫೋನ್‌ಗಳ ಸಾಲು– ಒಂದೊಂದು ಕಾಲದ ಧ್ವನಿಗಳನ್ನು ಹೊತ್ತ ಸಾಧನಗಳು.

ಮನೆಯ ಮೇಲ್ಛಾವಣಿಯಲ್ಲೇ ಇನ್ನೊಂದು ಪ್ರಪಂಚ ತೆರೆಯುತ್ತದೆ– ಬಾವಿಯ ರಾಟೆ, ಏತ, ಉಪ್ಪು ಹಾಕುವ ಮರಾಯಿ, ಶಾವಿಗೆ ಮಣೆ, ಪೀಕದಾನಿ, ಪಿಂಗಾಣಿ ಭರಣಿಗಳು, ಇಡ್ಲಿ ಹಬೆ ಪಾತ್ರೆ, ಹಿತ್ತಾಳೆ-ಕಂಚಿನ ಪಾತ್ರೆಗಳು, ಚೆನ್ನೆಮಣೆ, ಅಡಿಕೆ ಕತ್ತರಿಗಳು…ಮಗುವಿಗೆ ಹಾಲುಣಿಸುವ ಗಾಜಿನ ಬಾಟಲಿಯಿಂದ ಹಿಡಿದು ಪೂಜಾ ಪರಿಕರಗಳವರೆಗೆ. ಇವುಗಳನ್ನು ನೋಡುತ್ತಾ ಹೋದಂತೆ, ಅವು ವಸ್ತುಗಳಾಗಿ ಕಾಣುವುದಿಲ್ಲ; ಬದುಕಿನ ಅವಿಭಾಜ್ಯ ಸಂಗಾತಿಗಳಂತೆ ಭಾಸವಾಗುತ್ತವೆ.

ಮಡಿಕೆ, ಭರಣಿಗಳು

ಕಪಾಟಿನಲ್ಲಿರುವ ಗ್ರಾಮಫೋನ್ ಮೇಲೆ ಕೈ ತಾಕಿದರೆ ಕಿಶೋರ್ ಕುಮಾರ್ ಹಾಡುಗಳು ಕಿವಿಯಲ್ಲಿ ಮೊಳಗಿದಂತೆ. ಟೈಪ್ ರೈಟರ್ ನೋಡಿದರೆ, ಅದರ ಕೀಲಿಗಳ ನಡುವೆ ಸಿಕ್ಕಿಕೊಂಡಿರುವ ಅನೇಕ ಬರಹಗಳ ಶಬ್ದ ಕೇಳಿದಂತೆ. ಗೋಲಿ ಸೋಡಾ ಬಾಟಲು ಮತ್ತು ಅದನ್ನು ತಯಾರಿಸುವ ಯಂತ್ರ ನೋಡಿದರೆ, ಬಾಲ್ಯದ ಸಿಹಿ ರುಚಿ ಮತ್ತೆ ತುಟಿಗಳ ಮೇಲೆ ಮಿಂಚಿದಂತೆ.

ಇಂದಿನ 'ಜೆನ್ ಝೀ' ಪೀಳಿಗೆಗೆ ಅಪರಿಚಿತವಾಗಿರುವ ಈ ವಸ್ತುಗಳು, ಪ್ರತಿಯೊಂದೂ ಒಂದು ಬದುಕಿನ ಕಥೆಯನ್ನು ಹೊತ್ತಿವೆ. ಇಲ್ಲಿ ನಾವು ಮ್ಯೂಸಿಯಂನಲ್ಲಿ ನಿಂತಿಲ್ಲ, ನಮ್ಮದೇ ಪೂರ್ವಜರ ಮಡಿಲಲ್ಲಿ ಕುಳಿತಿರುವ ಅನುಭವ. ಪ್ರತಿ ವಸ್ತುವೂ 'ನಾವು ಹೀಗೆ ಬದುಕುತ್ತಿದ್ದೆವು' ಎಂದು ಮೌನವಾಗಿ ಹೇಳುವಂತೆ.

ಈ ಸಂಗ್ರಹದ ಹಿಂದೆ ಒಂದು ವಿಶೇಷ ಅಂಶವೂ ಇದೆ. ರಘುನಾಥ ಪ್ರಭು ವಸ್ತುಗಳನ್ನು ಖರೀದಿಸಿ ಕಲೆ ಹಾಕಿದವರು ಅಲ್ಲ; ಅವರು ಹುಡುಕಿಕೊಂಡು ಬಂದವರು. ಕೆಲವು ತಮ್ಮ ಮನೆಯಲ್ಲಿದ್ದವು, ಕೆಲವು ಪತ್ನಿಯ ಮನೆಯವು, ಇನ್ನೂ ಅನೇಕವು ನೆರೆಹೊರೆಯವರು, ಸ್ನೇಹಿತರು ನೀಡಿದವು. ಹೀಗೆ, ಒಂದು ಸಮುದಾಯವೇ ಈ ಸಂಗ್ರಹದ ಭಾಗವಾಗಿದೆ. ಒಂದೇ ಮನೆಯೊಳಗೆ ಅನೇಕ ಮನೆಗಳ ನೆನಪುಗಳು ಸೇರಿಕೊಂಡಂತಾಗಿದೆ.

ಇವರ ಮನೆ ಈಗ ಆಸಕ್ತರ ತಾಣವಾಗಿದೆ. ವಿದ್ಯಾರ್ಥಿಗಳು, ಸಂಶೋಧಕರು, ಸಂಗ್ರಹಾಸಕ್ತರು ಇಲ್ಲಿ ಭೇಟಿ ನೀಡಿ, ವಸ್ತುಗಳನ್ನು ನೋಡುವುದಷ್ಟೇ ಅಲ್ಲ, ಅವುಗಳ ಹಿಂದೆ ಇರುವ ಕಥೆಗಳನ್ನೂ ಅರಿಯುತ್ತಾರೆ. ಕೆಲವೊಮ್ಮೆ ಶಾಲೆ-ಕಾಲೇಜುಗಳ ಪ್ರದರ್ಶನಗಳಿಗೂ ಈ ವಸ್ತುಗಳನ್ನು ತೆಗೆದುಕೊಂಡು ಹೋಗಲಾಗುತ್ತದೆ. ಆದರೆ ಈ ಎಲ್ಲಕ್ಕೂ ಹಿಂದೆ ಯಾವುದೇ ವಾಣಿಜ್ಯ ಉದ್ದೇಶವಿಲ್ಲ. ಇದು ಹೃದಯದ ಕೆಲಸ.

'ಹಳೆಯದು ನಿಧಾನವಾಗಿ ಅಳಿದು ಹೋಗುತ್ತಿದೆ. ನಮ್ಮ ಬದುಕಿನ ಅವಿಭಾಜ್ಯ ಭಾಗವಾಗಿದ್ದ ಈ ವಸ್ತುಗಳನ್ನು ಉಳಿಸಬೇಕು ಅನ್ನೋದು ನನ್ನ ಉದ್ದೇಶ. ಹೊಸ ಪೀಳಿಗೆ ಇದನ್ನು ನೋಡಬೇಕು, ತಿಳಿದುಕೊಳ್ಳಬೇಕು' ಎಂದು ಸರಳವಾಗಿ ಹೇಳುತ್ತಾರೆ ರಘುನಾಥ ಪ್ರಭು.

ಈ ಸಂಗ್ರಹದ ಮತ್ತೊಂದು ಮಹತ್ವದ ಮುಖ, ಅದರ ಪಾಲನೆ. ಸಾವಿರಕ್ಕೂ ಹೆಚ್ಚು ವಸ್ತುಗಳನ್ನು ಕಾಪಾಡುವುದು, ಸ್ವಚ್ಛಗೊಳಿಸುವುದು, ಅವುಗಳ ಅಸ್ತಿತ್ವವನ್ನು ಉಳಿಸುವುದು ಸುಲಭವಲ್ಲ. 'ಇದು ನಮಗೆ ಹವ್ಯಾಸ ಮಾತ್ರವಲ್ಲ, ಸಂಸ್ಕೃತಿಯ ಭಾಗ. ನಾವು ಇದರಲ್ಲಿ ಬದುಕುತ್ತಿದ್ದೇವೆ. ಅದರಲ್ಲಿ ಒಂದು ವಿಶಿಷ್ಟ ನೆಮ್ಮದಿ ಇದೆ' ಎನ್ನುತ್ತಾರೆ ಪತ್ನಿ ರೇಖಾ ಪ್ರಭು.

ಈ ಮನೆಯ ವಿಶೇಷತೆ ಅಲ್ಲಿ ಮುಗಿಯುವುದಿಲ್ಲ. ಇವರು ವಸ್ತುಗಳನ್ನು ಸಂಗ್ರಹಿಸಿ ಬೇರೆಡೆ ವಾಸಿಸುವವರಲ್ಲ. ಅವರು ಈ ವಸ್ತುಗಳ ಮಧ್ಯೆಯೇ ದಿನನಿತ್ಯದ ಬದುಕು ನಡೆಸುತ್ತಾರೆ. ಹೀಗಾಗಿ, ಇಲ್ಲಿ ಸಂಗ್ರಹವೂ ಬದುಕು, ಬದುಕೂ ಸಂಗ್ರಹ.

ಮನೆ ಬಿಟ್ಟು ಹೊರಬರುವಾಗ, ಕೈಯಲ್ಲಿ ಏನೂ ಇರದು. ಆದರೆ ಮನಸ್ಸು ತುಂಬಿಕೊಂಡಿರುತ್ತದೆ. ಕಾಲದ ಸ್ಪರ್ಶ, ನೆನಪಿನ ತೂಕ, ಸಂಸ್ಕೃತಿಯ ಮೌನ ಗಂಭೀರತೆ. ಇದು ನಮಗೆ ಒಂದು ಸಣ್ಣ ಆದರೆ ಗಂಭೀರ ಪಾಠವನ್ನು ಹೇಳುತ್ತದೆ: ಹಳೆಯದು ಕೇವಲ ಹಳೆಯದಾಗುವುದಿಲ್ಲ, ಅದು ಉಳಿದಿದ್ದರೆ, ಅದು ಸಂಸ್ಕೃತಿ. ❖

ಹಳೆ ಕಾಲದ ಪಿಂಗಾಣಿ ವಸ್ತುಗಳು

ಸಿದ್ದಿ ಹುಡುಗ ಕಂಡ ಅಚ್ಚರಿ

ಪ್ಲಾಂಟ್ ಹಾಪರ್

• ಚಿತ್ರ–ಬರಹ: ದತ್ತಾತ್ರೇಯ ಭಟ್ಟ, ಕಣ್ಣಿಪಾಲ

ಹೈಸ್ಕೂಲಿನ ಆವರಣದ ಮೆಟ್ಟಿಲುಗಳ ಮೇಲೆ ಮಕ್ಕಳ ಹೆಜ್ಜೆಗಳ ಸದ್ದು ಕೇಳಿಬರುತ್ತಿತ್ತು. ಇನ್ನೂ ಬೆಳಗಿನ ಪ್ರಾರ್ಥನೆ ಆರಂಭವಾಗಿರಲಿಲ್ಲ. ಆ ವೇಳೆಗೆ ಶಿಕ್ಷಕರ ಕೊಠಡಿಗೆ ನುಗ್ಗಿದ ಲೋಕೇಶ್ ಸಿದ್ದಿ ಎಂಬ ಹುಡುಗ ಉಸಿರಾಟವನ್ನೇ ಮರೆತು–'ಸಾರ್!.. ಸಾರ್… ಇಲ್ಲಿ ಸ್ವಲ್ಪ ಬಂದು ನೋಡಿ… ವಿಚಿತ್ರ ಹುಳ!' ಎಂದು ಕರೆದಾಗ, ಅವನ ಕಣ್ಣುಗಳಲ್ಲಿ ಹೊಳೆಯುತ್ತಿದ್ದ ಕುತೂಹಲವೇ ಸಾಕಾಗಿತ್ತು.

ಲೋಕೇಶ್ ಎಂದಿಗೂ ಬೆಟ್ಟದ ಅಚ್ಚರಿಗಳನ್ನು ಮೊದಲು ಶಾಲೆಗೆ ಪರಿಚಯಿಸುವವನು. ಈ ಸಲವೂ ಶಿಕ್ಷಕರನ್ನು ಶಾಲೆಯ ಹಿಂಭಾಗದ ಬೆಟ್ಟದ ಅಂಚಿಗೆ ಕರೆದುಕೊಂಡು ಹೋದ. ಅಲ್ಲಿ ಕಾಣಿಸಿಕೊಂಡ ದೃಶ್ಯವೇ ಒಂದು ವಿಚಿತ್ರ ಮೌನೋತ್ಸವ. ಹಸಿರು ಬಳ್ಳಿಯ ಗಿಡಗಳ ಟೊಂಗೆಗಳಿಗೆ ಬಿಳಿ ಮತ್ತು ನಸು ನೀಲಿ ಬಣ್ಣದ ಪುಟ್ಟ ಕೀಟಗಳು ಜೋತುಬಿದ್ದಿದ್ದವು. ದೂರದಿಂದ ನೋಡಿದರೆ ಅವು ಹೂಗಳೇನೋ ಅನ್ನಿಸುವಷ್ಟು ಆಕರ್ಷಕ. ಗಾಳಿ ಬೀಸಿದಾಗ ತುಸು ಅಲುಗಾಡುತ್ತ, ಮತ್ತೆ ತಪಸ್ಸಿಗೆ ಕುಳಿತ ಋಷಿಗಳಂತೆ ಮೌನವಾಗುತ್ತಿದ್ದವು.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿ ಸರ್ವೋದಯ ಪ್ರೌಢಶಾಲೆಯ ಹಿಂದಿನ ಬೆಟ್ಟಗಳಲ್ಲಿ ಇಂತಹ ಅಪರೂಪದ ಕೀಟಗಳು ಕಂಡುಬರುತ್ತಿವೆ. ಸಮೀಪದ ಕೈಗಾ ಅಣುಸ್ಥಾವರ ಮತ್ತು ಕೊಡಸಳ್ಳಿ ಜಲಾಶಯದ ಸುತ್ತಮುತ್ತಲಿನ ದಟ್ಟ ಕಾಡುಗಳಲ್ಲಿ ಇವು ಹೆಚ್ಚಾಗಿ ಇರುತ್ತವೆ. ವರ್ಷದ ಕೆಲವೇ ತಿಂಗಳು ಕಾಡಿನೊಳಗೆ ಇವುಗಳ ಗುಂಪುಗಳು ಪುಟ್ಟ ಜಾತ್ರೆಯಂತೆಯೇ ಕಾಣಿಸುತ್ತವೆ. ಆದರೆ ಮಳೆಗಾಲದ ಮೊದಲ ಜೋರಿನ ಮಳೆಗೆ ಇವುಗಳು ಕಾಣೆಯಾಗಿಬಿಡುತ್ತವೆ. ಬೇಸಿಗೆಯ ಕೊನೆಯ ಭಾಗದಲ್ಲಿ ಮಾತ್ರ ಕಾಡನ್ನು ಅಲಂಕರಿಸುವ ಈ ಕೀಟಗಳ ಬದುಕು ತುಂಬ ವಿಶಿಷ್ಟ.

'ಪ್ಲಾಂಟ್ ಹಾಪರ್' ಎಂದು ಕರೆಯುವ ಈ ಕೀಟಗಳ ವೈಜ್ಞಾನಿಕ ಹೆಸರು Siphanta acuta ಎಂದು ಗುರುತಿಸಲಾಗಿದೆ. ಪಶ್ಚಿಮ ಘಟ್ಟಗಳ ಜೀವ ವೈವಿಧ್ಯದಲ್ಲಿ ಇವು ವಿಶೇಷ ಸ್ಥಾನ ಹೊಂದಿವೆ. ಇವುಗಳ ಆಯುಷ್ಯ ಸುಮಾರು ಒಂದು ತಿಂಗಳು ಮಾತ್ರ. ಬಿಳಿ ರೆಕ್ಕೆಗಳ ಮೇಲೆ ಸಣ್ಣ ಕಪ್ಪು ಗೆರೆಗಳು ಮತ್ತು ಮಧ್ಯದಲ್ಲಿ ಕಣ್ಣಿನಂತೆ ಕಾಣುವ ಬಿಂದು ಇವುಗಳ ವಿಶಿಷ್ಟ ಲಕ್ಷಣ. ಮೈಮೇಲೆ ಇರುವ ಮೇಣದಂತಿರುವ ಬಿಳಿ ಪದರವು ಮುಟ್ಟಿದಾಗ ಬೆರಳಿಗೆ ಅಂಟಿಕೊಳ್ಳುತ್ತದೆ.

ಚೂಪಾದ ಬಾಯಿಯಿಂದ ಸಸ್ಯಗಳ ರಸವನ್ನು ಹೀರಿಕೊಳ್ಳುವ ಇವುಗಳು, ಮೃದು ಕಾಂಡ ಹೊಂದಿರುವ ಬಳ್ಳಿಗಳನ್ನು ಆಶ್ರಯವಾಗಿಸಿಕೊಳ್ಳುತ್ತವೆ. ಹಾರುವುದಕ್ಕಿಂತ ಹೆಚ್ಚಾಗಿ ಜಿಗಿಯುವ ಗುಣದಿಂದಲೇ ಇವುಗಳಿಗೆ 'ಪ್ಲಾಂಟ್ ಹಾಪರ್' ಎಂಬ ಹೆಸರು ಬಂದಿದೆ.

ಕಾಡಿನ ಮಧ್ಯೆ, ನಿಶ್ಶಬ್ದದಲ್ಲಿ ಮೌನಾಚರಣೆಯಂತೆ ನಿಂತಿರುವ ಈ ಪುಟ್ಟ ಜೀವಿಗಳು, ಪ್ರಕೃತಿಯ ಸೂಕ್ಷ್ಮ ಸೌಂದರ್ಯವನ್ನು ನೆನಪಿಸುತ್ತವೆ. ನಾವು ಗಮನಿಸದೆ ಹಾದುಹೋಗುವ ಅರಣ್ಯದಲ್ಲೇ ಎಷ್ಟೋ ಅಚ್ಚರಿಗಳು ಅಡಗಿವೆ ಎಂಬುದಕ್ಕೆ ಇವು ಜೀವಂತ ಸಾಕ್ಷಿ. ❖

…ಬೀಜಗಳ ಪಯಣ!

10ನೇ ಪುಟದಿಂದ...

'ಆರೋಗ್ಯದ ಮೂಲ ಆಹಾರದಲ್ಲೇ ಇದೆ' ಎನ್ನುವ ಆ ಮಾತುಗಳು, ಪತ್ನಿಯ ಅನಾರೋಗ್ಯದ ಸಂದರ್ಭದಲ್ಲೂ ಅವರನ್ನು ಕಾಡಿದ್ದವು. ಅಲ್ಲಿಂದಲೇ ಹಿತ್ತಲುಗಳಲ್ಲಿ ಬೆಳೆದಿದ್ದ ಹಸಿರು ತರಕಾರಿಗಳ ಕಡೆಗೆ ಅವರ ಆಸಕ್ತಿ ಹೆಚ್ಚಿತು. ಹಳೆಯ ದೇಶಿ ತರಕಾರಿಗಳ ಬೀಜಗಳನ್ನು ಸಂಗ್ರಹಿಸಿ, ಅವುಗಳನ್ನು ಮತ್ತಷ್ಟು ಜನರಿಗೆ ತಲುಪಿಸಬೇಕು ಎನ್ನುವ ಸಂಕಲ್ಪ ಮೂಡಿತು.

ಹಾಸನ, ತುಮಕೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಹಲವು ಜಿಲ್ಲೆಗಳ ರೈತರಿಂದ ಅವರು ಬೀಜಗಳನ್ನು ಸಂಗ್ರಹಿಸಿದ್ದಾರೆ. ತಮ್ಮಿಂದ ಬೀಜ ಪಡೆದವರನ್ನು ಮತ್ತು ಬೀಜ ನೀಡಿದವರನ್ನು ಒಂದೆಡೆ ಸೇರಿಸಲು 'ಆರೋಗ್ಯದ ಅರಿವು ಜಾಗೃತಿ ಅಭಿಯಾನ ಕರ್ನಾಟಕ' ಹೆಸರಿನ ವಾಟ್ಸ್‌ಆ್ಯಪ್ ಗುಂಪನ್ನೂ ರಚಿಸಿದ್ದಾರೆ. ಆ ಗುಂಪಿನಲ್ಲಿ ರೈತರು ತಮ್ಮ ಬೆಳೆಗಳ ಚಿತ್ರಗಳು ಮತ್ತು ಅನುಭವಗಳನ್ನೂ ಹಂಚಿಕೊಳ್ಳುತ್ತಾರೆ.

ಅವರ ಬಳಿ ಇರುವ ಪ್ರತಿಯೊಂದು ಬೀಜದ ಹಿಂದೆಯೂ ಒಂದು ಕಥೆ ಇದೆ.

'ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಹುಲ್ಲೇಕೆರೆಯ ಪರಮೇಶ್–ವೀಣಾ ದಂಪತಿಗೆ ಬಳ್ಳಿ ಆಲೂಗೆಡ್ಡೆ ಕೊಟ್ಟಿದ್ದೆ. ಅವರು ಚೆನ್ನಾಗಿ ಬೆಳೆಸಿ, ಮತ್ತಷ್ಟು ಗೆಡ್ಡೆಗಳನ್ನು ವಾಪಸ್ ಕೊಟ್ಟರು. ಅದನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ಖಾನೆ ಹೊಸಹಳ್ಳಿಯ ಸ್ನೇಹಿತರಿಗೆ ನೀಡಿದೆ. ಅವರು ಸುಮಾರು 150 ಕೆ.ಜಿ ಗೆಡ್ಡೆ ಬೆಳೆಸಿದರು. ಅಲ್ಲಿಂದ ಅದು ಯಾದಗಿರಿ ಜಿಲ್ಲೆಯ ರೈತರವರೆಗೂ ತಲುಪಿದೆ...'

ಒಂದು ಗೆಡ್ಡೆ, ಹೀಗೆ ಹಳ್ಳಿಯಿಂದ ಹಳ್ಳಿಗೆ ಪ್ರಯಾಣಿಸುತ್ತಿದೆ ಎನ್ನುವಂತೆ ಅವರು ಹೇಳುವಾಗ ಅವರ ಮುಖದಲ್ಲಿ ವಿಶಿಷ್ಟ ತೃಪ್ತಿ ಕಾಣಿಸುತ್ತದೆ. ತಾವು ನೀಡಿದ ಬೀಜ ಮತ್ತೊಂದು ಊರಿನಲ್ಲಿ ಮೊಳಕೆಯೊಡೆದಿದೆ ಎನ್ನುವ ಖುಷಿ ಅವರ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ.

ಆಟೊ ಓಡಿಸುವಾಗ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾತನಾಡುವ ಜನರನ್ನು ಅವರು ಆಗಾಗ್ಗೆ ಭೇಟಿಯಾಗುತ್ತಾರೆ.

ಬಿತ್ತನೆ ಬೀಜಗಳು

'ರಕ್ತದೊತ್ತಡ, ಸಕ್ಕರೆ ಕಾಯಿಲೆ ಈಗ ಸಾಮಾನ್ಯವಾಗಿದೆ. ಅನಾರೋಗ್ಯಕ್ಕೆ ಆಹಾರವೂ ಒಂದು ಕಾರಣ ಅನ್ನಿಸುತ್ತದೆ. ನಾರಾಯಣರೆಡ್ಡಿ ಅವರ ಮಾತುಗಳು ಆಗಾಗ್ಗೆ ನೆನಪಾಗುತ್ತವೆ' ಎನ್ನುತ್ತಾರೆ.

'ನನ್ನ ಬಳಿ ಇರುವ ಹಣವನ್ನು ಹಂಚುತ್ತಿಲ್ಲ. ಅಷ್ಟು ಶ್ರೀಮಂತನೂ ಅಲ್ಲ. ಆದರೆ ಪ್ರತಿಫಲ ನಿರೀಕ್ಷೆ ಇಲ್ಲದೆ ಮಾಡುವ ಕೆಲಸಗಳು ಸಾಕಷ್ಟಿವೆ. ಯಾರಿಂದಲೋ ಪಡೆದ ಬೀಜವನ್ನು ಮತ್ತೊಬ್ಬರಿಗೆ ಕೊಡುತ್ತೇನೆ. ಅವರು ಬೆಳೆಸಿದ ನಂತರ ಮತ್ತೆ ಇನ್ನಷ್ಟು ಜನರಿಗೆ ಹಂಚುತ್ತಾರೆ. ಅದರಲ್ಲಿ ನನಗೆ ಸಂತೋಷ ಇದೆ' ಎಂದು ಹೇಳುತ್ತಾರೆ.

ತಮ್ಮ ಬಳಿಯೂ ಒಂದೂವರೆ ಎಕರೆ ಮಳೆ ಆಶ್ರಿತ ಜಮೀನಿದೆ. ಕೆಲವು ವರ್ಷಗಳ ಹಿಂದೆ ಅಲ್ಲಿ ದೇಶಿ ತರಕಾರಿಗಳನ್ನು ಬೆಳೆದಿದ್ದರು. ಮನೆಯಲ್ಲೇ ಬೀಜ ಬ್ಯಾಂಕ್ ಕೂಡ ಮಾಡಿದ್ದರು. ಆದರೆ ಪತ್ನಿಯ ಅನಾರೋಗ್ಯದಿಂದ ಬದುಕಿನಲ್ಲಿ ಏರುಪೇರುಗಳಾದವು.

'ಮತ್ತೆ ನಮ್ಮ ಜಮೀನಿನಲ್ಲೂ ಅಪರೂಪದ ತರಕಾರಿಗಳನ್ನು ಬೆಳೆಸಿ, ಬೀಜ ಸಂಗ್ರಹ ಮಾಡಬೇಕು' ಎನ್ನುವ ಆಸೆಯನ್ನು ಅವರು ಇನ್ನೂ ಉಳಿಸಿಕೊಂಡಿದ್ದಾರೆ.

ಬಿಹಾರದಿಂದ ತಂದ ಸೋರೆಕಾಯಿ ಒಂದರಿಂದ ಸುಮಾರು 25 ಜನರಿಗೆ ಅಡುಗೆ ಮಾಡಬಹುದು ಎನ್ನುವರು. ತಿಪಟೂರು ತಾಲ್ಲೂಕಿನ ಅಣಪನಹಳ್ಳಿಯಿಂದ 'ಕಾಡು ಅವರೆ', ಚಿಕ್ಕನಾಯಕನಹಳ್ಳಿ ತಾಲ್ಲೂಕಿನಿಂದ 'ಚತುರ್ಮುಖ ಅವರೆ' ಸಂಗ್ರಹಿಸಿದ್ದಾರೆ. ಕಡಿಮೆ ನೀರಿನಲ್ಲಿ ಬೆಳೆಯುವ, ಆರೋಗ್ಯಕ್ಕೆ ಒಳ್ಳೆಯ ಅನೇಕ ತರಕಾರಿಗಳ ಬೀಜಗಳು ಈಗ ಅವರ ಕೈಚೀಲದಲ್ಲಿವೆ.

ಮುಂದಿನ ದಿನಗಳಲ್ಲಿ ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ಬೀಜ ಸಂಗ್ರಹಿಸಿದ ರೈತರನ್ನು ಒಂದೆಡೆ ಸೇರಿಸಿ, ಅವರ ಅನುಭವ ಹಂಚಿಕೊಳ್ಳುವ ಕಾರ್ಯಕ್ರಮಗಳನ್ನೂ ನಡೆಸಬೇಕು ಎನ್ನುವ ಯೋಜನೆ ಅವರದು. ಬೀಜಗಳ ಜೊತೆಗೆ ಹಿತ್ತಲು ಸಂಸ್ಕೃತಿಯನ್ನೂ ಉಳಿಸಬೇಕು ಎನ್ನುವುದು ಅವರ ಆಶಯ.

ಮತ್ತೊಂದು ಊರಿನತ್ತ ಲಾರಿ ಹೊರಡುವಾಗ, ಮಂಜುನಾಥ್ ಮತ್ತೆ ಆ ಪುಟ್ಟ ಕೈಚೀಲವನ್ನು ಮರೆತಿಲ್ಲ. ಅದರೊಳಗೆ ಕೆಲ ಬಿತ್ತನೆ ಬೀಜಗಳಷ್ಟೇ ಇಲ್ಲ; ನಿಧಾನವಾಗಿ ಮರೆಯಾಗುತ್ತಿರುವ ಹಿತ್ತಲುಗಳ ನೆನಪುಗಳೂ ಇವೆ.

(ಮಂಜುನಾಥ್: 9972430177)

ಮುನ್ನೋಟ 17-05-2026 ರಿಂದ 23-05-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಕೆಲಸಗಳಿಗೆ ತಕ್ಕ ಸಿದ್ಧತೆ ಮಾಡಿಕೊಳ್ಳುವಿರಿ. ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ಹಿರಿಯರ ಸಹಕಾರ ಪಡೆಯಲು ಸಾಕಷ್ಟು ವಶೀಲಿ ಮಾಡುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭವಿದೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಈಗ ಸಾಕಷ್ಟು ಅಭಿವೃದ್ಧಿ ಇದೆ. ವಿದ್ಯಾರ್ಥಿಗಳಿಗೆ ಮಂದಗತಿಯ ಪ್ರಗತಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವ್ಯವಹಾರ ಚತುರರಾಗಿರುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಎಲ್ಲರನ್ನೂ ಒಳಗೊಂಡು ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸುವಿರಿ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಸಾಕಷ್ಟು ಅಭಿವೃದ್ಧಿ ಇದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಗಣಿತ ವಿದ್ಯಾರ್ಥಿಗಳಿಗೆ ಈಗ ನಿರೀಕ್ಷೆಗೆ ಮೀರಿದ ಯಶಸ್ಸು ಇರುತ್ತದೆ. ಕೆಲವರಿಗೆ ನರಸಂಬಂಧಿ ದೋಷಗಳು ಕಾಣಿಸಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಅಧ್ಯಾಪಕರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಆದಾಯದಷ್ಟೇ ಖರ್ಚು ಇರುತ್ತದೆ. ಭೂಮಿ ವ್ಯವಹಾರಗಳಲ್ಲಿ ನಷ್ಟವಾಗುವ ಸಂದರ್ಭವಿದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ಸಂಗಾತಿಯಿಂದ ನಿಮ್ಮ ನಿರೀಕ್ಷೆಗೆ ಮೀರಿ ಆರ್ಥಿಕ ಸಹಾಯ ಸಿಗುತ್ತದೆ. ವೃತ್ತಿ ಸ್ಥಳದಲ್ಲಿ ಒತ್ತಡಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಹಿರಿಯರಿಗೆ ದೂರ ಪ್ರಯಾಣ ಮಾಡುವ ಯೋಗವಿದೆ. ಕೃಷಿಯಿಂದ ಅತಿ ಹೆಚ್ಚು ಲಾಭ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಏನೋ ಸಾಧಿಸಿದ ಹುಮ್ಮಸ್ಸು ಮನಸಿನಲ್ಲಿರುತ್ತದೆ. ಆದಾಯವು ಬಹಳ ಕಡಿಮೆ ಇರುತ್ತದೆ. ನಿಮ್ಮ ಮಾತು ಕಟುವಾಗದಿರಲಿ. ಬಂಧುಗಳ ನೆರವಿನಿಂದ ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಮಹಿಳಾ ಉದ್ಯೋಗಿಗಳಿಗೆ ಈಗ ಹೆಚ್ಚು ಪ್ರಗತಿ ಇರುತ್ತದೆ. ಉದ್ಯೋಗದಲ್ಲಿ ಹೆಚ್ಚು ಚುರುಕುತನ ತೋರುವಿರಿ. ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚು ಲಾಭವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವಾರದ ಆರಂಭದಲ್ಲಿ ಅತಿಯಾದ ಸೋಮಾರಿತನ ಇರುತ್ತದೆ. ನಿಮ್ಮ ಜಾಣ್ಮೆಯಿಂದ ಆದಾಯ ಹೆಚ್ಚು ಮಾಡಿಕೊಳ್ಳಬಹುದು. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚು ಆಸ್ತಿ ಹೊಂದುವ ಯೋಗವಿದೆ. ಈಗ ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ದೊರೆಯುತ್ತದೆ. ಕೆಲವರಿಗೆ ವಿದೇಶದಲ್ಲಿರುವ ಸಂಗಾತಿಯನ್ನು ಹೋಗಿ ಸೇರಿಕೊಳ್ಳುವ ಅವಕಾಶವಿರುತ್ತದೆ. ವಾಹನ ರಿಪೇರಿ ಮಾಡುವವರಿಗೆ ಹೆಚ್ಚು ಕೆಲಸ ದೊರೆತು ಆದಾಯ ಹೆಚ್ಚುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೆಲಸ ಮಾಡಲು ಹೆಚ್ಚು ಉತ್ಸಾಹ ಇರುವುದಿಲ್ಲ. ಹಿರಿಯರಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಬಂಧುಗಳಿಂದ ಹೆಚ್ಚಿನ ಸಹಕಾರ ಸಿಗುವುದಿಲ್ಲ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ. ಕೀಲು ನೋವು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಈಗ ಸಹಕಾರ ಕಡಿಮೆಯಾಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ದೇಹ ಗಟ್ಟಿ ಮಾಡಿಕೊಳ್ಳುವ ಕಡೆಗೆ ಹೆಚ್ಚು ಗಮನಹರಿಸುವಿರಿ. ಆದಾಯವು ಈಗ ಕಡಿಮೆ ಇದ್ದರೂ, ಸಂಗಾತಿಯ ಜತೆಗೂಡಿ ಅದನ್ನು ಹೆಚ್ಚು ಮಾಡಿಕೊಳ್ಳಬಹುದು. ಹಿರಿಯರ ಸಲಹೆ ನಿಮಗೆ ಹೆಚ್ಚು ಅನುಕೂಲ ಮಾಡಿಕೊಡುತ್ತದೆ. ಹಳೆಯ ತಳಿಗಳನ್ನು ಸಂರಕ್ಷಿಸಿಕೊಂಡು ಬರುತ್ತಿರುವವರಿಗೆ ಬೇಡಿಕೆ ಹೆಚ್ಚುತ್ತದೆ. ಮೂಳೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯಿಂದ ಕೆಲವೊಮ್ಮೆ ಪ್ರತಿರೋಧ ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಿಂದ ನಿಮ್ಮ ವಿದ್ಯಾಭ್ಯಾಸಕ್ಕೆ ಅನುಕೂಲ ದೊರೆಯಬಹುದು. ವಿದೇಶದಲ್ಲಿರುವವರಿಗೆ ಆಸ್ತಿ ಮಾಡಿಕೊಳ್ಳುವ ಯೋಗವಿದೆ. ಲೋಹಶಾಸ್ತ್ರ ಓದುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ನಿಮ್ಮ ಸಂಗಾತಿಯ ನೆರವಿನಿಂದ ಸರ್ಕಾರಿ ಕೆಲಸಗಳು ಬೇಗ ಆಗುತ್ತವೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಕಾನೂನಿನ ತೊಡಕುಗಳು ಬರಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಎಲ್ಲರಿಗೂ ತಿಳಿ ಹೇಳುವ ಪ್ರಯತ್ನ ಮಾಡುವಿರಿ. ಆದಾಯವು ಕಡಿಮೆ ಇದ್ದು, ಅದರಲ್ಲೇ ಅನುಸರಿಸುವಿರಿ. ಬಂಧುಗಳ ನಡುವಿನ ವೈಶಮ್ಯ ಹೆಚ್ಚಾಗಬಹುದು. ಕೃಷಿಭೂಮಿಯನ್ನು ಅಭಿವೃದ್ಧಿಪಡಿಸಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಯೋಗವಿದೆ. ಮೂತ್ರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಬಟ್ಟೆಯ ಮೇಲೆ ಕಸೂತಿ ಮಾಡುವವರಿಗೆ ಸ್ವಲ್ಪ ಹಿನ್ನಡೆಯಾಗಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಎಲ್ಲರೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುವಿರಿ. ಆದಾಯವು ಸಾಮಾನ್ಯವಾಗಿರುತ್ತದೆ. ವಿದೇಶಿ ವ್ಯಾಪಾರ ಮಾಡುವವರ ಆದಾಯ ಹೆಚ್ಚುತ್ತದೆ. ಕೃಷಿಯಿಂದ ಹೆಚ್ಚು ಆದಾಯವನ್ನು ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ದೊರೆಯುತ್ತದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಕಾಡಬಹುದು. ದೈವಕಾರ್ಯ ಮಾಡುವವರಿಗೆ ಅನಿರೀಕ್ಷಿತ ಪ್ರಗತಿ ಇರುತ್ತದೆ. ವೃತ್ತಿಯಲ್ಲಿ ಪ್ರಗತಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯ ಬರುತ್ತದೆ. ಬಂಧುಗಳಿಂದ ಸ್ವಲ್ಪಮಟ್ಟಿನ ಸಹಕಾರ ದೊರೆಯುತ್ತದೆ. ದಲ್ಲಾಳಿಗಳಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅಪೇಕ್ಷಿತ ಫಲಿತಾಂಶ ಪಡೆಯುವ ಯೋಗವಿದೆ. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ನಿಮ್ಮ ಸಂಗಾತಿ ಮಾಡುವ ಧಾರ್ಮಿಕ ಕಾರ್ಯಗಳಿಂದ ನಿಮಗೆ ಅನುಕೂಲವಾಗುತ್ತದೆ. ಹಿರಿಯರಿಗೆ ಸಮಾಜದಿಂದ ಗೌರವ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಎಲ್ಲ ಕೆಲಸಗಳು ಮಂದಗತಿಯಲ್ಲಿ ನಡೆಯುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ನಿರೀಕ್ಷೆಯಂತೆ ಬಂಧುಗಳ ಸಹಕಾರ ದೊರೆಯುವ ಸಾಧ್ಯತೆ ಇದೆ. ಇಚ್ಛೆಪಟ್ಟ ಆಸ್ತಿಯನ್ನು ಕೊಳ್ಳುವ ಪ್ರಯತ್ನ ಮಾಡಬಹುದು. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಕೆಲವರಿಗೆ ಹೊಟ್ಟೆ ನೋವು ಕಾಣಿಸಿಕೊಳ್ಳಬಹುದು.

ಪದಬಂಧ 2944

ಮೇಲಿಂದ ಕೆಳಕ್ಕೆ

1. ಮದುವೆಗೆ ಮಂಗಳ ಮೇಳ	4
2. ಸಾಧಾರಣ ಸರ್ಕಾರಿ ನೌಕರರು ನಿವೃತ್ತಿ ಆದಮೇಲೆ ಪಡೆಯುವ ಸಂಬಳ	6
3. ಕೃಷ್ಣ ಕಂಸನನ್ನು ಕೊಂದ ಸ್ಥಳ	3
4. ದಟ್ಟ ಅರಣ್ಯಕ್ಕೊಂದು ಪರ್ಯಾಯ	3
5. ತನ್ನದೇ ಮತಾಚರಣೆಯನ್ನು ಕಟ್ಟುನಿಟ್ಟಾಗಿ ಅನುಸರಿಸುವವ	6
7. ಕೆಲಸಕ್ಕೆ ಬಿಡುವಿನ ದಿವಸ	4
9. ವ್ಯಾಪಾರಿಗೊಂದು ಪರ್ಯಾಯ	3
10. ಸೂಕ್ತವಲ್ಲದ ಸಮಯದಲ್ಲಿ ಸಂಭವಿಸುವ ಸಾವು	6
11. ನಮಿಸುವ ಮಾರ್ಗದರ್ಶಕನ ಚರಣ	4
13. ದೇವಿ ಸ್ತುತಿಗಳಲ್ಲಿ ಹೃದಯದಲ್ಲಿ ಹರಿದಾಡುವವಳು	6
16. ಮರಣ ಸಮಯದಲ್ಲಿ ತೆರೆಯುವ ಕಾಲದೇವನ ಬಾಗಿಲು	4
18. ಒಳ್ಳೆಯ ಹುಟ್ಟನ್ನು ಪಡೆದವಳು	3
19. ವೇಷಹಾಕಿ ಕುಣಿಯುವವ	3

ಎಡದಿಂದ ಬಲಕ್ಕೆ

1. ಅನೇಕ ಬಗೆಯ ಹೆಸರು	6
4. ಬಟ್ಟೆ ಒಣಗಿಸಲು ಆಗಸದತ್ತ ಮುಖಮಾಡುವವ	3
6. ಕೇರಳದ ಅರಸ ಕುಂಚಪ್ರಪಂಚದ ಮೇರು ವ್ಯಕ್ತಿ	6
8. ವಿಮಾನಗಳು ಓಡಿ ಹತ್ತಿಳಿಯುವ ಮಾರ್ಗ	3
9. ಇದು ವದಂತಿಯಲ್ಲ ನೈಜ ಘಟನೆಯ ವಿವರ	3
10. ಅಳುಕಿದಾಗ ಬರುವ ದುಃಖ ಮತ್ತು ಸುಖದಿಂದ ಬರುವ ಖುಷಿ ಜೊತೆ ಸೇರಿದೆ	4
12. ಹೊಸರುಚಿಯ ಅಡುಗೆ	4
14. ಚಮಕದ ಕೊನೆಯಕ್ಷರಕ್ಕೆ ಸೇರುವ ಮಹಾಶಿವನ ಸ್ತುತಿ	3
15. ಹೋಗುವವರಿಗೆ ಬೀಳ್ಕೊಡುಗೆ	3
17. ಕೃಷ್ಣನ ಚಕ್ರಾಯುಧದ ಕವಚ ಪಡೆಯಲು ಮಾಡಿಸುವ ಶ್ರೇಷ್ಠ ಹೋಮ	6
20. ಅರುಣನಂತೆ ಬೆಳಕುಚೆಲ್ಲುವ ಯುವಕ ಹಿಂದುಮುಂದು	3
21. ಸಮಾನ್ಯ ವಿವಾಹಿತೆ ಧರಿಸುವ ಕಪ್ಪುಪೂಸಿನ ಆಭರಣ	6



ಪದಬಂಧ ಉತ್ತರ -2943

ಮೇಲಿಂದ ಕೆಳಕ್ಕೆ

1.ಬಹುಮುಖಿ 2.ಪರೋಟ 3.ಬನ 4.ಗತಜೀವ 7.ರುದ್ರಾಕ್ಷಿ 9.ಪ್ರಣವ 10.ದಾಸರಪದ 11.ಸಾಕ್ಷರತೆ 12.ಚರಾಚರ 13.ರಾವಣ 15.ಮಾಧವಿ 16.ಸುಧಾರಸ 17.ತಾಕಲಾಟ 18.ಕಥನ 20.ಸರ

ಎಡದಿಂದ ಬಲಕ್ಕೆ

1. ಬಳಪ 3.ಬಳಗ 5.ರೋಮಾಂಚನ 6.ತಲೆಮಾರು 8.ಮುನ್ನೋಟ 10.ದಾನವ 11.ಸಾಕ್ಷಿ 12.ಚರಣದಾಸ 14.ಪರವಶತೆ 15.ಮಾರ 16.ಸುನಂದ 18.ಕಥಕ 19.ವಿದ್ಯಾಧರ 20.ಸತ್ಯಪಥ 21.ಸಮರ 22.ನಮ್ಮೂಟ

ಬಣ್ಣಗಳಲ್ಲಿ ಹರಿದಳು ಜೀವನದಿ ಕಾವೇರಿ!

• ಕೆ.ಎಸ್.ಗಿರೀಶ

ನದಿ ದಂಡೆಯ ನೀರಿನಲ್ಲಿ ತೇಲುತ್ತಿರುವ ಮರದಿಂದ ಉದುರಿದ ಎಲೆ. ಹರಿದುಬಂದ ಮರದ ದಿಮ್ಮಿಯ ಮೇಲೆ ಹಸಿರಾಗಿ ಹಬ್ಬಿಕೊಂಡಿರುವ ಪಾಚಿ. ತೇವದ ಮಣ್ಣಿನ ನಡುವೆ ತಲೆ ಎತ್ತಿ ನಿಂತಿರುವ ಅಣಬೆಗಳು. ನೀರಂಚಿನಲ್ಲಿ ಬಲೆ ನೇಯುತ್ತಾ ಆಹಾರಕ್ಕಾಗಿ ಕಾದಿರುವ ಜೇಡ. ದಡದ ನೆರಳಲ್ಲಿ ನಿಧಾನವಾಗಿ ಸಾಗುತ್ತಿರುವ ಬಸವನಹುಳು...

ಜಿ.ಎಸ್.ಭವಾನಿ ಅವರ ವರ್ಣಚಿತ್ರಗಳನ್ನು ಒಂದೊಂದಾಗಿ ನೋಡುತ್ತಾ ಹೋದರೆ, ನಾವು ಕಾವೇರಿ ನದಿಯ ದಂಡೆಯಲ್ಲೇ ನಿಂತಿರುವ ಅನುಭವವಾಗುತ್ತದೆ. ಅವರ ಚಿತ್ರಗಳಲ್ಲಿ ಕೇವಲ ನದಿ ಮಾತ್ರವಿಲ್ಲ; ಅದರ ಸುತ್ತ ಬದುಕುವ ಜೀವಜಗತ್ತು, ಅದರ ಉಸಿರು, ಅದರ ಮೌನ, ಅದರ ನೋವು ಎಲ್ಲವೂ ಬೆರೆತಿವೆ.

ಕಾವೇರಿಯ ಉಗಮ ಸ್ಥಾನವಾದ ತಲಕಾವೇರಿಯಿಂದ ಹಿಡಿದು, ಸಮುದ್ರ ಸೇರುವ ತಮಿಳುನಾಡಿನ ಪಂಪೂಹಾರ್‌ವರೆಗೆ ಕಾವೇರಿಯೊಂದಿಗೆ ಸಂಚರಿಸಿ ಭವಾನಿ ಈ ಚಿತ್ರಗಳನ್ನು ರಚಿಸಿದ್ದಾರೆ. ನದಿಯ ಪಯಣವನ್ನು ಕೇವಲ ದೃಶ್ಯವಾಗಿ ಅಲ್ಲ, ಭಾವವಾಗಿ ಹಿಡಿದಿಟ್ಟಿರುವುದು ಅವರ ಚಿತ್ರಗಳ ವಿಶೇಷ.

ಅವರು ಹೆಚ್ಚಾಗಿ ನದಿ ದಂಡೆಯಲ್ಲೇ ಕುಳಿತು ಚಿತ್ರ ಬಿಡಿಸಲಿಲ್ಲ. ಅನೇಕ ಕಡೆಗಳಲ್ಲಿ ಅದು ಸಾಧ್ಯವೂ ಇರಲಿಲ್ಲ. ಹೀಗಾಗಿ, ನದಿಯ ಹರಿವು, ದಡದ ಜೀವಜಗತ್ತು, ಬೆಳಕು–ನೆರಳಿನ ಆಟ, ನೀರಿನ ಬಣ್ಣದ ಬದಲಾವಣೆ–ಇವೆಲ್ಲವನ್ನು ಕ್ಯಾಮೆರಾದಲ್ಲಿ ಸೆರೆಹಿಡಿದರು. ಹಲವೆಡೆ ಗಂಟೆಗಟ್ಟಲೆ ಮೌನವಾಗಿ ಕುಳಿತು ನದಿಯನ್ನೇ ಧ್ಯಾನಿಸಿದ ಬಳಿಕ, ತಮ್ಮ ಪಯಣ ಮುಗಿದ ಮೇಲೆ ಚಿತ್ರಗಳನ್ನು ಬಿಡಿಸಲು ಆರಂಭಿಸಿದರು.

ಅವರ ಒಂದು ಚಿತ್ರದಲ್ಲಿ ತಲಕಾವೇರಿಯ ಮೂಲದಿಂದ ಆರಂಭವಾಗಿ ಲಕ್ಷ್ಮಣತೀರ್ಥ, ಹಾರಂಗಿ ಸೇರಿದಂತೆ ಹದಿನಾಲ್ಕು ಉಪನದಿಗಳನ್ನು ತನ್ನೊಳಗೆ ಸೇರಿಸಿಕೊಂಡು ಸಾಗುವ ಕಾವೇರಿ ಕೊನೆಯಲ್ಲಿ ಸಮುದ್ರ ಸೇರುವ ದೃಶ್ಯ ಮೂಡಿದೆ. ಒಂದೇ ಚಿತ್ರದಲ್ಲಿ ನದಿಯ ಸಂಪೂರ್ಣ ಕಥಾನಕವನ್ನು ಹಿಡಿದಿಟ್ಟಿರುವ ಈ ಕೃತಿ ವಿಶೇಷವಾಗಿ ಗಮನ ಸೆಳೆಯುತ್ತದೆ.

ಇನ್ನೂ ಕೆಲವು ಚಿತ್ರಗಳಲ್ಲಿ ನದಿ ದಂಡೆಯ ಸೂಕ್ಷ್ಮ ಜಗತ್ತು ಕಾಣಿಸುತ್ತದೆ. ಮರಗಳಿಂದ ಉದುರಿದ ಎಲೆಗಳು, ನೀರಿನಲ್ಲಿ ಮಿನುಗುವ ಮೀನುಗಳು, ಕಾಡಿನ ಅಪರೂಪದ ಹೂಗಳು, ಹಕ್ಕಿಗಳು–ಹೀಗೆ ಕಾವೇರಿಯ ಸುತ್ತಲಿನ ಅನೇಕ ಜೀವಿಗಳು ಚಿತ್ರಗಳಲ್ಲಿ ಜೀವಂತವಾಗುತ್ತವೆ. 'ಒಂದು ನದಿದಂಡೆಯಲ್ಲಿ ಇಷ್ಟೊಂದು ಜೀವಸಂಕುಲವಿದೆಯೇ?' ಎಂಬ ಅಚ್ಚರಿ ಮೂಡಿಸದೇ ಇರುವುದಿಲ್ಲ.

ಜಿ.ಎಸ್.ಭವಾನಿ ಅವರ ಕೈಯಲ್ಲಿ ಅರಳಿದ ಚಿತ್ರಗಳು

ಒಂದು ಚಿತ್ರದಲ್ಲಿ ಮಹಿಳೆಯೊಬ್ಬರು ಸಮುದ್ರದತ್ತ ನಡೆದು ಹೋಗುತ್ತಿರುವ ದೃಶ್ಯವಿದೆ. ಅದರ ಪಕ್ಕದಲ್ಲೇ ಸಮುದ್ರ ಸೇರುತ್ತಿರುವ ಕಾವೇರಿ. ನದಿಯ ಪಯಣ ಮತ್ತು ಮಾನವ ಜೀವನದ ಪಯಣ ಒಂದೇ ಭಾವದಲ್ಲಿ ಬೆರೆತಂತೆ ಆ ಚಿತ್ರ ಕಾಡುತ್ತದೆ.

ಕಾವೇರಿಯೊಂದಿಗೆ ಆರಂಭವಾದ ಪಯಣ

ಕೊಡಗು ಜಿಲ್ಲೆ ಸೋಮವಾರಪೇಟೆಯ ಭವಾನಿ ಮೊದಲಿಗೆ ತಲಕಾವೇರಿಯಿಂದ ತಿ.ನರಸೀಪುರದವರೆಗೆ ಸುಮಾರು ಹತ್ತು ದಿನಗಳು ಕಾವೇರಿಯೊಂದಿಗೆ ಪ್ರಯಾಣಿಸಿದರು. ಎಲ್ಲಿ ಮನಸ್ಸಿಗೆ ಇಷ್ಟವಾಗುತ್ತಿತ್ತೋ ಅಲ್ಲಿ ತಂಗುತ್ತಿದ್ದರು. ಈ ಪಯಣದಲ್ಲಿ ಕಟ್ಟುನಿಟ್ಟಿನ ಯೋಜನೆಗಳಿಗಿಂತ ಅನುಭವಗಳೇ ಮುಖ್ಯವಾಗಿದ್ದವು.

ನಂತರ, ತಲಕಾವೇರಿಯಿಂದ ಪಂಪೂಹಾರ್‌ವರೆಗೆ ಕಾವೇರಿಯ ಸಂಪೂರ್ಣ ಪಯಣವನ್ನು ದಾಖಲಿಸುವ ದೊಡ್ಡ ಯೋಜನೆ ರೂಪುಗೊಂಡಿತು. ಚಾಲಕ ಮತ್ತು ಇಬ್ಬರು ಸ್ನೇಹಿತರೊಂದಿಗೆ ಈ ಸಂಚಾರ ಆರಂಭವಾಯಿತು. ಆಗಷ್ಟೇ ಮಳೆಗಾಲ ಮುಗಿದಿದ್ದರಿಂದ ನದಿ ಅಪಾರ ಜಲರಾಶಿಯೊಂದಿಗೆ ಹರಿಯುತ್ತಿತ್ತು.

ಕಾವೇರಿಯ ಹರಿವು ಸುಮಾರು 800 ರಿಂದ 850 ಕಿಲೋಮೀಟರ್ ಇದ್ದರೂ, ರಸ್ತೆಮಾರ್ಗದಲ್ಲಿ ಸಂಚರಿಸಿದ್ದರಿಂದ ಸುಮಾರು 1,300 ಕಿಲೋಮೀಟರ್ ಕ್ರಮಿಸಬೇಕಾಯಿತು.

ಮೂಲದಲ್ಲಿ ಸಣ್ಣ ಹರಿವಿನಂತೆ ಕಾಣುವ ಕಾವೇರಿ ಮುಂದೆ ಉಪನದಿಗಳನ್ನು ಸೇರಿಸಿಕೊಂಡು ಹೇಗೆ ವಿಶಾಲವಾಗುತ್ತಾಳೆ ಎಂಬುದು ಅವರ ಕಣ್ಣೆದುರೇ ತೆರೆದಿತು. ನದಿ ತೀರದಲ್ಲಿರುವ ಆದಿ ರಂಗ, ಮಧ್ಯ ರಂಗ, ಅಂತ್ಯ ರಂಗನಾಥಸ್ವಾಮಿ ದೇಗುಲಗಳು ಕಾವೇರಿಯೊಂದಿಗೆ ಬೆಸೆದುಕೊಂಡಿರುವ ಸಂಸ್ಕೃತಿಯ ಮತ್ತೊಂದು ಮುಖವನ್ನು ತೋರಿಸಿವೆ. ಮತ್ತೊಂದೆಡೆ, ನದಿ ತೀರದ ಹೊಲಗಳಲ್ಲಿ ಬೆಳೆಯುತ್ತಿದ್ದ ವೈವಿಧ್ಯಮಯ ಬೆಳೆಗಳು ಕೃಷಿ ಬದುಕಿನ ಚಿತ್ರಣ ನೀಡಿದ್ದವು.

ಕರ್ನಾಟಕ ದಾಟಿ ತಮಿಳುನಾಡು ಪ್ರವೇಶಿಸಿದಾಗ ಅವರಿಗೆ ಹೊಸ ಪ್ರಪಂಚವೇ ತೆರೆದಂತಾಯಿತು. ತಿರುವಾರೂರಿನಲ್ಲಿ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ತ್ಯಾಗರಾಜರ ಮನೆ ಮುಂದೆಯೇ ಹರಿಯುವ ಕಾವೇರಿಯನ್ನು ನೋಡಿದಾಗ, ಈ ನದಿ ಕೇವಲ ಕೃಷಿಗೆ ಮಾತ್ರವಲ್ಲ, ಸಂಗೀತಕ್ಕೂ, ಸಂಸ್ಕೃತಿಗೂ ಜೀವನಾಡಿಯಾಗಿದ್ದಾಳೆ ಎಂಬ ಭಾವ ಅವರಲ್ಲಿ ಮೂಡಿತು.

ಜಿ.ಎಸ್.ಭವಾನಿ

ಈ ಪಯಣದಲ್ಲಿ ಪ್ರಕೃತಿಯ ಸೌಂದರ್ಯ ಅಪಾರ ಸಂತೋಷ ನೀಡಿದರೆ, ನದಿಯ ದಂಡೆಗಳಲ್ಲಿ ಕಂಡ ಕಸ–ತ್ಯಾಜ್ಯ ಅಷ್ಟೇ ಬೇಸರ ತಂದಿತು.

'ಬಿಯರ್ ಬಾಟಲಿಗಳು, ಪ್ಲಾಸ್ಟಿಕ್, ನದಿಯ ದಂಡೆಯಲ್ಲಿ ಹರಡಿಕೊಂಡಿತ್ತು. ಬಟ್ಟೆಗಳಿಗೆ ಬಣ್ಣ ಹಾಕುವ ಕಾರ್ಖಾನೆಗಳ ತ್ಯಾಜ್ಯ ನೇರವಾಗಿ ನದಿಗೆ ಸೇರುತ್ತಿರುವ ದೃಶ್ಯ ಮನಸ್ಸು ಕಲುಕಿತು' ಎಂದು ಭವಾನಿ ವಿಷಾದದಿಂದ ನೆನಪಿಸಿಕೊಳ್ಳುತ್ತಾರೆ.

ಸಮುದ್ರ ಸೇರುವ ಮುನ್ನದ ಮೌನ

ಕುಂಭಕೋಣಂ ತಲುಪಿದಾಗ ಅವರಿಗೆ ವಿಚಿತ್ರ ಭಾವ ಕಾಡತೊಡಗಿತು. ಇನ್ನು ಕೆಲವೇ ದೂರದಲ್ಲಿ ಕಾವೇರಿ ಬಂಗಾಳಕೊಲ್ಲಿಯನ್ನು ಸೇರುತ್ತಾಳೆ. ಅದರ ನಂತರ ನದಿಯೊಂದಿಗಿನ ಈ ಪಯಣ ಮುಗಿಯಲಿದೆ.

ಆ ಭಾವನೆ ಅವರನ್ನು ಮೂರು ದಿನ ಅಲ್ಲಿಯೇ ತಂಗುವಂತೆ ಮಾಡಿತು. 'ಮೇಡಂ, ಮುಂದೆ ಹೋಗೋಣವೇ?' ಎಂದು ಚಾಲಕ ಹಲವು ಬಾರಿ ಕೇಳಿದರೂ, ಅವರ ಮನಸ್ಸು ಮುಂದಕ್ಕೆ ಹೆಜ್ಜೆ ಇಡಲು ಒಪ್ಪುತ್ತಿರಲಿಲ್ಲ.

ಕೊನೆಗೆ ಪಂಪೂಹಾರ್ ತಲುಪಿದಾಗ ಅವರಿಗೆ ಮತ್ತೆ ಮೂಲದ ಕಾವೇರಿ ಕಂಡ ಅನುಭವವಾಯಿತು.

'ಮೂಲದಲ್ಲಿ ಕಾವೇರಿ ಎಷ್ಟು ಸ್ವಚ್ಛವಾಗಿದ್ದಳೋ, ಇಲ್ಲಿ ಅಷ್ಟು ಸ್ವಚ್ಛವಾಗಿರಲಿಲ್ಲ. ಆದರೆ, ಹರಿವಿನ ಅಗಲ ಮತ್ತೆ ಕಿರಿದಾಗಿತ್ತು' ಎಂದು ಅವರು ಹೇಳುತ್ತಾರೆ.

ಚಿಕ್ಕ ಹರಿವಿನಂತೆ ಹುಟ್ಟುವ ಕಾವೇರಿ, ಮುಂದೆ ಉಪನದಿಗಳನ್ನು ಸೇರಿಸಿಕೊಂಡು ಭೋರ್ಗರೆಯುತ್ತಾ ಸಾಗುತ್ತಾಳೆ. ಜಲಾಶಯಗಳನ್ನು ತುಂಬುತ್ತಾಳೆ. ಜೀವಗಳನ್ನು ಪೋಷಿಸುತ್ತಾಳೆ. ಕೊನೆಯಲ್ಲಿ ಮತ್ತೆ ಕಿರಿದಾಗಿಯೇ ಸಮುದ್ರ ಸೇರುತ್ತಾಳೆ.

'ಆ ಕ್ಷಣದಲ್ಲಿ ಮನಸ್ಸು ಏನನ್ನೂ ಯೋಚಿಸದ, ಭಾವಿಸದ ಸ್ಥಿತಿಗೆ ಹೋಗಿತ್ತು' ಎಂದು ಹೇಳುತ್ತಾ ಭವಾನಿ ದೂರದ ಗಗನದತ್ತ ದೃಷ್ಟಿ ನೆಟ್ಟರು.

ಹರಿವು ಮತ್ತು ಅರಿವು

ಕಾವೇರಿಯೊಂದಿಗೆ ನಡೆಸಿದ ಈ ವಿಶಿಷ್ಟ ಪಯಣವನ್ನು ಭವಾನಿ ಕೇವಲ ಚಿತ್ರಗಳಲ್ಲಿ ಮಾತ್ರ ಸೀಮಿತಗೊಳಿಸಿಲ್ಲ. ಪಯಣದ ವೇಳೆ ಸೆರೆಹಿಡಿದ ವಿಡಿಯೊಗಳು, ಚಿತ್ರಗಳು ಮತ್ತು ಅನುಭವಗಳನ್ನು ಈಗ ಶಾಲೆ–ಕಾಲೇಜುಗಳಲ್ಲಿ ಪ್ರದರ್ಶಿಸುತ್ತಾ, ವಿದ್ಯಾರ್ಥಿಗಳಲ್ಲಿ ನದಿಗಳ ಮಹತ್ವದ ಕುರಿತು ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಕಾವೇರಿ ಕೇವಲ ನದಿಯಲ್ಲ; ಅದು ಜೀವಜಗತ್ತು, ಸಂಸ್ಕೃತಿ ಮತ್ತು ಪರಿಸರದ ಜೀವನಾಡಿ ಎಂಬ ಸಂದೇಶವನ್ನು ತಮ್ಮ ಕಲೆಯ ಮೂಲಕ ತಲುಪಿಸುತ್ತಿದ್ದಾರೆ.

ಭವಾನಿ ಅವರ ಕಲಾಕೃತಿಗಳು ಶ್ರೀಲಂಕಾ, ವಿಯಟ್ನಾಂ, ನ್ಯೂಜಿಲೆಂಡ್, ಜರ್ಮನಿ, ಆಸ್ಟ್ರೇಲಿಯಾ, ಅಮೆರಿಕ, ಇಟಲಿ ಸೇರಿದಂತೆ ಹಲವು ದೇಶಗಳಲ್ಲಿ ಪ್ರದರ್ಶನ ಕಂಡಿವೆ. ಭಾರತದಲ್ಲೂ ತಮಿಳುನಾಡು, ನವದೆಹಲಿ, ರಾಜಸ್ಥಾನ, ಚಂಡೀಗಢ, ಮುಂಬೈ ಸೇರಿದಂತೆ ಅನೇಕ ನಗರಗಳಲ್ಲಿ ಅವರ ಚಿತ್ರಗಳು ಮೆಚ್ಚುಗೆ ಪಡೆದಿವೆ.

ಹಲವು ಪ್ರಶಸ್ತಿ–ಗೌರವಗಳಿಗೆ ಪಾತ್ರರಾಗಿರುವ ಅವರಿಗೆ ಈಚೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ವರ್ಣ ಪ್ರಶಸ್ತಿಯೂ ಲಭಿಸಿದೆ.

ತಮಿಳುನಾಡಿನ ಪಂಪೂಹಾರ್‌ನಲ್ಲಿ ಕಾವೇರಿ ನದಿ ಬಂಗಾಳ ಕೊಲ್ಲಿಯನ್ನು ಸೇರುವಾಗಿನ ದೃಶ್ಯ

ಚಿಟ್ಟೂರಿನಲ್ಲಿ ಕೆರೆಬೇಟೆ ಸಂಭ್ರಮ

ಚಿಟ್ಟೂರು ಕೆರೆಯಲ್ಲಿ ಮೀನು ಬೇಟೆ

10ನೇ ಪುಟದಿಂದ...

ಒಂದು ಕ್ಷಣಕ್ಕೆ ಗದ್ದಲ ಕಡಿಮೆಯಾದಂತಾಯಿತು. ಆಮೇಲೆ ಆಕಾಶವೇ ಒಡೆದಂತೆ ಒಂದು ಸದ್ದು.

'ಹೋಯ್...!'

ಅಷ್ಟೇ.

ಸಾವಿರಾರು ಮಂದಿ ಒಂದೇ ಕ್ಷಣದಲ್ಲಿ ಕೆರೆಯತ್ತ ನುಗ್ಗಿದರು.

ಕೂಣಿ, ಜರಡಿ ಬಲೆ, ಚೀಲಗಳು ಗಾಳಿಯಲ್ಲಿ ಹಾರಿದವು. ಕೆರೆಯ ನಿಶ್ಚಲ ನೀರು ಕ್ಷಣಾರ್ಧದಲ್ಲಿ ಮಣ್ಣಿನ ಬಣ್ಣಕ್ಕೆ ತಿರುಗಿತು. ನೀರು ಚಿಮ್ಮಿತು. ಜನರು ಒಬ್ಬರನ್ನೊಬ್ಬರು ತಳ್ಳಿಕೊಂಡು ಒಳಗೆ ಓಡಿದರು.

ಆ ದೃಶ್ಯ ದೂರದಿಂದ ನೋಡಿದರೆ ನೀರಿನೊಳಗೆ ಯುದ್ಧ ಶುರುವಾಯಿತೇನೋ ಅನ್ನಿಸುತಿತ್ತು.

ಜನರ ಗುಂಪು ನೀರಿನೊಳಗೆ ನುಗ್ಗುತ್ತಿದ್ದಂತೆಯೇ ಆಳದಲ್ಲಿದ್ದ ಮೀನುಗಳು ಹೆದರಿ ದಂಡೆಯತ್ತ ಓಡತೊಡಗಿದವು. ಸಣ್ಣ ಮೀನುಗಳು ಅಲೆಗಳ ಜೊತೆ ತೀರಕ್ಕೆ ತೇಲಿ ಬಂದವು. ನೋಡಲು ನಿಂತಿದ್ದ ಮಕ್ಕಳು ಅವುಗಳನ್ನು ಕೈಯಲ್ಲಿ ಹಿಡಿದು ಚೀಲಕ್ಕೆ ಹಾಕತೊಡಗಿದರು. ಮಹಿಳೆಯರು ಸೀರೆಯ ಕೊನೆಯನ್ನು ಮಡಚಿಕೊಂಡು ಮೀನುಗಳನ್ನು ಸೇರಿಸುತ್ತಿದ್ದರು.

ಒಂದು ದೊಡ್ಡ ಮೀನು ಏಕಾಏಕಿ ನೀರಿನಿಂದ ಹಾರಿದಂತೆ ಮೇಲೆದ್ದು, ಹಿಡಿಯಲು ಹೋಗಿದ್ದವನ ಕೈ ಜಾರಿ ಪಕ್ಕದಲ್ಲಿದ್ದ ಮತ್ತೊಬ್ಬನ ಕೈಗೆ ಸಿಕ್ಕಿತು.

'ಅಯ್ಯೋ ದುರಾದೃಷ್ಟ!' ಎಂದು ಸುತ್ತಲಿನವರು ನಕ್ಕರು.

ಅಲ್ಲೊಂದು ಪುಟ್ಟ ಹುಡುಗ ತನ್ನ ಚೀಲದಲ್ಲಿದ್ದ ನಾಲ್ಕು ಸಣ್ಣ ಮೀನುಗಳನ್ನು ಎಣಿಸುತ್ತಾ ಕುಣಿಯುತ್ತಿದ್ದ. ಇನ್ನೊಬ್ಬ ಬಾಲಕ ಮೀನಿನ ಮುಳ್ಳು ಚುಚ್ಚಿಸಿಕೊಂಡು ಅತ್ತಿದ್ದ. ಒಬ್ಬ ವೃದ್ಧ ಬಲೆ ಎಳೆದುಕೊಂಡು ಬರುತ್ತಿದ್ದರೆ, ಅವರ ಹಿಂದೆ ಮೊಮ್ಮಗ ಚೀಲ ಹಿಡಿದು ಓಡುತ್ತಿದ್ದ. ಕೆರೆಯ ದಂಡೆ ಬದುಕಿನ ನೂರಾರು ಸಣ್ಣ ದೃಶ್ಯಗಳಿಂದ ತುಂಬಿಹೋಗಿತ್ತು.

ಮೀನುಗಳ ಮೆರವಣಿಗೆ

ಸ್ವಲ್ಪ ಹೊತ್ತಲ್ಲೇ ಸಾಗರ ತಾಲ್ಲೂಕಿನ ಕಣ್ಣೂರಿನಿಂದ ಬಂದಿದ್ದ ಸುದೀಪ್ ಕೆರೆಯಿಂದ ಹೊರಬಂದರು. ಅವರ ಕೈಯಲ್ಲಿ ಹತ್ತು ಕೆ.ಜಿ. ಗೂ ಹೆಚ್ಚು ತೂಕದ ರೋಣೆ ಮೀನುಗಳ ಗುಚ್ಛ.

ಜನರು ಅವರನ್ನು ಸುತ್ತುವರಿದು ಮೊಬೈಲ್ ತೆಗೆದು ಚಿತ್ರ ಕ್ಲಿಕ್ಕಿಸುತ್ತಿದ್ದರು. ಕೆಲವರು ವಿಡಿಯೊ ಮಾಡುತ್ತಿದ್ದರು.

ಪುರದಿಂದ ಬಂದಿದ್ದ ಮಣಿಕಂಠ ಹುಲಿಗೆಂಡೆ ಮೀನು ಹಿಡಿದು ಹೆಮ್ಮೆಯಿಂದ ನಡೆದುಬಂದರು. ತ್ಯಾಗರ್ತಿಯ ಕೆಲವರು ಚೀಲ ತುಂಬ ಜಬ್ಬು, ಕುಚ್ಚಲು, ಮುರುಗೋಡು ಮೀನುಗಳೊಂದಿಗೆ ದಂಡೆಗೆ ಬಂದರು.

ಹಿಂಡುವಳ್ಳಿ ಬಳಿಯ ಶಿಗ್ಗಾದ ಶಿವಮೂರ್ತಿಗೆ ಅಗಲ ದೇಹದ ಕಾಟ್ಲಾ ಮೀನು ಸಿಕ್ಕಿತ್ತು.

'ಮನೆಯಲ್ಲಿ ಐವರು ಇದ್ದೇವೆ. ಸಾಕಾಯಿತು' ಎಂದು ಅವರು ಹೆಗಲಿಗೆ ಚೀಲ ಹಾಕಿಕೊಂಡು ನಕ್ಕರು.

ಅಲ್ಲೇ ಮಾವನಿಗೆ ಹುರಿದುಂಬಿಸುತ್ತಿದ್ದ ಚಿಟ್ಟೂರಿನ ಸುಮಾ ಮುಖದಲ್ಲಿ ಸಂಭ್ರಮ ಉಕ್ಕುತ್ತಿತ್ತು.

'ಇನ್ನೊಂದು ವಾರ ನಮ್ಮೂರಲ್ಲಿ ಮೀನಿನ ಸಮಾರಾಧನೆ. ಸಾರು, ಫ್ರೈ, ಚಟ್ನಿ, ಗೊಜ್ಜು, ಕಬಾಬ್... ಎಲ್ಲ ಮಾಡ್ತೀವಿ' ಎಂದರು. ಆ ಮಾತು ಕೇಳುತ್ತಿದ್ದಂತೆಯೇ ಗಾಳಿಯಲ್ಲೇ ಮೀನು ಕರಿಯುವ ವಾಸನೆ ತೇಲಿದಂತಾಯಿತು.

102 ಎಕರೆಗಳ ಹಬ್ಬ

ದಡ್ಡಿಯ ಜಂಗುಳಿಯತ್ತ ಸಾಗುತ್ತಿದ್ದಾಗ ಕೆರೆಬೇಟೆ ಆಯೋಜನ ಸಮಿತಿ ಮುಖ್ಯಸ್ಥ ರೇವಣಪ್ಪ ಎದುರಾದರು.

'ನಮ್ಮೂರ ಕೆರೆ 102 ಎಕರೆ. ಕುಬಟೂರು ಕೆರೆ ಬಿಟ್ಟರೆ ಸೊರಬ ತಾಲ್ಲೂಕಿನ ಎರಡನೇ ದೊಡ್ಡ ಕೆರೆ' ಎಂದು ಅವರು ಹೆಮ್ಮೆಯಿಂದ ಹೇಳಿದರು. ಅವರ ಧ್ವನಿಯಲ್ಲಿ ಊರಿನ ಮೇಲಿನ ಪ್ರೀತಿ ಸ್ಪಷ್ಟವಾಗಿತ್ತು.

'ಇದಕ್ಕೆ ಕುಮದ್ವತಿ ಹೊಳೆಯ ಸಂಪರ್ಕ ಇದೆ. ಕೋಡಿ ಬಿದ್ದಾಗ ಹೊಳೆ ಮೀನುಗಳೆಲ್ಲ ಇಲ್ಲಿ ಸೇರುತ್ತವೆ. ಇಷ್ಟು ವರ್ಷ ಮೀನನ್ನು ಹರಾಜಿಗೆ ಕೊಡುತ್ತಿದ್ದೆವು. ಆದರೆ ಊರಿನವರ ಆಸೆಯಿಂದ ಈ ಬಾರಿ ಕೆರೆಬೇಟೆ ಮಾಡಿದ್ದೇವೆ'.

ಕೂಣಿ ಮತ್ತು ಜೇಡಿ ಬಲೆ ಎರಡೂ ಸೇರಿ ನೋಂದಣಿ ಆಗಿದ್ದು 2,300 ಮಂದಿ. ಸಂಗ್ರಹವಾದ ಒಟ್ಟು ಮೊತ್ತ ₹13.80 ಲಕ್ಷ.

'ಶಿರಸಿ, ಸಿದ್ದಾಪುರ, ಬನವಾಸಿ, ಹೊಸನಗರ, ರಿಪ್ಪನ್‌ಪೇಟೆ, ಹಾನಗಲ್, ರಾಣೆಬೆನ್ನೂರು, ಶಿವಮೊಗ್ಗ... ಎಲ್ಲ ಕಡೆಗಳಿಂದ ಜನ ಬಂದಿದ್ದಾರೆ' ಎಂದರು.

ಕಳೆದ ವರ್ಷ ಹತ್ತು ಲಕ್ಷ ಮೀನುಮರಿ ಬಿಟ್ಟಿದ್ದಾರಂತೆ.

'ಎಲ್ಲರಿಗೂ ಮೀನು ಸಿಗುತ್ತದೆ ಅನ್ನೋ ನಂಬಿಕೆ ಇದ್ದರೆ ಮಾತ್ರ ಜನ ಇಷ್ಟು ದೂರ ಬರುತ್ತಾರೆ' ಎಂದು ನಕ್ಕರು.

ಮಧ್ಯಾಹ್ನಕ್ಕೆ ಬಿಸಿಲು ಕೆರೆಯ ನೀರನ್ನೇ ಕಂದು ಬಣ್ಣಕ್ಕೆ ತಿರುಗಿಸಿತ್ತು. ಕೆಲವರು ಮೀನು ಹಿಡಿದ ಖುಷಿಯಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಕೆಲವರು ರೀಲ್ಸ್ ಮಾಡುತ್ತಿದ್ದರು. ದೊಡ್ಡ ಮೀನು ಹಿಡಿದವರು ಅದನ್ನು ಎರಡು ಕೈಯಲ್ಲಿ ಎತ್ತಿ ಜನರಿಗೆ ತೋರಿಸುತ್ತಿದ್ದರು.

ಸಿಕ್ಕದವರು ಮಾತ್ರ ಮೌನವಾಗಿ ದಂಡೆಯತ್ತ ನಡೆದುಬರುತ್ತಿದ್ದರು.

ಕೆರೆಯ ಏರಿಯಲ್ಲಿ ನಿಲ್ಲಿಸಿದ್ದ ಬೈಕ್‌ಗಳ ಎಂಜಿನ್ ಸದ್ದು ನಿಧಾನವಾಗಿ ಹೆಚ್ಚತೊಡಗಿತು. ಜನರು ಗುಂಪು ಗುಂಪಾಗಿ ಹಿಂತಿರುಗುತ್ತಿದ್ದರು.

ಆದರೆ ಗಾಳಿಯಲ್ಲಿ ಇನ್ನೂ ಮೀನಿನ ವಾಸನೆ ಇತ್ತು.

ಒದ್ದೆಯಾದ ಹೆಜ್ಜೆ ಗುರುತುಗಳು, ಹರಿದ ಬಲೆ ನೂಲುಗಳು, ಮಣ್ಣಿನಿಂದ ಕಂದುಬಣ್ಣಕ್ಕೆ ತಿರುಗಿದ ನೀರು–ಇವೆಲ್ಲ ಬೆಳಗ್ಗಿನ ಗದ್ದಲದ ನೆನಪುಗಳಾಗಿ ಉಳಿದಿದ್ದವು. ಚಿಟ್ಟೂರಿನ ಕೆರೆ ಮತ್ತೊಮ್ಮೆ ಮೌನಕ್ಕೆ ಮರಳುತ್ತಿತ್ತು. ಆದರೆ ಆ ದಿನದ 'ಹೋಯ್' ಸದ್ದು ಮಾತ್ರ ಇನ್ನೂ ಗಾಳಿಯಲ್ಲಿ ತೇಲುತ್ತಲೇ ಇತ್ತು.

ಕೆರೆಬೇಟೆಯ ಸಂಸ್ಕೃತಿ

ಮಲೆನಾಡು ಮತ್ತು ಅರೆಮಲೆನಾಡಿನ ಹಲವು ಭಾಗಗಳಲ್ಲಿ ಕೆರೆಬೇಟೆ ಕೇವಲ ಮೀನು ಹಿಡಿಯುವ ಚಟುವಟಿಕೆ ಅಲ್ಲ; ಅದು ಗ್ರಾಮೀಣ ಸಮೂಹ ಬದುಕಿನ ಒಂದು ಸಂಭ್ರಮ. ಊರಿನವರು ದಿನ ನಿಗದಿ ಮಾಡಿ, ಒಟ್ಟಾಗಿ ಕೆರೆಗೆ ಇಳಿಯುವುದು, ಸಿಕ್ಕ ಮೀನನ್ನು ಹಂಚಿಕೊಳ್ಳುವುದು, ಬೇಟೆಯನ್ನು ಹಬ್ಬದಂತೆ ಆಚರಿಸುವುದು ಈ ಸಂಸ್ಕೃತಿಯ ವಿಶೇಷ.

ಹಿಂದೆ ಕೆರೆಗಳು ಗ್ರಾಮಗಳ ಬದುಕಿನ ಕೇಂದ್ರವಾಗಿದ್ದವು. ನೀರು, ಆಹಾರ, ಉದ್ಯೋಗ ಮತ್ತು ಸಮುದಾಯದ ಒಗ್ಗಟ್ಟಿನ ಜೊತೆ ಕೆರೆಬೇಟೆ ಬೆಸೆದುಕೊಂಡಿತ್ತು. ಪ್ರಾಣಿಬೇಟೆ, ಮೀನುಬೇಟೆ, ಹಕ್ಕಿಬೇಟೆಯಂತಹ ಆಹಾರಾಧಾರಿತ ಬದುಕಿನ ಭಾಗವಾಗಿ ಇದು ರೂಪುಗೊಂಡಿದೆ.

'ಕೆರೆಬೇಟೆ ದೂರದಿಂದ ನೋಡಿದರೆ ಗೆರಿಲ್ಲಾ ಮಾದರಿಯ ಯುದ್ಧದಂತೆ ಕಾಣಬಹುದು. ಆದರೆ ಅದು ದಾಳಿ ಅಲ್ಲ, ಸಮೂಹ ಸ್ಪರ್ಧೆ' ಎಂದು ಜಾನಪದ ಸಂಶೋಧಕ ಪ್ರೊ. ಮೋಹನ ಚಂದ್ರಗುತ್ತಿ ಹೇಳುತ್ತಾರೆ.

ಇಂದಿಗೂ ಮಲೆನಾಡಿನ ಹಲವು ಹಳ್ಳಿಗಳಲ್ಲಿ ಕೆರೆಬೇಟೆ ಊರಿನ ಹಬ್ಬದಂತೆ ನಡೆಯುತ್ತದೆ. ಮೀನು ಹಿಡಿಯುವುದಕ್ಕಿಂತ ಹೆಚ್ಚಾಗಿ, ಅದು ಜನರನ್ನು ಒಂದೆಡೆ ಸೇರಿಸುವ ಸಮುದಾಯದ ಆಚರಣೆಯಾಗಿ ಉಳಿದಿದೆ.

ಕಥೆ

ಮೂಲ: ನಂದಕಿಶೋರ್ ನಂದನ್
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ ಸುರಕ್ಷತೆ

prajavani.net/short-story

ಕವನ

ಆರ್.ತಾರಿಣಿ ಶುಭದಾಯಿನಿ
ಅವರ ಈಸಕ್ಕಿಯಾಸೆ ನಿಮಗೇಕಯ್ಯಾ

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಹೊನ್ನ ಕಣಜ

ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ

ಸಂಪುಟ 3

ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ದೂರವಾಣಿ : 080 22161900/901/913/914

ಸಮೀಪದ ಪುಸ್ತಕ ಅಂಗಡಿಗಳಲ್ಲಿ ಲಭ್ಯ

Shop Online www.navakarnataka.com

ಮೊದಲ ಓದು

ಕಣ್ಣುಮುಚ್ಚಾಲೆ: ಇಂದಿಗೂ ಎಂದಿಗೂ...

'ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ಸಿದ್ಧಯ್ಯ ಪುರಾಣಿಕರು ನಿಂತಿದ್ದಾರೆ' ಎನ್ನುವುದು ಕುವೆಂಪು ಅವರ ಮಾತು. ಈ ಗುಣಗಳೆಲ್ಲ ಪುರಾಣಿಕರಲ್ಲಿ ಮೈಗೂಡಿದ್ದು ಹೇಗೆ ಎನ್ನುವುದನ್ನು ತಿಳಿಯಲು ಅವರ ಆತ್ಮಕಥನ 'ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ' ಕೃತಿ ನೆರವು ನೀಡುವಂತಿದೆ.

ರಾಯಚೂರು ಜಿಲ್ಲೆಯ ಪುಟ್ಟ ಗ್ರಾಮವೊಂದರಲ್ಲಿ ಹುಟ್ಟಿದ್ದ ಸಿದ್ಧಯ್ಯ ಪುರಾಣಿಕರು, ಕೃಷಿ ಕುಟುಂಬದ ಅನುಭವ ಸಮೃದ್ಧಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಸಾಂಸ್ಕೃತಿಕ ವೈವಿಧ್ಯದ ಗರಡಿಯಲ್ಲಿ ರೂಪುಗೊಂಡ ಬರಹಗಾರ. 'ಕಾವ್ಯಾನಂದ'ರಾಗಿ ಬೆಳೆದ ಬಗೆ ಈ ಕಥನದಲ್ಲಿದೆ. ತಂದೆಯ ಮೂಲಕ ಬಾಲ್ಯದಲ್ಲೇ ಮೈಗೂಡಿದ ಸಾಹಿತ್ಯದ ಆಸಕ್ತಿ ನಂತರದ ದಿನಗಳಲ್ಲಿ ನಾಡಿನ ಪ್ರಮುಖ ಕವಿಗಳಲ್ಲೊಬ್ಬರಾಗಿ ಗುರ್ತಿಸಿಕೊಳ್ಳುವವರೆಗೆ, 'ಕಾವ್ಯಾನಂದ' ಕಾವ್ಯನಾಮದಲ್ಲಿ ಪ್ರಸಿದ್ಧಿ ಪಡೆಯುವವರೆಗೆ ವಿಸ್ತರಿಸಿದ ಕಥನ ಕೃತಿಯಲ್ಲಿದೆ.

ಸಿದ್ಧಯ್ಯ ಪುರಾಣಿಕರ ಬದುಕಿನ ಮೂರು ಮುಖ್ಯ ಅವಸ್ಥೆಗಳನ್ನು ಅವರ ಆತ್ಮಕಥನದಲ್ಲಿ ಗುರ್ತಿಸಬಹುದು. ಒಂದು, ಕಲ್ಯಾಣ ಕರ್ನಾಟಕದ ಪರಿಸರದಲ್ಲಿ ಅರಳಿದ ಅವರ ಬಾಲ್ಯ ಹಾಗೂ ಶಿಕ್ಷಣದ ಹಂತ. ಎರಡನೆಯದು, ಅಧಿಕಾರಿಯಾಗಿ ಸಮಾಜದೊಂದಿಗಿನ ಒಡನಾಟ ಹಾಗೂ ಸ್ಪಂದನ. ಮೂರನೆಯದು, ಸಾಹಿತ್ಯಲೋಕದೊಂದಿಗಿನ ಸಂಪರ್ಕ ಹಾಗೂ ಸಾಧನೆ. ಈ ಎಲ್ಲ ಹಂತಗಳಲ್ಲಿಯೂ ಪುರಾಣಿಕರ ಸಹೃದಯತೆ, ಜಾತ್ಯತೀತ ಮನೋಭಾವ, ಸಮಾಜದ ಸಂಕಟಕ್ಕೆ ಒದಗುವ ಗುಣ ಎದ್ದುಕಾಣಿಸುವಂತಿದೆ. 'ಏನಾದರೂ ಆಗು ನಿನ್ನೊಲಿನಂತಾಗು, ಏನಾದರೂ ಸರಿಯೇ– ಮೊದಲು ಮಾನವನಾಗು' ಎನ್ನುವ ಕವಿತೆ ಅವರ ಜೀವನವಿಧಾನವೂ ಆಗಿರುವುದನ್ನು ಅವರ ಆತ್ಮಕಥನ ಸಹೃದಯರ ಗಮನಕ್ಕೆ ತರುವಂತಿದೆ.



ಡಾ. ಸಿದ್ಧಯ್ಯ ಪುರಾಣಿಕರ ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ (ಆತ್ಮಕಥೆ)
ಲೇ: ಪ್ರಸನ್ನ ಕುಮಾರ ಪುರಾಣಿಕ
ಪ್ರ: ಗಿರಿ ಪ್ರಕಾಶನ
ಸಂ: 080–22264361

ಕಾವ್ಯಾನಂದರ ಜೀವನಕಥನ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಭಾರತೀಯ ಸಮಾಜದ ಅವಲೋಕನವೂ ಆಗಿದೆ. ಈಗಿನ ಕಲ್ಯಾಣ ಕರ್ನಾಟಕದ ಪ್ರದೇಶ ಅನುಭವಿಸಿದ್ದ ರಜಾಕಾರರ ಹಾವಳಿಯ ಚಿತ್ರಣವೂ ಕೃತಿಯಲ್ಲಿದೆ. ವ್ಯಕ್ತಿ ಮತ್ತು ಸಮಷ್ಟಿಯ ಅವಲೋಕನದ ಕಾರಣದಿಂದಾಗಿ ಈ ಕೃತಿಗೆ ಚಾರಿತ್ರಿಕ ಆಯಾಮವೂ ದೊರೆತಿದೆ.

1981ರಲ್ಲಿ ಪ್ರಕಟಗೊಂಡ 'ಕಾವ್ಯಾನಂದ' ಅಭಿನಂದನಾ ಗ್ರಂಥದಲ್ಲಿ ಮೊದಲು ಪ್ರಕಟಗೊಂಡ 'ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ' ಆತ್ಮಕಥೆಯ ನಂತರದ ಆವೃತ್ತಿ, ಕಾವ್ಯಾನಂದರ ಪುತ್ರ ಪ್ರಸನ್ನ ಕುಮಾರ ಪುರಾಣಿಕರ ಸಂಪಾದಕತ್ವದಲ್ಲಿ ಹೊಸ ಸ್ವರೂಪ ಪಡೆದುಕೊಂಡಿದೆ. ಈ ಆವೃತ್ತಿಯಲ್ಲಿ ಆತ್ಮಕಥನದ ಜೊತೆಗೆ, ಕಾವ್ಯಾನಂದರ ಆಯ್ದ ಕವಿತೆಗಳು, ಮಕ್ಕಳ ಕವಿತೆಗಳು ಹಾಗೂ ವಚನಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಕಾವ್ಯಾನಂದರ ಬಗ್ಗೆ ಗಣ್ಯರ ಅಭಿಪ್ರಾಯಗಳು, ಕೃತಿಗಳ ಪಟ್ಟಿ, ಛಾಯಾಚಿತ್ರಗಳನ್ನು ನೀಡಲಾಗಿದೆ. ಇದೆಲ್ಲದರ ಮೂಲಕ ಹೊಸ ತಲೆಮಾರು ಕಾವ್ಯಾನಂದರ ಬದುಕು–ಸಾಧನೆಯನ್ನು ಪರಿಚಯಿಸಿಕೊಳ್ಳಲು ಈ ಕೃತಿ ಕೈಪಿಡಿಯಂತಿದೆ.

ಸಿದ್ಧಯ್ಯ ಪುರಾಣಿಕರ ಕುರಿತಾದ ಸಮಗ್ರ ಮಾಹಿತಿ ನೀಡುವ ಅಂತರ್ಜಾಲ ತಾಣಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. kavyananda.com ಅಥವಾ kavyananda.org ಜಾಲತಾಣಗಳಲ್ಲಿ ಕನ್ನಡದ ಅನನ್ಯ ಕವಿಯ ಬದುಕು–ಸಾಧನೆ ಕುರಿತಾದ ಮಾಹಿತಿ ಲಭ್ಯವಿದೆ.

ಪುಟ: 476 ₹300

ಉಪಕತೆಗಳ ಮಹಾಕತೆ

ಕತೆಯೊಳಗೊಂದು ಉಪಕತೆ, ಉಪಕತೆಯೂ ಸುದೀರ್ಘವಾದ ನೀಳ್ಗತೆ. ಈ ನೀಳ್ಗತೆಗಳನ್ನೆಲ್ಲ ಹೊಸೆಯುತ್ತ ಹೋದಾಗ ಒಂದು ಲೋಕಕಥನ. ಇದಲ್ಲಿಗೆ ಆಯಿತೆ ಎಂಬ ನಿಟ್ಟುಸಿರು ಬಿಡುವಾಗಲೇ, ನಿಜದ ಕತೆ ಆರಂಭವಾಗುವುದೇ ಮೊದಲ ಕತೆ ಮುಗಿದಾಗಲ್ಲವೇ ಎಂಬಂತೆ ಇನ್ನೊಂದು ಲೋಕ ಕಥನ. ತಮ್ಮ ಸಂಪುಟಗಳನ್ನು ಲೇಖಕರು ಲೋಕಕಥನವೆಂದು ಕರೆದಿದ್ದಾರೆ. ಹೀಗೆ ಒಟ್ಟು ಐದು ಲೋಕಕಥನಗಳು.

876 ಅಧ್ಯಾಯಗಳಲ್ಲಿ ಅಸಂಖ್ಯಾತ ಪಾತ್ರಗಳಿವೆ. ಪ್ರತಿ ಲೋಕಕಥನದ ಆರಂಭದಲ್ಲಿಯೇ ಪಾತ್ರ ಪರಿಚಯ ನೀಡಿರುವುದರಿಂದ, ಕೆಲವೊಮ್ಮೆ ಉಪಕತೆಗಳಲ್ಲಿ ಕಳೆದುಹೋಗಬಹುದಾದ ಓದುಗನಿಗೆ ಮಾರ್ಗದರ್ಶಿಯಾಗಿ ಕಾಣುತ್ತವೆ. ಬೊಂಬೆಯಾಡಿಸುವ ಪಾತ್ರ ದೇಶ ಬಿಡುವುದರೊಂದಿಗೆ ಆರಂಭವಾಗುವ ಈ ಕಾದಂಬರಿ ಸರಣಿಯಲ್ಲಿ ಬ್ರಿಟಿಷ್ ಭಾರತದಿಂದ ಆರಂಭಿಸಿ, ತುರ್ತು ಪರಿಸ್ಥಿತಿಯ ನಂತರದ ವಿಷಯಗಳೂ ಕಾಲ್ಪನಿಕ ಕತೆ ಎಂಬಂತೆ ಮೂಡಿ ಬಂದಿವೆ. ಪಟ್ಟು ಹಿಡಿದು ಓದುವುದಾದರೆ ಬ್ರಿಟಿಷ್ ಪೂರ್ವ, ಬ್ರಿಟಿಷರ ಅವಧಿ ಮತ್ತು ಬ್ರಿಟಿಷ್ ನಂತರ ಭಾರತದ ಬದುಕು ಇಲ್ಲಿ ಅನಾವರಣ ಆಗುತ್ತ ಬಂದಿದೆ.

ಕಾಡು ದೇವರ ಬೆಟ್ಟದ ಎಲ್ಲ ಸಂಪುಟಗಳಲ್ಲಿಯೂ ಗಾಢವಾಗಿ ಕಾಡುವುದು, ಪ್ರಕೃತಿ. ಇಲ್ಲಿ ಬೆಟ್ಟದ ಪ್ರಕೃತಿ ಎಂದು ಅರ್ಥೈಸಬೇಕಾಗಿಲ್ಲ. ಜನರ ಗುಣಸ್ವಭಾವದ ಪ್ರಕೃತಿ. ಸಣ್ಣತನ, ದೊಡ್ಡತನ, ಔದಾರ್ಯ, ಉತ್ತರೋತ್ತರ ಬೆಳೆಯುವ ಮಹತ್ವಾಕಾಂಕ್ಷಿಗಳಲ್ಲಿ ಇಣುಕುವ ಹುನ್ನಾರ, ಸಮರ್ಪಣಾ ಭಾವ, ರಾಜಕೀಯ ಗದ್ದುಗೆಗಾಗಿ ನಡೆಯುವ ಕಸರತ್ತು, ಯಾರ ಹಂಗಿಲ್ಲದೆ ಬದುಕುವ ಸ್ವಾಭಿಮಾನಿ ಜೀವಗಳು–ಹೀಗೆ ನೂರಾರು, ಸಾವಿರಾರು ಜನರ ಮುಖಗಳು ಓದುತ್ತ ಹೋದಂತೆ ಕಣ್ಮುಂದೆ ಹಾದು ಹೋಗುತ್ತವೆ.

ಕಾಡು ದೇವರ ಬೆಟ್ಟ ಕಾದಂಬರಿ ಊರುಕೇರಿಗಳ ಎಲ್ಲ ಜೀವಗಳನ್ನೂ, ಜೀವನವನ್ನೂ ವಿಶ್ಲೇಷಿಸುತ್ತ ಹೋಗುತ್ತದೆ. ಬಡತನ–ಒಡೆತನ, ಶೋಷಕರ ಅಹಂಕಾರ, ಶೋಷಿತರ ಅಸಹಾಯಕತನ ಎಲ್ಲವೂ ಇಲ್ಲಿ ಪಾತ್ರಗಳಲ್ಲಿ ಜೀವತಳೆದಿವೆ. ಪ್ರಜಾಸತ್ತೆ ಬಂದರೂ ಈ ಗುಣಗಳೇನೂ ನಿರ್ಮೂಲನೆಯಾಗುವುದಿಲ್ಲ. ಮನುಷ್ಯ ಸ್ವಭಾವದ ಮೂಲ ಗುಣಗಳು ಹೇಗೆ ಮತ್ತು ಎಂಥ ವ್ಯವಸ್ಥೆಗಳನ್ನು ಸೃಷ್ಟಿಸುತ್ತ ಹೋಗುತ್ತದೆ ಎಂಬುದು ಅರಿವಿಗೂ, ಅನುಭವಕ್ಕೂ ಬರುವಂತೆ ಮಾಡುತ್ತವೆ ಈ ಸಂಪುಟಗಳು.

'ಕೊನೆಯಿಲ್ಲ– ಮೊದಲಿಲ್ಲ' ಎಂಬ ಅಡಿಟಿಪ್ಪಣಿಯೊಂದಿಗೆ ಆರಂಭವಾಗುವ ಕಥನ ಹುಡುಕಾಟದಲ್ಲಿಯೇ ತೊಡಗಿಕೊಳ್ಳುತ್ತದೆ. 'ಬರಿದಾದ ಕಾಡು ಬರಿದಾದ ಬದುಕು'; ಹಿಂದಕ್ಕೆ ಹೋಗುವಂತಿಲ್ಲ, ಮುಂದಕ್ಕೆ ದಾರಿ ಕಾಣುವಂತಿಲ್ಲ; ಮಹಾಭಾರತವೋ ರಾಮಾಯಣವೋ; ಶ್ವೇತಭವನದ ಶಾಕುಂತಲೆ ಎಂಬ ಐದು ಸಂಪುಟಗಳಲ್ಲಿ ಕಾದಂಬರಿಯು ಸವಿಸ್ತಾರವಾಗಿ ಹರಡಿಕೊಳ್ಳುತ್ತದೆ. ಈ ಸಂಪುಟಗಳನ್ನು ಬಿಡಿಯಾಗಿಯೂ ಖರೀದಿಸಬಹುದಾಗಿದೆ. ₹560–₹680ರ ಬೆಲೆಯನ್ನು ನಿಗದಿ ಪಡಿಸಲಾಗಿದೆ.

ಪಟ್ಟು ಹಿಡಿದು ಒಂದೇ ಗುಕ್ಕಿನಲ್ಲಿ ಓದಿದರೆ ಇಡಿಯಾಗಿ ದಕ್ಕಬಹುದು. ಇಲ್ಲದಿದ್ದರೆ ಪ್ರತಿ ಅಧ್ಯಾಯವೂ ಇತಿಹಾಸದ ಕೆಲವು ವಿದ್ಯಮಾನಗಳೊಂದಿಗೆ ತಳಕು ಹಾಕಿಕೊಂಡಿರುವುದರಿಂದ ಗ್ರಹಿಸುವಾಗ ಕಾಲ್ಪನಿಕ ಕಾದಂಬರಿಗಿಂತಲೂ ಹೆಚ್ಚಾಗಿ ಆ ಘಟನೆಗಳೇ ಎದೆಗಿಳಿಯುತ್ತವೆ.

ಲೇಖಕರ ಅಪಾರ ಅನುಭವ ಮತ್ತು ಅರಿವು ಒಟ್ಟುಗೂಡಿದ್ದರಿಂದ ಇಂಥದ್ದೊಂದು ಬೃಹತ್ ಕಾದಂಬರಿಯನ್ನು ಸೃಷ್ಟಿಸುವುದು ಸಾಧ್ಯವಾಗಿದೆ.



ಕಾಡುದೇವರ ಬೆಟ್ಟ (5 ಸಂಪುಟಗಳು)
ಲೇ: ಸುಚೇತನ ಸ್ವರೂಪ
ಪ್ರ: ಚಿಂತನ ಚಿತ್ತಾರ
ಸಂ: 9945668082

ಪುಟ: 2400 ₹3000

ನೇಪಾಳದಲ್ಲಿ ಜಲನಾರಾಯಣರು...

ನೇಪಾಳದ ಮೂರು ಜಲನಾರಾಯಣ ಮೂರ್ತಿಗಳನ್ನು ನೋಡುವುದು ಒಂದು ಭಿನ್ನ ಅನುಭವ. ಶಿಲ್ಪ, ಪೌರಾಣಿಕತೆ ಮತ್ತು ಪ್ರಕೃತಿಯ ಈ ಸಂಗಮದ ವೀಕ್ಷಣೆ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುತ್ತದೆ.

• ಚಿತ್ರ–ಬರಹ: ಕೆ.ಪಿ.ಸತ್ಯನಾರಾಯಣ


ಗಲೇಶ್ವರ್ ದೇವಾಲಯದ ಜಲನಾರಾಯಣ ಮೂರ್ತಿ

ಕಠ್ಮಂಡುವಿನ ಬೆಳಗಿನ ಮಂಜು ಇನ್ನೂ ಸಂಪೂರ್ಣವಾಗಿ ಕರಗಿರಲಿಲ್ಲ. ಶಿವಪುರಿ ಬೆಟ್ಟದ ಬುಡದಲ್ಲಿ, ನಿಶ್ಶಬ್ದ ನೀರಿನ ಕೊಳದ ಮಧ್ಯೆ, ಶೇಷನಾಗನ ಹೆಡೆಗಳ ಮೇಲೆ ವಿಶ್ರಾಂತಿ ಭಂಗಿಯಲ್ಲಿರುವ ವಿಷ್ಣುವಿನ ವಿಗ್ರಹ. ಮೊದಲ ನೋಟಕ್ಕೆ ಅದು ಕೇವಲ ಶಿಲ್ಪವಲ್ಲ, ಕಾಲವೇ ಕ್ಷಣಕ್ಕೊಂದು ವಿರಾಮ ತೆಗೆದುಕೊಂಡಂತೆ ಅನಿಸಿತು.

ನೇಪಾಳ ಪ್ರವಾಸದಲ್ಲಿ ನಾವು ಮುಕ್ತಿನಾಥ, ಪಶುಪತಿನಾಥ ಮುಂತಾದ ಪ್ರಸಿದ್ಧ ದೇವಾಲಯಗಳನ್ನು ಕಂಡಿದ್ದೇವೆ. ಆದರೆ ಮನಸ್ಸಿನಲ್ಲಿ ಅಚ್ಚೊತ್ತಿದ ಅನುಭವ 'ಜಲನಾರಾಯಣ' ಎಂಬ ಈ ಅಪರೂಪ. ಮೂರು ಬೇರೆ ಸ್ಥಳಗಳಲ್ಲಿ ಕಂಡ ಈ ಮೂರ್ತಿಗಳು, ಒಂದೇ ದೇವರ ವಿಭಿನ್ನ ನಿಶ್ಶಬ್ದ ಪ್ರತಿಬಿಂಬಗಳಂತೆ ಭಾಸವಾದವು. ವಿಶೇಷವೆಂದರೆ, ಮೂರೂ ಸ್ಥಳಗಳಲ್ಲೂ ವಿಷ್ಣುವಿನ ಈ ರೂಪ ಶಿವನ ಐತಿಹ್ಯಗಳೊಂದಿಗೆ ನಿಕಟವಾಗಿ ಜೋಡಿಕೊಂಡಿದೆ.

ಬುಡಾನೀಲಕಂಠ

ಕಠ್ಮಂಡುವಿನಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿರುವ ಬುಡಾನೀಲಕಂಠ ದೇವಾಲಯ, ಜಲನಾರಾಯಣ ಮೂರ್ತಿಗಳಲ್ಲಿ ಅತ್ಯಂತ ವೈಭವಶಾಲಿ. ಸುಮಾರು ಐದು ಮೀಟರ್ ಉದ್ದದ ಈ ವಿಷ್ಣುವಿನ ವಿಗ್ರಹ, ಹನ್ನೊಂದು ಹೆಡೆಗಳ ಶೇಷನಾಗನ ಮೇಲೆ ಮಲಗಿದ್ದು, ಶಂಖ-ಚಕ್ರ-ಗದಾಧಾರಿಯಾಗಿ ಶಿಲ್ಪಿತವಾಗಿದೆ.

ಒಂದೇ ಕಲ್ಲಿನಲ್ಲಿ ಕೆತ್ತಲ್ಪಟ್ಟ ಈ ವಿಗ್ರಹವನ್ನು 'ಜಲಶಯನ ವಿಷ್ಣು' ಎಂದೂ ಕರೆಯುತ್ತಾರೆ. ನೀರಿನಿಂದ ತುಂಬಿದ ಕೊಳದ ಮಧ್ಯೆ, ತೆರೆದ ಆಕಾಶದಡಿ ಮಲಗಿರುವ ಈ ದೇವರು ಗೋಡೆ-ಗೋಪುರಗಳ ಬಂಧನವಿಲ್ಲದ ದೇವಾಲಯದ ಅನನ್ಯ ಅನುಭವವನ್ನು ನೀಡುತ್ತದೆ.

ಈ ಮೂರ್ತಿಯ ಸುತ್ತ ಹಲವು ದಂತಕಥೆಗಳಿವೆ. ರೈತನೊಬ್ಬ ಹೊಲ ಉಳುಮೆ ಮಾಡುತ್ತಿದ್ದಾಗ, ನೇಗಿಲು ತಗುಲಿ ರಕ್ತಸ್ರಾವವಾದ ಶಿಲೆಯನ್ನು ಕಂಡು, ನಂತರ ಅದನ್ನು ನೀರಿನ ಕೊಳದಲ್ಲಿ ಪ್ರತಿಷ್ಠಾಪಿಸಿದ ಕಥೆ ಜನಪ್ರಿಯ. ಮತ್ತೊಂದು ನಂಬಿಕೆಯ ಪ್ರಕಾರ, ಈ ಮೂರ್ತಿಯನ್ನು ದರ್ಶನ ಮಾಡಿದ ನೇಪಾಳದ ಒಬ್ಬ ದೊರೆ ಅಕಾಲಿಕವಾಗಿ ಮೃತನಾದ ಕಾರಣದಿಂದ, ರಾಜರು ಈ ದೇವರನ್ನು ದರ್ಶನ ಮಾಡುವುದಿಲ್ಲವೆಂಬ ವಿಚಿತ್ರ ಸಂಪ್ರದಾಯವೂ ಇದೆ.

ಕಾರ್ತಿಕ ಮಾಸದ ಹರಿಬೋಧಿನಿ ಏಕಾದಶಿಯಂದು ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ವಿಷ್ಣುವಿನ ನಾಲ್ಕು ತಿಂಗಳ ಯೋಗನಿದ್ರೆಯ ಅಂತ್ಯವನ್ನು ಸೂಚಿಸುವ ಈ ದಿನ, 'ನಿದ್ರಿಸುವ ದೇವರನ್ನು ಎಬ್ಬಿಸುವ' ಆಚರಣೆ. ಈ ಸ್ಥಳದ ಆಧ್ಯಾತ್ಮಿಕ ಮರ್ಮವನ್ನು ಮತ್ತಷ್ಟು ಗಾಢಗೊಳಿಸುತ್ತದೆ.

ಇದಕ್ಕೆ ಮತ್ತೊಂದು ಪೌರಾಣಿಕ ಹಿನ್ನೆಲೆಯೂ ಇದೆ. ಸಮುದ್ರಮಥನದ ಸಮಯದಲ್ಲಿ ಹೊರಬಂದ ವಿಷವನ್ನು ಕುಡಿದ ಶಿವನ ದಾಹ ನೀಗಿಸಲು, ಆತ ತನ್ನ ತ್ರಿಶೂಲವನ್ನು ನೆಲಕ್ಕೆ ಹೊಡೆದಾಗ ಹುಟ್ಟಿದ ಸಿಹಿನೀರಿನ ಬುಗ್ಗೆ–ಅದೇ ಗೋಸೈನ್‌ಕುಂಡ್ ಸರೋವರ. ಆ ಸರೋವರದ ನೀರೇ ಬುಡಾನೀಲಕಂಠದ ಈ ಕೊಳಕ್ಕೆ ಜೀವನಾಡಿಯಂತೆ ಹರಿದು ಬರುತ್ತದೆ ಎಂದು ನಂಬಲಾಗಿದೆ.

ಕಠ್ಮಂಡು ಸಮೀಪ ಬುಡಾನೀಲಕಂಠ ದೇವಾಲಯದ ಜಲನಾರಾಯಣ

ಗುಪ್ತೇಶ್ವರ ಮಹಾದೇವ ದೇವಾಲಯದ ಸಮೀಪವಿರುವ ಜಲನಾರಾಯಣ ಮೂರ್ತಿ

ಬೌದ್ಧರು ಸಹ ಈ ವಿಗ್ರಹವನ್ನು ಭಗವಾನ್ ಬುದ್ಧನ ರೂಪವೆಂದು ಗೌರವಿಸುವುದು, ಈ ಸ್ಥಳದ ಸಾಂಸ್ಕೃತಿಕ ಸಮನ್ವಯತೆಯನ್ನು ಸೂಚಿಸುತ್ತದೆ.

ಪ್ರವಾಸ

ಗಲೇಶ್ವರ್

ಬುಡಾನೀಲಕಂಠದ ವೈಭವದ ನಂತರ, ಕಾಳಿ ಗಂಡಕಿ ನದಿಯ ದಂಡೆಯಲ್ಲಿರುವ ಗಲೇಶ್ವರ್ ದೇವಾಲಯದ ಜಲನಾರಾಯಣ ಮೂರ್ತಿ ಮತ್ತೊಂದು ಪ್ರಶಾಂತ ಅನುಭವ ನೀಡುತ್ತದೆ. ಮ್ಯಾಗಡಿ ಜಿಲ್ಲೆಯ ಬೇಣಿ ಸಮೀಪದ ಈ ಸ್ಥಳ, ದಕ್ಷಯಜ್ಞದ ಪೌರಾಣಿಕ ಕಥೆಯೊಂದಿಗೆ ಬೆಸೆದುಕೊಂಡಿದೆ. ಪಾರ್ವತಿಯ ದೇಹದ ಕಂಠಭಾಗ ಇಲ್ಲಿ ಬಿದ್ದಿತೆಂಬ ನಂಬಿಕೆಯಿಂದ 'ಗಲೇಶ್ವರ್' ಎಂಬ ಹೆಸರು ಬಂದಿದೆ.

ಬೃಹತ್ ಬಂಡೆಯ ಮೇಲೆ ಇರುವ ದೇವಾಲಯ, ಸುತ್ತಮುತ್ತಲಿನ ಪ್ರಕೃತಿಯ ಮೌನದೊಂದಿಗೆ ಬೆರೆತು ಹೋಗುತ್ತದೆ. ಇದೇ ಬಂಡೆಯ ಮೇಲಿರುವ ಜಲನಾರಾಯಣ ಮೂರ್ತಿ, ಬುಡಾನೀಲಕಂಠದಷ್ಟು ಭವ್ಯವಾಗದಿದ್ದರೂ, ಅದೇ ಶೇಷಶಯನ ಭಂಗಿಯನ್ನು ಹೊತ್ತುಕೊಂಡಿದೆ.

ಕೊಳದ ಬಳಿಯಲ್ಲಿರುವ ರುದ್ರಾಕ್ಷಿ ಮರ, ಈ ಸ್ಥಳದ ಆಧ್ಯಾತ್ಮಿಕ ವಾತಾವರಣವನ್ನು ಮತ್ತಷ್ಟು ಗಾಢಗೊಳಿಸುತ್ತದೆ. ಇಲ್ಲಿ ಭಕ್ತಿ ಮತ್ತು ಪ್ರಕೃತಿ ಎರಡೂ ಒಂದೇ ನಾದದಲ್ಲಿ ಕೇಳಿಸುತ್ತವೆ.

ಗುಪ್ತೇಶ್ವರ

ಪೊಖರಾದ ಗುಪ್ತೇಶ್ವರ ಮಹಾದೇವ ದೇವಾಲಯ, ಈ ಪ್ರವಾಸದ ಮೂರನೇ ಆಯಾಮ. ನೆಲದಡಿಯ ಗುಹೆಯೊಳಗೆ, ಸುಮಾರು ನೂರು ಅಡಿ ಆಳದಲ್ಲಿ ಇರುವ ಈ ಶಿವ ಸನ್ನಿಧಿ ಕತ್ತಲಿನ ಮತ್ತು ನೀರಿನ ನಿಶ್ಶಬ್ದ ಸಂಗಮ.

ಗುಹೆಯೊಳಗಿನ ನಿರಂತರ ನೀರಿನ ತೊಟ್ಟಿಕ್ಕುವಿಕೆ, ದೂರದಲ್ಲಿ ಕೇಳಿಸುವ ಜಲಧಾರೆಯ ಗರ್ಜನೆ ಈ ಎಲ್ಲವೂ ಒಂದು ಮರ್ಮಭರಿತ ವಾತಾವರಣವನ್ನು ಸೃಷ್ಟಿಸುತ್ತವೆ.

ಇದಕ್ಕೆ ಸಮೀಪದಲ್ಲೇ, ಭೂಮಟ್ಟದಲ್ಲಿರುವ ಜಲನಾರಾಯಣ ಮೂರ್ತಿ, ಉಳಿದ ಎರಡು ಸ್ಥಳಗಳಂತೆಯೇ ಶೇಷಶಯನ ರೂಪದಲ್ಲಿ ಕಾಣಿಸುತ್ತದೆ. ಭೂಗರ್ಭದ ಶಿವ ಮತ್ತು ಮೇಲ್ಮೈಯ ವಿಷ್ಣು–ಇದು ದೇವತಾತ್ಮಕ ದ್ವಂದ್ವದ ಒಂದು ಸೂಕ್ಷ್ಮ ಪ್ರತೀಕದಂತೆ ತೋರುತ್ತದೆ.

ನೇಪಾಳದ ಈ ಮೂರು ಜಲನಾರಾಯಣ ಮೂರ್ತಿಗಳನ್ನು ನೋಡುವುದು ಕೇವಲ ಪ್ರವಾಸವಲ್ಲ; ಒಂದು ಆಂತರಿಕ ಸಂವಾದ.

ನೀರಿನ ಮಡಿಲಲ್ಲಿ ಮಲಗಿರುವ ದೇವರು, ಕಾಲದ ಹರಿವಿನಂತೆ ನಿಶ್ಶಬ್ದವಾಗಿ ನಮ್ಮನ್ನು ನೋಡುತ್ತಿರುವಂತೆ ಅನಿಸುತ್ತದೆ. ಶಿಲ್ಪ, ಪೌರಾಣಿಕತೆ ಮತ್ತು ಪ್ರಕೃತಿ–ಈ ಮೂರೂ ಒಂದಾಗಿ ಮೂಡಿಸಿದ ಈ ಅನುಭವ, ಮನಸ್ಸಿನಲ್ಲಿ ದೀರ್ಘಕಾಲ ಉಳಿಯುತ್ತದೆ.

ಆಶ್ಚರ್ಯವೆಂದರೆ, 'ನೇಪಾಳದ ಜಲನಾರಾಯಣ' ಎಂಬ ಹೆಸರಿನಿಂದ ಭಾರತದಲ್ಲಿಯೂ ಕೆಲವು ಸ್ಥಳಗಳಲ್ಲಿ ಇಂತಹ ವಿಗ್ರಹಗಳು ಕಾಣಿಸುತ್ತವೆ. ಆದರೆ ಮೂಲ ಅನುಭವ–ಆ ನಿಶ್ಶಬ್ದ ನೀರಿನ ಕೊಳದ ಮಧ್ಯೆ, ಶೇಷನ ಮೇಲೆ ಮಲಗಿರುವ ವಿಷ್ಣುವಿನ ದರ್ಶನ–ಅದು ನೇಪಾಳದಲ್ಲೇ ತನ್ನ ಸಂಪೂರ್ಣ ಅರ್ಥವನ್ನು ಪಡೆಯುತ್ತದೆ.

ಜಲನಾರಾಯಣ ಮೂರ್ತಿಗಳು ಕೇವಲ ಕಲ್ಲಿನ ಶಿಲ್ಪಗಳಲ್ಲ; ಅವು ನಿದ್ರೆ, ನೀರು ಮತ್ತು ನಂಬಿಕೆಯ ನಡುವೆ ನಡೆಯುವ ಒಂದು ನಿಶ್ಶಬ್ದ ಮಾತುಕತೆ. ❖

ದೇವರ ಚಿತ್ರಗಳಿಗೂ...

10ನೇ ಪುಟದಿಂದ...

ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಆವರಣದಲ್ಲಿ ಬಳಿಕ ಮತ್ತೊಂದು ದೃಶ್ಯ ಕಾಣಿಸಿತು.

ಬೆಳಗಿನ ಮೃದುವಾದ ಸೂರ್ಯನ ಬೆಳಕಿನಲ್ಲಿ ವಸ್ತುಗಳನ್ನು ವಾಹನದಲ್ಲಿ ತರಲಾಗಿತ್ತು. ಧೂಪದ ಹೊಗೆ ನಿಧಾನವಾಗಿ ಮೇಲಕ್ಕೆ ಏರುತ್ತಿತ್ತು. ಅರ್ಚಕರು ಉದ್ವಾಸನಾ ಪೂಜೆ ನೆರವೇರಿಸಿದರು. ಈ ಪೂಜೆ ಮುಗಿದ ಬಳಿಕ ಈ ವಸ್ತುಗಳಲ್ಲಿರುವ ಚೈತನ್ಯ ವಿದಾಯವಾಗುತ್ತದೆ ಎಂಬುದು ನಂಬಿಕೆ.

ಬಳಿಕ ಸ್ವಯಂಸೇವಕರು ಕೆಲಸಕ್ಕೆ ಇಳಿದರು. ಒಂದು ಕಡೆ ಫ್ರೇಮ್‌ಗಳಿಂದ ದೇವರ ಚಿತ್ರಗಳನ್ನು ಬೇರ್ಪಡಿಸಲಾಗುತ್ತಿತ್ತು. ಇನ್ನೊಂದು ಕಡೆ ಲೋಹದ ವಸ್ತುಗಳನ್ನು ವಿಂಗಡಿಸುತ್ತಿದ್ದರು. ಗಾಜಿನ ತುಂಡುಗಳನ್ನು ಎಚ್ಚರಿಕೆಯಿಂದ ಪ್ರತ್ಯೇಕಿಸಲಾಗುತ್ತಿತ್ತು.

ಕಾಗದದ ದೇವರ ಚಿತ್ರಗಳನ್ನು ನೀರಿನಲ್ಲಿ ತೊಳೆದಾಗ ಬಣ್ಣಗಳು ನಿಧಾನವಾಗಿ ಕರಗುತ್ತಾ ಹೋಗುತ್ತಿದ್ದವು. ತೇವಗೊಂಡ ಕಾಗದದ ಮೇಲೆ ಮೂಡಿದ್ದ ಕೃಷ್ಣ, ಲಕ್ಷ್ಮೀ, ಗಣೇಶ ದೇವರ ಮುಖಗಳು ನಿಧಾನವಾಗಿ ಮಸುಕಾಗುತ್ತಿದ್ದವು. ದೇವಸ್ಥಾನದ ತೋಟದಲ್ಲಿ ಗುಂಡಿ ತೋಡಿ ಆ ಕಾಗದಗಳನ್ನು ಗೌರವದಿಂದ ಹೂಳಲಾಯಿತು. ಬಳಿಕ ಅದರ ಮೇಲೆ ತುಳಸಿ ಗಿಡ ನೆಡಲಾಯಿತು.

ಅದು ಕೇವಲ ತ್ಯಾಜ್ಯ ವಿಲೇವಾರಿ ದೃಶ್ಯವಾಗಿರಲಿಲ್ಲ. ಭಕ್ತಿಯೊಂದು ರೂಪ ಬದಲಾಗುತ್ತಿರುವ ಕ್ಷಣದಂತೆ ಕಾಣುತ್ತಿತ್ತು.

ಧಾರ್ಮಿಕ ತ್ಯಾಜ್ಯದ ಜೊತೆಯಲ್ಲಿ ಸಿಕ್ಕ ಮರ, ಗಾಜು, ಲೋಹ ಮೊದಲಾದ ವಸ್ತುಗಳನ್ನು ಮರುಬಳಕೆ ಘಟಕಗಳಿಗೆ ಕಳುಹಿಸಲಾಯಿತು. ಮರುಬಳಕೆ ಸಾಧ್ಯವಿಲ್ಲದ ವಸ್ತುಗಳನ್ನು ಪರಿಸರಕ್ಕೆ ಹಾನಿಯಾಗದಂತೆ ವಿಲೇವಾರಿ ಮಾಡಲಾಯಿತು.

ಈ ಸಂಪೂರ್ಣ ಪ್ರಕ್ರಿಯೆಯಲ್ಲಿ ಹತ್ತು ಶಿಕ್ಷಣ ಸಂಸ್ಥೆಗಳ 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸ್ವಯಂಸೇವಕರು ಭಾಗವಹಿಸಿದ್ದರು. ಸಾವಿರಾರು ಗಂಟೆಗಳ ಶ್ರಮ ಈ ಕಾರ್ಯಕ್ಕೆ ವಿನಿಯೋಗಿಸಲಾಯಿತು.

ತ್ಯಾಜ್ಯದ ನಡುವೆ ಸಿಕ್ಕ ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆ ವಸ್ತುಗಳನ್ನು ಪ್ರತ್ಯೇಕವಾಗಿ ಸಂಸ್ಕರಿಸಲಾಯಿತು. ಸುಮಾರು ₹1 ಲಕ್ಷ ಮೌಲ್ಯದ ಈ ಲೋಹಗಳನ್ನು ಬಳಿಕ ಕದ್ರಿ ಮಂಜುನಾಥ ದೇವಸ್ಥಾನಕ್ಕೆ ಸಮರ್ಪಿಸಲಾಯಿತು.

'ತ್ಯಾಜ್ಯವನ್ನು ಸಮುದ್ರಕ್ಕೆ ಎಸೆಯಲಿಲ್ಲ. ಡಂಪ್ ಯಾರ್ಡ್‌ಗೆ ಹಾಕಲಿಲ್ಲ. ಎಲ್ಲವನ್ನೂ ವೈಜ್ಞಾನಿಕವಾಗಿ ವಿಲೇವಾರಿ ಮಾಡಿದೆವು' ಎಂದು ಸ್ವಚ್ಛ ಮಂಗಳೂರು ಅಭಿಯಾನದ ಸಂಯೋಜಕ ರಂಜನ್ ಬೆಳ್ಳರ್ಪಾಡಿ ಹೇಳುತ್ತಾರೆ.

ಈಗ 'ವಿಸರ್ಜನೆ' ಮಂಗಳೂರಿನ ಗಡಿಯನ್ನು ದಾಟುತ್ತಿದೆ. ಬಂಟ್ವಾಳ, ಪುತ್ತೂರು ಸೇರಿದಂತೆ ಹಲವೆಡೆಗಳಿಂದ ಕರೆಗಳು ಬರುತ್ತಿವೆ. 'ನಮ್ಮ ಊರಲ್ಲೂ ಇಂತಹ ವ್ಯವಸ್ಥೆ ಬೇಕು' ಎಂದು ದೇವಸ್ಥಾನಗಳು, ಭಜನಾ ಮಂಡಳಿಗಳು ಕೇಳುತ್ತಿವೆ. ಪ್ರತಿ ವರ್ಷ ಈ ಅಭಿಯಾನ ನಡೆಸುವ ಯೋಜನೆಯೂ ರೂಪುಗೊಂಡಿದೆ.

ಸ್ವಾಮಿ ಜಿತಕಾಮಾನಂದಜಿ ಅವರ ಮಾತಿನಲ್ಲಿ, 'ಇದು ಬರೀ ತ್ಯಾಜ್ಯ ನಿರ್ವಹಣೆಯ ಅಭಿಯಾನವಲ್ಲ. ಸಂಪ್ರದಾಯವನ್ನು ಗೌರವಿಸುತ್ತಲೇ ಪರಿಸರ ಸಂರಕ್ಷಿಸುವ ಸಾಮೂಹಿಕ ಬದ್ಧತೆಯ ಚಳವಳಿ.'

ಇದು ಕೇವಲ ಸ್ವಚ್ಛತಾ ಅಭಿಯಾನವಲ್ಲ. ದೇವರನ್ನು ಪೂಜಿಸುವ ಸಮಾಜ, ದೇವರ ಚಿತ್ರವನ್ನೂ ಗೌರವದಿಂದ ವಿದಾಯ ಹೇಳಲು ಕಲಿಯುತ್ತಿದೆ. ❖

ಸರ್ಕಾರ ಕೈಜೋಡಿಸಲಿ

ಧಾರ್ಮಿಕ ತ್ಯಾಜ್ಯವನ್ನು ಗೌರವದಿಂದ ವಿಲೇವಾರಿ ಮಾಡಲು ಜನ ಬಯಸಿದರೂ, ಅದಕ್ಕೆ ಸೂಕ್ತ ವ್ಯವಸ್ಥೆ ಇಲ್ಲ. ಈ ಹಿನ್ನೆಲೆಯಲ್ಲಿ ಪ್ರತಿವರ್ಷ ಡಿಸೆಂಬರ್‌ನಲ್ಲಿ 'ವಿಸರ್ಜನೆ' ಅಭಿಯಾನ ನಡೆಸಲು ನಿರ್ಧರಿಸಿದ್ದೇವೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೂ ಇದನ್ನು ವಿಸ್ತರಿಸುವ ಯೋಜನೆ ಇದೆ.

ಧಾರ್ಮಿಕ ದತ್ತಿ ಇಲಾಖೆ ದೇವಸ್ಥಾನಗಳಲ್ಲಿ ಶಾಶ್ವತ 'ಧಾರ್ಮಿಕ ತ್ಯಾಜ್ಯ ವಿಲೇವಾರಿ ಹುಂಡಿ'ಗಳನ್ನು ಸ್ಥಾಪಿಸಿದರೆ ಭಕ್ತರಿಗೆ ಅನುಕೂಲವಾಗುತ್ತದೆ. ಇದರಿಂದ ಧಾರ್ಮಿಕ ತ್ಯಾಜ್ಯದ ಸಮಸ್ಯೆಗೆ ಪರಿಹಾರ ದೊರೆಯಬಹುದು. ಸರ್ಕಾರ, ಸ್ಥಳೀಯ ಸಂಸ್ಥೆಗಳು ಹಾಗೂ ಸಂಘ–ಸಂಸ್ಥೆಗಳು ಮುಂದೆ ಬಂದರೆ ಅವರಿಗೆ ಮಾರ್ಗದರ್ಶನ ನೀಡಲು ನಾವು ಸಿದ್ಧರಿದ್ದೇವೆ.

ರಂಜನ್ ಬೆಳ್ಳರ್ಪಾಡಿ, ಸಂಯೋಜಕ, ಸ್ವಚ್ಛ ಮಂಗಳೂರು ಅಭಿಯಾನ

'ವಿಸರ್ಜನೆ' ಅಭಿಯಾನಕ್ಕೆ ಸ್ವಾಮಿ ನಿತ್ಯಸ್ಥಾನಂದಜಿ ಅವರು ಚಾಲನೆ ನೀಡಿದ ಸಂದರ್ಭ...

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಬಾತ್‌ಟಬ್‌ನಲ್ಲಿ ಜೀವಂತ ಮೀನು!

majakoora@prajavani.co.in

ಡಣ್ಣ ಚಕ್ಕು
ಕೀಶ್ರಷ್ಣ ಕಥೆಯ
ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಮಾರುಕಟ್ಟೆಯಿಂದ ಬಾತ್‌ಟಬ್‌ನಲ್ಲಿ ತೇಲುವ ಪ್ಲಾಸ್ಟಿಕ್ ಮೀನುಗಳನ್ನು ತಂದಿದ್ದ. ತಾನು ಸ್ನಾನಕ್ಕಿಳಿದಾಗ ಅವುಗಳನ್ನು ಟಬ್ ಒಳಗೆ ಹಾಕಿದ. ಸ್ನಾನ ಮಾಡುತ್ತಾ ಆ ಟಬ್ ಒಳಗೆ ನೀರು ತುಂಬಿಕೊಂಡಿತು. ಕೆಲ ಕ್ಷಣದಲ್ಲೇ ಆ ಮೀನುಗಳಿಗೆ ಜೀವ ಬಂದು ಅತ್ತಿಂದಿತ್ತ ಈಜುತ್ತಾ ಕುಪ್ಪಳಿಸಲು ಆರಂಭಿಸಿದವು. ಆಶ್ಚರ್ಯಗೊಂಡ ಗುಂಡ ಅವುಗಳೊಂದಿಗೆ ಖುಷಿಯಿಂದಲೇ ಆಟವಾಡಿದ.

ಗಣಿತದಲ್ಲಿ ಗರ್ದಿ ಗಮ್ಮತ್ತು

+ — × % ÷

ಅಭಿನವ 45 ರೂಪಾಯಿಯ ವಸ್ತು ಖರೀದಿಸಿ 10 ರೂಪಾಯಿ, 5 ರೂಪಾಯಿ, 2 ರೂಪಾಯಿ 1 ರೂಪಾಯಿಗಳ ಒಟ್ಟು 11 ನೋಟುಗಳನ್ನು ಕೊಡುತ್ತಾನೆ. ಹಾಗಾದರೆ ಪ್ರತಿ ಮೌಲ್ಯದ ಒಟ್ಟು ಎಷ್ಟು ನೋಟು ಕೊಡುತ್ತಾನೆ?

1	₹10	____ನೋಟು	____ಮೌಲ್ಯ
2	₹5	____ನೋಟು	____ಮೌಲ್ಯ
3	₹2	____ನೋಟು	____ಮೌಲ್ಯ
4	₹1	____ನೋಟು	____ಮೌಲ್ಯ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ

ಇಲ್ಲಿರುವ ಶಬ್ದಕ್ಕೆ ಕೊಟ್ಟಿರುವ ಅಕ್ಷರವನ್ನು ಸೇರಿಸಿ ಐದಕ್ಷರದ ಪದ ಮಾಡಿ.

ಕಾಕಾವಶ+ಲಾ=___________

ವರ್ಡ್‌ಗೇಮ್

ಇಲ್ಲಿರುವ ಎರಡು ಪದಗಳ ಅಕ್ಷರಕ್ಕೆ ಕೊಟ್ಟಿರುವ ಅಕ್ಷರ ಸೇರಿಸಿ ಒಂದು ಇಂಗ್ಲಿಷ್ ಪದ ಮಾಡಿ.

CAP+USE+L=___________

ಬ್ರೇನ್‌ವೀಟಾ ಆಟ

ಇಂಗ್ಲಿಷ್ ಮೂಲಾಕ್ಷರಗಳನ್ನು ಬರೆದು ಅವುಗಳಲ್ಲಿನ ಕ್ರಮವಾದ ಮೂರು ಅಕ್ಷರ ಆಯ್ಕೆ ಮಾಡಿಕೊಂಡು ಅವುಗಳಿಗೆ ಅಕ್ಷರ ಜೋಡಿಸಿ ಇಂಗ್ಲಿಷ್ ಪದ ರಚಿಸಿ.

ಪುಟಾಣಿ ಪದಬಂಧ

1	ಸು			ರ	ಸುರಲೋಕದಲ್ಲಿ ಬಹಳ ಇಂಪಾದ
2	ಸ			ರ	ಸರವನ್ನು ತೊಳೆಯುವ ಸೋಪು
3	ಪ			ರ	ಪರರಿಗೆ ಮಾಡುವ ನಿವಾರಣೆ
4	ಸ			ತ್ತು	ಸತ್ತು ಹೋಗುವ ಮೊದಲೇ ಪಡೆದ ಸೌಕರ್ಯ
5	ಹ			ರಿ	ಹರಿ ನಡೆದ ದೂರ
6	ಭಾ			ರ	ಭಾರ ಹೊತ್ತುಕೊಂಡು ಮಾಡಿದ ಅನುವಾದ
7	ವ			ನ	ವನದಿಂದ ಬರುವ ಆದಾಯ
8	ಕ			ದ	ಕದದ ಮೇಲೂ ಕಲೆಯನ್ನು ನಿರ್ಮಿಸಬಲ್ಲಾತ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನರಿ	+	ನೀಗು	+	ಣ	=	
2	ಸಳಿ	+	ಬಕ	+	ಭೆ	=	
3	ನರಿ	+	ಗವಿ	+	ಲು	=	
4	ಹುಗಿ	+	ಜಾಡು	+	ಣ	=	
5	ಕರಿ	+	ಸಾಣೆ	+	ಕು	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ಮಾವಿನ' ಪದದ ಮುಂದೆ ಮಾವಿನ ಮರಕ್ಕೆ ಹೊಂದುವ ಎರಡಕ್ಷರದ ಪದ ತುಂಬಿ

1	ಮಾವಿನ	
2	ಮಾವಿನ	
3	ಮಾವಿನ	
4	ಮಾವಿನ	
5	ಮಾವಿನ	
6	ಮಾವಿನ	
7	ಮಾವಿನ	
8	ಮಾವಿನ	
9	ಮಾವಿನ	
10	ಮಾವಿನ	

2. ಇಲ್ಲಿ ಕೊಟ್ಟಿರುವ 'ಬುದ್ಧಿ' ಎಂಬ ಪದಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಬು	ದ್ಧಿ		
2	ಬು	ದ್ಧಿ		
3	ಬು	ದ್ಧಿ		
4	ಬು	ದ್ಧಿ		
5	ಬು	ದ್ಧಿ		

ಅಕ್ಷರ ಪಟ್ಟಿ

ವಂ	ವಾ	ಬ	ಹೀ	ಶ
ದ	ತ	ಕ್ತಿ	ನ	ಲ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ಭೀಷ್ಮಪ್ರತಿಜ್ಞೆ 2.ಸಭೆಬಳಿಕ
3.ಬೀದಿಜಗಳ 4.ಗುರುಕಾಣಿಕೆ
5.ಹರಕೆಕುರಿ
ಶಬ್ದಾಟ: ಮಸಾರಿನೆಲ
ವರ್ಡ್ ಗೇಮ್: WASTAGE
ಜಾಣಪದ ಆಟ 1:
ನಂದಿ–ನದಿ 2.ಹಂಸ–ಹಸ
3.ಬಂಕ–ಬಕ 4.ಕಂಸ–ಕಸ
5.ಕಂತೆ–ಕತೆ
ಜಾಣಪದ ಆಟ
2: 1.ಮನೋಹರ
2.ಮನೋಧರ್ಮ
3.ಮನೋಗತ
4.ಮನೋರೋಗ
5.ಮನೋಹಾರಿ
ಗೊಂದಲ ಗಣಿತ:
1. ಬೈಕ್‌ಗೆ 2 ಚಕ್ರಗಳು, ಕಾರಿಗೆ ನಾಲ್ಕು ಚಕ್ರಗಳಂತೆ 10 ಕಾರುX 4 ಚಕ್ರಗಳು=40 ಚಕ್ರಗಳು
30 ಬೈಕ್X2 ಚಕ್ರಗಳು=60 ಚಕ್ರಗಳು.
60+40=100 ಚಕ್ರಗಳು
10+30=40 ವಾಹನಗಳು
2. 3ಬೆಕ್ಕುX3 ಕೆ.ಜಿ.=9 ಕೆ.ಜಿ.
1 ಮರಿ=1 ಕೆ.ಜಿ.
4 ಮರಿ=4 ಕೆ.ಜಿ.
9 ಕೆ.ಜಿ.+4 ಕೆ.ಜಿ.=13 ಕೆ.ಜಿ.
ಮೋಜಿನ ಇಂಗ್ಲಿಷ್:
1.BONE 2.CODE 3.CORE
4.DONE 5.GONE 6.HOPE
7.JOKE 8.MORE 9.NOTE
10.ZONE

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ವಿಶ್ವಾಸ್ ಒಣಿಮನಿ
ಮೈಸೂರು

ಅವ್ಯಕ್ತ
ಬೆಂಗಳೂರು

ಸನ್ಮಿತ ಎಸ್.
ಮಂಡ್ಯ

ಪ್ರಿಯಾ ಗೌತಮಿ
ಮೈಸೂರು

ತನುಶ್ರೀ ಅರಗಿನಶೆಟ್ಟಿ
ಬಾಗಲಕೋಟೆ

ವೆನ್ನೆಲ ಡಿ.ಆರ್.
ಬೆಂಗಳೂರು

ಆರ್‌ಸಿಬಿಗೆ ಅಗ್ರಸ್ಥಾನ ಉಳಿಸಿಕೊಳ್ಳುವ ಛಲ

ಕಿಂಗ್ಸ್‌ಗೆ ಜಯಿಸಲೇಬೇಕಾದ ಒತ್ತಡ • ವಿರಾಟ್ ಕೊಹ್ಲಿ ಮೇಲೆ ಕಣ್ಣು

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಅಭ್ಯಾಸ ಪಿಟಿಐ ಚಿತ್ರ

ಧರ್ಮಶಾಲಾ (ಪಿಟಿಐ): ಸತತ ಸೋಲುಗಳ ಸುಳಿಯಲ್ಲಿ ಸಿಲುಕಿರುವ ಪಂಜಾಬ್ ಕಿಂಗ್ಸ್ ತಂಡದ ಗಾಯದ ಮೇಲೆ ಬರೆ ಎಳೆಯಲು ರಾಯಲ್ ಚಾಲೆಂಜರ್ಸ್ ಬೆಂಗಳೂರು ಸಿದ್ಧವಾಗಿದೆ.

ಭಾನುವಾರ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ರಾಯಪುರದಲ್ಲಿ ನಡೆದಿದ್ದ ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ವಿರಾಟ್ ಕೊಹ್ಲಿ ಈ ಪಂದ್ಯದ ಪ್ರಮುಖ ಆಕರ್ಷಣೆಯಾಗಿದ್ದಾರೆ. ಧೌಲ್‌ಧಾರಾ ವಲಯದ ಪರ್ವತಶ್ರೇಣಿಗಳ ಮಧ್ಯೆ ಇರುವ ಈ ಕ್ರೀಡಾಂಗಣದಲ್ಲಿ ಕೊಹ್ಲಿ ಬ್ಯಾಟಿಂಗ್ ರಂಗೇರುವ ನಿರೀಕ್ಷೆ ಇದೆ.

ಹಾಲಿ ಚಾಂಪಿಯನ್ ಆರ್‌ಸಿಬಿ ಈ ಪಂದ್ಯದಲ್ಲಿ ಕಿಂಗ್ಸ್ ಎದುರು ಗೆಲುವಿನ ನೆಚ್ಚಿನ ತಂಡವಾಗಿದೆ. ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವು ಮೊದಲ ಏಳು ಪಂದ್ಯಗಳಲ್ಲಿ ಅಜೇಯವಾಗಿತ್ತು. ಆದರೆ ನಂತರದ ಐದು ಪಂದ್ಯಗಳಲ್ಲಿ ಸತತ ಸೋಲಿನ ಕಹಿಯುಂಡಿದೆ. ಆರನೇ ಸೋಲು ತಂಡದ ಪ್ಲೇಆಫ್ ಹಾದಿಯನ್ನು ಮುಚ್ಚಿಬಿಡುವ ಸಾಧ್ಯತೆ ಇದೆ.

200ಕ್ಕಿಂತ ಹೆಚ್ಚು ರನ್‌ಗಳ ಮೊತ್ತಗಳನ್ನು ರಕ್ಷಿಸಿಕೊಳ್ಳುವಲ್ಲಿ ಕಿಂಗ್ಸ್ ವಿಫಲವಾಗಿದೆ. ಅದರಿಂದಾಗಿ ಬೌಲಿಂಗ್ ವಿಭಾಗದಲ್ಲಿ ಆಮೂಲಾಗ್ರ ಬದಲಾವಣೆಯ ಅಗತ್ಯವಿದೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು 10ರ ಸರಾಸರಿಯಲ್ಲಿ ರನ್ ಬಿಟ್ಟುಕೊಟ್ಟರು. ಝೇವಿಯರ್ ಬಾರ್ಟ್‌ಲೆಟ್ ಮತ್ತು ಮಾರ್ಕೊ ಯಾನ್ಸೆನ್ ಅವರೂ ದುಬಾರಿಯಾಗುತ್ತಿದ್ದಾರೆ. ಅಝ್ಮತ್‌ವುಲ್ಲಾ ಒಮರ್‌ಝೈ ಅವರು ಆಲ್‌ರೌಂಡ್ ಆಟ ಪ್ರದರ್ಶಿಸಿದ್ದಾರೆ. ಸ್ಪಿನ್ನರ್ ಯಜುವೇಂದ್ರ ಚಾಹಲ್ ಕೂಡ ತಮ್ಮ ಸಾಮರ್ಥ್ಯ ಮೆರೆಯುತ್ತಿದ್ದಾರೆ. ಆದರೆ ಅವರಿಗೆ ಫೀಲ್ಡರ್‌ಗಳು ಕ್ಯಾಚ್ ಪಡೆದು ಸಹಕರಿಸಿದರೆ ತಂಡಕ್ಕೆ ಲಾಭವಾಗಬಹುದು.

ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್	V/s	ರಾಯಲ್ ಚಾಲೆಂಜರ್ಸ್ ಬೆಂಗಳೂರು
ಸಮಯ: ಮಧ್ಯಾಹ್ನ 3.30		
ಡೆಲ್ಲಿ ಕ್ಯಾಪಿಟಲ್ಸ್	V/s	ರಾಜಸ್ಥಾನ ರಾಯಲ್ಸ್
ಸಮಯ: ರಾತ್ರಿ 7.30		

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಬಲಾಬಲ	ಒಟ್ಟು ಪಂದ್ಯ 37
ಬೆಂಗಳೂರು ಗೆಲುವು	19
ಪಂಜಾಬ್ ಗೆಲುವು	18

ರಜತ್ ಪಾಟೀದಾರ್

ಆರ್‌ಸಿಬಿಯ ಆರಂಭಿಕ ಬ್ಯಾಟರ್ ಜೇಕಬ್ ಬೆಥೆಲ್ ಅವರು ಯಶಸ್ವಿ ಆಗಿಲ್ಲ. ಆದರೆ ವಿರಾಟ್ ಮತ್ತು ದೇವದತ್ತ ಪಡಿಕ್ಕಲ್ ಅವರು ಆ ಕೊರತೆಯನ್ನು ತುಂಬುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟೀದಾರ್, ಟಿಮ್ ಡೇವಿಡ್, ಜಿತೇಶ್ ಶರ್ಮಾ ಅವರು ಲಯಕ್ಕೆ ಮರಳಬೇಕಿದೆ. ಕೃಣಾಲ್ ಪಾಂಡ್ಯ ಉತ್ತಮ ಲಯದಲ್ಲಿದ್ದಾರೆ.

ಆದರೆ ಇಲ್ಲಿ ಪಂಜಾಬ್ ತಂಡದ ಬಲಿಷ್ಠ ಬ್ಯಾಟಿಂಗ್ ಪಡೆಯು, ಆರ್‌ಸಿಬಿಯ ಶ್ರೇಷ್ಠ ದರ್ಜೆಯ ಬೌಲರ್‌ಗಳನ್ನು ಹೇಗೆ ಎದುರಿಸುತ್ತಾರೆಂಬ ಕುತೂಹಲ ಗರಿಗೆದರಿದೆ. 22 ವಿಕೆಟ್ ಗಳಿಸಿರುವ ಭುವನೇಶ್ವರ್ ಕುಮಾರ್, ಆಸ್ಟ್ರೇಲಿಯಾ ತಾರೆ ಜೋಶ್ ಹೇಜಲ್‌ವುಡ್ ಅವರನ್ನು ಪವರ್‌ಪ್ಲೇಯಲ್ಲಿ ಎದುರಿಸುವ ಸವಾಲು ದೊಡ್ಡದಾಗಲಿದೆ. ಅಲ್ಲದೇ ಜೇಕಬ್ ಡಫಿ, ರಸಿಕ್ ಸಲಾಂ ದಾರ್, ಸ್ಪಿನ್ನರ್ ಸುಯಶ್ ಶರ್ಮಾ ಅವರು ಮಧ್ಯಮ ಹಂತದ ಓವರ್‌ಗಳಲ್ಲಿ ಬ್ಯಾಟರ್‌ಗಳ ನಿಯಂತ್ರಣ ಮಾಡಬಲ್ಲ ಸಮರ್ಥರು.

ಪಂಜಾಬ್ ಕಿಂಗ್ಸ್ ತಂಡದ ವೇಗಿ ಅರ್ಷದೀಪ್ ಸಿಂಗ್ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಚಿತ್ರ: ಪಿಬಿಕೆಎಸ್ 'ಎಕ್ಸ್' ಖಾತೆ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	12	8	4	0	16	1.053
ಜಿ ಟಿ	13	8	5	0	16	0.400
ಎಸ್‌ಆರ್‌ಎಚ್	12	7	5	0	14	0.331
ಪಿಬಿಕೆಎಸ್	12	6	5	1	13	0.355
ಆರ್ ಆರ್	11	6	5	0	12	0.082
ಸಿಎಸ್‌ಕೆ	12	6	6	0	12	0.027
ಕೆಕೆಆರ್	12	5	6	1	11	- 0.038
ಡಿ ಸಿ	12	5	7	0	10	- 0.993
ಎಂ ಐ	12	4	8	0	8	- 0.504
ಎಲ್‌ಎಸ್‌ಜಿ	12	4	8	0	8	- 0.701

ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್, ಜಿ ಟಿ (554 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (22 ವಿಕೆಟ್)

ಅದರಿಂದಾಗಿ ಪಂಜಾಬ್ ತಂಡದ ಬ್ಯಾಟರ್ ಪ್ರಭಸಿಮ್ರನ್ ಸಿಂಗ್, ಪ್ರಿಯಾಂಶ್ ಆರ್ಯ, ಶ್ರೇಯಸ್ ಅಯ್ಯರ್, ಮಾರ್ಕಸ್ ಸ್ಟೊಯಿನಿಸ್, ಕೂಪರ್ ಕೊನೊಲಿ ಅವರ ಮುಂದೆ ಆರ್‌ಸಿಬಿ ಬೌಲರ್‌ಗಳನ್ನು ಎದುರಿಸುವ ಕಠಿಣ ಸವಾಲಿದೆ.

ಮಳೆ ಬರದಿದ್ದರೆ, ರೋಚಕ ಹಣಾಹಣಿ ಗರಿಗೆದರುವ ನಿರೀಕ್ಷೆಯೂ ಇದೆ.

ಡೆಲ್ಲಿಗೆ ಇಂದು ಆರ್‌ಆರ್ ವಿರುದ್ಧ ನಿರ್ಣಾಯಕ ಪಂದ್ಯ

ಸೂರ್ಯವಂಶಿಗೆ ಸ್ಟಾರ್ಕ್ ಸವಾಲು

ನವದೆಹಲಿ (ಪಿಟಿಐ): ಐಪಿಎಲ್ ಪ್ಲೇಆಫ್ ಸ್ಥಾನದ ದೃಷ್ಟಿಯಿಂದ ಮಹತ್ವದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಭಾನುವಾರ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ನಿರ್ಭೀತಿಯಿಂದ ಆಡುವ ವೈಭವ್ ಸೂರ್ಯವಂಶಿ ಅವರಿಗೆ ಈ ಪಂದ್ಯದಲ್ಲಿ ಪರಿಣತ ಸೀಮ್ ಮತ್ತು ಸ್ವಿಂಗ್ ಬೌಲರ್ ಮಿಚೆಲ್ ಸ್ಟಾರ್ಕ್ ಅವರ ಪರೀಕ್ಷೆ ಎದುರಾಗಲಿದೆ.

12 ಪಂದ್ಯಗಳಿಂದ 10 ಪಾಯಿಂಟ್ಸ್ ಗಳಿಸಿರುವ ಡೆಲ್ಲಿ ತಂಡದ ಪ್ಲೇ ಆಫ್ ಅವಕಾಶ ಕ್ಷೀಣಿಸಿದೆ. ಭಾನುವಾರದ ಪಂದ್ಯದಲ್ಲಿ ಸೋತರೆ ಅಧಿಕೃತವಾಗಿ ರೇಸ್‌ನಿಂದ ಹೊರಬೀಳಲಿದೆ. ಒಂದು ವಾರದ ವಿರಾಮದಿಂದ ನವೋಲ್ಲಾಸದಲ್ಲಿರುವ ರಾಯಲ್ಸ್ ತಂಡ (11 ಪಂದ್ಯಗಳಿಂದ 12) ಪಂದ್ಯ ಗೆದ್ದರೆ ಪ್ಲೇ ಆಫ್ ಅವಕಾಶ ಉಜ್ವಲವಾಗಲಿದೆ. ಜತೆಗೆ ಪಂಜಾಬ್ ಕಿಂಗ್ಸ್ (12 ಪಂದ್ಯಗಳಿಂದ 13) ಮೇಲೆ ಒತ್ತಡ ಹೆಚ್ಚಲಿದೆ.

ಸಚಿನ್ ತೆಂಡೂಲ್ಕರ್ ಅವರ ನಂತರದ ಕಾಲಘಟ್ಟದಲ್ಲಿ ಹದಿಹರೆಯದಲ್ಲಿ ಕ್ರಿಕೆಟ್ ಪ್ರಿಯರ ಗಮನವನ್ನು ಸೂರ್ಯವಂಶಿ ಅವರಷ್ಟು ಬೇರಾರೂ ಸೆಳೆದಿಲ್ಲ. ಸಮಷ್ಟಿಪುರದ ಈ ಬಾಲಪ್ರತಿಭೆ ದೊಡ್ಡ ಅಭಿಮಾನಿವರ್ಗವನ್ನು ಸೃಷ್ಟಿಸಿಕೊಂಡಿದ್ದಾರೆ. ಅವರಿಗೆ ಇದು ರಾಷ್ಟ್ರ ರಾಜಧಾನಿಯಲ್ಲಿ 'ಪದಾರ್ಪಣೆ ಪಂದ್ಯ'. ಈ 'ಅಚ್ಚರಿಯ ಬಾಲಕ'ನ ಆಟ ನೋಡುವುದಕ್ಕಾಗಿ ಸಾಕಷ್ಟು ಅಭಿಮಾನಿವರ್ಗ ಸೇರುವ ಸಾಧ್ಯತೆಯಿದೆ.

ವೈಭವ್ ಸೂರ್ಯವಂಶಿ ಎಎಫ್‌ಪಿ ಚಿತ್ರ

ಆರಂಭದಲ್ಲೇ ಸ್ಫೋಟಕ ಆಟಕ್ಕಿಳಿಯುವ ಸೂರ್ಯವಂಶಿ 11 ಪಂದ್ಯಗಳಿಂದ 40 ಸಿಕ್ಸರ್‌ಗಳನ್ನು ಸಿಡಿಸಿದ್ದಾರೆ. 236.55 ಸ್ಟ್ರೈಕ್‌ರೇಟ್‌ನಲ್ಲಿ 440 ರನ್ ಬಾರಿಸಿದ್ದಾರೆ. ಅವರು ಅನುಭವಿ ಎಡಗೈ ವೇಗಿ ಸ್ಟಾರ್ಕ್ ಅವರನ್ನು ಹೇಗೆ ಎದುರಿಸಲಿದ್ದಾರೆ ಎಂಬ ಕುತೂಹಲವಿದೆ.

ಡೆಲ್ಲಿ ತಂಡದ ಅಂತರರಾಷ್ಟ್ರೀಯ ಬೌಲರ್‌ಗಳಾದ ಅಕ್ಷರ್ ಪಟೇಲ್ (12 ಪಂದ್ಯಗಳಿಂದ 10 ವಿಕೆಟ್) ಮತ್ತು ಕುಲದೀಪ್ ಯಾದವ್ (11 ಪಂದ್ಯಗಳಿಂದ 7 ವಿಕೆಟ್) ಅವರ ಸ್ಪಿನ್ ದಾಳಿ ಅಷ್ಟೇನೂ ಪರಿಣಾಮಕಾರಿಯಾಗಿಲ್ಲ. ಇದು ತಂಡಕ್ಕೆ ಸಮಸ್ಯೆಯಾಗಿದೆ. ಲುಂಗಿ ಎನ್‌ಗಿಡಿ ಬಿಟ್ಟರೆ ಉಳಿದ ವೇಗದ ಬೌಲರ್‌ಗಳೂ ಅಷ್ಟೇನೂ ಯಶಸ್ಸು ಕಾಣುತ್ತಿಲ್ಲ.

ಮಿಚೆಲ್ ಸ್ಟಾರ್ಕ್

ರಾಜಸ್ಥಾನ ತಂಡಕ್ಕೆ ಕಳವಳದ ವಿಷಯವೆಂದರೆ ನಾಯಕ ರಿಯಾನ್ ಪರಾಗ್ ಅವರ ಅಸ್ಥಿರ ಬ್ಯಾಟಿಂಗ್. ಅಸ್ಸಾಂನ ಆಟಗಾರ 10 ಪಂದ್ಯಗಳಿಂದ 143 ಸ್ಟ್ರೈಕ್ ರೇಟ್‌ನಲ್ಲಿ 143 ರನ್ ಮಾತ್ರ ಗಳಿಸಿದ್ದಾರೆ.

ರಾಯಲ್ಸ್ ಬೌಲಿಂಗ್ ವಿಭಾಗ ಪ್ರಬಲವಾಗಿದ್ದು ಜೋಫ್ರಾ ಆರ್ಚರ್ ಆರಂಭದಲ್ಲೇ ಯಶಸ್ಸು ಕಾಣುತ್ತಿದ್ದಾರೆ.

ಡೆಲ್ಲಿ ಬ್ಯಾಟರ್‌ಗಳ ಪೈಕಿ ಕೆ.ಎಲ್. ರಾಹುಲ್ ಅವರನ್ನು ಬಿಟ್ಟರೆ ಪ್ರಮುಖ ಬ್ಯಾಟರ್‌ಗಳಾದ ನಿತೀಶ್ ರಾಣಾ ಮತ್ತು ಸಮೀರ್ ರಿಝ್ವಿ ಗುಣಮಟ್ಟದ ಬೌಲಿಂಗ್ ಎದುರು ಪರದಾಡಿದ್ದಾರೆ.

'ಸ್ವಾಬ್': ಪದಾಧಿಕಾರಿಗಳ ಅವಿರೋಧ ಆಯ್ಕೆ

ಬೆಂಗಳೂರು: ಬೆಂಗಳೂರು ಕ್ರೀಡಾ ಬರಹಗಾರರ ಸಂಘದ (ಸ್ವಾಬ್) ಅಧ್ಯಕ್ಷ ಸ್ಥಾನಕ್ಕೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮನುಜಾ ವೀರಪ್ಪ ಮರುಆಯ್ಕೆಯಾಗಿದ್ದಾರೆ. ಶನಿವಾರ ನಡೆದ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಇದೇ ವೇಳೆ, ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿ ಸದಸ್ಯರನ್ನೂ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಮಿತಿ ಹೀಗಿದೆ: ಮನುಜಾ ವೀರಪ್ಪ (ಅಧ್ಯಕ್ಷೆ), ಜಿ. ಉನ್ನಿಕೃಷ್ಣನ್ (ಉಪಾಧ್ಯಕ್ಷ), ಗಿರೀಶ ದೊಡ್ಡಮನಿ (ಕಾರ್ಯದರ್ಶಿ), ಕೆ. ಮಂಜುನಾಥ ಜಾಬಗೆರೆ (ಜಂಟಿ ಕಾರ್ಯದರ್ಶಿ), ಎನ್. ಸುದರ್ಶನ್ (ಖಜಾಂಚಿ), ಕಾರ್ಯಕಾರಿ ಸಮಿತಿ ಸದಸ್ಯರು: ವಿಘ್ನೇಶ್ ಭಾರದ್ವಾಜ್, ಕೌಶಿಕ್ ರಂಗರಾಜನ್, ಆಶಿಶ್ ಪಂತ್, ಅಶ್ವಿನ್ ಆಚಲ್, ಸ್ಪಂದನ್ ಕಣಿಯಾರ್, ಚಿತ್ರಾಂಗದ ದತ್ತಾ ಚೌಧರಿ, ಗುರುರಾಜ್ ಬಿ.ಎಸ್.

ವಿಜಯಪುರ: ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ವಿಜಯಪುರ: 15 ಮತ್ತು 17 ವರ್ಷದೊಳಗಿನವರ ರಾಜ್ಯ ಬ್ಯಾಡ್ಮಿಂಟನ್ ಟೂರ್ನಿಯು ವಿಜಯಪುರ ನಗರದಲ್ಲಿ ಭಾನುವಾರ ಆರಂಭವಾಗಲಿದೆ.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಮತ್ತು ಬಿಎಲ್‌ಡಿಇ ಸಂಸ್ಥೆ ಸಹಯೋಗದಲ್ಲಿ 'ಯಾನೆಕ್ಸ್ ಸನ್ ರೈಸ್' ಟೈಟಲ್ ಕಾರ್ಡ್‌ನಡಿ ಈ ಟೂರ್ನಿ ಆಯೋಜನೆಗೊಳ್ಳುತ್ತಿದೆ.

ಜಾಲಿ ತುಳಸಿ 51 ಹನಿಗಳನ್ನು ವರ್ಷಗಳ ಸಂಶೋಧನೆ ಮತ್ತು ಪ್ರಾಚೀನ ಆಯುರ್ವೇದ ಗ್ರಂಥವನ್ನು ಬಳಸಿ ತಯಾರಿಸಲಾಗುತ್ತದೆ.
ದೇಹದೊಳಗಿನ ಕಲ್ಮಶವನ್ನು ತೊಡೆದು ಹಾಕುತ್ತದೆ
ಕ್ಲಿನಿಕಲಿ ಟೆಸ್ಟೆಡ್ ಮತ್ತು ನಿರೋಧಕತೆ ಹೆಚ್ಚಿಸುತ್ತದೆ.
ಒಂದು ಅತ್ಯಂತ ವಿಶೇಷ ವಿಧಾನದಲ್ಲಿ 5 ರೀತಿಯ ತುಳಸಿಗಳಿಂದ ತಯಾರಿಸಲ್ಪಟ್ಟಿರುತ್ತದೆ
• ಆಮ್ಲ • ಉರಿತ ಸಂವೇದನಾಶೀಲತೆ • ಅಜೀರ್ಣತೆ • ಕರುಳ ಆರೋಗ್ಯ • ಮಲಬದ್ಧತೆ • ದುರ್ಗಂಧ ಶ್ವಾಸ • ಮೊಡವೆ/ಗುಳ್ಳೆ • ಕೂದಲು ಉದುರುವಿಕೆ • ಬಾಯಿ ಹುಣ್ಣು • ಏಕಾಗ್ರತಾ ಕೊರತೆ (ADHD)
• ಗಂಟಲು ಕೆರೆತ • ಶ್ವಾಸೋಚ್ಛಾಸ ಅಸ್ವಸ್ಥತೆ • ಕೆಮ್ಮು • ಅಲರ್ಜಿ • ತ್ವಚೆ ರೋಗಗಳು • ತಲೆಸುತ್ತು • ಜ್ಞಾಪಕಶಕ್ತಿ • ಶಕ್ತಿಹೀನತೆ • ಕಪ್ಪು ವೃತ್ತ & ನರೆ • ಜುಮ್ಮೆನಿಸುವಿಕೆ • ಕೀಲು ನೋವು ವಿರುದ್ಧ ಸಹಕಾರಿ

JOLLY
CLINICALLY TESTED
ತುಳಸಿ 51 ಡ್ರಾಪ್ಸ್
ಬೆಳಗ್ಗೆ ಸಾಯಂಕಾಲ 5-5 ಹನಿ, ಮಕ್ಕಳು, ಹಿರಿಯರು ಮತ್ತು ಯುವಕರ ಸ್ವಸ್ಥ ನಿರೋಗಿ ಜೀವನಕ್ಕೆ ಸಹಕಾರಿ
ಜಾಲಿ ತುಳಸಿ 51 ಡ್ರಾಪ್ಸ್‌ನ ಅತ್ಯಂತ ಜನಪ್ರಿಯತೆಯ ಲಾಭ ಪಡೆಯಲು, ಇದೇ ರೀತಿಯ ಹೆಸರುಗಳನ್ನು ಹೊಂದಿರುವ ಹಲವಾರು ತುಳಸಿ ಡ್ರಾಪ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಾಗಿವೆ. ಮೆಡಿಕಲ್ ಸ್ಟೋರ್‌ನಲ್ಲಿ ಖರೀದಿಸುವಾಗ ತುಳಸಿ ಡ್ರಾಪ್ಸ್ ಎನ್ನುವ ಬದಲಿಗೆ ಜಾಲಿ ತುಳಸಿ 51 ಡ್ರಾಪ್ಸ್ ಎಂದೇ ಕೇಳಿ ಖರೀದಿಸಿರಿ.
Super Stockist.»Shri Rama Stores,Yellapur. M:98143-30500
Bagalkot: 9972840996, Bangalore: 8951490881, Chitradurga: 9742800795, Davangere: 9591346737, Gadag:9886715963, Gulbarga: 9886294310, Haveri:94486-30757, 9538226227, Hubli: 9980571313, Ilkal: 9448014145, Mangalore: 9964746647, 9845082957, 9945172643, Manipal: 9880451511, Mysore: 9243580210, Ranebennur: 9844323973, Sirsi: 9916250217, Udupi: 9449920235, 9845456115, Kolar: 94482-61087, Mysur: 9590562007, Raichur: 94485-70649, Davangere: 9880708064
ಎಲ್ಲಾ ಮೆಡಿಕಲ್ಸ್ ಶಾಪ್‌ಗಳಲ್ಲಿ ಲಭ್ಯ ✆ 97813-30500 JOLLYorganic.com

ಚಿಟಿಕೆ ಸುದ್ದಿ

ಪಂತ್‌ಗೆ ದಂಡ

ಲಖನೌ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವು ನಿಗದಿತ ಅವಧಿಯಲ್ಲಿ ಓವರುಗಳನ್ನು ಪೂರೈಸಲು ವಿಫಲವಾಗಿದ್ದಕ್ಕೆ ನಾಯಕ ರಿಷಭ್ ಪಂತ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಎಲ್‌ಎಸ್‌ಜಿ ತಂಡವು ಶುಕ್ರವಾರ ನಡೆದ ಪಂದ್ಯವನ್ನು 7 ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು. ಐಪಿಎಲ್ ನೀತಿ ನಿಯಮಾವಳಿಗಳ ಪ್ರಕಾರ ನಿಧಾನಗತಿಯ ಓವರ್‌ಗಳಿಗೆ ಸಂಬಂಧಿಸಿ ಇದು ಮೊದಲ ತಪ್ಪು ಆದ ಕಾರಣ ಪಂತ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ ಎಂದು 'ಐಪಿಎಲ್' ತಿಳಿಸಿದೆ.

ನಖ್ವಿಗೆ ಇಲ್ಲ ಆಹ್ವಾನ

ನವದೆಹಲಿ (ಪಿಟಿಐ): ಅಹಮದಾಬಾದ್‌ನಲ್ಲಿ ಮೇ 31ರಂದು ನಡೆಯಲಿರುವ ಐಪಿಎಲ್ ಫೈನಲ್ ಪಂದ್ಯಕ್ಕೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರಿಗೆ ಆಹ್ವಾನ ನೀಡಿಲ್ಲ.

ಇದೇ ದಿನ ನಡೆಯಲಿರುವ ಐಸಿಸಿ ಸಭೆಗೆ ಹಾಜರಾಗಲಿರುವ ವಿದೇಶಗಳ ಪ್ರತಿನಿಧಿಗಳನ್ನು ಐಪಿಎಲ್ ಫೈನಲ್‌ಗೆ ಆಹ್ವಾನಿಸಲಾಗಿದೆ. ಆದರೆ, ನಖ್ವಿ ಅವರು ವರ್ಚುವಲ್ (ಆನ್‌ಲೈನ್) ಮೂಲಕ ಸಭೆಗೆ ಹಾಜರಾಗಲಿದ್ದಾರೆ.

ಹೋದ ತಿಂಗಳು ದೋಹಾದಲ್ಲಿ ಐಸಿಸಿ ಸಭೆಯನ್ನು ಆಯೋಜಿಸಬೇಕಿತ್ತು. ಆದರೆ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷವಿರುವ ಕಾರಣಕ್ಕೆ ಮುಂದೂಡಲಾಯಿತು. ಅದರಿಂದಾಗಿ ಭಾರತಕ್ಕೆ ಆತಿಥ್ಯ ವಹಿಸುವ ಅವಕಾಶ ದೊರೆಯಿತು.

ವರ್ಚುವಲ್ ಸಭೆಗಳನ್ನು ನಡೆಸುವುದು ವಾಡಿಕೆಯಾಗಿದೆ. ನಖ್ವಿ ಅವರೊಂದಿಗೆ ಇನ್ನೂ ಮೂರು ಮಂಡಳಿಗಳ ಪ್ರತಿನಿಧಿಗಳು ಕೂಡ ವರ್ಚುವಲ್ ಸಭೆಯಲ್ಲಿ ಭಾಗವಹಿಸುವರು ಎಂದು ಮೂಲಗಳು ತಿಳಿಸಿವೆ.

ರಾಜ್ಯ ಅಮೆಚೂರ್ ಚೆಸ್ ಟೂರ್ನಿ: ಐವರು ಮುನ್ನಡೆ

ಬೆಂಗಳೂರು: ರಾಜ್ಯ ಅಮೆಚೂರ್ ಚೆಸ್ (2000 ರೇಟಿಂಗ್ ಒಳಗಿನವರ) ಚಾಂಪಿಯನ್‌ಷಿಪ್‌ನ ಆರನೇ ಸುತ್ತಿನ ನಂತರ ಐವರು ಆಟಗಾರರು ತಲಾ ಐದೂವರೆ ಅಂಕಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಭಾನುವಾರ ಟೂರ್ನಿಯ ಅಂತಿಮ ದಿನವಾಗಿದ್ದು, ಮೂರು ಸುತ್ತುಗಳ ಆಟ ಉಳಿದಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶನಿವಾರ ಮೊದಲ ಮೂರು ಬೋರ್ಡ್‌ನ ಪಂದ್ಯಗಳು ಡ್ರಾ ಆಗಿದ್ದು, ಯುವನೇಶ್, ಇಂದ್ರಜಿತ್ ಮಜುಂದಾರ್, ಆರವ್ ಮಂಚೆ, ಶ್ರೀಕರ ದರ್ಭಾ ಮತ್ತು ಶ್ರೀಸುದಯ್ ಬೆಹರಾ ಅವರು ಮುನ್ನಡೆ ಹಂಚಿಕೊಂಡಿದ್ದಾರೆ.

ಮೊದಲ ಬೋರ್ಡ್‌ನಲ್ಲಿ ಯುವನೇಶ್ ಮತ್ತು ಇಂದ್ರಜಿತ್ ಡ್ರಾ ಮಾಡಿಕೊಂಡರು. ಆರವ್ ಮತ್ತು ಶ್ರೀಕರ ಸಹ ಡ್ರಾ ಮಾಡಿಕೊಂಡರು. ಒಟ್ಟಾರೆ ಮೊದಲ ಹತ್ತು ಬೋರ್ಡ್‌ಗಳಲ್ಲಿ ಐದು ಡ್ರಾ ಆದವು.

ಸುನಿಲ್‌ಗೆ 2 ವಿಕೆಟ್ • ಟೈಟನ್ಸ್‌ನ ಐದು ಪಂದ್ಯಗಳ ಗೆಲುವಿನ ಓಟಕ್ಕೆ ತಡೆ

ಅಲೆನ್, ರಘುವಂಶಿ ಆಟಕ್ಕೆ ಒಲಿದ ಜಯ

ಕೋಲ್ಕತ್ತ (ಪಿಟಿಐ): ಫಿನ್ ಅಲೆನ್ ಮತ್ತು ಅಂಗಕ್ರಿಷ್ ರಘುವಂಶಿ ಅವರ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು 29 ರನ್‌ಗಳಿಂದ ಮಣಿಸಿತು. ಇದರೊಂದಿಗೆ ಅಜಿಂಕ್ಯ ರಹಾನೆ ಬಳಗವು ಪ್ಲೇ ಆಫ್ ಕನಸನ್ನು ಜೀವಂತವಾಗಿರಿಸಿಕೊಂಡಿತು.

ಶುಭಮನ್ ಗಿಲ್ ಪಡೆಯ ಸತತ ಐದು ಪಂದ್ಯಗಳ ಗೆಲುವಿನ ಓಟಕ್ಕೆ ಕೆಕೆಆರ್ ತಡೆಯೊಡ್ಡಿತು. ಈ ಪಂದ್ಯವನ್ನು ಗೆದ್ದು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಜೊತೆಗೆ ಪ್ಲೇ ಆಫ್‌ಗೆ ಸ್ಥಾನ ಖಚಿತಪಡಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದ ಗುಜರಾತ್ ತಂಡಕ್ಕೆ ನಿರಾಸೆಯಾಯಿತು. ಮಾತ್ರವಲ್ಲ, ತಿಂಗಳ ಹಿಂದೆ ಅಹಮದಾಬಾದ್‌ನಲ್ಲಿ ಅನುಭವಿಸಿದ್ದ ಐದು ವಿಕೆಟ್‌ಗೆ ಸೋಲಿಗೆ ಕೋಲ್ಕತ್ತ ತಂಡವು ತನ್ನ ತವರಿನಲ್ಲಿ ಮುಯ್ಯಿ ತೀರಿಸಿಕೊಂಡಿತು.

ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ಅಲೆನ್ (93; 35ಎ, 4x4, 6x10), ರಘುವಂಶಿ (ಔಟಾಗದೇ 82; 44ಎ, 4x4, 6x7) ಮತ್ತು ಕ್ಯಾಮರಾನ್ ಗ್ರೀನ್ (ಔಟಾಗದೇ 52; 28ಎ) ಅವರ ಬ್ಯಾಟಿಂಗ್ ನೆರವಿನಿಂದ ಕೋಲ್ಕತ್ತ ತಂಡವು 2 ವಿಕೆಟ್‌ಗಳಿಗೆ 247 ರನ್‌ಗಳ ದೊಡ್ಡಮೊತ್ತ ಪೇರಿಸಿತು.

ಗುರಿ ಬೆನ್ನಟ್ಟಿದ ಗುಜರಾತ್ ಪರ ಎಡಗೈ ಬ್ಯಾಟರ್ ಸಾಯಿ ಸುದರ್ಶನ್ (ಔಟಾಗದೇ 53; 28ಎ), ಗಿಲ್ (85; 49ಎ, 4x5, 6x7) ಮತ್ತು ಜೋಸ್ ಬಟ್ಲರ್ (57; 35ಎ) ಅರ್ಧಶತಕಗಳನ್ನು ದಾಖಲಿಸಿದರೂ ಗೆಲುವಿಗೆ ಸಾಕಾಗಲಿಲ್ಲ. ತಂಡವು 4 ವಿಕೆಟ್‌ಗೆ 218 ರನ್ ಗಳಿಸಿ ಓವರ್‌ಗಳನ್ನು ಪೂರೈಸಿತು. ಕೆಕೆಆರ್‌ನ ಸ್ಪಿನ್ನರ್ ಸುನಿಲ್ ನಾರಾಯಣ್ (29ಕ್ಕೆ 2) ಪರಿಣಾಮಕಾರಿ ಎನಿಸಿದರು.

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಫಿನ್ ಅಲೆನ್ ಎಎಫ್‌ಪಿ ಚಿತ್ರ

ಲಯದಲ್ಲಿರುವ ಸುದರ್ಶನ್ ಮತ್ತು ಗಿಲ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಸುದರ್ಶನ್ 24 ರನ್ ಗಳಿಸಿದ್ದಾಗ ಗಾಯಗೊಂಡು ಮೈದಾನ ತೊರೆದರು. ನಂತರದ ಬಂದ ನಿಶಾಂತ್ ಸಿಂಧು (1) ನಿರಾಸೆ ಮೂಡಿಸಿದರು. ಗಿಲ್ ಮತ್ತು ಬಟ್ಲರ್ ಎರಡನೇ ವಿಕೆಟ್‌ಗೆ 128 (73ಎ) ರನ್ ಸೇರಿಸಿದರು. ಗೆಲುವಿಗೆ 22 ಎಸೆತದಲ್ಲಿ 71 ರನ್ ಬೇಕಿದ್ದಾಗ ಸುನಿಲ್ ನಾರಾಯಣ್ ಅವರ ಬೌಲಿಂಗ್‌ನಲ್ಲಿ ಗಿಲ್ ಔಟಾದರು. ಈ ವೇಳೆ ಸುದರ್ಶನ್ ಮತ್ತೆ ಬ್ಯಾಟಿಂಗ್‌ಗೆ ಇಳಿದು, ಬಟ್ಲರ್ ಅವರೊಂದಿಗೆ ಹೋರಾಟ ನಡೆಸಿದರು. ಆದರೆ, ಗೆಲುವಿನ ಗುರಿ ದೂರವಿತ್ತು.

ಅಲೆನ್-ರಘುವಂಶಿ ಬೀಸಾಟ: ಇದಕ್ಕೂ ಮೊದಲು ಟಾಸ್ ಗೆದ್ದ ಗುಜರಾತ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಐದನೇ ಓವರ್‌ನಲ್ಲಿ ವೇಗಿ ಮೊಹಮ್ಮದ್ ಸಿರಾಜ್ ಹಾಕಿದ ನೇರ ಎಸೆತಕ್ಕೆ ಕೋಲ್ಕತ್ತ ತಂಡದ ನಾಯಕ ಅಜಿಂಕ್ಯ (14;14ಎ) ಕ್ಲೀನ್ ಬೌಲ್ಡ್ ಆದರು. ನಂತರ ಅಲೆನ್ ಮತ್ತು ರಘುವಂಶಿ ಅವರ ಬೀಸಾಟ ಶುರುವಾಯಿತು.

ಎರಡನೇ ವಿಕೆಟ್ ಜೊತೆಯಾಟದಲ್ಲಿ ಅವರಿಬ್ಬರು 95 ರನ್ ಸೇರಿಸಿದರು. ನ್ಯೂಜಿಲೆಂಡ್ ಆಟಗಾರ 265.71ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಸಾಯಿಕಿಶೋರ್ ಎಸೆತದಲ್ಲಿ ರಶೀದ್ ಖಾನ್ ಪಡೆದ ಕ್ಯಾಚ್‌ಗೆ ಅಲೆನ್ ಆಟಕ್ಕೆ ತೆರೆಬಿತ್ತು. ಶತಕ ಕೈತಪ್ಪಿತು.

ಇದಾದ ನಂತರ ಗುಜರಾತ್ ಬೌಲರ್‌ಗಳಿಗೆ ಮತ್ತೊಂದು ದುಃಸ್ವಪ್ನ ಎದುರಾಯಿತು. ರಘುವಂಶಿ ತಮ್ಮ ಆಟದ ವೇಗ ಹೆಚ್ಚಿಸಿದರು. ಇನ್ನೊಂದೆಡೆ ಗ್ರೀನ್ ಕೂಡ ಚೆಂಡನ್ನು ಬೌಂಡರಿಗೆರೆ ದಾಟಿಸುವತ್ತ ಚಿತ್ತ ನೆಟ್ಟರು. ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 108 (52ಎ) ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗೆ 247 (ಫಿನ್ ಅಲೆನ್ 93, ಅಂಗಕ್ರಿಷ್ ರಘುವಂಶಿ ಔಟಾಗದೇ 82, ಕ್ಯಾಮರಾನ್ ಗ್ರೀನ್ ಔಟಾಗದೇ 52; ಮೊಹಮ್ಮದ್ ಸಿರಾಜ್ 50ಕ್ಕೆ1, ಸಾಯಿ ಕಿಶೋರ್ 38ಕ್ಕೆ1). ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 218 (ಸಾಯಿ ಸುದರ್ಶನ್ ಔಟಾಗದೇ 53, ಶುಭಮನ್ ಗಿಲ್ 85, ಜೋಸ್ ಬಟ್ಲರ್ 57; ಸುನಿಲ್ ನಾರಾಯಣ್ 29ಕ್ಕೆ2, ಸೌರಭ್ ದುಬೆ 23ಕ್ಕೆ1, ಕ್ಯಾಮರಾನ್ ಗ್ರೀನ್ 25ಕ್ಕೆ1).
ಪಂದ್ಯದ ಆಟಗಾರ: ಸುನಿಲ್ ನಾರಾಯಣ್

ಗೆಲುವಿನೊಡನೆ ಅಗ್ರಸ್ಥಾನಕ್ಕೆ ಬಿಎಫ್‌ಸಿ

ಚೆನ್ನೈ (ಪಿಟಿಐ): ಹಾಲಿ ರನ್ನರ್ಸ್ ಅಪ್ ಬೆಂಗಳೂರು ಎಫ್‌ಸಿ ತಂಡವು ಶನಿವಾರ 2–1 ಗೋಲುಗಳಿಂದ ಆತಿಥೇಯ ಚೆನ್ನೈಯಿನ್ ಎಫ್‌ಸಿ ತಂಡವನ್ನು ಮಣಿಸಿ, 12ನೇ ಆವೃತ್ತಿಯ ಇಂಡಿಯನ್ ಸೂಪರ್ ಲೀಗ್‌ನ ಅಭಿಯಾನವನ್ನು ಯಶಸ್ವಿಯಾಗಿ ಮುಗಿಸಿತು.

ಈ ಗೆಲುವಿನೊಂದಿಗೆ ಸುನಿಲ್ ಚೆಟ್ರಿ ಪಡೆಯು ತವರಿನಾಚೆ ಅಜೇಯ ದಾಖಲೆಯನ್ನೂ ಕಾಯ್ದುಕೊಂಡಿತು. ಬೆಂಗಳೂರಿನಿಂದ ಹೊರಗೆ ಆಡಿದ ಏಳು ಪಂದ್ಯಗಳಲ್ಲಿ ಬಿಎಫ್‌ಸಿ ತಂಡವು ಐದು ಗೆಲುವು ಮತ್ತು ಎರಡು ಡ್ರಾ ಸಾಧಿಸಿದಂತಾಗಿದೆ.

ಚೆನ್ನೈನ ಜೆಎಲ್‌ಎನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಪರ ರಯಾನ್ ವಿಲಿಯಮ್ಸ್ (42ನೇ ನಿಮಿಷ) ಮತ್ತು ಸೆರ್ಟೊ ವೊರ್ನೆಲೆನ್ ಕೋಮ್ (88ನೇ) ಗೋಲು ದಾಖಲಿಸಿದರು. ಇದು ರಯಾನ್ ಅವರಿಗೆ ಬಿಎಫ್‌ಸಿ ಪರ ಐವತ್ತನೇ ಪಂದ್ಯವಾದರೆ, ಸೆರ್ಟೊ ಅವರಿಗೆ ಪದಾರ್ಪಣೆ ಪಂದ್ಯವಾಗಿತ್ತು. ಆತಿಥೇಯ ತಂಡದ ಪರ ಏಕೈಕ ಗೋಲನ್ನು ಡೇನಿಯಲ್ ಚಿಮಾ ಚುಕ್ವು (33ನೇ) ಬಾರಿಸಿದರು.

ಒಟ್ಟು 13 ಪಂದ್ಯಗಳಿಂದ 23 ಅಂಕ (6 ಗೆಲುವು, 5 ಡ್ರಾ, 2 ಸೋಲು) ಗಳಿಸಿರುವ ಬೆಂಗಳೂರಿನ ತಂಡವು ಅಂಕ ಪಟ್ಟಿಯಲ್ಲಿ ಸದ್ಯ ಅಗ್ರಸ್ಥಾನಕ್ಕೇರಿದೆ. ಚೆನ್ನೈಯಿನ್ ತಂಡವು 13ನೇ ಸ್ಥಾನದೊಂದಿಗೆ (9 ಅಂಕ) ಅಭಿಯಾನ ಮುಗಿಸಿದೆ.

ಟೂರ್ನಿಯಲ್ಲಿರುವ 14 ತಂಡಗಳು ಲೀಗ್ ಹಂತದಲ್ಲಿ ತಲಾ 13 ಪಂದ್ಯಗಳನ್ನು ಆಡಲಿವೆ. ಇದರಲ್ಲಿ ಅಗ್ರಸ್ಥಾನ ಪಡೆಯುವ ತಂಡ ಚಾಂಪಿಯನ್ ಆಗಲಿದೆ. ಹೀಗಾಗಿ, ಟೂರ್ನಿಯು ನಿರ್ಣಾಯಕ ಘಟ್ಟದಲ್ಲಿದೆ.

ಈಸ್ಟ್ ಬೆಂಗಾಲ್ ಮತ್ತು ಮೋಹನ್ ಬಾಗನ್ ಸೂಪರ್ ಜೈಂಟ್ಸ್ (11 ಪಂದ್ಯಗಳಿಂದ ತಲಾ 22 ಅಂಕ) ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಇದರಲ್ಲಿ ಯಾವುದೇ ತಂಡ ತಮಗೆ ಉಳಿದಿರುವ ಎರಡು ಪಂದ್ಯಗಳ ಪೈಕಿ ಒಂದರಲ್ಲಿ ಡ್ರಾ ಸಾಧಿಸಿದರೂ ಬಿಎಫ್‌ಸಿಯನ್ನು ಹಿಂದಿಕ್ಕಲಿದೆ.

ವೇಟ್‌ಲಿಫ್ಟಿಂಗ್: ಸಂಜನಾಗೆ ಕಂಚು

ಗಾಂಧಿನಗರ (ಪಿಟಿಐ): ಭಾರತದ ಸಂಜನಾ ಅವರು ಇಲ್ಲಿ ನಡೆಯುತ್ತಿರುವ ಏಷ್ಯಾ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 77 ಕೆ.ಜಿ. ವಿಭಾಗದಲ್ಲಿ ಶನಿವಾರ ಕಂಚಿನ ಪದಕ ಜಯಿಸಿದರು. ಕೂಟದಲ್ಲಿ ಭಾರತಕ್ಕೆ ಸಿಕ್ಕ ನಾಲ್ಕನೇ ಕಂಚಿನ ಪದಕವಿದು.

ಸಂಜನಾ ಅವರು ಒಟ್ಟಾರೆ 220 ಕೆ.ಜಿ. (ಸ್ನಾಚ್‌ನಲ್ಲಿ 96 ಕೆ.ಜಿ. ಹಾಗೂ ಕ್ಲೀನ್ ಮತ್ತು ಜೆರ್ಕ್‌ನಲ್ಲಿ 124 ಕೆ.ಜಿ.) ಭಾರ ಎತ್ತಿದರು. ಚೀನಾದ ಗ್ಯುಫಾಂಗ್ ಲಿಯಾವೊ (ಒಟ್ಟು 265 ಕೆ.ಜಿ.) ಹಾಗೂ ಉತ್ತರ ಕೊರಿಯಾದ ಕ್ಯೊಂಗ್ ರ್ಯೊಂಗ್ ಕಿಮ್ ಅವರು (ಒಟ್ಟು 260 ಕೆ.ಜಿ.) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ಬೆಂಗಳೂರು ರೇಸ್

ಐರನ್ ಮಿರೇಝ್ ಗೆಲ್ಲುವ ನಿರೀಕ್ಷೆ

ವಾರ್ ಹ್ಯಾಮರ್ ಮಿಲಿಯನ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಐರನ್ ಮಿರೇಝ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಕೆಳಕಂಡಂತಿವೆ:

1ನೇ ರೇಸ್: ಬ್ರೀಝ್ ಬ್ಲಸ್ಟರ್ 6, ವಿಂಡ್‌ಕ್ಲೀವರ್ 1, ದೇಸ್ ದೇಟ್ 2
2ನೇ ರೇಸ್: ನಾಟಿ ಕ್ರೂಝ್ 3, ಡ್ರೀಮ್ ವಾಕಿನ್ 4, ಟೈಗರ್ ಬೇ 9
3ನೇ ರೇಸ್: ರೀಗಲ್ ರಿಯಾಲಿಟಿ 4, ರಾಯಲ್ ಡೆಕ್ಕನ್ 5, ಸ್ಟೆಲ್ಲಾಂಟಿಸ್ 1
4ನೇ ರೇಸ್: ಐರನ್ ಮಿರೇಝ್ 1, ಮೂನ್‌ವೀಲ್ 5, ಡೀಪ್ ರೆಸ್ಪೆಕ್ಟ್ 3
5ನೇ ರೇಸ್: ಸ್ವಾರ್ಜೆಲ್ಲಾ 8, ಮಿಸ್ಟಿಕ್ ಡ್ಯೂ 6, ಕ್ಯಾಂಟರಿನಾ 4
6ನೇ ರೇಸ್: ಎಲಿಸಿಯಮ್ 6, ಹೇಝೆಲ್ 8, ಸಿಲಿಕಾನ್ ಸ್ಟಾರ್ 2

ಉತ್ತಮ ಬೆಟ್: ನಾಟಿ ಕ್ರೂಝ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಐಎಫ್‌ಎಲ್‌ಗೆ ಬಡ್ತಿ ಪಡೆದ ಬೆಂಗಳೂರು ಯುನೈಟೆಡ್

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಐ–ಲೀಗ್ 2 ಟೂರ್ನಿಯ ತನ್ನ ಕೊನೆಯ ಪಂದ್ಯದಲ್ಲಿ ಶುಕ್ರವಾರ ಮೈಟಿ ಯಂಗ್ ಜೋ–ಗೋಲರಿಯಸ್ ಮದರ್ಸ್ ಸ್ಪೋರ್ಟ್ಸ್ ಕ್ಲಬ್ (ಎಂವೈಜೆ-ಜಿಎಂಎಸ್‌ಸಿ) ತಂಡದ ಜೊತೆ 1–1 ಡ್ರಾ ಸಾಧಿಸಿತು. ಈ ಮೂಲಕ, ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದೊಂದಿಗೆ ಮುಂದಿನ ಋತುವಿನ ಇಂಡಿಯನ್ ಫುಟ್‌ಬಾಲ್ ಲೀಗ್‌ಗೆ (ಐಎಫ್‌ಎಲ್) ಮುಂಬಡ್ತಿ ಪಡೆಯಿತು.

ಮುಂಬೈನಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಯುನೈಟೆಡ್ ತಂಡದ ಲಿಜೊ ಕೆ. 4ನೇ ನಿಮಿಷದಲ್ಲಿ ಗೋಲು ಗಳಿಸಿ, ಆರಂಭಿಕ ಮುನ್ನಡೆ ಒದಗಿಸಿದರು. ಆದರೆ, ದ್ವಿತೀಯಾರ್ಧದಲ್ಲಿ ಗೋಲು ಗಳಿಸಿದ ಎಂವೈಜೆ ತಂಡದ ಶ್ರವಣ್ ಶೆಟ್ಟಿ (47ನೇ ನಿ.) ಪಂದ್ಯ ಡ್ರಾ ಆಗಲು ಕಾರಣರಾದರು.

ಬೆಂಗಳೂರು ಯುನೈಟೆಡ್ ಹಾಗೂ ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ ತಂಡಗಳು ತಲಾ 15 ಅಂಕ ಹೊಂದಿದ್ದವು. ಗೋಲು ಗಳಿಕೆಯ ಆಧಾರದಲ್ಲಿ ಬೆಂಗಳೂರು ಯುನೈಟೆಡ್ ತಂಡಕ್ಕೆ ಅರ್ಹತೆ ದೊರೆಯಿತು.

ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ದೆಹಲಿ ಎಫ್‌ಸಿ ತಂಡವು (17 ಅಂಕ) ಪಶ್ಚಿಮ ಬಂಗಾಳದ ಕಲ್ಯಾಣಿಯಲ್ಲಿ ನಡೆದ ಪಂದ್ಯದಲ್ಲಿ ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ ಜೊತೆ 1–1 ಡ್ರಾ ಸಾಧಿಸಿತು. ಯುನೈಟೆಡ್ ಸ್ಪೋರ್ಟ್ಸ್ ತಂಡವು ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

ಅಪರೂಪದ 67 ನೈಸರ್ಗಿಕ ಮೂಲಿಕೆಗಳಿಂದ ತಯಾರಿಸಲಾದ 'ಸಚ್ಚಿ ಸಹೇಲಿ' ಆಯುರ್ವೇದಿಕ ಟಾನಿಕ್ ಈ ಕೆಳಗಿನ ಸಮಸ್ಯೆಗಳ ನಿವಾರಣೆಗೆ ಸಹಕಾರಿಯಾಗಿದೆ

Helps in:
ಕಠಿಣ ನೋವು / ಸಿಡುಕುತನ
ಆಯಾಸ / ಅಶಕ್ತತೆ
ಬೆನ್ನು ನೋವು / ಇಮ್ಯುನಿಟಿ
ಸಚ್ಚಿ ಸಹೇಲಿ ®
24x7 Helpline: 77106 44444 | www.sachisaheli.in | Available at all medical & general stores